ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ. ಫಿಲ್. ನಿಬಂಧ

ಸಂಶೋಧಕ
[illegible] ಮ ಹೇಶ

ಮಾರ್ಗದರ್ಶಕರು
ಡಾ. ದೇವರಕೊಂಡಾರೆಡ್ಡಿ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩ ೨೭೬

ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ. ಫಿಲ್. ನಿಬಂಧ

ಸಂಶೋಧಕ

ಮಹೇಶ

ಮಾರ್ಗದರ್ಶಕರು

ಡಾ. ದೇವರಕೊಂಡಾರೆಡ್ಡಿ

ಶಾಸನಶಾಸ್ತ್ರ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೨

ಪ್ರಮಾಣ ಪತ್ರ

ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು ಎಂಬ ಶೀರ್ಷಿಕೆಯ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ.ದೇವರಕೊಂಡಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಸಮಾಜವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೧೦-೦೪-೨೦೦೭

ಮಹೇಶ
ಸಂಶೋಧಕ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣ ಪತ್ರ

ಶ್ರೀ ಮಹೇಶ ಅವರು *ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು* ಎಂಬ ಶೀರ್ಷಿಕೆಯ ಪ್ರಬಂಧವನ್ನು ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಪ್ರಬಂಧದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದೇವರಕೊಂಡಾರೆಡ್ಡಿ
ಮಾರ್ಗದರ್ಶಕರು ಮತ್ತು ಮುಖ್ಯಸ್ಥರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೦.೦೪.೨೦೦೨

ಕೃತಜ್ಞತೆಗಳು

ಒಂದು ನಾಡಿನ ಇತಿಹಾಸದಲ್ಲಿ ಗ್ರಾಮಗಳು ವಹಿಸುವ ಪಾತ್ರ ಮಹತ್ವಪೂರ್ಣವಾದುದು. ಐತಿಹಾಸಿಕ ಮಹತ್ವವನ್ನು ಮತ್ತು ವೈಭವವನ್ನು ಪಡೆದ ಗಬ್ಬೂರು ಅನೇಕ ದೇವಾಲಯ, ಶಾಸನ, ಕೋಟೆ, ಹಾಗೂ ಪುಷ್ಕರಣಿಗಳ ನೆಲೆವೀಡು ಎಂದರೆ ತಪ್ಪಾಗಲಾರದು. ಆದ್ದರಿಂದ ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು ಎಂಬ ವಿಷಯವನ್ನು ಎಂ.ಫಿಲ್.ಅಧ್ಯಯನಕ್ಕಾಗಿ ಆಯ್ದು ಕೊಂಡಿದ್ದೇನೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಅಧ್ಯಯನ ಕೈಗೊಳ್ಳಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎಚ್.ಜೆ.ಲಕ್ಕಪ್ಪಗೌಡ ಮತ್ತು ಮಾನ್ಯ ಕುಲಸಚಿವರಾದ ಡಾ. ಕೆ.ವಿ.ನಾರಾಯಣ ಅವರಿಗೆ ಹಾಗೂ ಈ ಪ್ರಬಂಧ ರೂಪುಗೊಳ್ಳಲು ನನಗೆ ಸಹಾಯ, ಸಹಕಾರಗಳೊಂದಿಗೆ ಮಾರ್ಗದರ್ಶನ ಮಾಡಿದ ಡಾ. ದೇವರಕೊಂಡಾರೆಡ್ಡಿ ಅವರಿಗೆ ಹೃತ್ಪೂರ್ವಕ ಪ್ರಣಾಮಗಳನ್ನು ಸಲ್ಲಿಸುವೆನು.

ಅಧ್ಯಯನದ ಅವಧಿಯಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಡಾ. ಕೆ.ಜಿ.ಭಟ್‌ಸೂರಿ, ಡಾ. ಡಿ.ವಿ.ಪರಮಶಿವಮೂರ್ತಿ, ಶ್ರೀ ಕಲವೀರ ಮನ್ವಚಾರ ಅವರಿಗೆ ಕೃತಜ್ಞತೆಗಳು.

ನನ್ನ ವಿದ್ಯಾಭ್ಯಾಸಕ್ಕೆ ಸದಾ ಪ್ರೇರಣೆಯನ್ನು ನೀಡಿದ ಶ್ರೀ ಷ.ಬ್ರ. ಬೂದಿಬಸವ ಶಿವಾಚಾರ್ಯ ಸ್ವಾಮಿಗಳು ಹಾಗೂ ಸಾಯಿ ನಾಗಭೂಷಣಸ್ವಾಮಿಗಳ ದಿವ್ಯ ಪಾದಾರವಿಂದಕ್ಕೆ ನನ್ನ ಅನಂತ ನಮಸ್ಕಾರಗಳು.

ಮಗನ ಓದುವಿನ ಮತ್ತು ಏಳ್ಗೆಯನ್ನು ಸದಾ ಬಯಸುತ್ತಿರುವ ಪೂಜ್ಯ ತಂದೆ ತಾಯಂದಿರಿಗೆ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಅಣ್ಣ, ಅತ್ತಿಗೆ ಹಾಗೂ ಅತ್ತೆ ಮಾವ ಹಾಗೂ ನನ್ನ ಸಹೋದರ, ಸಹೋದರಿಯರಿಗೆ ನನ್ನ ಹೃದಯಪೂರ್ವಕ ನಮನಗಳು.

ನನ್ನ ಕ್ಷೇತ್ರಕಾರ್ಯದಲ್ಲಿ ಸಹಕಾರ ಮಾಡಿದ ಶ್ಯಾಮರಾವ್ ಗಬ್ಬೂರು, ಏಳುಬಾವೆಪ್ಪಗೌಡ, ಸಿದ್ದಗಂಡಿ, ಪಂಚಯ್ಯಸ್ವಾಮಿ ಕಂಬಿ ಮತ್ತು ನನಗೆ ಪುಸ್ತಕಗಳ ಸೌಕರ್ಯವನ್ನು ನೀಡಿದ ಶ್ರೀ ಮುಕ್ಕಣ್ಣ ಕರಿಗಾರ ಇ.ಓ., ಶ್ರೀ ಮಲ್ಲಿಕಾರ್ಜುನಗೌಡ ಅಣವಾರ್, ಶ್ರೀ ಎಂ.ಬಿಬ್ಬಣ್ಣಗೌಡ, ಶ್ರೀ ಪಂಪಯ್ಯ ಶೆಟ್ಟಿ, ಡಾ.ಚನ್ನಬಸವ ಹಿರೇಮಠ, ಶಿವಯ್ಯ ಹಿರೇಮಠ, ಚನ್ನಬಸಪ್ಪ ಮಲ್ಕಂದಿನ್ನಿ ಮತ್ತು ಗ್ರಂಥಾಲಯದ ಬಸವರಾಜ ಇವರಿಗೂ ನನ್ನ ಕೃತಜ್ಞತೆಗಳು

ಊರಿನ ಎಲ್ಲಾ ಬಂಧು ಬಳಗಕ್ಕೆ, ನನ್ನ ಅಚ್ಚುಮೆಚ್ಚಿನ ಸ್ನೇಹ ವೃಂದಕ್ಕೆ, ಸುಂದರವಾಗಿ ಛಾಯಚಿತ್ರಗಳನ್ನು ತೆಗೆದುಕೊಟ್ಟ ಶ್ರೀ ಚಂದ್ರಶೇಖರ ಕಾಳಗಿ ಹಾಗೂ ಪ್ರಬಂಧವನ್ನು ಅಚ್ಚುಕಟ್ಟಾಗಿ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಎ.ಎಂ.ಕೃಪಾಶಂಕರ್ ಅವರಿಗೆ ಧನ್ಯವಾದಗಳು.

ಮಹೇಶ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ

ಭಾರತವು ಅನೇಕ ರೀತಿಯ ಪುರಾತನ ಸಂಸ್ಕೃತಿಯನ್ನೊಳಗೊಂಡ ದೇಶವಾಗಿದೆ. ಭಾರತಕ್ಕೆ ಉಜ್ವಲವಾದ, ಸುದೀರ್ಘವಾದ ಇತಿಹಾಸವಿದ್ದು, ಅವುಗಳ ಸಮಗ್ರವಾದ ಅಧ್ಯಯನ ಇನ್ನೂ ಆಗಬೇಕಾಗಿದೆ. ಸಮಾಜವು ಬದಲಾದಂತೆಲ್ಲ, ಸಾಮಾಜಿಕ ನಿರ್ಮಾಣಗಳೂ ಬದಲಾಗಿ ಕಾಲಗರ್ಭದಲ್ಲಿ ಹೂತುಹೋಗುತ್ತವೆ. ಕರ್ನಾಟಕವೂ ಕೂಡ ತನ್ನ ಸುದೀರ್ಘವಾದ ಪರಂಪರೆಯನ್ನು ಕಾಲಗರ್ಭದಲ್ಲಿ ಅಡಗಿಸಿಕೊಂಡಿದೆ. ಪುರಾತನವಾದ ಸಂಸ್ಕೃತಿಯನ್ನುಳ್ಳ ಕರ್ನಾಟಕವು ಮೊದಲಿನಿಂದಲೂ ಸಹನೆ, ವಿವಿಧತೆಯಲ್ಲಿ ಏಕತೆ, ಸಮನ್ವಯತೆಯನ್ನು ಪಾಲಿಸಿಕೊಂಡುಬಂದಿದೆ. ಇಲ್ಲಿನ ಅರಸರು, ಸಂತರು, ಕವಿಗಳು, ಬುದ್ಧಿಜೀವಿಗಳು, ಸುಧಾರಕರು, ಭೋಧಕರು ಮತ್ತು ಕಲಾಕಾರರು ಈ ಅಂಶವನ್ನು ಪೋಷಿಸಿಕೊಂಡು ಬಂದಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಧರ್ಮ, ಸಂಸ್ಕೃತಿ, ಕಲೆ ವಾಸ್ತುಶಿಲ್ಪ, ಸಾಹಿತ್ಯ ಮೊದಲಾದವುಗಳಿಗೆ ಸಮನ್ವಯವೆನಿಸಿದ ಗಂಡು ಭೂಮಿ, ಎಡದೊರೆಯ ನಾಡು ಎಂದೆ ಪ್ರಾಖ್ಯಾತವಾದ ಜಿಲ್ಲೆ ರಾಯಚೂರು ಜಿಲ್ಲೆಯು ಐತಿಹಾಸಿಕವಾಗಿ ತನ್ನದೆ ಆದ ಅಸ್ತಿತ್ವವನ್ನು ಪಡೆದು ಪ್ರಸಿದ್ದವೆನಿಸಿದೆ. ಪುರಾಣ ಪ್ರಸಿದ್ಧವೂ ಇತಿಹಾಸ ಪ್ರಸಿದ್ಧವೂ ಆಗಿರುವ ಗಬ್ಬೂರು ದೇವದುರ್ಗದಿಂದ ಆಗ್ನೇಯಕ್ಕೆ ೨೭ ಕಿ.ಮಿ. ದೂರದಲ್ಲಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಪ್ರೇಕ್ಷಣೆಯ ಹಾಗೂ ಪ್ರಮುಖ ಐತಿಹಾಸಿಕ ಸ್ಥಳ ಗಬ್ಬೂರು. ಗಬ್ಬೂರು ಒಂದು ಕಾಲದಲ್ಲಿ ಪ್ರಸಿದ್ಧ ಅಗ್ರಹಾರಗಳಲ್ಲಿ ಒಂದಾಗಿತ್ತು ಇಲ್ಲಿನ ಗತ ವೈಭವ ಅಂದಿನ ಸಂಸ್ಕೃತಿಯನ್ನು

ಸಾರಿ ಹೇಳುವಂತ ಅನೇಕ ದೇವಾಲಯಗಳು, ಸುಂದರ ವಿಗ್ರಹಗಳು, ಬಸದಿಗಳು, ಶಿವಶರಣ ಗದ್ದುಗೆಗಳಿಂದ ಕೂಡಿದ ಪ್ರಮುಖ ಸ್ಥಳವಿದು. ಇಲ್ಲಿ ಹೆಜ್ಜೆ, ಹೆಜ್ಜೆಗೂ ಕಂಡು ಬರುವ ವಾಸ್ತುರಚನೆಗಳು, ಅವು ಕೇವಲ ವಾಸ್ತು ರಚನೆಗಳಾಗಿರದೆ ಕಲಾ ಪ್ರೌಢಿಮೆಯಿಂದ ಕೂಡಿದ್ದು ಆಸಕ್ತರ ಮನಸ್ಸನ್ನು ಸೂರೆಗೊಳ್ಳುತ್ತವೆ.

ಇಲ್ಲಿ ಅನೇಕ ಶಾಸನಗಳು, ದೇವಾಲಯಗಳು, ಸಾಹಿತ್ಯ, ಸಂಗೀತ, ನಾಟಕ, ಬಯಲಾಟ ಮುಂತಾದ ಕಲೆಗಳ ಸಂಗಮವನ್ನು ನಾವು ಕಾಣುತ್ತೇವೆ. ಚಾಲುಕ್ಯ ಮತ್ತು ಕಲಚುರಿಗಳ ಕಾಲದಲ್ಲಿ ರಚನೆಗೊಂಡ ಅನೇಕ ಶಾಸನಗಳು ಇಂದು ಊರ ಜನರ ನಿರ್ಲಕ್ಷ್ಯ ಹಾಗೂ ಅಸಡ್ಡೆಯಿಂದಾಗಿ ಮನೆಯ ತಳಪಾಯದ ಕಲ್ಲುಗಳಾಗಿಯೋ, ಗೋಡೆಯ ಕಲ್ಲುಗಳಾಗಿಯೋ ಅಥವಾ ಜೀದಿಗೆ ಹಾಸುವ ಕಲ್ಲುಗಳಾಗಿವೆ. ಇನ್ನು ಬಹಳಷ್ಟು ದೇವಾಲಯಗಳು ಹಾಳಾಗಿ ಇಂದು ಕಾಣದಂತಾಗಿವೆ. ಮಿಕ್ಕವು ಪ್ರಕೃತಿಯ ವಿಕೋಪಕ್ಕೆ ಸಿಕ್ಕು ಕಾಲಗರ್ಭದಲ್ಲಿ ಅವಿತುಕೊಂಡು ಹೋಗಿವೆ. ಹೀಗಿದ್ದೂ ಕೂಡ ಗ್ರಾಮದಲ್ಲಿ ಕೆಲವು ದೇವಾಲಯಗಳು ಮತ್ತು ಶಾಸನಗಳು, ಮಠಗಳು, ಮಸೀದಿಗಳು, ಕೋಟೆ, ಬಾವಿ , ಅಗಸಿಗಳು ಮುಂತಾದ ಸ್ಮಾರಕಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ನೋಡುಗರ ಮನ ಗೆದ್ದಿವೆ.

ಕರ್ನಾಟಕದಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆಯಾದ ನಂತರ ಐತಿಹಾಸಿಕ ಅಧ್ಯಯನಕ್ಕೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿದೆ. ಈ ಭಾಗದ ಇತಿಹಾಸಕ್ಕೆ ಸಂಬಂಧಿಸಿದ ಅಧ್ಯಯನಗಳು ತೀವ್ರಗತಿಯಿಂದ ನಡೆಯುತ್ತಿದ್ದರೂ ಅವಕ್ಕೆ ಪೋಷಕವಾಗುವ ಲೇಖನ ಮತ್ತು ಗ್ರಂಥಗಳು ವಿಪುಲವಾಗಿ ಬರಬೇಕಾಗಿದೆ. ಈ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ ಅನೇಕ ಪ್ರದೇಶಗಳಲ್ಲಿ ವ್ಯಾಪಕ ಅಧ್ಯಯನ ನಡೆಯಬೇಕಾಗಿದೆ. ಇದುವರೆಗೆ ಡಾ. ಸಿ.ಎಸ್.ಪಾಟೀಲರ "Temples of Raichuer and Ballary Districts" ಎಂಬ ಗ್ರಂಥದಲ್ಲಿ ಗಬ್ಬೂರಿನ ಕೆಲವು ಅಂಶಗಳನ್ನು ವಿವರಿಸಲಾಗಿದೆ. ಮತ್ತು ಡಾ. ವಿ.ಶಿವಾನಂದ ಇವರು 'ಹೈದರಾಬಾದು ಕರ್ನಾಟಕ ಭಾಗದ ಕನ್ನಡ ಶಿಲಾ ಶಾಸನಗಳು' ಎಂಬ ತಮ್ಮ ಕೃತಿಯಲ್ಲಿ ಗಬ್ಬೂರಿನ ಕೇವಲ ೭-೮ ಶಾಸನಗಳನ್ನು ಮಾತ್ರ ಪ್ರಕಟಿಸಿದ್ದಾರೆ. ಚನ್ನಬಸವ ಹಿರೇಮಠವರು 'ರಾಯಚೂರು ಕೊಪ್ಪಳ ಜಿಲ್ಲೆಯ ಶಾಸನಗಳು' ಪುಸ್ತಕದಲ್ಲಿ ಗಬ್ಬೂರಿನ ಒಂದು ಶಾಸನವನ್ನೂ ತೆಗೆದುಕೊಂಡಿರುವುದಿಲ್ಲ. ಚೆನ್ನಬಸಪ್ಪ.ಬಿ ಇವರು 'ದೇವದುರ್ಗ ತಾಲ್ಲೂಕ ಒಂದು ಸಾಂಸ್ಕೃತಿಕ ಅಧ್ಯಯನ'ದಲ್ಲಿ ಗಬ್ಬೂರಿನ ಕೆಲವು ಅಂಶಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ. ಶಿವಯ್ಯ ಹಿರೇಮಠ ಇವರು 'ಗಬ್ಬೂರು ಒಂದು ಸಾಂಸ್ಕೃತಿಕ ಅಧ್ಯಯನ'ದಲ್ಲಿ ಕೇವಲ ಗಬ್ಬೂರಿನ ಸಾಹಿತ್ಯಕ್ಕೆ ಹೆಚ್ಚಿನ ಒಲವನ್ನು ತೋರಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದವರು ಗಬ್ಬೂರಿನ ಶಾಸನಗಳ ಪ್ರಕಟಣೆಗಾಗಿ ಕ್ರಮಕೈಗೊಂಡಿದ್ದು, ಮುದ್ರಣ ಹಂತದಲ್ಲಿದೆ.

ಒಟ್ಟಿನಲ್ಲಿ ಗಬ್ಬೂರಿನ ಬಗ್ಗೆ ಏನೇ ಅಧ್ಯಯನ ನಡೆದಿದ್ದರೂ ಅವುಗಳಲ್ಲಿ ಕೆಲವೇ ಅಂಶಗಳು ಮಾತ್ರ ಉಲ್ಲೇಖಗೊಂಡಿವೆ. ಆದ್ದರಿಂದ ನಾವು ವಿಸ್ತಾರವಾದ ಅಧ್ಯಯನ ಕೈಗೊಳ್ಳುವ ಉದ್ದೇಶದಿಂದ "ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು" ಎಂಬ ಅಧ್ಯಯನ ಕೈಗೊಂಡಿರುವೆವು. ಗಬ್ಬೂರಿನ ಶಾಸನಗಳು ಮತ್ತು ದೇವಾಲಯಗಳ ಬಗೆಗೆ ಮೊದಲ ಬಾರಿಗೆ ಇಲ್ಲಿ ವಿವರವಾಗಿ ಅಧ್ಯಯನ ನಡೆಸಲಾಗಿದೆ. ನಮ್ಮ ಅಧ್ಯಯನಕ್ಕೆ ಈ ಗ್ರಾಮದಲ್ಲಿ ದೊರೆಯುವ ಸುಮಾರು ೨೫ ದೇವಾಲಯಗಳು ಮತ್ತು ೨೬ ಶಾಸನಗಳನ್ನು ಬಳಸಿಕೊಳ್ಳಲಾಗಿದೆ. ದೇವಾಲಯಗಳ ವಾಸ್ತುಶೈಲಿ, ನಿರ್ಮಾಣ ತಂತ್ರ, ಶಿಲ್ಪ, ಅವುಗಳ ಶೈಲಿ, ಶಾಸನಗಳ ವಸ್ತು, ಅವುಗಳಲ್ಲಿ ಕಂಡುಬರುವ ವಿಷಯ ವೈವಿಧ್ಯ ಮೊದಲಾದ ಅಂಶಗಳನ್ನು ಈ ಪ್ರಬಂಧದಲ್ಲಿ ವಿಷದವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಅಲ್ಲದೆ ಆ ಗ್ರಾಮದಲ್ಲಿನ ಕೋಟೆ ಕೊತ್ತಳಗಳು, ಇತರೆ ಸ್ಮಾರಕಗಳು, ವೀರಗಲ್ಲು, ಮಾಸ್ತಿಕಲ್ಲು, ಬಿಡಿ ಬಿಡಿಯಾದ ಶಿಲ್ಪಗಳು, ಬಾವಿಗಳು ಮೊದಲಾದವುಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಒಟ್ಟಾರೆಯಾಗಿ ಒಂದು ಗ್ರಾಮದಲ್ಲಿ ದೊರೆಯುವ ದೇವಾಲಯಗಳು, ಶಾಸನಗಳು ಮತ್ತು ಸ್ಮಾರಕಗಳನ್ನು ಅಭ್ಯಸಿಸುವುದರ ಮೂಲಕ ಗಬ್ಬೂರಿನ ಪರಂಪರೆ ಮತ್ತು ಸಂಸ್ಕೃತಿಯನ್ನು ಪುನರಚಿಸಲು ಪ್ರಯತ್ನಿಸಲಾಗಿದೆ. ಐತಿಹಾಸಿಕ ಹಿನ್ನೆಲೆಯೊಂದಿಗೆ ನಡೆಸಲಾದ ಈ ಅಧ್ಯಯನದಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ದೊರಕಿರುವ ಎಲ್ಲ ಆಕರಗಳನ್ನು ಸಮರ್ಥವಾಗಿ, ಪ್ರಾಮಾಣಿಕವಾಗಿ ಬಳಸಿಕೊಂಡು ಉತ್ತರ ಕರ್ನಾಟಕದ ಒಂದು ಸಾಂಸ್ಕೃತಿಕ ಗ್ರಾಮವಾದ ಗಬ್ಬೂರನ್ನು ವಿವಿಧ ಮಗ್ಗಲುಗಳಿಂದ ನೋಡಲು ಪ್ರಯತ್ನಿಸಿರುವ ಪ್ರಬಂಧ ಇದಾಗಿದೆ.

ಅಧ್ಯಾಯ ೨

೨.೧. ಗಬ್ಬೂರಿನ ಭೌಗೋಳಿಕ ಪರಿಸರ

೨.೨. ಗಬ್ಬೂರು ಶಬ್ದದ ಪದ ನಿಷ್ಪತ್ತಿ

೨.೩. ಪ್ರಾಗೈತಿಹಾಸಿಕ ಕುರುಹುಗಳು

೨.೪. ಐತಿಹಾಸಿಕ ಗಬ್ಬೂರು

೨.೧. ಗಬ್ಬೂರಿನ ಭೌಗೋಳಿಕ ಪರಿಸರ

ಅಧ್ಯಯನಕ್ಕಾಗಿ ಆಯ್ದುಕೊಂಡ ಪ್ರದೇಶವ ಭೌಗೋಳಿಕ ವಿವರಗಳನ್ನು ಅರಿತುಕೊಳ್ಳುವುದು ಅತ್ಯಂತ ಅವಶ್ಯಕ. ಆದ್ದರಿಂದ ಗಬ್ಬೂರಿನ ಭೌಗೋಳಿಕ ಪರಿಸರದಲ್ಲಿ ಕಂಡು ಬರುವ ವಾಯುಗುಣ. ಉಷ್ಣಾಂಶ ಮಳೆ ಮತ್ತು ಭೌತಿಕ ಲಕ್ಷಣಗಳನ್ನು ಅರಿಯದಿದ್ದರೆ ನಾವು ಒಂದು ಪ್ರಧಾನ ನೆಲೆಯನ್ನು ಉಪೇಕ್ಷಿಸಿದಂತಾಗುತ್ತದೆ. ಆದ್ದರಿಂದ ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳು ಪರಂಪರೆ ನಿಕಟ ಸಂಬಂಧ ಹೊದಿದ್ದು ಭೌಗೋಳಿಕ ವೈಶಿಷ್ಟಗಳನ್ನು ಮರೆತು ಇತಿಹಾಸವನ್ನು ಬರೆಯಲು ಸಾಧ್ಯವಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಮೇಲ್ಮೈ ಲಕ್ಷಣಗಳು : ಗಬ್ಬೂರಿನ ಒಟ್ಟು ವಿಸ್ತೀರ್ಣ ೧೩ ಸಾವಿರ ೨೧೩ ಎಕರೆ ೨ ಗುಂಟೆ ಇದ್ದು ೧೨ ಸಾವಿರ ೬೦೪ ಎಕರೆ ೧೪ ಗುಂಟೆ ಹಾಗೂ ವಿಸ್ತರಣವಾದರೆ ೬೩೮ ಎಕರೆ ೨೮ ಗುಂಟೆ ಪೋಟೋಕಾರಬೂ ಇನ್ನೂ ೧೧೩ ಎಕರೆ ೩೩ ಗುಂಟೆ ಗಾಂವಠಾಣದ ವಿಸ್ತೀರ್ಣ. ಇದು ಅಕ್ಷಾಂಶ ೧೬.೨೮ ಉತ್ತರ ಮತ್ತು ರೇಖಾಂಶ ೨೬.೫೮ ಪೂರ್ವದಲ್ಲಿದೆ.

ವಾಯುಗುಣ, ಮಳೆ : ಗಬ್ಬೂರು ತೇವರಹಿತ ಹವೆಯಿಂದ ಕೂಡಿದ್ದು ನವ್ಹಂಬರ್‌ನಿಂದ ಮೇ ತಿಂಗಳವರೆಗೆ ಶುಷ್ಕ ಹವೆ ಇರುತ್ತದೆ. ಬೇಸಗೆಯಲ್ಲಿ ಹೆಚ್ಚಿನ ಉಷ್ಣತೆಯಿಂದ ಕೂಡಿದ್ದು

ಫೆಬ್ರುವರಿಯಿಂದ ಬೇಸಗೆಕಾಲ ಆರಂಭವಾಗಿ ಮೇ ತಿಂಗಳವರೆಗೆ ಮುಂದುವರೆಯುತ್ತದೆ. ಜೂನ್ ತಿಂಗಳಿನಿಂದ ಮಳೆಗಾಲ ಪ್ರಾರಂಭವಾಗಿ ಅಕ್ಟೋಬರ್ ತಿಂಗಳವರೆಗೂ ಸಾಮಾನ್ಯ ಮಳೆ ಇರುತ್ತದೆ. ಈ ತಾಲ್ಲೂಕಿನ ವಾಡಿಕೆ ಮಳೆ ಪ್ರಮಾಣ ೬೩೩.೩ ಮಿ.ಮೀ. ವಾಸ್ತವಿಕ ಸರಾಸರಿ ಮಳೆ ೭೦೭.೬ ಮಿ.ಮಿಗಳು. ಇಲ್ಲಿಯ ವಾರ್ಷಿಕ ಮೇಳೆ ೭೨೬.೨ ಮಿ.ಮಿ.

ಬೆಟ್ಟಗಳು : ಗಬ್ಬೂರಿನಲ್ಲಿ ಒಟ್ಟು ಎರಡು ಬೆಟ್ಟಗಳು ಇದ್ದು. ಊರಿನ ಪಶ್ಚಿಮ ಭಾಗದಲ್ಲಿ ಸೂಗೂರೇಶ್ವರ ಬೆಟ್ಟವಿದೆ. ಈ ಬೆಟ್ಟದಲ್ಲಿ ಪ್ರಾಗೈತಿಹಾಸಿಕ ಕಾಲದ ಅನೇಕ ಕುರುಹುಗಳನ್ನು ಕಾಣಲಾಗುತ್ತದೆ. ಸೂಗೂರೇಶ್ವರ ದೇವಾಲಯದ ಹಿಂದಿನ ಕೆಳಭಾಗದಲ್ಲಿ ಒಂದು ನೀರಿನ ಬುಗ್ಗಿಯಿದ್ದು. ಇದರ ಪಕ್ಕದಲ್ಲಿ ವಿಶೇಷವಾಗಿ ಕಂಡುಬರುವ ಜ್ವಾಲಾಮುಖಿ ಸ್ಫೋಟದಿಂದ ಉಂಟಾದ ಶಿಲಾ ಬಂಡೆಗಲ್ಲು ಇದೆ. ಇದರಲ್ಲಿ 'ಬ್ಯಾತೋಲಿಥ' ಎಂದು ಕರೆಯಲ್ಪಡುವ ಕಪ್ಪು ಶಿಲಾ ಪದರಿನ ಅವಶೇಷವನ್ನು ಕಾಣಬಹುದಾಗಿದೆ. ಇದರ ವೈಷಿಷ್ಟ್ಯವನೆಂದರೆ ಜ್ವಾಲಾಮುಖಿ ಸ್ಫೋಟಗೊಂಡಾಗ ಹೊರಬರುವ ಲಾವರಸವೂ ಪ್ರಾಥಮಿಕ ಸ್ವರೂಪದ ಶಿಲೆಗಳನ್ನು ಅಂದರೆ ಅಗ್ನಿಶಿಲೆಗಳನ್ನು ನಿರ್ಮಿಸುತ್ತದೆ. ಇದರ ಲಕ್ಷಣವೆಂದರೆ ಎರಡೂ ಕಡೆ ಬಿಳಿ ಅಗ್ನಿಶಿಲೆಗಳ ಮಧ್ಯಭಾಗದಲ್ಲಿ ಕಪ್ಪುಬಣ್ಣದ ಅಗ್ನಿಶಿಲೆ ಕಂಡುಬರುವುದು ಇದು ಸುಮಾರು ೧೦ ಮೀಟರಕ್ಕಿಂತಲೂ ಹೆಚ್ಚು ಉದ್ದವಾಗಿದೆ. ಇದೊಂದು ಅಪರೂಪದ ಭೌಗೋಳಿಕ ಅವಶೇಷವಾಗಿದೆ. ಉತ್ತರ ದಿಕ್ಕಿನಲ್ಲಿರುವ ಬೆಟ್ಟವನ್ನು ರತ್ನಗಿರಿ ಬೆಟ್ಟ ಅಥವಾ ನಾಗರಗುಡ್ಡ ಎಂದು ಕರೆಯಲಾಗುತ್ತದೆ. ಈ ಬೆಟ್ಟಗಳಲ್ಲಿ ಸಸ್ಯ ಸಂಪತ್ತು ಇರದೆ ಬೋಳಾಗಿವೆ. ನಾಗರಬೆಟ್ಟದಲ್ಲಿ ಸ್ವಲ್ಪಮಟ್ಟಿಗೆ ಸಸ್ಯ ಸಂಪತ್ತು ಇದೆ.

ನದಿ-ಕೆರೆ-ಬಾವಿಗಳು :ಗಬ್ಬೂರಿನ ಉತ್ತರಕ್ಕೆ ಕೃಷ್ಣಾನದಿಯು ಸುಮಾರು ೧೬ ಕಿ.ಮೀ ದೂರದಲ್ಲಿದೆ. ಕನ್ನಡ ನಾಡಿನ ಜೀವನದಿಗಳಲ್ಲಿ ಒಂದಾಗಿರುವ ಕೃಷ್ಣಾ ನದಿಯು ಉತ್ತರ ಕರ್ನಾಟಕದ ಭಾಗಕ್ಕೆ ಅತಿ ಉಪಯುಕ್ತವಾದ ನದಿಯಾಗಿದೆ. ನದಿಯ ಪಕ್ಕದಲ್ಲಿ ಬೊಪ್ಪುರು ಹಿರೇರಾಯ ಕುಂಪಿ, ಗೂಗಲ್. ಗಾಗಲ್, ಮದರಕಲ್ಲು ಇನ್ನೂ ಹಲವಾರು ಹಳ್ಳಿಗಳಿವೆ. ಇದಕ್ಕೆ ಹಿರೇಹೊಳೆ ಎಂದು ಕರೆಯುತ್ತಾರೆ. ಮತ್ತು ಇನ್ನೊಂದು ಪ್ರಮುಖ ನದಿ ತುಂಗಭದ್ರನದಿ. ಈ ನದಿಯು ಗಬ್ಬೂರಿನ ದಕ್ಷಿಣಕ್ಕೆ ಸುಮಾರು ೩೫ ಕಿ.ಮಿ. ದೂರದಲ್ಲಿದೆ.

ದೇವದುರ್ಗ ತಾಲೂಕಿನಲ್ಲಿ ಒಟ್ಟು ೧೫೦ ಕೆರೆಗಳಿದ್ದು ಗಬ್ಬೂರಿನ ಸುತ್ತಲು ಖಾನಾಪುರ ಕೆರೆ. ಬಂಗಾರಪ್ಪನ ಕೆರೆ, ರಾಮದುರ್ಗ ಕೆರೆ ಪ್ರಸಿದ್ಧವಾಗಿವೆ. ಈ ಎಲ್ಲಾ ಕೆರೆಗಳಿಗೆ ಮಳೆಯ ನೀರೆ ಆಧಾರ. ಗಬ್ಬೂರಿನಲ್ಲಿ ವೃತ್ತಾಕಾರ ಹಾಗೂ ಚೌಕಾಕಾರದ ಅನೇಕ ಬಾವಿಗಳಿವೆ. ಇದರಲ್ಲಿ ಕೆಲವು ಬಾವಿಗಳಿಗೆ ಬುಗ್ಗಿ ಇದ್ದರೆ, ಕೆಲವು ಬಾವಿಗಳಿಗೆ ಮಳೆ ನೀರು ಆಶ್ರಯವಾಗಿವೆ.

ಬೆಳೆಗಳು : ಗಬ್ಬೂರಿನ ಭೂಮಿಯು ಕೆಂಪುಮಣ್ಣು, ಕಪ್ಪುಮಣ್ಣು, ಮರಳು ಮಣ್ಣು, ಸವುಳು ಮಣ್ಣು ಎಂಬ ನಾಲ್ಕು ವಿಧದ ಮಣ್ಣಗಳಿವೆ. ಸ್ವಲ್ಪಮಟ್ಟಿಗೆ ಭೂಮಿಯು ಏರಿಳಿತದಲ್ಲಿದೆ. ಮುಂಗಾರು ಮತ್ತು ಹಿಂಗಾರು ಬೆಳೆಗಳನ್ನು ಬೆಳೆಯುತ್ತಾರೆ. ಮುಂಗಾರು ಬೆಳೆಗಳಾಗಿ ಶೇಂಗಾ, ತೊಗರಿ, ಹೆಸರು, ಅಲಸಂದಿ, ಸಜ್ಜೆ, ನವಣೆ, ಕೆಂಪುಜೋಳ, ಇವುಗಳನ್ನು ಸಾಮಾನ್ಯವಾಗಿ ಜೂನ್ ತಿಂಗಳಿನಲ್ಲಿ ಮಳೆಗಾಲ ಪ್ರಾರಂಭವಾದಾಗಿನಿಂದ ಜುಲೈ ತಿಂಗಳವರೆಗೆ ಬೆಳೆಯುತ್ತಾರೆ.

ಹಿಂಗಾರು ಬೆಳೆಗಳಾಗಿ ಹತ್ತಿ, ಜೋಳ, ಸೂರ್ಯಪಾನ, ಕುಸಬೆ, ಗೋಧಿ, ಕಡಲೆ, ಹುರುಳಿ ಉತ್ಯಾದಿಗಳನ್ನು ಅಕ್ಟೋಬರ್ ಅಥವಾ ನವ್ಹಂಬರ್ ತಿಂಗಳಲ್ಲಿ ಬಿತ್ತನೆ ಮಾಡುತ್ತಾರೆ. ಈ ಮೇಲಿನ ಬೆಳೆಗಳಲ್ಲದೆ. ನೀರಾವರಿ ಭೂಮಿಯಲ್ಲಿ ಈರುಳ್ಳಿ, ಮೆಣಸಿನಕಾಯಿ ಹಾಗೂ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ.

೨.೨ ಗಬ್ಬೂರು ಶಬ್ದದ ಪದ ನಿಷ್ಪತ್ತಿ

ಸ್ಥಳೀಯರ ಹೇಳಿಕೆಯ ಪ್ರಕಾರ ಗಬ್ಬೂರಿಗೆ ಹಿಂದೆ ಮಣಿಪುರವೆಂತಲೂ ಕರೆಯುತ್ತಿದ್ದರು ಎಂದು ತಿಳಿದುಬರುತ್ತದೆ.. ಅಂದರೆ ಗಬ್ಬೂರಿಗೆ ಮೊದಲು ಗೋಪುರ ಮತ್ತು ಗಬ್ಬೂರು ಎಂದು ಬರುವ ಪೂರ್ವದಲ್ಲಿ ಇಲ್ಲಿ ಬಬ್ರುವಾಹನ ಆಳ್ವಿಕೆ ಮಾಡಿದ ಕಾರಣದಿಂದ ಬಬ್ರುವಾಹನ ಆಳಿದ ಮಣಿಪುರವೆಂದು ಕರೆಯಲಾಗಿದೆ. ಇದಕ್ಕೆ ಸಾಕ್ಷಿಯಾಗಿ ಗಬ್ಬೂರಿನಲ್ಲಿ ಬಬ್ರುವಾಹನ ಕುದುರೆ ಕಟ್ಟಿದ ಕಲ್ಲುಕಂಬವಿದೆ. ಕೋಟೆಯ ಒಂದು ಭಾಗದಲ್ಲಿ ಬಬ್ರುವಾಹನ ಹೋರಾಟ ಮಾಡುತ್ತಿರುವ ಚಿತ್ರವಿದೆ. ಬೆಟ್ಟದಲ್ಲಿರುವ ಹೆಜ್ಜೆಗಳನ್ನು ಬಬ್ರುವಾಹನ ಕುದುರೆ ಹೆಜ್ಜೆಗಳೆಂದು ಜನರು ಕರೆಯುತ್ತಾರೆ. ಮತ್ತು ಸಿಡಿಲು ಬಾವಿಯನ್ನು ಸೂಗೂರೇಶ್ವರನ ಕೊರೆಕೆ ಮೇರೆಗೆ ನಿರ್ಮಾಣವಾಗಿದೆಂದು ಅದರ ಪಕ್ಕದಲ್ಲಿರುವ ಶಿಲಾಬಂಡೆಯ ಮಧ್ಯದಲ್ಲಿರುವ ಬಿಳಿ ಪಟ್ಟಿಯನ್ನು ಸ್ಥಳೀಯರು ಅಕ್ಕತಂಗಿಯರು ಹಾಕಿದ ಸೀರೆ ಸೆರೆಗೂ ಎಂದು ಅಲ್ಲದೆ ಆ ಗುಹೆಗಳಲ್ಲಿ ಅನೇಕ ಕಾಡು ಮೃಗಗಳು ವಾಸಿಸುತ್ತಿದ್ದವೆಂದು ಇಲ್ಲಿನ ಜನರು ಹೇಳುತ್ತಾರೆ. ಅಲ್ಲದೆ ರತ್ನಗಿರಿ ಬೆಟ್ಟದ ದಾರಿಯಲ್ಲಿರುವ ಬೂದಿದಿಬ್ಬವನ್ನು ಮಣ್ಣು ಉಪ್ಪು ತಯಾರಿಸುವ ದಿಬ್ಬವೆಂದು ಹೇಳುತ್ತಾರೆ. ಅಂದರೆ ಹಿಂದಿನ ಕಾಲದಲ್ಲಿ ಸಮುದ್ರ ನೀರಿನಿಂದ ಮಾಡಲಾದ ಉಪ್ಪು ಇರಲಿಲ್ಲ. ಆಗ ಈ ಮಣ್ಣಿನಿಂದ ಉಪ್ಪನ್ನು ತಯಾರು ಮಾಡುವ ಪದ್ಧತಿಯಿತ್ತೆಂದು ಐತಿಹ್ಯಹ ಮೂಲಕ ತಿಳಿದುಬರುತ್ತದೆ.

ಸೂಗೂರೇಶ ಮತ್ತು ಬನದೇಶ ಎಂಬ ಅಣ್ಣ ತಮ್ಮರಿಬ್ಬರೂ ಗಬ್ಬೂರಿಗೆ ಬಂದರು. ಇವರು ಮೂಲತ ಶರಣರಾಗಿದ್ದು. ಬನದೇಶ ಬೇರೆ ಊರಿಗೆ ಹೋಗಿ ನೆಲಸಿದರು. ಆದರೆ ಸೂಗೂರೇಶ ಮಾತ್ರ ಈ ಬೆಟ್ಟದಲ್ಲಿರುವ ದೇವರ ಪೂಜೆ ಮತ್ತು ದೇವರ ಸೇವೆ ಮಾಡುತ್ತಾ ಹಾಗೂ ತನ್ನ

ಹೊಟ್ಟೆಗಾಗಿ ಊರಿನಲ್ಲಿ ನೀಡಿದ ಪ್ರಸಾದವೇ ಆತನ ಆಹಾರವಾಗಿತ್ತೆಂದು ಮತ್ತು ಕಾಲಕ್ರಮೇಣ ಇತನಿಗೆ ದೇವರ ಪೂಜೆ ಮಾಡಲು ನೀರಿನ ಅಸಾನುಕೂಲವಾದರಿಂದ ಗಬ್ಬೂರನ್ನು ಬಿಟ್ಟು ಕೃಷ್ಣದಡವಲ್ಲಿರುವ ದೇವಸೂಗೂರಿಗೆ ಹೋಗಿ ನೆಲೆಸಿ ಅಲ್ಲಿ ಲಿಂಗೈಕ್ಯಯಾದರೂ ಎಂದು ತಿಳಿದುಬರುತ್ತದೆ. ಈ ರೀತಿಯಾಗಿ ಊರಿನ ಬಗ್ಗೆ ನಮಗೆ ಮೌಖಿಕ ಕಥೆಗಳು ಕಂಡುಬರುತ್ತವೆ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಅವರು ಪ್ರಕಟಿಸಿರುವ ಕನ್ನಡ ಕನ್ನಡ ನಿಘಂಟುಗಳಲ್ಲಿ ಈ ಶಬ್ದದ ಅರ್ಥವನ್ನು ಈ ಕೆಳಗಿನಂತೆ ಕೊಡಲಾಗಿದೆ.

ಈ ಕೆಳಗಿನಂತಿದೆ.

ಗಬ್ಬ: ಗರುವ.ನೋ.

ಗರುವ: (ಗು)=ಶ್ರೇಷ್ಟವಾದ. ಉತ್ತಮವಾದ

ಇದರ ಪ್ರಕಾರ ಪ್ರಾಚೀನ ಕಾಲದಿಂದ ಇಂದಿಗೂ ಬ್ರಾಹ್ಮಣರು ವೇದ, ಉಪನಿಷತ್ತಿನ ತಾತ್ವಿಕ ವಿಚಾರ ಹಾಗೂ ಶಾಸ್ತ್ರ ಮತ್ತು ಸೂತ್ರಗಳಲ್ಲಿ ಪರಿಣಿತರಾಗಿದ್ದಾರೆ. ಗಬ್ಬೂರು ಒಂದು ಅಗ್ರಹಾರವಾಗಿದ್ದು. "ಈ ಅಗ್ರಹಾರದಲ್ಲಿ ಹಿಂದೆ ಬಿಬ್ಬ ಬಾಚಯ್ಯರೊಂದಿಗೆ ಸಂಘರ್ಷಕ್ಕೆ ತೊಡಗಿದ ಬಸವ ಪುರಾಣವು ವರ್ಣಿಸುವ ಬ್ರಾಹ್ಮಣರು ವಾಸಿಸುವ ಪ್ರತ್ಯೇಕ ಓಣಿ ನಾವು ಇಂದಿಗೂ ಗಬ್ಬೂರಿನಲ್ಲಿ ಕಾಣಬಹುದಾಗಿದೆ. ೧೨ನೇ ಶತಮಾನದಲ್ಲಿ ಆಗಿಹೋದ ಗಬ್ಬೂರು ಬಿಬ್ಬ ಬಾಚಯ್ಯ ಎಂಬ ಶ್ರೇಷ್ಟ ಬ್ರಾಹ್ಮಣ ವಚನಕಾರನು ಇದಕ್ಕೆ ಸಾಕ್ಷಿಯಾಗಿದ್ದಾನೆ. ಈ ಪದದಿಂದ ಈ ಊರಿಗೆ ಗಬ್ಬೂರು ಎಂಬ ಹೆಸರು ಬಂದಿದೆಮು ತರ್ಕಿಸಬಹುದಾದರೂ ಬಳಕೆಯಲ್ಲಿರುವ ಪದವೂ ಗೊಬ್ಬೂರು ಎಂದು ಆರಂಭವಾಗಿದ್ದರಿಂದ ಈ ಶಬ್ದಕ್ಕೆ ಈ ಅರ್ಥವನ್ನು ಅನ್ವಯಿಸುವದರ ಬಗ್ಗೆ ಸಂದೇಹವಿದೆ.

ಗೋ : ರಸ, ಹಾಲು, ಮೊಸರು, ಮು, ಹಸವಿನ ಪದಾರ್ಥಗಳು

ಗೋಪ : ವೃಷಭ, ನಂದಿ, ಗೊಲ್ಲ

ಗೋಪು : ಗೋಪುಕಾರ, ಕಾಪಾಡುವಿಕೆ

ಗೋಪುರ : ಗೋವುಗಳಿರುವ ನಗರ

ಈ ಮೇಲಿನ ಶಬ್ದದ ಅರ್ಥ ನೋಡಿದಾಗ ಗಬ್ಬೂರಿನಲ್ಲಿ ಗೋಲ್ಲರು ಅಥವಾ ಗೋಲ್ಲ ಜನಾಂಗದವರು ಅನೇಕ ಗೋವುಗಳನ್ನು ಸಾಕಿ, ಸಂರಕ್ಷಣೆ ಮಾಡಿ ಅವುಗಳ ಮೂಲಕ ಹೈನುಗಾರಿಕೆಯ ವೃತ್ತಿಯನ್ನು ಮಾಡುತ್ತಿದ್ದರೂ. ಇಂದಿಗೂ ಗಬ್ಬೂರಿನಲ್ಲಿ ಈ ಗೊಲ್ಲರು ಹೈನುಗಾರಿಕೆಯನ್ನು ಮಾಡುತ್ತಿದ್ದಾರೆ. ಇದರಿಂದ ಅಂದರೆ ಗೋವುಗಳ+ಪುರ=ಗೋಪುರ ಎಂದು ಬಂದಿದೆಂದು ಹೇಳಲಾಗುತ್ತದೆ.

ಗೋಪ : ಗೋಪುರ, ಶಿಖರ

ಇದರ ಪ್ರಕಾರ ಗಬ್ಬೂರಿನಲ್ಲಿ ಅನೇಕ ದೇವಾಲಯಗಳಿಂದ ಕೂಡಿದ್ದು ಈ ದೇವಾಲಯದ ಗೋಪುರ, ಶಿಖರಗಳನ್ನು ಊರಿನ ತುಂಬಾ ಕಾಣುತ್ತವೆ. ಇದರಿಂದಲೂ ಈ ಊರಿಗೆ ಗೋಪುರ ಎಂದು ಬಂದಿದೆಂದು ಊಹಿಸಬಹುದಾಗಿದೆ. ಅಷ್ಟೇ.

ಗೋಪುರ : ನಗರದ ಹೆಬ್ಬಾಗಿಲು, ಮಹಾದ್ವಾರ.

ಗಬ್ಬೂರನಲ್ಲಿ ಆಗಿನ ಕಾಲದಲ್ಲಿ ಆಳ್ವಿಕೆ ಮಾಡಿದ ರಾಜ ಮಹಾರಾಜರು ತಮ್ಮ ರಕ್ಷಣೆಗಾಗಿ ಗಬ್ಬೂರಿನ ಸುತ್ತಲು ಕೋಟೆ ಕೊತ್ತಲ ಹಾಗೂ ಊರ ಮಹಾದ್ವಾರ (ಅಗಸಿ)ಗಳನ್ನು ನಿರ್ಮಿಸಿದ್ದಾರೆ. ಈಗಲೂ ನಾವು ಗಬ್ಬೂರಿನಲ್ಲಿ ಈ ಅಗಸಿದ್ವಾರಗಳನ್ನು ಕಾಣಬಹುದಾಗಿದೆ.

ಕನ್ನಡ ಕನ್ನಡ ಕಸ್ತೂರಿ ಕೋಶದಲ್ಲಿ ಕಬ್ಬಿಗ ಮತ್ತು ಕಬ್ಬ ಎಂದರೆ ಈ ಅರ್ಥವನ್ನು ಕೊಡಲಾಗಿದೆ.

ಕಬ್ಬಿಗ (ಕ)=ಕಾವ್ಯವನ್ನು ರಚಿಸುವ.

ಕಬ್ಬ(ದ್ಭ)=ಕಾವ್ಯ, ಕವಿತೆ, ರಸಮಯ ಸಾಹಿತ್ಯ.

ಗಬ್ಬೂರಿನಲ್ಲಿ ಪ್ರಸಿದ್ಧ ವಚನಕಾರರಾದ ಆದ ಬಿಚ್ಚಿಬಾಚಯ್ಯ ತತ್ವಪದಕಾರರಾದ ಗಬ್ಬೂರು ಹಂಪಣ್ಣ, ಗೂಬ್ಬೂರು ಮಾರ್ತಂಡಪ್ಪ ಅಲ್ಲದೆ ದಾಸಸಾಹಿತ್ಯ ಇತ್ಯಾದಿಯಾಗಿ ಗಬ್ಬೂರಿನಲ್ಲಿ ಒಂದು ರಸಮಯ ಸಾಹಿತ್ಯ ಇಂದಿಗೂ ಉಳಿದಿಕೊಂಡಿದೆ. ಒಟ್ಟಿನಲ್ಲಿ ಇವರ ಸಾಹಿತ್ಯವು ಗಬ್ಬೂರ ಸಾಹಿತ್ಯಲೋಕಕ್ಕೆ ಒಂದು ಅಪರೂಪವಾದ ಕಾಣಿಕೆಯಾಗಿದೆ. ಆದ್ದರಿಂದ ಊರಿಗೆ ಕಬ್ಬಿನೂರು ಎಂದು ಕರೆದಿದ್ದಾರೆ. ಸಾಹಿತ್ಯವನ್ನು ಬರೆಯುವದರಿಂದ ಮತ್ತು ವೃತ್ತಿಯಿಂದ ಬಂದಿರುವ ಹೆಸರಿನ ಉಲ್ಲೇಖ ನಮಗೆ ಸಿಗುವದಿಲ್ಲ. ಹೀಗಾಗಿ ಈ ಪದದಿಂದ ಗಬ್ಬೂರು ಎಂಬ ಪದ ಬಂದಿಲ್ಲ.

ತುಳು-ಕನ್ನಡ-ಇಂಗ್ಲೀಷ ಶಬ್ದಕೋಶ ನಿಘಂಟಗಳಲ್ಲಿ

ಗೊಬ್ಬಾ: ಆಡಿಸು, ಆಟವಾಡಿಸು

ಗೊಬ್ಬು: (ರ) ನಾ. ಆಟ, ವಿನೋದ, ಕುಣಿದಾಟ, ಯಕ್ಷಗಾನ ನಾಟಕ ಮಾ.ಗಳ ಪ್ರದರ್ಶನ.

ಈ ಮೇಲಿನ ಅರ್ಥವನ್ನು ಗಮನಿಸಿದಾಗ ತಿಳಿಯುವದೆಂದರೆ ಸುಪ್ರಸಿದ್ಧವಾದ ಶ್ರೀ ಕೃಷ್ಣ ಪರಿಜಾತವನ್ನು ಕೊಟ್ಟಿರುವ ರಾಯಚೂರು ಜಿಲ್ಲೆ ಬಯಲಾಟಗಳಿಗೆ ತುಂಬಾ ಪ್ರಸಿದ್ಧಿಯಾಗಿದೆ. ಕೇವಲ ಬಯಲಾಟವೊಂದೆಲ್ಲದೆ ಗಬ್ಬೂರಿನಲ್ಲಿ ರಂಗನಾಟಕದ ಕಲಾವಿದರು ಹಾಗೂ ನಿರ್ದೇಶಕರು ಇಂದಿಗೂ ಇದ್ದಾರೆ. ಮತ್ತು ಗಬ್ಬೂರಿನಲ್ಲಿ ತಮ್ಮ ನಿತ್ಯ ಕಾಯಕದ ಜೊತೆಗೆ ಜನಪದವನ್ನು ಆಡುವ ದಾಸರು

ಮೊಹರಂ ಪದಗಳನ್ನು ಆಡುವ ಮುಸ್ಲಿಂ ಬಾಂಧವರು ಮಂಗಲ ಕಾರ್ಯಗಳಲ್ಲಿ ಸ್ತ್ರೀ ಜನಪದ ಹಾಡುಗಳು ಮತ್ತು ಹಬ್ಬ ಜಾತ್ರೆ ಉತ್ಸವಗಳಲ್ಲಿ ಆಡುವ, ಕುಣಿಯುವ ಮುಂತಾದವುಗಳ ಪ್ರದರ್ಶನ ಇಂದಿಗೂ ಕಾಣಬಹುದು.

ಶಾಸನದಲ್ಲಿ ಉಲ್ಲೇಖಿಸಿರುವ ಗೋಪುರಪುರ ಶಬ್ದವು ಗೋಬ್ಬೂರು ಎಂಬ ಶಬ್ದದ ಸಂಸ್ಕೃತಿಕರಣಗೊಂಡ ಶಬ್ದದಂತೆ ಪ್ರಯೋಗವಾಗಿರುವದರಿಂದ ಈ ಶಬ್ದದ ಮೂಲ ರೂಪವು ಗೊಬ್ಬೂರು ಆಗಿರುತ್ತದೆ.

ಗೊಬ್ಬಳಿ, ಗೊಬ್ಬುಳಿ: (ನಾ). ಒಂದು ಬಗೆಯ ಮುಳ್ಳಮರ, ಜಾಲಿ.

ಗಬ್ಬೂರಿನಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ನಾವು ಮುಳ್ಳಿನ ಮರ, ಜಾಲಿಮರಗಳನ್ನು ಕಾಣುತ್ತವೆ. ಇದ್ದರಿಂದ ಗೊಬ್ಬರು ಎಂದು ಕರೆದಿರುಬಹುದೆಂದು ಊಹಿಸಬಹುದಾಗಿದೆ.

ಗೂಬ್ಬಳಿ+ಊರು, ಗೊಬ್ಬಳಿರು>ಗೊಬ್ಬರೆಂದು ನಿಷ್ಪತ್ತಿಸಿದರೆ ಆಗ ಸಸ್ಯವಾಚಿಯ ಗ್ರಾಮವಾಗುತ್ತದೆ. ಈ ಬಗೆಯ ಸಸ್ಯ ಮೂಲದಿಂದ ಬಂದಿರುವ ಗ್ರಾಮಗಳು ಕಾರ್ನಾಟಕದಲ್ಲಿ ಬಹಳಷ್ಟು ಉಲ್ಲೇಖಗಳನ್ನು ಉಲ್ಲೇಖಿಸಬಹುದು. ಗೊಬ್ಬಳಿ+ಊರು> ಗೊಬ್ಬಳಿ>ಗಬ್ಬೂರು ಎಂಬ ನಿಷ್ಪತ್ತಿ ಬಂದಿರಬಹುದು.

ಕಿಬ್ಬೆ. ಕಿಬ್ಬಿ: ನೋ.

ಕಿಬ್ಬಿ (ನಾ). ಇಳಿಜಾರು: ಬೆಟ್ಟದ ಪಕ್ಕ.

ಭೌಗೋಳಿಕ ವಾಚಿಯಾಗಿ ವಿವೇಚಿಸಿದಾಗ ಈಗಿನ ಗೊಬ್ಬೂರು ಇರುವ ಪ್ರದೇಶವು ಬೆಟ್ಟದ ತಪ್ಪಲಿನಲ್ಲಿದೆ. ಆದ್ದರಿಂದ ಗುಬ್ಬಿಯೂರು ಎಂಬ ಪದದಿಂದ ಗೊಬ್ಬೂರು ಎಂದು ಬಂದಿರಬಹುದು. ಗುಬ್ಬಿಯಿಂದ ಆರಂಭವಾಗುವ ಅನೇಕ ಗ್ರಾಮಗಳು ಕರ್ನಾಟಕದಲ್ಲಿಡೆವೆ ಈ ಶಬ್ದದ ಮೂಲ ರೂಪವು 'ಕಿಬ್ಬೆ' ಎಂಬ ಶಬ್ದದಿಂದ ನಿಷ್ಪನ್ನವಾಗಿರಬೇಕು. ಕಿಬ್ಬೆಯು ಗಂಗರ ಕೆಲವು ಶಾಸನಗಳಲ್ಲಿ ಉಲ್ಲೇಖಗೊಂಡಿದ್ದು ಪ್ರಾಚೀನಕ್ಕೆ ಸೇರಿದ್ದಾಗಿದೆ. ಕಿಬ್ಬೆ ಎಂಬ ಶಬ್ದದ ಮೂಲ ರೂಪವು ಕಿಳ್ಬೆ ಎಂಬ ಶಬ್ದದಿಂದ ನಿಷ್ಪನ್ನವಾಗಿದೆ. ಕಿಳ್ಬೆಯೆಂದರೆ ಬೆಟ್ಟದ ತಪ್ಪಲ ಪ್ರದೇಶವೆಂದು ಅರ್ಥವಾಗುತ್ತದೆ. ಇದು ಅನೇಕ ಸ್ಥಳಗಳಲ್ಲಿ ಪ್ರಯೋಗವಾಗಿದೆ. ಅರಕಲಾಗುಡ್ಡದ ತಾಲೂಕಿನ ಗುಬ್ಬಿ. ತುಮಕೂರು ಜಿಲ್ಲೆಯ ಗುಬ್ಬಿ ಎಂಬ ಊರುಗಳಿದ್ದನ್ನು ಉದಾಹರಣೆಯಾಗಿ ವಿವರಿಸಬಹುದಾಗಿದೆ. ಇಲ್ಲಿ ಹೀಗಾಗಿ ಕಿಳ್ಬೆ+ಊರು ಕಿಬ್ಬಿ+ಊರು, ಗುಬ್ಬಿ+ಊರು ಗೊಬ್ಬೂರು ಎಂದು ಇದೆ. ಮುಂದೆ ಗಬ್ಬೂರು ಧ್ವನಿಯಾಗಿ ಬರದಲಾಗಿರಬೇಕು. ಈಗಿನ ಗಬ್ಬೂರು ಇರುವ ಪ್ರದೇಶವು ಬೆಟ್ಟದ ತಪ್ಪಲಿನಲ್ಲಿರುವುದರಿಂದ ಈ ಊರಿಗೆ ಗಬ್ಬೂರು ಎಂದು ಹೆಸರು ಬರಲು ಸಾಧ್ಯವಾಗಿದೆ. ಗೊಬ್ಬೂರು ಎಂದರೆ ಬೆಟ್ಟದ ಕೆಳಗಿನ ಊರು ಎಂದು ಅರ್ಥವಾಗುತ್ತದೆ. ಆದ್ದರಿಂದ ಈ ಅರ್ಥವನ್ನು ಸ್ವೀಕರಿಸಬಹುದಾಗಿದೆ.

೩.೩ ಪ್ರಾಗೈತಿಹಾಸಿಕ ಕುರುಹುಗಳು

ಮನುಷ್ಯ ತನ್ನ ಜೀವನದ ಮೊದಲ ಹಂತದಲ್ಲಿ ಬಂಡೆಗಳ ಆಸರೆಯಲ್ಲೂ ಅಥವಾ ಗುಹೆಗಳಲ್ಲು ವಾಸಿಸುತ್ತಿದ್ದ, ಗೆಡ್ಡೆ ಗೆಣಸುಗಳ ಜೊತೆಗೆ ಬೇಟೆಯಿಂದಲೂ ತನ್ನ ಆಹಾರವನ್ನು ಗಳಿಸುತ್ತಿದ್ದ.ಪ್ರಾಣಿಗಳ ಚರ್ಮ ಗಿಡಗಳ ತೊಗಟೆಗಳೇ ಅವನ ವಸ್ತ್ರಗಳಾಗಿದ್ದವು ಈ ಸಾಧನೆಗಳಿಕೆಯಲ್ಲಿ ಕಲ್ಲಿನ ಆಯುಧಗಳನ್ನು ಅಧಿಕವಾಗಿ ಬಳಕೆಯಲ್ಲಿ ತಂದಿದ್ದ. ಆದ್ದರಿಂದ ಮನುಷ್ಯನ ಬದುಕಿನ ಈ ಕಾಲವನ್ನು ಶಿಲಾಯುಗವೆಂದು ಕರೆಯಲಾಗಿದೆ. ಪ್ರಾಗ್ಮಾನವ ಬಿಟ್ಟು ಹೋದ ಕಲ್ಲಿನ ಆಯುಧಗಳು ಮತ್ತು ಇತರೆ ಉಪಕರಣಗಳು ಆಧಾರದ ಮೇಲೆ ಅವನ ಜೀವನ ಕ್ರಮ ಇತ್ಯಾದಿಗಳನ್ನು ತಿಳಿಯಬಹುದು. (ಕ.ಇ.ಪರಿಚಯ ಫಾಲಾಕ್ಷ ಪುಸ.೨೦) ಐತಿಹಾಸಿಕ ಅವಶೇಷಗಳ ಸೂಕ್ಷ್ಮ ಅಧ್ಯಾಯನದ ಪ್ರಕಾರ ಮತ್ತು ಭೌಗೋಳಿಕ ಲಕ್ಷಣಗಳ ರಚನೆಯ ಪ್ರಕಾರ ಗಬ್ಬೂರಿನ ಇತಿಹಾಸವನ್ನು ಪ್ರಾಗೈತಿಹಾಸಿಕ ಕಾಲದಿಂದಲೂ ಗುರುತಿಸಬಹುದು.

"ಗಬ್ಬೂರು ಸೂಗೂರೇಶ್ವರ ಬೆಟ್ಟದಲ್ಲಿ ಪ್ರಾಗೈತಿಹಾಸಿಕ ಕಾಲದಲ್ಲಿ ಕೊರೆದ ರೇಖಾ ಚಿತ್ರಗಳು ಕಾಣಬಹುದಾಗಿದೆ. ಬೆಟ್ಟದ ಮೇಲೆ ಇರುವ ಚಾಚು ಬಂಡೆಗಳ ಒಳಭಾಗದಲ್ಲಿ ಈ ಚಿತ್ರಗಳನ್ನು ಕೊರೆಯಲಾಗಿದೆ. ಇಕ್ಕಟ್ಟಾದ ದಾರಿಯಿಂದ ರೇಖಾ ಚಿತ್ರಗಳಿರುವ ಸ್ಥಳಕ್ಕೆ ಹೋಗಬಹುದು. ಮೇಲೆ ವಿಶಾಲವಾದ ತರೆದ ಸ್ಥಳವಿದೆ. ಈ ಸ್ಥಳದಲ್ಲಿ ಬಂಡೆಗಳ ಒಳಮುಖದಲ್ಲಿ ಈ ಕೊರೆದ ರೇಖಾ ಚಿತ್ರಗಳನ್ನು ಕಲ್ಲಿನ ತುದಿಯಿಂದ ತಿದ್ದಿ ಆಳವಾಗಿ ಕೊರೆಯಲಾಗಿದೆ. ಈ ಕೊರಕ ರೇಖಾ ಚಿತ್ರಗಳಲ್ಲಿ ಗೂಳಿ. ಜಿಂಕೆ, ಕೋಣಾ ಮತ್ತು ಇತರೆ ಪ್ರಾಣಿಗಳ ಚಿತ್ರಗಳನ್ನು ಕಾಣಬಹುದು. ಸಣ್ಣ ಗುಹೆಗಳಲ್ಲಿ ಕೆಲವು ಅರ್ಥವಾಗದ ರೇಖೆಗಳನ್ನು ಬಿಡಿಸಲಾಗಿದೆ. ಒಂದು ಚಿತ್ರವು ತ್ರಿಶೂಲದಂತೆದೆಯಾದರೂ ಅದು ತ್ರಿಶೂಲವಲ್ಲ. ಈ ರೇಖೆಗಳ ಬಳಿ ಬಂಡಯ ಮೇಲೆ ಪ್ರಾಗೈತಿಹಾಸಿಕ ಕಾಲದಲ್ಲಿ ಮಾಡಿರಬಹುದಾದ ಕುಳಿಗಳಿವೆ. ಅಲ್ಲದೆ ಕೊರೆಯುವಾಗ ಕೊರೆಯುವ ಕಲ್ಲು ಮಾಂಡಾದಾಗ ಅದನ್ನು ಚುಪಾಗಿ ಮಾಡಿಕೊಳ್ಳಲು ಪ್ರಾಗೈತಿಹಾಸಿಕ ಕಾಲದ ಮಾನವನು ಮಾಡಿರಬಹುದಾದ ಉಜ್ಜುವಿಕೆಯಿಂದ ಸವೆದ ಕಲ್ಲನ್ನು ಕಾಣಬಹುದು. ಈ ತೆರೆದ ಬೃಹತ ಸವೆದ ಕಲ್ಲನ್ನು ವಿನೋದ ಆಟವಾಗಿ ಬಳಸಿದ್ದಾರೆ." (ರಾ.ವಾಣಿ ದಿನ ಪತ್ರಿಕೆ, ಗಬ್ಬೂರಿನಲ್ಲಿ ಪ್ರಾಗೈತಿಹಾಸಿಕ ಅವಶೇಷಗಳ ಪತ್ತೆ ಡಾ.ದೇವರಕೊಂಡಾರೆಡ್ಡಿ)

ಇದೇ ಬೆಟ್ಟದ ಇನ್ನೊಂದು ಬದಿಗಿರುವ ಸೂಗೂರಪ್ಪನ ಕುದುರೆ ಹೆಜ್ಜೆಗಳ ಬಳಿಯೂ ಈ ಪ್ರಾಗೈತಿಹಾಸಿಕ ಕುರುಹುಗಳು ಕಂಡುಬಂದಿದ್ದು ಅಲ್ಲಿ ಬೆಣಚು ಕಲ್ಲಿನ ಪರಿತವಾದ ಚಾಕು ವಿನಂತಹ ಕಲ್ಲು ದೊರತಿದೆ. ಕನ್ನಡ ವಿಶ್ವವಿದ್ಯಾಲಯದ ಶಾಸನ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ದೇವರ

ಕೊಂಡಾರೆಡ್ಡಿಯವರು ಪಡಿಯಚ್ಚು ತೆಗೆಯುವ ಕಾರ್ಯಕ್ರಮದಲ್ಲಿ ಈ ಅಂಶಗಳನ್ನು ಗಮನಿಸಿ ಈ ಅಭಿಪ್ರಾಯಕ್ಕೆ ಬಂದಿದ್ದಾರೆ.

ಸೂಗೂರಪ್ಪನ ದೇವಾಲಯದ ಹಿಂದಿನ ಭಾಗಕ್ಕೆ ಬಂದರೆ ಅಲ್ಲಿ ಒಂದು ಚೂಪದಾಗಿರುವ ನೀರನ ಬುಗ್ಗಿಯಿದೆ. ಇದರಪಕ್ಕದಲ್ಲಿ ಕಪ್ಪು ಶಿಲಾ ಪದರಿನ ಅವಶೇಷವನ್ನು ಕಾಣಬಹುದಾಗಿದೆ. ಇದೊಂದು ಅಪರೂಪದ ಅವಶೇಷವಾಗಿದೆ. ಇಲ್ಲಿರುವ ರೇಖಾ ಚಿತ್ರಗಳು ಇತಿಹಾಸ ಪೂರ್ವಕಾಲದವಾಗಿದ್ದು ಬೃಹತ್ ಶಿಲಾಯುಗದ ಕಾಲಕ್ಕೆ ಸೇರಿದವುಗಳಾಗಿವೆ. ಇವನ್ನು ಸುಮಾರು ೩೦೦೦ ವರ್ಷಗಳಷ್ಟು ಹಳೆಯದಾಗಿರಬಹುದೆಂದು ಅಂದಾಜಿಸಬಹುದಾಗಿದೆ.

ಬೆಟ್ಟದ ಕೆಳಗಡೆಯಲ್ಲಿ ಬೂದಿಗುಂಡಿಯಿದ್ದು ಅದು ಇತ್ತೀಚೇಗೆ ಮುಸ್ಲಿಂರ ಘೋರಿಗಳಾಗಿವೆ. ರತ್ನಗಿರಿ ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಬೃಹತ್‌ದಾದ ಬೂದಿದಿಬ್ಬ ಕಾಣತ್ತವೆ ಈ ಬೂದಿದಿಬ್ಬದಲ್ಲಿ ಹೂಡಿದ ಹೋಗಿರುವ ಅನೇಕ ಮಣ್ಣಿನ ಕುಡಿಕೆ ಮಡಿಕೆಗಳ ಅವಶೇಷಗಳು ಸಹ ಕಾಣತ್ತವೆ. ಮತ್ತು ಈ ರತ್ನಗಿರಿ ಬೆಟ್ಟದಲ್ಲಿ ಬಾವಿ ಗುಹೆಗಳನ್ನು ಕಾಣಬಹುದಾಗಿದೆ.

೨.೪ ಐತಿಹಾಸಿಕ ಗಬ್ಬೂರು

ಇತಿಹಾಸ ವರ್ತಮಾನ ಅಥವಾ ಗತಕಾಲದ ಮಾನವ ಜನಾಂಗದ ಅಧ್ಯಾಯನಕ್ಕೆ ಮಾತ್ರವೇ ಸೀಮಿತವಾಗಿಲ್ಲ ಅದು ಪ್ರಾಚೀನ ಮಾನವನ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡುವುದಾಗಿದೆ. ಪ್ರಾಚೀನ ಕಾಲದ ಮಾನವನ ಅನುಭವಗಳನ್ನು ನಾವು ಅರಿಯುವುದು ಇತಿಹಾಸವೊಂದರಿಂದಲೇ. ಅಂದರೆ ನಮ್ಮ ಪೂರ್ವಿಕರ ಜಯಾಪಜಯಗಳನ್ನು ತಿಳಿಯುವಲ್ಲಿರುವ ಮಾಧ್ಯಮವೆಂದರೆ ಇತಿಹಾಸವೊಂದೇ. ಭೂತಕಾಲದ ಈ ಜಯಾಪಜಯಗಳನ್ನು ಅನುಭವದ ಮೇಲೆ ಮಾನವ ತನ್ನ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳಲು ಇತಿಹಾಸ ನೆರವಾಗುವುದು. ಈ ದೃಷ್ಟಿಯಲ್ಲಿಯೇ ಇತಿಹಾಸವನ್ನು ಭೂತ ಮತ್ತು ವರ್ತಮಾನ ಕಾಲದ ಕೊಂಡಿ ಮತ್ತು ಭವಿಷ್ಯತೆಗೆ ಕೈಮರ ಎಂಬುದಾಗಿ ಹೇಳುವುದು.

ಗಬ್ಬೂರು ಪುರಾತನ ಕಾಲದಲ್ಲಿ ಪ್ರಸಿದ್ಧ ಅಗ್ರಹಾರವಾಗಿದ್ದು. ಇಲ್ಲಿ ಚಾಲುಕ್ಯ ಮತ್ತು ಕಲಚೂರಿಗಳ ಕಾಲದಲ್ಲಿ ಅನೇಕ ದೇವಾಲಯಗಳು ಮತ್ತು ಶಾಸನಗಳು ರಚನೆಗೊಂಡವು. ಮೇಲಶಂಕರ, ವೆಂಕಟೇಶ್ವರ ಈಶ್ವರ, ಚಿಂಚೊಳ್ಳಿ ಬಸವಣ್ಣ, ವೀರಭದ್ರೇಶ್ವರ, ಮಾಳೇಶ್ವರ, ಬಂಗಾರ ಬಸ್ಸಪ್ಪ, ಕೇಶವ, ನೀಲಕಂಠೇಶ್ವರ, ಹನುಮಾನ, ರಾಚೋಟೆಯ್ಯ, ಏಳುಬಾವಿ ಬಸವಣ್ಣ, ಭೋಗನಾಥ, ಮಹಾನಂದೀಶ್ವರ, ಹಂಪಣ್ಣ ಗುಡಿ ಮುಂತಾದ ಇಲ್ಲಿರುವ ಮಹತ್ವದ ದೇವಾಲಯಗಳು

ಮತ್ತು ಏಳುಬಾವಿ, ಸಕ್ಕರೆಬಾವಿ, ಕೊರವರಬಾವಿ, ಸಿಡಿಲುಬಾವಿ, ಸುಬ್ಬಣ್ಣಬಾವಿ, ಮಹಾನಂದೀಶ್ವರ ಬಾವಿ, ದಾಸರಬಾವಿ, ಹಂಪಣ್ಣಬಾವಿ, ನಾಗರಬಾವಿ ಮತ್ತು ರಾಯಚೂರು ಅಗಸಿ, ಸಿರವಾರ ಅಗಸಿ, ದೇವದುರ್ಗ ಅಗಸಿ, ಖಾನಾಪುರು ಅಗಸಿ, ತಿಮ್ಮಪುರು ಅಗಸಿ, ಕಛೇರಿ ಅಗಸಿ, ವೀರಭದ್ರೇಶ್ವರ ಅಗಸಿ ಮತ್ತು ಹಿರೇಮಠ, ಚಿಕ್ಕಮಠ ಮುತ್ತಿನ ಪಂಡಿನಮಠ ಗಾಂಜಿಗುಡಿಮಠ, ಆಂದನಾಮಠ ಒಟ್ಟು ಏಳು ಮಠಗಳಿದ್ದು. ಈ ಸದ್ಯದಲ್ಲಿ ಎರಡು ಮಠಗಳು ಮಾತ್ರ ಪ್ರಮುಖವಾದ ಮಠಗಳಾಗಿವೆ. ಸೂಗೂರೇಶ್ವರ ಬೆಟ್ಟ ಮತ್ತು ನಾಗರಬೆಟ್ಟ (ರತ್ನಗಿರಿಬೆಟ್ಟ) ಹಾಗೂ ಗಬ್ಬೂರಿನ ಸುತ್ತಲೂ ಕೋಟೆ ಗೋಡೆಗಳಿವೆ ಚೌಕಾಕಾರದ ಅವುಗಳ ಕೊತ್ತಲಗಳು ಮುಸ್ಲಿಂ ಶೈಲಿಯಲ್ಲಿವೆಂದು ಭಾವಿಸಲಾಗುತ್ತದೆ. (ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ೩. ಪು.ಸಂ.೫೨೧) ಹಾಗೂ ಗಬ್ಬೂರಿನ ಒಟ್ಟು ೨೬ ಶಾಸನಗಳನ್ನು ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ದೇವರಕೊಂಡಾರೆಡ್ಡಿ ಮತ್ತು ಶ್ರೀ ಕಲವೀರ ಮಾನ್ವಚಾರ ಇವರು ಇತ್ತೀಚೆಗೆ ಪಡಿಯುಚ್ಚುಗಳನ್ನು ತೆಗೆದಿದ್ದಾರೆ. ಮತ್ತು ವೀರಗಲ್ಲು ಹಾಗೂ ಮೂರ್ತಿಶಿಲ್ಪಗಳೆಲ್ಲವೂ ಇಂದಿಗೂ ಅವಶೇಷವಾಗಿ ಉಳಿದಿಕೊಂಡಿವೆ.

ಕೃಷ್ಣ ತುಂಗೆಯರ ತೋಳ ತೆಕ್ಕೆಯಲ್ಲಿರುವ ರಾಯಚೂರು ಇತಿಹಾಸದ ಅರುಣೋದಯದ ಕಾಲಕ್ಕೆ ಆದಿಮಾನವ ನೆಲೆ ಬೀಡಾಗಿತ್ತು. ಈ ರಾಯಚೂರು ಜಿಲ್ಲೆಯಲ್ಲಿರುವ ಗಬ್ಬೂರು ಪ್ರಾಚೀನ ಕಾಲದಲ್ಲಿ ಇತಿಹಾಸ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಸಲ್ಲಿಸಿದೆ. ಶತಶತಮಾನಗಳ ಇತಿಹಾಸದಲ್ಲಿ ಗಬ್ಬೂರು ಅನೇಕ ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟು ವಿಭಿನ್ನ ಸಂಸ್ಕೃತಿಯನ್ನು ಪರಿಚಯಿಸಿ ಕೊಟ್ಟಿದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಕರ್ನಾಟಕವು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿರುವಂತೆ ರಾಜಕೀಯ ಚರಿತ್ರೆಯಲ್ಲಿಯೂ ತನ್ನ ಹಿರಿಮೆಯನ್ನು ಮೆರೆದಿದೆ. ಕರ್ನಾಟಕದ ಅರಸರಾದ ಮೌರ್ಯರು, ಶಾತವಾನರು, ಪಲ್ಲವರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರವರಿಗೆ ಗಬ್ಬೂರಿನ ಇತಿಹಾಸವೂ ಅಸ್ಪಷ್ಟವಾಗಿದೆ. ಇದುವರಿಗೆ ಇವರ ಕಾಲದ ಯಾವುದೇ ಶಾಸನಗಳು ದೊರೆತಿಲ್ಲ. ಆದ್ದರಿಂದ ಈ ಕಾಲಘಟ್ಟಗಳಲ್ಲಿ ಗಬ್ಬೂರಿನ ಇತಿಹಾಸ ಗೌಣವಾಗಿದ್ದು ಮುಂದೆ ಕಲ್ಯಾಣಿ ಚಾಲುಕ್ಯರ ಮತ್ತು ಕಳಚೂರಿಗಳ ಕಾಲದಲ್ಲಿ ಗಬ್ಬೂರಿನ ಇತಿಹಾಸಕ್ಕೆ ಹಾಗೂ ಐತಿಹಾಸ ಕಟ್ಟಡಗಳಿಗೆ ಅತಿ ಹೆಚ್ಚಿನ ಚಾಲನೆ ದೊರೆಯುತ್ತದೆ.

ಕರ್ನಾಟಕದವನ್ನಾಳಿದ ಪ್ರಮುಖ ರಾಜಮೆತನಗಳಲ್ಲಿ ಕಲ್ಯಾಣ ಚಾಲುಕ್ಯರ ಮನೆತನವು ಒಂದಾಗಿದೆ. ರಾಷ್ಟ್ರಕೂಟರನ್ನು ಸೋಲಿಸಿ ಉತ್ತರಾಧಿಕಾರಿಗಳಾಗಿ ಬಂದ ಈ ಮನೆತನವು ಕ್ರಿ.ಶ ೯೭೩ರಲ್ಲಿ ಸ್ಥಾಪಿತವಾಗಿ ಕ್ರಿ.ಶ.೧೧೮೯ರಲ್ಲಿ ಕೊನೆಗೊಂಡಿತು. ಕಲ್ಯಾಣ ನಗರವನ್ನು ರಾಜಧಾನಿಯಾಗಿ ಮಾಡಿಕೊಡು ಈಗಿನ ಬೀದರ ಜಿಲ್ಲೆಯ ಬಸವಕಲ್ಯಾಣದಿಂದ ಆಳುತ್ತಿದ್ದರು. ಇವರು ವರಾಹ ಲಾಂಛನವನ್ನು

[illegible]

ಹೊಂದಿದ್ದರು. ಮೊದಲ ಅರಸನಾಗಿ ಇಮ್ಮಡಿ ತೈಲಪ ಕ್ರಿ.ಶ. ೯೭೩ರಿಂದ ೯೯೭ರವರಿಗೆ ನಂತರ ಸತ್ಯಾಶ್ರಯ ಕ್ರಿ.ಶ ೯೯೭-೧೦೦೮ರವರಿಗೆ ಐದನೇ ವಿಕ್ರಮಾದಿತ್ಯ ಕ್ರಿ.ಶ.೧೦೦೮-೧೦೧೫ರವರೆಗೆ ಇವರ ನಂತರ ಇಮ್ಮಡಿ ಜಯಸಿಂಹನು ೧೦೧೫ರಿಂದ ೧೦೪೪ರವರಿಗೆ ಆಳ್ವಿಕೆ ಮಾಡಿದ್ದು. ಇತನಿಗೆ ಜಗದೇಕಮಲ್ಲ ಮತ್ತು ಮಲ್ಲಿಕಾಮೋದ ಎಂಬ ಬಿರುದುಗಳಿದ್ದವು. ಇವನ ನಂತರ ಒಂದನೇಯ ಸೋಮೋಶ್ವರ ಕ್ರಿ.ಶ.೧೦೪೪-೧೦೬೮ ರವರೆಗೆ ಎರಡನೆಯ ಸೋಮೇಶ್ವರನ್ನು ೧೦೯೮ ರಿಂದ ೧೦೭೬ರವರೆಗೆ ಆಳ್ವಿಕೆ ಮಾಡಿದ್ದು. ಇವರ ಕಾಲದ ಶಾಸನಗಳು ಗಬ್ಬೂರಿನಲ್ಲಿ ಇರುವುದಿಲ್ಲ. ಇವನ ನಂತರ ಬಂದ ಪ್ರಮುಖ ಅರಸನಾದ ಆರನೇಯ ವಿಕ್ರಮಾದಿತ್ಯನು ಪಟ್ಟಕ್ಕೆ ಬಂದನು. ಇವನು ಕಲ್ಯಾಣಿ ಚಾಲುಕ್ಯ ವಂಶದ ಪ್ರಸಿದ್ಧ ದೊರೆಯಾಗಿದ್ದಾನೆ. ಇವನು ಮಹಾಪ್ರತಾಪ ಶಾಲಿಯೂ, ವ್ಯವಹಾರ ಜ್ಞಾನವುಳ್ಳವನಾಗಿದ್ದಾನೆ. ಇವನು ಅಧಿಕಾರಕ್ಕೆ ಬಂದ ಕ್ರಿ.ಶ ೧೦೭೬ರ ರಿಂದಲೇ ವಿಕ್ರಮಶಕೆಯನ್ನು ಪ್ರಾರಂಭಿಸಿದನು. ಆರನೇಯ ವಿಕ್ರಮಾದಿತ್ಯನಿಗೆ ಕಲಿವಿಕ್ರಮ. ಪೆರ್ಮಾಡಿ ದೇವ ಮುಂತಾದ ಬಿರುದುಗಳಿದ್ದವು(ಕರ್ನಾಟಕ ಇತಿಹಾಸ ದರ್ಶನ). ಗಬ್ಬೂರಿನಲ್ಲಿ ಇವನ ಆಳ್ವಿಕೆಯ ಕಾಲದಲ್ಲಿ ಅಂದರೆ ಕ್ರಿ.ಶ. ೧೦೭೬ರಿಂದ ೧೧೨೬ರ ಅವಧಿಯಲ್ಲಿ ಅನೇಕ ಶಾಸನಗಳು ದೊರೆತಿವೆ.

ಕ್ರಿ.ಶ.೧೦೯೬ರ ಬಂಗಾರು ಬಸವಣ್ಣ ದೇವಾಲಯದ ಬಳಿ ಇರುವ ಶಾಸನದಲ್ಲಿ ಹಿಂದೆ ಆಹಮಲ್ಲನು ಕೋಟಿಹೋಮ ದಕ್ಷಣೆ ನಿಮಿತ್ತವಾಗಿ ಈ ಊರಿನ ಮಹಾಜನರಿಗೆ ಮಾಣಿಕೇಶ್ವರ ಕೋಲಲ್ಲಲ್ಲಿ ೧೧೩ ಮತ್ತರ ಭೂಮಿ ನೀಡಿದ ಉಲ್ಲೇಖವಿದೆ ಇದರ ಪ್ರಕಾರ ಆಹವಮಲ್ಲನ ಕಾಲಕ್ಕೆ ಇದು ಬ್ರಾಹ್ಮಣ ವಸತಿಯ ಪ್ರಮುಖ ಗ್ರಾಮವಾಗಿತ್ತು. ಆಹವಮಲ್ಲನ ನಂತರದಿಂದ ಆರನೇ ವಿಕ್ರಮಾದಿತ್ಯನ ಕಾಲದವರಿಗೆ ಯಾವುದೇ ಉಲ್ಲೇಖ ದೊರೆಯುವುದಿಲ್ಲ. ಈ ಅವಧಿಯ ೧೦೪೪ರ ಶಾಸನವೇ ಇಲ್ಲಿ ದೊರೆತಿರುವ ಪ್ರಾಚೀನ ಶಾಸನ ಒಟ್ಟು ೮ ಶಾಸನಗಳಿದ್ದು ಅವುಗಳ ಆವಧಿ ೧೦೪೪ರಿಂದ ೧೧೨೭ರವರಿಗೆ ಇದ್ದು ಈ ಅವುದಿಯಲ್ಲಿ ಇವನ ಶಾಸನಗಳು ರಚಿತವಾಗಿವೆ.

೧. ಮೇಲಶಂಕರ ದೇವಾಲಯದ ಮುಂದೆ ನಿಲ್ಲಿಸಲಾಗಿರುವ ಕ್ರಿ.ಶ.೧೦೪೪ರ ಶಾಸನದಲ್ಲಿ ಹಿರಿಯ ಅಗ್ರಹಾರವಾದ ಗಬ್ಬೂರಿನ ಮಹಾಜನಗಳ ವರ್ಣನೆಯಿದೆ. ಅವರನ್ನು ಗೂಬ್ಬೂರ ವಿಪ್ರಚೂಡಮಣಿಗಳೆಂದಿದೆ. ಈ ಗ್ರಾಮವು ಅಯ್ಯಣವಾಡಿ ನಾಡಿನಲ್ಲಿ ಪ್ರಸಿದ್ಧವಾದ ಗೋಪುರ ಗ್ರಾಮವೆಂದು ಪ್ರಸಿದ್ಧಿ ಪಡೆದಿತ್ತು. ಈ ಊರಿನಲ್ಲಿ ಮೇಳೇಶ್ವರ ದೇವರ ನೆಲಿಸಿ ಗ್ರಾಮದ ಜನಗಳನ್ನು ತನ್ನ ಅನುಗ್ರಹಕ್ಕೆ ಪಾತ್ರರನ್ನಾಗಿಸಿಕೊಂಡಿದ್ದು ತಿಳಿದುಬರುತ್ತದೆ. ಆದರೆ ಇಲ್ಲಿ ಇದ್ದಂತಹ ಮಾಂಡಲೀಕನ ಹೆಸರು ತಿಳಿದುಬಂದಿಲ್ಲ.

೨. ಊರಹೊರೆಗೆ ಹಂಪಯ್ಯನ ಬಾವಿಯ ಬಳಿಯ ಕ್ರಿ.ಶ ೧೦೮೫ರ ಶಾಸನವು ಚಾಳುಕ್ಯ ತ್ರಿಭುವನ ಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಚಂದ್ರಸನಿರುತ್ತಾನೆ. ಇವನನ್ನು

ಮಹಿಷ್ಮತೀಪುರವರೇಶ್ವರ, ಪ್ರತಾಪ ಲಂಕೇಶ್ವರ, ಪ್ರಳೆಯ ಭೈರವ ಮುಂತಾದ ವಿಶೇಷಣಗಳಿಂದ ಹೊಗಳಲಾಗಿದೆ. ಇವನ ತಮ್ಮ ಕಣ್ವಲ ದೇವ. ಈ ಅಣ್ಣತಮ್ಮಂದಿರಿಬ್ಬರು ಕೂಡಿ ಮಹಾ ಸಾಮಂತ ಬಸವದೇವ ಭಿನ್ನಪದಂತೆ ಧರ್ಮ ಕಾರ್ಯತತ್ಪರಿರಾಗಿ ಜಿನದೇವರ ಅರ್ಚನೆಗಾಗಿ ಗೊಬ್ಬೂರ ಮೂಲಿಗ ಮಹಾಜನರಿಗೆ ಮೂಲಿಗಡೆ ಮತ್ತು ದಾನ ಬಿಟ್ಟಂತೆ ಉಲ್ಲೇಖಿಸುತ್ತದೆ.

೩. ಸೂಗೂರೇಶ್ವರ ಬೆಟ್ಟದ ದಾರಿಯಲ್ಲಿ ಬಿದ್ದಿರುವ ಕ್ರಿ.ಶ ೧೦೮೫ರ ಮತ್ತೊಂದು ಶಾಸನವು ಚಾಳುಕ್ಯ ತ್ರಿಭುವನ ಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಜೋಯಿಮಯ್ಯರಸನಿರುತ್ತಾನೆ. ಇವನನ್ನು ಮದನ ಮಹೇಶ್ವರ, ಅಭಿನವ ಚಾರದತ್ತ ಉಭಯ ಬಳಚರಣಾಚಾರ್ಯ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಇವನು ಎಡೆದೊರೆ ಎರಡಸಾವಿರ, ಕಲ್ಲಕಳೆಗೈನೂರು ಪ್ರಾಂತ್ಯಗಳನ್ನು ದುಷ್ಟನಿಗ್ರಹ, ಶಿಷ್ಟಪಾಳನಾ ಮಾಡಿಕೊಂಡು ಆಳುತಿದ್ದ ಮನೆವೆಗ್ಗಡೆ ಮತ್ತು ದಂಡನಾಯಕ ಕಲ್ಲಪ್ಪಯ್ಯನಾ ವಿನಂತಿಯ ಮೇರೆಗೆ ಗೊಬ್ಬೂರ ಕಲಿದೇವಸ್ವಾಮಿಯ ಪೂಜಾವಿಧಾನಕ್ಕೆ ದೇಗುಲದ ನವಕರ್ಮಕ್ಕೆಂದು ಮಹಾಮಂಡಳೇಶ್ವರ ಜೋಯಿಮರಸನು ಮುಗುಂದೂರು ೩೦೦ ಬಳಿಯ ಗ್ರಾಮವಾದ ಹಳ್ಳಸಿಂತೆಯನ್ನು ಧರ್ಮವಾಗಿ ಬಿಟ್ಟನು.

೪. ಬಂಗಾರ ಬಸವಣ್ಣ ದೇವಾಲಯದಲ್ಲಿರುವ ಕ್ರಿ.ಶ. ೧೦೯೬ರ ಶಾಸನವು ಹಿಂದೆ ಆಹವ ಮಲ್ಲನು ಮಹಾಜನ ೨೦೦ ಜನರಿಗೆ ಮಾಣಿಕೇಶ್ವರ ಕೋಲ್ಲಲ್ಲಿ ೧೧೩ ಮತ್ತರ ಭೂಮಿ ನೀಡಿದ ಆದರೆ ಅದು ಇವರಿಗೆ ದಕ್ಕಿರಿಲ್ಲಿಲ್ಲ. ಮುಂದೆ ತ್ರಿಭುವನ ಮಲ್ಲನು ಹಾವಿನ ಹಾಳು ಮತ್ತು ಕಲ್ಮೆಲೆಯನ್ನು ತ್ರಿಭೋಗಾಭ್ಯಂತರವಾಗಿ ಪುನಾರ ಭರ್ತಿಯಾಗಿ ನೀಡಿದ.

೫. ಬಾಲಾಂಜಿನೇಯ ದೇವಾಲಯದ ಮನೆಯ ಮುಂದೆ ಇರುವ ಕ್ರಿ.ಶ. ೧೧೦೩ರ ಶಾಸನವು ಬಹುಭಾಗ ಈಗ ಹಾಳಾಗಿದ್ದು. ಉಕ್ತವಾದ ಕಾಲವು ಚಾಳುಕ್ಯ ವರ್ಷ ಚಿತ್ರ (ಭಾನು) ಸಂವತ್ಸರದ ಮಾಘದಮಾವಾಸ್ಯೆ ಸೋಮವಾರವಾಗಿದೆ.

೬. ಗಬ್ಬೂರಿನ ಬಸದಿಯಲ್ಲಿರುವ ಕ್ರಿ.ಶ. ೧೧೦೯ರ ಶಾಸನದಲ್ಲಿ ತ್ರಿಭುವನ ಮಲ್ಲನು ಜಯಂತೀಪುರದ ನೆಲೆವೀಡನಲ್ಲಿದ್ದಾಗ ಅಗ್ರಹಾರ ಹಿರಿಯ ಗೂಬ್ಬೂರ ನಖರಗಳು, ಕಮ್ಮಟದ ಅಧಿಕಾರಿಗಳು, ಕಮ್ಮಟಕಾರರು ಊರಲ್ಲಿಯ ಬ್ರಹ್ಮಜಿನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲಿನ ತೆರಿಗೆಯನ್ನು ಬಿಟ್ಟ ಉಲ್ಲೇಖವಿದೆ.

೭. ರಾಯಚೂರು ಅಗಸಿಯ ಹನುಮಂತ ದೇವಾಲಯ ಆವರಣದಲ್ಲಿರುವ ಕ್ರಿ.ಶ.೧೧೦೯ರ ಶಾಸನವು ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಗಬ್ಬೂರಿನ ಜನನ್ನಯಭಟ್ಟ ಸೋಮಯಾಜಿ ತನ್ನ ಪಾಲಿನ

ವೃತ್ತಿಯ ಬೆಟ್ಟಬಾಗಿನವೆಂಬ ಸ್ಥಳದಲ್ಲಿ ಮಾಣಿಕೇಶ್ವರದ ಕೋಲಲ್ಲಿ ೫ ಮತ್ತರ ಭೂಮಿಯನ್ನು ಕರಿಯ ಮುಸಣ್ಣಭಟ್ಟೋಪಾಧ್ಯಾಯ ಕಲಿಯ್ಯನ ದಾನ ಮಾಡಿದುದನ್ನು ಶಾಸನದಲ್ಲಿ ಹೇಳಲಾಗಿದೆ. ಶಾಸನ ಮುಂದುವರಿದು ಮುಸ್ಯಣಭಟ್ಟ ಅವನ ಪತ್ನಿ ನಾಲಿಕಬ್ಬೆಯರು ಮಹಾದೇವರ ಪೂಜಾಕಾರ್ಯಗಳಿಗೆ ಭೂದಾನ ನೀಡಿರುವಂತೆ ಉಲ್ಲೇಖಿಸುತ್ತದೆ.

೮. ಭೋಗೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕ್ರಿ.ಶ.೧೧೨೭ರ ಶಾಸನದಲ್ಲಿ ಹರಿದೇವನ ಮಗನಾದ ಮಾಧವ ಸೋಮಯಾಜಿಯು ಗೋಪುರ ನಗರದಲ್ಲಿ ಕೇಶವ ದೇವಾಲಯವನ್ನು ನಿರ್ಮಿಸಿದ ಚಾಳುಕ್ಯ ತ್ರಿಭುವನಮಲ್ಲದೇವನು ಜಯಂತಿಪುರದ ನೆಲೆವೀಡಿನಲ್ಲಿದ್ದಾಗ ಸೂರ್ಯಗ್ರಹಣ ನಿಮಿತ್ತವಾಗಿ ಆದಿತ್ಯಭಟ್ಟ ಸೋಮಯಾಜಿಯು ತನುಮಾಡಿಸಿದ ಕೇಶವ, ಹರಿಹರ, ಗಣಪತಿ, ಸರಸ್ವತಿ. ಸೂರ್ಯ ಮುಂತಾದ ದೇವರ ಪೂಜೆಗಾಗಿ ಭೂದಾನ ನೀಡಿರುತ್ತಾರೆ. ಇವನ ಕಾಲದಲ್ಲಿ ಗಬ್ಬೂರಿನಲ್ಲಿ ಅನೇಕ ದೇವಾಲಯಗಳು, ಪುಷ್ಕರಣಿಗಳು, ಜಿನಬಸದಿ ಇತ್ಯಾದಿಗಳು ರಚಿತವಾದಂತೆ ಊರಿನ ಬೇರೆ ಬೇರೆ ಶಾಸನಗಳಿಂದ ತಿಳಿಯಬಹುದು. ವಿಜ್ಞಾನೇಶ್ವರನು 'ಮಿತಾಕ್ಷರ ಸಂಹಿತಾ' ಗ್ರಂಥದಲ್ಲಿ ಕಲ್ಯಾಣವನ್ನು ಮತ್ತು ವಿಕ್ರಮಾದಿತ್ಯನನ್ನು ಕುರಿತು ಕ್ಷಿತ ತಲದಲ್ಲಿ ಕಲ್ಯಾಣದಂತ ನಗರ ಹಿಂದಿರಲಿಲ್ಲ. ಮುಂದಿರಲಾರದು ವಿಕ್ರಕಮಾರ್ಕನಂತ ದೊರೆಯನ್ನು ಕಂಡಿಲ್ಲ, ಕೇಳಿಲ್ಲ ಎಂದು ತಿಳಿಸಿದ್ದಾನೆ.

ಆರನೇಯ ವಿಕ್ರಮಾದಿತ್ಯನ ಮಗನಾದ ಮೂರನೇಯ ಸೋಮೇಶ್ವರನು ೧೧೨೭ರಲ್ಲಿ ಪಟ್ಟಕ್ಕೆ ಬಂದನು. ಇವನು ಕ್ರಿ.ಶ.೧೧೨೭ರಿಂದ ೧೧೩೮ರವರೆಗೆ ಆಳ್ವಿಕೆ ಮಾಡಿದನು. ಇವನನ್ನು ಶಾಸನದಲ್ಲಿ ಭೂಲೋಕಮಲ್ಲ, ಸರ್ವಜ್ಞಾಭೂಪ, ಸರ್ವಜ್ಞಾ ಚಕ್ರವರ್ತಿ ಮುಂತಾಗಿ ಕರೆಯಲಾಗಿದೆ. ಇವನ ನಂತರ ಎರಡನೇಯ ಜಗದೇಕಮಲ್ಲ ಕ್ರಿ.ಶ ೧೧೩೮-೧೧೫೦ರ ವರಿಗೆ ಆಳ್ವಿಕೆ ಮಾಡಿದನು. ಇವನು ತನ್ನ ಅಜ್ಜ ಆರನೇಯ ವಿಕ್ರಮಾದಿತ್ಯನ ಕಾಲದಿಂದಲೂ ಆಡಳಿತದಲ್ಲಿ ಬಾಗಿಯಾಗಿದ್ದನು. ಶಾಸನಗಳಲ್ಲಿ ಈತನನ್ನು ಪ್ರತಾಪ ಚಕ್ರವರ್ತಿ, ಜಗದೇಕಮಲ್ಲನೆಂದು ಕರೆಯಲಾಗಿದೆ.

೧. ಗಬ್ಬೂರು ವೀರಭದ್ರ ದೇವಾಲಯದ ಬಳಿಯ ಕ್ರಿ.ಶ ೧೧೪೨ರ ಶಾಸನವು ಗೊಬ್ಬೂರಿನ ಪರಮ ಭಾಗವತನಾದ ವೈಷ್ಣವ ಮಂಚೈಪ್ಪಣ್ಣನು ಜಗದೇಕಮಲ್ಲನ ಅಳ್ವಕೆಯ ಕಾಲದಲ್ಲಿ ನಿಟ್ಟಾರಿಯ ವೈಷ್ಣವ ಕಂದರ್ಪಭಟ್ಟನಿಂದ ಪ್ರಥಮ ಮತ್ತು ದ್ವಿತೀಯ ನಿವೇಶನಗಳನ್ನು ಹೊಲದ ಬೆಳೆಯನ್ನು ಪಡೆದು ತಾನು ಪ್ರತಿಷ್ಠೆ ಮಾಡಿದ ಪ್ರಸನ್ನ ಕೇಶವ ದೇವರ ಪೂಜೆಗಾಗಿ ನೀಡುತ್ತಾನೆ.

೨. ನೀಲಕಂಠೇಶ್ವರ ದೇವಾಲಯದಬಳಿ ಅಗಸಿಗೆ ಸೇರಿಸಿರುವ ಕ್ರಿ.ಶ. ೧೧೪೫ರ ಶಾಸನದಲ್ಲಿ ಇದೇ ಅರಸನ ಆಳ್ವಿಕೆಯಲ್ಲಿ ಗೊಬ್ಬೂರಿನ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣ ದೇವರ ಪೂಜೆ ಪುನಸ್ಕಾರಕ್ಕೆ ಮತ್ತು ನಾಗಭೂಷಣ ದೇವರ ಸತ್ರಕ್ಕೆ ಮಹಾಜನಗಳ ಧಾನ ನೀಡಿದ ಉಲ್ಲೇಖವಿದೆ.

೩. ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೧೪೪ರ ಇದೇ ಅರಸನ ಶಾಸನವೊಂದರಲ್ಲಿ ಗೊಬ್ಬೂರಿನ ಅಶೇಷ ಮಹಾಜನಗಳಲ್ಲಿ ಒಬ್ಬನಾದ ವೈಷ್ಣವ ಚಾಕಣಭಟ್ಟಯ್ಯ ಎಂಬುವವನು ಗೋಪುರ ಗ್ರಾಮದಲ್ಲಿ ತಾನು ಮಾಡಿಸಿದ ಕೇಶವ ದೇವರ ಪೂಜೆ ಪುನಸ್ಕಾರ, ಚೈತ್ರಾ ಪವಿತ್ರ, ನೈವಿದ್ಯೆ, ನಂದಾದೀಪ, ದೇವಾಲಯದ ನಿರ್ವಹಣೆ ಮುಂತಾದವುಗಳಿಗೆ ಯಾಜ್ಞಿಕ ತಿಪ್ಪಣ್ಣಭಟ್ಟ ಮತ್ತು ಅವನ ಹೆಂಡಿತಿ ಮಲ್ಲಿಯ್ಯಕ್ಕನ ಮಗನಾದ ಮಲ್ಲದೇವನ ಕೈಯಲ್ಲಿ ಪ್ರಥಮ ದ್ವಿತಿಯ ನಿವೇಶನಗಳನ್ನು ಸೇರಿ ತೋಟವೊಂದನ್ನು ನೀಡುತ್ತಾರೆ.

೪. ಕೆರವರ ಬಾವಿಗೆ ಸೇರಿಸಿರುವ ಕ್ರಿ.ಶ. ೧೧೪೪ರ ಇನ್ನೊಂದು ಜಗದೇಕಮಲ್ಲನ ಶಾಸನದ ಪ್ರಕಾರ ಹಿರಿಯ ಗೊಬ್ಬೂರ ಮಹಾಜನಗಳ ಪಾದಾರಾಧಕರಾಗಿದ್ದ ಸೋಮೇಶ್ವರದೇವರ ಭಕ್ತರಾದ ಜೇಡಕುಳ ತಿಲಕ ಜೇಡರ ದಾಸಿಮಯ್ಯನ ಪ್ರಿಯಪುತ್ರರಾದ ಸಕಲ ಜೇಡಗೊತ್ತಳಿಗಳು ಸೇರಿ ತಮ್ಮ ಕುಲದೈವವಾದ ಗೊಜ್ಜೇಶ್ವರ ದೇವರ ಮತ್ತು ಆ ದೇವರ ಉತ್ತರಕ್ಕೆ ಮಾದಿಯಣ್ಣನು ಕಟ್ಟಿಸಿದ ಮಲ್ಲಿಕಾರ್ಜುನ ದೇವರಿಗೆ ದಾನವನ್ನು ನೀಡಿದ ಉಲ್ಲೇಖವಿದೆ. ಜೇಡರ ದಾಸಿಮಯ್ಯನನ್ನು ತಮ್ಮ ಕುಲಜನನ್ನಾಗಿ ಪರಿಗಣಿಸಿದ್ದು ಈ ಶಾಸನದಲ್ಲಿ ತಿಳಿಯುತ್ತದೆ. ಜಗದೇಕಮಲ್ಲನ ನಂತರ ಕಲ್ಯಾಣಿ ಚಾಲುಕ್ಯ ಅರಸನಾಗಿ ಮೂರನೇಯ ತೈಲಪನು ಕ್ರಿ.ಶ. ೧೧೪೯-೧೧೬೨ರ ವರಿಗೆ ಆಳ್ವಿಕೆ ಮಾಡಿದ್ದಾನೆ. ಇವನು ಎರಡನೇ ಜಗದೇಕಮಲ್ಲನ ಸಹೋದರನಾಗಿದ್ದು. ಮೂರನೆ ತೈಲ ಅಥವಾ ತ್ರೈಲೋಕ್ಯಮಲ್ಲನೆಂದು ಕರಿಸಿಕೊಂಡುರುವವನು

೧. ಗಬ್ಬೂರಿನ ಮೇಲ ಶಂಕರದೇವಾಲಯದ ಎಡಬದಿಗೆ ಒದಗಿಸಿರುವ ಕ್ರಿ.ಶ. ೧೧೫೪ರ ಶಾಸನದ ಆರಂಭದಲ್ಲಿ ಚಾಳುಕ್ಯರ ವಂಶಾವಳಿಯನ್ನು ನೀಡಲಾಗಿದೆ. ಇದು ತೈಲೋಕ್ಯಮಲ್ಲನ ಕಾಲದ ಶಾಸನವಾಗಿದ್ದು ಅಯ್ಯಣವಾಡಿ ಅದರಲ್ಲಿ ಹಿರಿಯಗೊಬ್ಬರು ಅದರಲ್ಲಿನ ೨೦೦ ಮಹಾಜನರ ಬಗ್ಗೆ ವಿವರಗಳಿವೆ. ಗೊಬ್ಬೂರಿನಲ್ಲಿ ತ್ರಿಪುರಾಂತಕ ದೇವರ ಪ್ರತಿಷ್ಠಮಾಡಿ ಅದರ ಪೂಜೆ ಪುನಸ್ಕಾರಕ್ಕೆಂದು ಕೆಲವು ಸೆಟ್ಟರು ದಾನ ನೀಡುತ್ತಾರೆ. ತ್ರಿಪುರಾಂತಕ ಮುಂದೆ ಇದ್ದ ಕೇಶವ ದೇವರಿಗೆ ಇದರ ಜೊತೆಯಲ್ಲಿಯೇ ದಾನ ನೀಡುತ್ತಾರೆ. ಮಾಲೆಗಾರರು ಎರಡು ದೇವರ ಹೂದೋಟಕ್ಕೆ ದಾನ ನೀಡುತ್ತಾರೆ. ಮತ್ತು ಅಗ್ರಹಾರ ಕಲ್ಲೂರಿನ ಉತ್ತರಕ್ಕಿದ್ದ ಗವರೇಶ್ವರದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಗೊಬ್ಬೂರಿನ ತ್ರಿಪುರಾಂತಕ ದೇವರ ಉತ್ತರಕ್ಕಿದ್ದ ಪ್ರಸನ್ನ ಕೇಶವದೇವರ ಪೂಜೆ ಇತ್ಯಾದಿಗಳಿಗೆ ಭಾಗಕೊಡಬೇಕೆಂದು ನಿರ್ಣಹಿಸಿದರು.

೨. ತೈಳೋಕ್ಯಮಲ್ಲದೇವನ ಆಳ್ವಿಕೆಯ ಇನ್ನೊಂದು ಶಾಸನವಲ್ಲಿ ಶಾಲಿಸೆಟ್ಟಿ ಮಾಡಿಸಿದ ಹರಿಹರದೇವರ ನೈವೇದಕ್ಕೆ ಮೂಲಿಗರು ಕಾಣಿಕೆಯನ್ನು ನೀಡಿದಂತೆ ತಿಳಿದುಬರುತ್ತದೆ. ನಾಲ್ಕನೇಯ ಸೋಮೇಶ್ವರ

ಕ್ರಿ.ಶ.೧೧೮೪-೧೧೮೯ರ ವರಿಗೆ ರಾಜ್ಯಭಾರ ಮಾಡಿದನು. ಇವನ ಅವಧಿಯಲ್ಲಿ ಅನೇಕ ಸಾಮಂತ ಅರಸರು ಸ್ವತಂತ್ರವಾಗಿ ಆಳ್ವಿಕೆ ಮಾಡಲು ಪ್ರಾರಂಭಿಸಿದರು. ಇವನ ನಂತರ ಚಾಳುಕ್ಯರ ಇತಿಹಾಸ ಕಣ್ಮರೆಯಾಯಿತು ಎಂದು ಹೇಳಬಹುದು.

ಕಳಚೂರಿಗಳು

ಕಲ್ಯಾಣದ ಚಾಲುಕ್ಯರ ಮುಖ್ಯ ಸಾಮಂತ ಅರಸರಲ್ಲಿ ಒಬ್ಬರಾದ ಕಲಚೂರಿಗಳು ಸ್ವತಂತ್ರರಾಗಿ ರಾಜ್ಯಭಾರ ನಡೆಸಿದುದು ಬಹುಕಡಿಮೆ ಕಾಲವೆಂದು ಹೇಳಬಹುದು. ಇವರ ವಂಶಾವಳಿಯು ಈ ರೀತಿಯಾಗಿದೆ. ಪೆರ್ಮಾಡಿ ೧೧೨೦-೪೬ ತ್ರಿಭುವನಮಲ್ಲ ಬಿಜ್ಜಳ ೧೧೪೬-೬೮ ರಾಯಮುರಾರಿ ಸೋವಿದೇವ ೧೧೬೮-೭೭. ನಿಶ್ಯಂಕಮಲ್ಲ ಸಂಕಮ ೧೧೭೭-೮೭, ರಾಯನಾರಾಯಣ ೧೧೮೭-೮೪ ಸಿಂಘಣ ೧೧೮೪ರವರೆಗೆ ಆಳ್ವಿಕೆ ಮಾಡಿದನು. ಇವರ ಕಾಲದ ೨ ಶಾಸನಗಳನ್ನು ಗಬ್ಬೂರಿನಲ್ಲಿ ಕಾಣುತ್ತವೆ. ಅವು ಯಾವುವೆಂದರೆ ಕ್ರಿ.ಶ.೧೧೭೧ರ ಶಾಸನವು ಹರಿಹರೇಶ್ವರ ದೇವಾಲಯದಲ್ಲಿದೆ. ಈ ಶಾಸನವು ರಾಯಮುರಾರಿ ಭುಜಬಳಮಲ್ಲದೇವನ ಆಳ್ವಿಕೆಯ ಕಾಲದ್ದಾಗಿದೆ. ರಾಯಿಕೊಡ ಹರಿಹರದಾಸರಾದ ಸೋಮೇಶ್ವರ ಭಟ್ಟರ ಮಗಳು ಲಕ್ಕಮಕ್ಕ ಅಗ್ರಹಾರವಾದ ಹಿರಿಯ ಗೊಬ್ಬೂರಿನ ಮೊಸಂಗಿಯ ಭಾಗದಲ್ಲಿ ರಾಯಿಕೊಡವರ ಭಾಗದಲ್ಲಿ ತನ್ನ ತಂದೆಯ ಕಡೆಯಿಂದ ತನ್ನ ಭಾಗವಾಗಿ ಬಂದ ಬೆಳೆಯ ಭಾಗವನ್ನು ಕೋಟಿಹೋಮಕ್ಕೆ ಮತ್ತು ತಂದೆ ಗೊಬ್ಬೂರಲ್ಲಿ ಪ್ರತಿಷ್ಠೆ ಮಾಡಿಸಿದ ಹರಿಹರ ದೇವರಿಗೆ ಮತ್ತು ಸಿದ್ದಸೋಮನಾಥ ದೇವರಿಗೆ ಪೂಜೆಪುನಸ್ಕಾರ ಧೂಪದೀಪ, ನೈವೇದ್ಯ ವಸ್ತ್ರಾಲಂಕಾರ ಚೈತ್ರಗೋತ್ರ ಧರ್ಮ ಏತಕ್ಕೆ ಸಲ್ಲುವಂತೆ ತನ್ನ ತಂದೆ ಮತ್ತು ತನ್ನ ಗಂಡನ ಶ್ರೋಯೋಭಿವೃದ್ಧಿಗೆಂದು ಬಿಡುತ್ತಾಳೆ.

೨. ರಾಯಮುರಾರಿ ಸೋವಿದೇವನ ಕಾಲದ ಗಬ್ಬೂರಿನ ಏಳುಬಾವಿಬಸವಣ್ಣನ ಗುಡಿಯ ಬಲಪಕ್ಕದಲ್ಲಿದ್ದ ಶಾಸನವು ಗೊಬ್ಬೂರಿನ ನೀರಕೋಟೆಯಲ್ಲಿ ಚೌಕಣಭಟ್ಟನು ಪ್ರತಿಷ್ಠೆ ಮಾಡಿಸಿದ ಪ್ರಸನ್ನ ಕೇಶವ ದೇವರ ಅಂಗಭೋಗ ರಂಗಭೋಗ ಮುಂತಾದವುಕ್ಕೆ ಹೇರಿಗೆ ೫೦ ಎಲೆಯನ್ನು ಶಂಕರದೇವ ಲಬ್ದವರ ಪ್ರಸಾದರಾದ ಬಳ್ಳಿಯ ಸಾಸಿರ್ವ್ವರು ಬಿಡುತ್ತಾರೆ. ಕ್ರಿ.ಶ. ೧೨೧೪ರ ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ಶಾಸನದಲ್ಲಿ ಯಾದವ ಸಿಂಹಣನು ಗೋಪುರದಲ್ಲಿ ಪ್ರಸನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿದ ಇದರೊಂದಿಗೆ ಕೇಶವಾ ಚತುರ್ವಿಂಶತಿ ಮೂರ್ತಿಗಳನ್ನು ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದ ಗೋಪುರ ಗ್ರಾಮವನ್ನು ಇವನ ದಂಡನಾಯಕ ಲಕ್ಷ್ಮೀದೇವನು ಆಳುತ್ತಿದ್ದು ಅವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ. ನೇರುಡಿಗೆ ಗ್ರಾಮವನ್ನು ದಾನವಾಗಿ ನೀಡಿದ.

ಗಬ್ಬೂರಿನ ಪೇಟೆ ಅಂಜನೇಯ ದೇವಾಲಯದ ತಳಹದಿಯಲ್ಲಿ ದೊರೆತಿರುವ ಆದಿಲ್‌ಶಾಹಿಗಳ ಅಂತಿಮ ಕಾಲದ ಶಾಸನವು ಮೂರು ಭಾಗಗಳಲ್ಲಿದ್ದು ಶಾಸನದ ಬಹಳಷ್ಟು ಭಾಗವು ನಷ್ಟವಾಗಿದೆ. ಕಾಲದ ಉಲ್ಲೇಖವಿಲ್ಲ ಕನ್ನಡಭಾಷೆಯು ಹೆಚ್ಚು ಉರ್ದುಮಯವಾಗಿದೆ. ಗೊಬ್ಬೂರ ಹೊಲದ ಬೆಳೆಯಲ್ಲಿನ ಬೆಳೆ ಪಾಲನ್ನು ವಿನಾಯಿತಿ ನೀಡಿದಂತೆ ತಿಳಿದುಬರುತ್ತದೆ.

ಪರ್ಶಿಯನ್ ಭಾಷೆಯಲ್ಲಿರುವ ಈ ಶಾಸನ ಘೌರಿ ಮಸೀದಿಯ ಮುಂಭಾಗದಲ್ಲಿ ದೊರೆತಿದೆ. ಅ.ಹಿ.೯೦೪ ಕ್ರಿ.ಶ.೧೪೯೮-೯೯ ಅವಧಿಯ ಈ ಶಾಸನದಲ್ಲಿ ಸುಲೈಮಾನ ಖಿರ್ಮಾನಿಯ ಮಗ ಮಲ್ಲಿಕ್ ಹಾಜಿಯು ರಾಯಚೂರು ಜಿಲ್ಲೆಯ ಗಬೂರು ಗ್ರಾಮದ ಒಂಭತ್ತು ಚಾವರ ಭೂಮಿಯನ್ನು ದತ್ತಿ ನೀಡಿದ್ದರ ಬಗೆಗಿನ ಆದೇಶ ದಾಖಲಾಗಿದೆ(ಕ.ಪ.ಅ.ಮತ್ತು ಉ.ಶಾ.ಪು.ಸಂ.೨೩೭).

ಈ ಮೇಲಿನ ಶಾಸನಗಳಲ್ಲಿದೆ ಗಬ್ಬೂರಿನಲ್ಲಿ ಕಲ್ಯಾಣಿ ಚಾಲುಕ್ಯರ ಬೇರೆ ಬೇರೆ ಕಾಲದ ಬೇರೆ ಬೇರೆ ಶಾಸನಗಳಿವೆ. ಇನ್ನೂ ಅರಸ ಹಾಗೂ ಕಾಲದ ಉಲ್ಲೇಖವಿರದೆ ಇರುವ ಶಾಸನಗಳಿದ್ದು ಅವು ಈ ಕೆಳಗಿನಂತಿವೆ.

೧. ಪೇಟೆ ಆಂಜನೇಯ ದೇವಾಲಯದ ಒಳಗೆ ಇರುವ ಮುನಿಯ ವಿಗ್ರಹದ ಮೇಲೆ ಇರುವ ಶಾಸನ ಸಂಕರ ದಾಸಲಿಂಗ ಸನ್ಯಾಸಿ ಕೇಸವ ಪಂಡಿತನೆಂದಿದೆ.

೨. ಮಸದಿಯ ಆವರಣದಲ್ಲಿರುವ ಶಾಸನದಲ್ಲಿ ಹೊಲ್ಲಜೀಯನು ಗೊಜ್ಜೇಶ್ವರ ದೇವರಿಗೆ ಮತ್ತು ರಾಮನಾಥ ದೇವರಿಗೆ ದಾನವನ್ನು ಕೊಟ್ಟಂತೆ ತಿಳಿಯಬಹುದು.

೩. ಸಿದ್ಧರ ಬಾವಿಯ ಕಟ್ಟಡಕ್ಕೆ ಸೇರಿಸಿರುವ ಶಾಸನದಲ್ಲಿ ಯಾದವ ಚಕ್ರವರ್ತಿಯ ಉಲ್ಲೇಖವಿದೆ. ಉಳಿದ ವಿವರಗಳು ಸ್ಪಷ್ಟವಿಲ್ಲ.

೪. ಬಾಲ ಆಂಜನೇಯ ದೇವಾಲಯದ ಗರುಡಗಂಬದ ಬಳಿರುವ ಶಾಸನದಲ್ಲಿ ಚಾಲುಕ್ಯರ ಪಾರಂಪಾರಿಕ ಬಿರುದುಗಳಿವೆ. ಶಾಸನ ಅಪೂರ್ಣವಾಗಿದ್ದು ಸರ್ವಜ್ಞ ಚಕ್ರವರ್ತಿ ಉಲ್ಲೇಖ ಬಂದಿರುವುದರಿಂದ ಇದು ಭೂಲೋಕಮಲ್ಲನ ಆಳ್ವಿಕೆಗೆ ಸೇರಿರಬಹುದು.

ಗಬ್ಬೂರಿನ ಶಾಸನೋಕ್ತ ಅಧಿಕಾರಿಗಳು

ಪ್ರತಿಯೊಂದು ಕಾಲದ ಅರಸರ ಆಳ್ವಿಕೆಯಲ್ಲಿ ಅವನ ಕೈಕೆಳಗೆ ಅನೇಕ ಸಾಮಾಂತರು, ಮಹಾಮಂಡಳೇಶ್ವರರು, ದಂಡನಾಯಕರು ಇದ್ದು ಇವರು ರಾಜನ ಕಾರ್ಯಭಾಗದಲ್ಲಿ ಮತ್ತು ಇತರೆ ಆಡಳಿತದ ವಿಭಾಗಗಳನ್ನು ನೋಡಿಕೊಳ್ಳುವ ಭಾರ ಇವರದಾಗಿತ್ತು. ಇಂತಹ ಸಾಮಂತರು ಮಹಾಮಂಡಳೇಶ್ವರರು, ದಂಡನಾಯಕರು ಗಬ್ಬೂರು ಶಾಸನದಲ್ಲಿ ಉಲ್ಲೇಖ ಬಂದಿದ್ದು ಕಾಣುತ್ತವೆ.

[illegible]

ಇವರಲ್ಲಿ ಪ್ರಮುಖವಾಗಿ ಹಂಪಯ್ಯನ ಬಾವಿಯ ಬಳಿಯ ದೇವಾಲಯದ ಬಲಗಡೆಗೆ ಇರುವ ಕ್ರಿ.ಶ.೧೦೮೫ರ ಆಷಾಢ ಮಾಸದ ಶಾಸನದಲ್ಲಿ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಚಂದ್ರರಸನಿರುತ್ತಾನೆ. ಇವನನ್ನು ಶಾಸನದಲ್ಲಿ ಪ್ರತಾಪ ಲಂಕೇಶ್ವರ, ಪ್ರಳಯ ಭೈರವ, ಪರಾಕ್ರಮ ಕಂಠೀರವ, ಸಾಹಸವೈನತೇಯಂ ಮುಂತಾದ ವಿಶೇಷಣಗಳಿಂದ ಹೊಗಳಲಾಗಿದೆ. ಆದರೆ ಇವನು ಯಾವ ವಂಶದವನೆಂದು ಸ್ಪಷ್ಟವಾಗಿಲ್ಲ.

ಗಬ್ಬೂರಿನ ಸೂಗೂರೇಶ್ವರಬೆಟ್ಟದ ದಾರಿಯಲ್ಲಿ ಬಿದ್ದಿರುವ ಕ್ರಿ.ಶ. ೧೦೮೫ ಅಶ್ವಯುಜ ಮಾಸದ ಶಾಸನದಲ್ಲಿ ಚಂದ್ರರಸನ ಬದಲಾಗಿ ಜೋಯಿಮಯ್ಯರಸನು ಈ ಗ್ರಾಮದ ಅಧಿಕಾಯಾಗಿ ಬಂದಿದ್ದನು. ಚಾಳುಕ್ಯ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಜೋಯಿಮಯ್ಯರಸನಿರುತ್ತಾನೆ. ಇವನನ್ನು ಶಾಸನದಲ್ಲಿ ಮದನ ಮಹೇಶ್ವರ ಅಭಿನವ ಚಾರದತ್ತ ಉಭಯ ಬಳಕರಣಾಚಾರ್ಯ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ.

ವೆಂಕಟೇಶ್ವರ ದೇವಾಲಯದ ಆವರಣದಲ್ಲಿನ ಕ್ರಿ.ಶ.೧೨೧೪ರ ಶಾಸನದಲ್ಲಿ ಯಾದವ ಸಿಂಹಣನು ದಂಡನಾಯಕನಾದ ಲಕ್ಷ್ಮೀದೇವನು ಆಳುತ್ತಿದ್ದು ಅವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ. ನೇರುಡಿಗೆ ಗ್ರಾಮವನ್ನು ನೀಡಿದೆನೆಂದು ತಿಳಿಯುತ್ತದೆ.

ಈ ರೀತಿಯಾಗಿ ಶಾಸನಗಳಲ್ಲಿ ಸಾಮಂತರು, ಮಹಾಮಂಡಳೇಶ್ವರರು ದಂಡನಾಯಕರುಗಳ ಹೆಸರು ಬಂದಿದ್ದು ಇವರನ್ನು ಅನೇಕ ವಿಷೇಷಣಗಳಿಂದ ಹೋಗಳಲಾಗಿದೆ. ಹಾಗೂ ಇವರು ಮಾಡಿರುವ ಕಾರ್ಯದ ಉಲ್ಲೇಖ ಕಂಡುಬರುತ್ತದೆ. ಈ ಊರು ಬ್ರಾಹ್ಮಣ ಪ್ರಭಾವಿತ ಅಗ್ರಹಾರವಾಗಿದ್ದರಿಂದ ಇಲ್ಲಿ ಅಧಿಕಾರಿಗಳ ಪಾತ್ರ ಕಡಿಮೆ ಇತ್ತು. ಹೀಗಾಗಿ ಶಾಸನಗಳಲ್ಲಿ ಅಧಿಕಾರಿಗಳಿಂತ ಸ್ಥಳದ ಬ್ರಾಹ್ಮಣರೇ ಹೆಚ್ಚಾಗಿ ಉಕ್ತವಾಗಿದ್ದಾರೆ. ಅಂತಹ ಬ್ರಾಹ್ಮಣರ ಹೆಸರುಗಳ ಯಾದಿ ಈ ರೀತಿಯಾಗಿದೆ. ಜನ್ನಯ್ಯಭಟ್ಟ ಸೋಮಯಾಜಿ, ಮುಸ್ಸಣಭಟ್ಟೊಪಾಧ್ಯಾಯ, ಡೋಣಭಟ್ಟ, ಸೋಮೇಶ್ವರಭಟ್ಟ ಮತ್ತು ಮಗಳಾದ ಲಕ್ಕುಮಕ್ಕ, ವೈಷ್ಣವ ಚಾಕಣ ಭಟ್ಟಯ್ಯ ತಿಪ್ಪಣಭಟ್ಟ ಹೆಂಡತಿಯಾದ ಮಲ್ಲಿಯಕ್ಕ ಮಗನಾದ ಮಲ್ಲದೇವಭಟ್ಟ, ವೈಷ್ಣವ ಮಂಚೈಪ್ಪಣ್ಣ, ವೈಷ್ಣವ ಕಂದರ್ಪಭಟ್ಟ, ಭಟ್ಟೋಪಾಧ್ಯಾಯ ಸೋಮಯಾಜಿ, ಆದಿತ್ಯಭಟ್ಟ ಸೋಮಯಾಜಿ, ಮಂಚಿಭಟ್ಟೋಪಾಧ್ಯಾಯ ಸೋಮಯಾಜಿ, ಶಂಕರಭಟ್ಟೋಪಾಧ್ಯಾಯ ಸೋಮಯಾಜಿ, ಶ್ರೀಪತಿಭಟ್ಟೋಪಾಧ್ಯಾಯ ಸೋಮಯಾಜಿ, ಶ್ರೀಧರಭಟ್ಟೋಪಾಧ್ಯಾಯ. ಈ ಪ್ರಮುಖ ಹೆಸರುಗಳಲ್ಲದೆ ಶಾಸನದಲ್ಲಿ ಅನೇಕ ಊರುಗಳ ಹೆಸರುಗಳನ್ನು ಕಾಣತ್ತವೆ ಅವುಗಳಲ್ಲಿ ಬೆಟ್ಟಬಾಗಿನ, ರಾಯಿಕೊಡ, ಮಾಣಿಕೇಶ್ವರ, ಕಾಲ್ಮಲೆ, ಹಾವಿನಹಾಳು, ಜಯಂತೀಪುರ, ಹಳ್ಳಸಿಂತೆ, ಕಲ್ಲೂರಿ, ಮಾಸಂಗಿ ಎಡೆದೊರೆ ೨೦೦೦, ಕಲ್ಲಕೆಳಗೆನ್ನೆರು ಮುಗುಂದೂರ ೩೦೦ ಮುಂತಾದ ಹೆಸರುಗಳನ್ನು ಗಬ್ಬೂರಿನ ಶಾಸನದಲ್ಲಿ ಉಕ್ತವಾಗಿವೆ.

ಚಾರಿತ್ರಿಕ ಗೊಬ್ಬೂರು ಯುದ್ಧ

ಕೃಷ್ಣದೇವರಾಯನ ಕಾಲದಲ್ಲಿ ಗಬ್ಬೂರು ಹಾಗೂ ಗುಬ್ಬೂರಿನ ಸುತ್ತಲೂ ನಡೆದಿರುವ ಒಂದು ಚಾರಿತ್ರಿಕ ಯುದ್ಧವು ಈ ರೀತಿಯಿದೆ. ಜ್ಯೋತಿಷ್ಕನು ಕೃಷ್ಣರಾಯನ ಜನ್ಮ ನಕ್ಷತ್ರಾದಿಗಳ ಪ್ರಕಾರ ಪಂಚಾಂಗ ಶುದ್ಧಿಯನ್ನು ಗಮನಿಸಿ ಶುಕ್ರವಾರಕ್ಕಿಂತ ಶನಿವಾರವು ಶುಭಪ್ರದವೆಂದು ಪರಿಗಣಿಸಿ ತಿಳಿಸಿದ್ದರಿಂದ ಅಂತಿಮವಾಗಿ ಈ ಆಕ್ರಮಣವು ಕ್ರಿ.ಶ.೧೫೨೦ ಮೇ ತಿಂಗಳ ೧೯ನೆಯ ತಾರೀಖು ಶನಿವಾರದಂದು ಪ್ರಾರಂಭವಾಯಿತು.

ಶತ್ರುವಿಗೆ ಬಲವಾದ ಫಿರಂಗಿಗಳ ನೆರವೂ, ಗೊಬ್ಬೂರಿನ ಕೋಟೆಯಂತಹ ಕಿರುಕೋಟೆಗಳ ನೆರವೂ ಇದ್ದುದನ್ನು ತಿಳಿದಿದ್ದ ಕೃಷ್ಣರಾಯನು ತನ್ನ ಆಕ್ರಮಣವನ್ನು ನಿಯೋಜಿಸಿಕೊಳ್ಳುವುದರಲ್ಲಿ ಬಹಳವಾದ ಎಚ್ಚರಿಕೆಯನ್ನು ವಹಿಸಿದ್ದನು. ಮೊದಲನೆಯ ಆಕ್ರಮಣವು ಕೃಷ್ಣರಾಯನ ಹೆಣ್ಣುಕೊಟ ಮಾವನಾದ ಕುಮಾರವೀರಯ್ಯನೆಂಬ ಉನ್ನತಾಧಿಕಾರಿಯ ಮುಂದಾಳುತನದಲ್ಲಿ ನಡೆಯಿತು. ಸೂರ್ಯೋದಯಾನಂತರ ಎರಡು ಗಂಟೆಗಳ ಮೇಲೆ ಕದನವು ಪ್ರಾರಂಭವಾಯಿತು. ಮೊದಲಲ್ಲಿಯೇ ಬಾರಿಸಿದ ರಣದುಂದುಭಿಗಳ, ಊದಿದಕೊಂಬುಕಹಳೆಗಳ, ತುತ್ತೂರಿಗಳ ಕಿವಿಗಡಚಿಕ್ಕುವ ಭಯಂಕರವಾದ ಶಬ್ದದಿಂದ ತುಂಬಿ ಹೋಯಿತು. ಕೃಷ್ಣರಾಯನ ಸೈನ್ಯದ ಮುಂಗಾವಲಿನವರು ಇಸ್ಮೈಲ್ ಆದಿಲ್‌ಷಾಹನ್ ಸೈನ್ಯದ ಮೇಲೆ ಬಿದ್ದಾಗ, ಅದು ಶತ್ರುಗಳು ಮತ್ತಷ್ಟು ಮುಂದೆ ನುಗ್ಗಿ ಬರಲಿ ಎಂಬ ಉದ್ದೇಶದಿಂದಲ ಎಂಬಂತೆ ಸ್ವಲ್ಪ ಹಿಂದಕ್ಕೆ ಸರಿಯಿತು. ಕೃಷ್ಣರಾಯನಸೈನ್ಯವೆಲ್ಲ ಮುನ್ನುಗ್ಗಿ ಬಂದು ತಮ್ಮ ಮೇಲೆ ಬಿದ್ದಾಗ ತಮ್ಮ ಸ್ವಾಭಾವಿಕ ಶಕ್ತಿಸಾಮರ್ಥ್ಯಗಳಿಂದ ಅವನ ಸೈನ್ಯದ ಮೇಲೆ ಬಿದ್ದು ಸಾವುನೋವುಗಳನ್ನುಂಟು ಮಾಡುತ್ತಿರುವಾಗ ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದ ಫಿರಂಗಿದಳದವರು ಹಠಾತ್ತಾಗಿ ಫಿರಂಗಿಗಳನ್ನು ಉಪಯೋಗಿಸಿ ರಾಯನ ಸೈನ್ಯವನ್ನು ನಾಶಮಾಡಬಹುದೆಂದು ಇಸ್ಮೈಲ್‌ನ ಸೈನ್ಯಾಧಿಕಾರಿಗಳು ಯೋಚಿಸಿದ್ದರಂದು ಕಾಣುತ್ತದೆ. ಆದರೆ ಕೃಷ್ಣರಾಯನು ಆಕ್ರಮಣದ ರೀತಿಯೇ ಬೇರೆಯಾಗಿದ್ದುದರಿಂದ ಅವರಿಗೆ ಆ ರೀತಿ ಮಾಡಲು ಅವಕಾಶವಾಗಲಿಲ್ಲ. ಆದಿಲ್‌ಷಾಹನು ತನ್ನ ಯೋಜನೆಯನ್ನು ಕೈಬಿಟ್ಟು ತನ್ನ ಎಲ್ಲ ಫಿರಂಗಿಗಳನ್ನೂ ಮುಂದೆ ತರಿಸಿ ಉಡಾಯಿಸಿದನು. ಇದರ ಹೊಡೆತದಿಂದ ಕೃಷ್ಣರಾಯನ ಸೈನ್ಯದಲ್ಲಿ ಅಪಾರವಾಗಿ ಸಾವು ನೋವುಗಳುಂಟಾಗಿ ಸೈನ್ಯವು ಹಿಮ್ಮೆಟ್ಟಿತು. ಈ ರೀತಿಯಾಗಿ ಆದಿಲ್‌ಷಾಹನು ತನ್ನ ಫಿರಂಗಿಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡನು. ಅವನಿಗೆ ಗೊಬ್ಬೂರಿನ ಕೋಟೆ ಗೋಡೆಗಳ ಆಶ್ರಯವೂ ಸಿಕ್ಕಿತು. ಶತ್ರುಗಳ ಮೇಲೆ ಬೀಳಬೇಕಾಗಿ ಬಂದಿದ್ದ ರಾಯನಿಗೆ ಈ ಎರಡು ರೀತಿಯ ಸೌಕರ್ಯಗಳೂ ಇರಲಿಲ್ಲ. ಹೀಗಾದುದರಿಂದ ಅವನ ಮುಂಚೂಣಿ ಸೈನ್ಯಗಳು ಮುಸ್ಲಿಮರ ಹೊಡೆತಕ್ಕೆ ಸಿಕ್ಕಿ ಮೊದಮೊದಲಲ್ಲಿ ಬಹಳ ತೊಂದರೆಗೀಡಾದವು. ರಾಯನ

ಸೈನ್ಯವು ಹಿಮ್ಮೆಟ್ಟುತ್ತಿರಲು ಮುಸ್ಲಿಂ ಸೈನ್ಯಗಳು ಮುಂದೆ ನುಗ್ಗಿ ಅರ್ಧಹರಿದಾರಿಯಷ್ಟು ದೂರ ಬೆನ್ನಟ್ಟಿ ಬಂದವು. ರಾಯನ ಸೈನ್ಯದಲ್ಲಿ ಅತ್ಯಂತ ಕ್ರೌರ್ಯದಿಂದ ಸಾವು ನೋವುಗಳನ್ನುಂಟು ಮಾಡಿದವು.

ತನ್ನ ಸೈನಿಕರು ಹಿಮ್ಮೆಟ್ಟಿ ಪಲಾಯನ ಮಾಡುತ್ತಿರುವುದನ್ನು ಕಂಡು ಕೃಷ್ಣರಾಯನು ಅವರನ್ನು ದ್ರೋಹಿಗಳೆಂದು ಕೂಗಿ ನಿಂದಿಸುತ್ತ 'ಹೇಡಿಗಳಿರಾ! ಎಲ್ಲಿಗೆ ಓಡುವಿರಿ! ಈ ಪ್ರಪಂಚದಲ್ಲಿ ಎಲ್ಲರೂ ಸಾಯಲೇಬೇಕು. ಯುದ್ಧದಲ್ಲಿ ಮಡಿದರೆ ವೀರಸ್ವರ್ಗ. ಆದ್ದರಿಂದ ಧೈರ್ಯವಾಗಿ ಎದುರಿಸಿ' ಎಂದು ಹೇಳುತ್ತ 'ನಿಮ್ಮಲ್ಲಿ ನನ್ನ ಜೊತೆಗೆ ಯಾರು ಬರುತ್ತೀರೋ ಬನ್ನಿ' ಎಂದು ಗಟ್ಟಿಯಾಗಿ ಕೂಗಿ ಕರೆದನು ಕೂಡಲೆ ಅವನ ನಾಯಕರು, ಸರದಾರರು ತನ್ನ ಸೈನ್ಯ ಸಮೇತ ಅವನ ಸುತ್ತ ನೆರೆದರು. ಆಗ ರಾಜನು ಆದಿಲ್‌ಷಾಹನು ಪ್ರಪಂಚದಲ್ಲಿಯೇ ಅತಿ ಬಲಾಢ್ಯನಾದ ರಾಜನನ್ನು ಕೊಂದೆನೆಂದು ಬೇಕಾದರೆ ಹೇಳಿಕೊಳ್ಳಲಿ ಆದರೆ ಅವನು ಆ ರಾಜನನ್ನು ಸೋಲಿಸಿದೆನೆಂದು ಹೇಳಿಕೊಳ್ಳಬಾರದು ಎಂದು ಹೇಳಿ ಅನಂತರ ತನ್ನ ಬೆರಳಿನಿಂದ ಒಂದು ಉಂಗುರವನ್ನು ತೆಗೆದು ಅದನ್ನು ತನ್ನ ಅಂಗರಕ್ಷಕನೊಬ್ಬನ ಕೈಗೆಕೊಟ್ಟು ಇದನ್ನು ನನ್ನ ಗತಿ ಮುಗಿದ ಸಂಕೇತವಾಗಿ ರಾಣಿಯರಿಗೆ ತೋರಿಸಿ ಅವರೆಲ್ಲ ಸತಿ ಹೋಗುವಂತೆ ಅನುಕೂಲಮಾಡಿಕೊಡು ಎಂದು ಅಜ್ಞಾಪಿಸಿದನು. ಅನಂತರ ರಾಯನು ತನ್ನಕುದುರೆಯನ್ನೇರಿ ಮುಂದೆ ನುಗ್ಗಿದನು. ಅದರಿಂದ ಸ್ಫೂರ್ತಿಗೊಂಡ ಅವನ ದಂಡಾಳುಗಳು ಅವನ ಹಿಂದೆ ಧಾವಿಸಿದರು. ಈ ಪುನರಾಕ್ರಮಣವನ್ನು ಶತ್ರುಗಳು ನಿರೀಕ್ಷಿಸಿರಲಿಲ್ಲ. ಈ ಅನಿರಿಕ್ಷಿತ ಆಕ್ರಮಣವನ್ನು ತಡೆಯಲಾರದೆ ಹೋದರು. ಮುಸ್ಲಿಂ ಸೈನ್ಯಗಳು ಹಿಮ್ಮೆಟ್ಟಿದವು. ಅದರಲ್ಲಿ ಬಹುವಾಗಿ ಭಯಭೀತಿಗಳು ಹುಟ್ಟಿದ್ದರಿಂದಲೂ,ಅವರಲ್ಲಿ ಹೆಚ್ಚಾದ ಸಾವುನೋವುಗಳುಂಟಾದುದರಿಂದಲೂ ಅವರು ತಮ್ಮ ಸುಭದ್ರವಾಗಿದ್ದ ಪಾಳೆಯವನ್ನೂ ರಕ್ಷಿಸಿಕೊಳ್ಳಲು ಯತ್ನಿಸಲಿಲ್ಲ. ಬೆದರಿ ದಿಕ್ಕಾಪಾಲಾಗಿ ಓಡಿಹೋಗುತ್ತ ಹೇಗಾದರೂ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕಾಗಿ ನದಿಯಲ್ಲಿ ಬೀಳತೊಡಗಿದರು. ರಾಯನ ವಿಜಯೀ ಸೈನಿಕರು ಅವರನ್ನು ಬೆನ್ನಟ್ಟಿಕೊಂಡು ಹೋಗಿ ಅಪಾರ ಸಂಖ್ಯೆಯಲ್ಲಿ ಕೊಲ್ಲುತ್ತಿರಲು ಕೃಷ್ಣರಾಯನು ದಯಾರ್ದ್ರಹೃದಯನಾಗಿ ಕೊಲೆಯನ್ನು ನಿಲ್ಲಿಸುವಂತೆ ಅಜ್ಞೆಯಿತ್ತನು.

ಸರ್ವನಾಶಕರವಾದ ಸೋಲನ್ನು ಅನುಭವಿಸಿದ ಇಸ್ಮೈಲ್ ಆದಿಲ್‌ಷಾಹನು ತನಗಾದ ಈ ಅವಮಾನದ ಸೇಡು ತೀರಿಸಿಕೊಳ್ಳಲು ಮುಂದೆ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಅಸದ್‌ಖಾನನ ಸಲಹೆ ಕೇಳಿದನು. ಅಸಾದ್‌ಖಾನನಲ್ಲಿ ಆತನಿಗೆ ಗಾಢವಾದ ನಂಬಿಕೆ ಇತ್ತು. ಅವನು ಇಸ್ಮೈಲನನ್ನು ನದಿಯನ್ನು ದಾಟಿಸಿ ಬೆಟ್ಟಗುಡ್ಡಗಳ ಮಾರ್ಗವಾಗಿ ಬಿಜಾಪುರಕ್ಕೆ ಕರೆದುಕೊಂಡು ಹೋದನು.

ಗೊಬ್ಬೂರಿನ ಕದನವೂ ಅದರಲ್ಲಿ ಇಸ್ಮೈಲನಿಗೆ ಆದ ಸೋಲೂ ಈ ದಂಡೆಯಾತ್ರೆಯನ್ನು ಮುಗಿಸಲಿಲ್ಲ. ಏಕೆಂದರೆ ಅಭೇದ್ಯವಾದ ರಾಯಚೂರು ಕೋಟೆಯನ್ನು ಇನ್ನೂ ಗೆದ್ದುಕೊಂಡಾಗಿರಲಿಲ್ಲ. ಆದರೂ ಈ ಕದನವು ಅತ್ಯಂತ ಮಹತ್ವಪೂರಿತವಾಗಿದ್ದು ಭಾರತ ಚರಿತ್ರೆಯಲ್ಲಿ ನಡೆದ ಮಹಾ ಕದನಗಳ ಶ್ರೇಣಿಗೆ ಸೇರುವಂತಿತ್ತು(ಕೃಷ್ಣದೇವರಾಯನ ಜೀವನ ಸಾಧನೆಗಳು, ಪು.೬೨-೬೩).

ಅಧ್ಯಾಯ ೩

ಗಬ್ಬೂರಿನ ದೇವಾಲಯಗಳು

೩.೧. ದೇವಾಲಯಗಳು

ಒಂದು ದೇಶದ ಸಾಂಸ್ಕೃತಿಕ ಸಂಪತ್ತು ಎನಿಸಿಕೊಂಡಿರುವ ದೇವಾಲಯಗಳು ಆ ದೇಶದ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ನಿಟ್ಟಿನಲ್ಲಿ ಭಾರತ ಪ್ರಾಚೀನ ಕಾಲದಿಂದಲೂ ಭವ್ಯ ಪರಂಪರೆಯನ್ನು ಹೊಂದಿದ ದೇಶವಾಗಿದೆ. ಆರ್ಥಿಕ ಸಂಪತ್ತು ಮಾತ್ರ ದೇಶದ ಸಂಪತ್ತಾಗಿರದೇ ಸಾಹಿತ್ಯ, ಧರ್ಮ. ಕಲೆ ಮತ್ತ ವಾಸ್ತುಶಿಲ್ಪಗಳ ವೈವಿಧ್ಯಪೂರ್ಣ ಬೆಳವಣಿಗೆಯೊಂದಿಗೆ ಭಾರತವು ತನ್ನದೇ ಆದ ಸಂಸ್ಕೃತಿಯನ್ನು ಪಡೆದು ಒಂದು ವೈಶಿಷ್ಟ್ಯಪೂರ್ಣವಾದ ಸ್ಥಾನವನ್ನು ಇಂದಿಗೂ ಉಳಿಸಿಕೊಂಡಿದೆ.

ಧಾರ್ಮಿಕ ಕಲ್ಪನೆಗಳನ್ನು ದೈವತ್ವದಲ್ಲಿ ನಂಬಿಕೆಯನ್ನು ಹೊಂದಿದ ಭಾರತೀಯರು ದೇಶದ ತುಂಬೆಲ್ಲಾ ವೈವಿಧ್ಯಮಯವಾದ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಬಹುಶಃ ಜಗತ್ತಿನ ಯಾವುದೇ ಭಾಗದಲ್ಲಿ ಕಂಡುಬರದೇ ಇರುವ ಅಧಿಕ ಸಂಖ್ಯೆಯ ದೇವಾಲಯಗಳು ಭಾರತದಲ್ಲಿವೆ. ಈ ದೇವಾಲಯಗಳು ಪ್ರಾಚೀನ ಕಾಲದ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ಅವರು ನೀಡಿರುವ ಪ್ರೋತ್ಸಾಹವನ್ನು ರೂವಾರಿಗಳ ಕೈಚಳಕ ಮತ್ತು ಕಲಾನೈಪುಣ್ಯತೆಯ ಮಹಿಮೆಯನ್ನು ಇಂದಿನ ಜನತೆಗೆ ಸಾರಿ ಹೇಳುವ ಜೀವಂತ ಸಾಕ್ಷಿಯಾಗಿವೆ. ಅಲ್ಲದೆ ಕಲಾಕ್ಷೇತ್ರಕ್ಕೆ ನೀಡಿದ ಮಹಾನ್ ಕೊಡುಗೆಗಳಾಗಿವೆ.

[illegible]

ಕರ್ನಾಟಕದಲ್ಲಿಯ ಕಲಾ ಸಿರಿಯ ಸಮಗ್ರ ಪದ್ಧತಿ ಹಾಗೂ ಶೈಲಿಯನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ದೇವದುರ್ಗ ತಾಲೂಕಿನ ಗಬ್ಬೂರು ಕೂಡ ಪ್ರಮುಖವಾಗಿದೆ. ಇದು ಹಿಂದೆ ಎರಡನೆಯ ಹಂಪಿ ಎಂದೇ ಪ್ರಖ್ಯಾತ್ಯವಾಗಿದ್ದು ಹನ್ನೆರಡು ಹದಿಮೂರನೆಯ ಶತಮಾನದಲ್ಲಿ ಶೈಕ್ಷಣಿಕ ಕೇಂದ್ರವಾಗಿ ಹಾಗೂ ಪ್ರಸಿದ್ಧ ದೇವಾಲಯಗಳ ತಾಣವಾಗಿತ್ತು. ಇಂದೂ ಸಹ ಗಬ್ಬೂರಿನಲ್ಲಿ ಅತ್ಯಾಕರ್ಷಕವಾದ ದೇವಾಲಯಗಳು ಹಾಗೂ ಮಸೀದಿ, ಮಠಗಳು ಪ್ರಮುಖವಾಗಿ ಕಂಡುಬರುತ್ತವೆ.

ಗಬ್ಬೂರಿನಲ್ಲಿ ಹೆಚ್ಚಾಗಿ ಕಂಡುಬರುವ ದೇವಾಲಯಗಳ ಕಲೆ ಹಾಗೂ ತಳವಿನ್ಯಾಸವನ್ನು ಗಮನಿಸಿದರೆ ಇವುಗಳು ಹೆಚ್ಚಾಗಿ ಕಲ್ಯಾಣ ಚಾಲುಕ್ಯರ ಕಾಲದ ರಚನೆಗಳಾಗಿವೆ. ದೇವಾಲಯಗಳ ರಚನೆ, ಶಿಲ್ಪಶೈಲಿಯ ದೃಷ್ಟಿಯಿಂದ ಇವರ ಕಾಲದಲ್ಲಿ ಗಬ್ಬೂರು ಗ್ರಾಮವು ಒಂದು ಸುವರ್ಣಯುಗ ಎಂದು ಕರೆಯಬಹುದು. ಚಾಲುಕ್ಯ ಅರಸರು ಅಲ್ಲದೆ ಇತರ ಅರಸರ ಆಳ್ವಿಕೆಯಲ್ಲಿ ಕೂಡ ನಿರ್ಮಾಣವಾದ ದೇವಾಲಯಗಳು ಗಬ್ಬೂರಿನಲ್ಲಿವೆ. ಈ ದೇವಾಲಯಗಳಿಗೆ ಅರಸರು, ಸಾಮಂತರು, ವರ್ತಕರು, ವ್ಯಾಪಾರಿ ಸಂಘಗಳು, ಸಾಮಾನ್ಯರು ಹೀಗೇ ಬೇರೆ ಬೇರೆ ಜನವರ್ಗಗಳು ದೇವಾಲಯಗಳ ನಿರ್ಮಾಣಕ್ಕೆ ನಿರ್ವಹಣೆಗೆ ಯಥೇಚ್ಛವಾಗಿ ದಾನವನ್ನು ನೀಡಿದ್ದಾರೆ.

೧. ಮೇಲಶಂಕರ ದೇವಾಲಯ

ಸ್ಥಳ : ಊರ ಒಳಗೆ ಉತ್ತರಾಭಿಮುಖವಾಗಿದೆ

ದಿನಾಂಕ : ಕ್ರಿ.ಶ.೧೦೮೩

ಮೇಲಶಂಕರ ದೇವಾಸ್ಥಾನವು ಈ ಊರಿನ ಭವ್ಯ ಕಟ್ಟಡವಾಗಿದ್ದು ಈ ದೇವಾಲಯವನ್ನು (ಒಕ್ಕಲುಗಳು) ಮೇಳಿಸಾಸಿರ್ವರು ಕಟ್ಟಿಸಿರುತ್ತಾರೆ.

೧. ಕ್ರಿ.ಶ. ೧೦೮೪ರ ಶಾಸನದಲ್ಲಿ ಆರಂಭದ ಭಾಗದಲ್ಲಿ ಗೂಬ್ಬೂರಿನ ವರ್ಣನೆಯಿದೆ. ಈ ವರ್ಣನೆಯಲ್ಲಿ ಗಬ್ಬೂರನ್ನು ಗೋಪುರ ಗ್ರಾಮ ಎಂದು ಕರೆದಿದೆ. ಈ ಊರಿನಲ್ಲಿ ಮೇಳೇಶ್ವರ ದೇವರು ನೆಲಿಸಿ ಗ್ರಾಮದ ಜನಗಳನ್ನು ತನ್ನ ಅನುಗ್ರಹಕ್ಕೆ ಪಾತ್ರರನ್ನಾಗಿಸಿಕೊಂಡಿದ್ದ ಈ ದೇವರ ಒಕ್ಕಲುಗಳನ್ನು ಮೇಳಿಸಾಸಿರ್ವರು ಅಥವಾ ಮೇಳಾಸಾಸಿರ್ಬ್ಬರು ಎಂದು ಕರೆಯುತ್ತಿದ್ದರು. ಇವರನ್ನು ಶಾಸನದಲ್ಲಿ ಸಕಳ ಜೀವರಕ್ಷಕ ಪರೋಪಕಾರಾರ್ಥ ಶರೀರ ಮೇಳೇಶ್ವರ ದೇವರ ಪಾದಪಂಕಜ ಭ್ರಮರರು, ಚಕ್ರವರ್ತಿಯ ರಾಜ್ಯವನ್ನು ಉದ್ಧರಿಸುವವರು. ಶ್ರೀಮಂತರು, ವಿನಯರು, ಸತ್ಯವಂತರು, ನುಡಿದಂತೆ ನಡೆದವರು ದಾನಿಗಳು, ಧರ್ಮಕಾರ್ಯಧುರಂದರು ಮುಂತಾಗಿ ಅತಿಶಯವಾಗಿ ವರ್ಣಿಸಿದೆ. ಇವರು ಹಿರಿಯ ಗೂಬ್ಬೂರಿನಲ್ಲಿ ಮೇಳೇಶ್ವರ ದೇವಾಲಯವನ್ನು ಕಟ್ಟಿಸಿ ಆ ದೇವರ ಪೂಜೆ ಪುನಸ್ಕಾರ ನೈವೇದ್ಯ ಅಂಗಭೋಗ, ರಂಗಭೋಗ ದೇವಾಲಯದ ಪರಿಪಾಲನೆ ಮುಂತಾದ ಕೆಲಸಗಳಿಗಾಗಿ

ಗೊಬ್ಬರು ಮತ್ತು ಅದಕ್ಕೆ ಸೇರಿದ ಇತರ ಹಳ್ಳಿಗಳ ಜನರು ನೊಗಕಟ್ಟಿ ಉತ್ತುಬಿತ್ತು ಬೆಳೆದ ಬೆಳೆಯಲ್ಲಿ ಸೂಡುಜೋಳವನ್ನು ಹಾಗೂ ವರಿಷ ಪ್ರತಿ ಬಳಸುವ ಒಂದೊಂದು ಕುಂಟಿಗೆ ಒಂದು ಹಣವಿನ ಲೆಕ್ಕದಲ್ಲಿ ನೀಡಬೇಕೆಂದು ತೀರ್ಮಾನಿಸುತ್ತಾರೆ.

೨. ಕ್ರಿ.ಶ.೧೦೮೮ರ ಶಾಸನದಲ್ಲಿ ಹಿರಿಯ ಗಬ್ಬೂರಿನ ಮುಂಮರಿದಂಡ ಸಾಸಿರ್ವರು ಅಯ್ಯಾವೊಳೆ ಐನೂರವರು ಮುಂತಾದ ವ್ಯಾಪಾರಿಗಳು ಮಹಾಲಿಂಗ ಮೇಳೇಶ್ವರ ದೇವರಿಗೆ ಭತ್ತವನ್ನು ದಾನಮಾಡಿದ ವರ್ಣನೆಯಿದೆ. ಈ ಶಾಸನದ ಎಡಗಡೆಯಲ್ಲಿ ೨ನೆಯ ವಿಜ ಸಂವತ್ಸರ ಕಳಚೂರ್ಯ ಭುಜಬಳ ಚಕ್ರವರ್ತಿ ರಾಯ ಮುರಾರಿ ಸೋವಿದೇವನ ಕಾಲಕ್ಕೆ ಸೇರಿದ ವಿವರಣೆಯಿದೆ.

ತಲವಿನ್ಯಾಸ : ಮೇಲಶಂಕರ ದೇವಾಲಯವು ಏಕಕೂಟ ದೇವಾಲಯವಾಗಿದ್ದು ಇದು ಗರ್ಭಗುಡಿ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಒಳಗೊಂಡ ಸರಳವಾದ ದೇವಾಲಯವಾಗಿದೆ. ಹನ್ನೊಂದರಿಂದ ಹದಿಮೂರನೆ ಶತಮಾನದವರೆಗೆ ಇದ್ದಂತಹ ಗುಡಿಗಳಲ್ಲಿ ಇದು ಬೃಹತ್ತಾದ ದೇವಾಲಯವಾಗಿದೆ(Temples of Raichur and Bellary District, C.S.Patil).

ಗರ್ಭಗೃಹ : ಉತ್ತರಕ್ಕೆ ಮುಖ ಮಾಡಿದ ಗರ್ಭಗೃಹವು ಚೌಕಾಗಿದ್ದು ಒಳಗೆ ಈಶ್ವರಲಿಂಗವಿದೆ. ಇದರ ಪೀಠವು ಇತ್ತೀಚಿಗೆ ನಿರ್ಮಿತವಾಗಿದೆ. ಗರ್ಭಗೃಹದ ದ್ವಾರವು ದೊಡ್ಡದಾಗಿದ್ದು ಇದರಲ್ಲಿ ೫ ದ್ವಾರಶಾಖೆಗಳಿದ್ದು ಚೌಕು, ಸುರುಳಿ, ಅರ್ಧಕಂಬ, ಸಿಂಹ ಮತ್ತು ದಳಗಳ ಕೆತ್ತನೆಯನ್ನು ಹೊಂದಿದೆ. ಮಕರ ತೋರಣವು ದೊಡ್ಡದಾಗಿದ್ದು, ಅದರ ಕೊನೆಯ ಭಾಗದಲ್ಲಿ ಕೀರ್ತಿಮುಖಗಳನ್ನು ಕೆತ್ತಲಾಗಿದೆ. ಇವುಗಳ ಕೆಳಭಾಗದಲ್ಲಿ ಶೈವದ್ವಾರಪಾಲಕರಿದ್ದು ಅವರಿಗೆ ಸಹಾಯಕರಾಗಿ ಇಬ್ಬಿಬ್ಬರು ಸ್ತ್ರೀಯರು ಚೌರಿದಾರಿಗಳಿದ್ದಾರೆ. ದ್ವಾರಪಾಲಕರ ಕೈಯಲ್ಲಿ ಗಧೆ, ಡಮರು, ಹಾವನ್ನು ಹಿಡಿದಿದ್ದಾರೆ. ದ್ವಾರದ ಮೇಲ್ಭಾಗದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಒಂದು ಮೇಲ್ಛಾವಣಿ ಇದೆ.ಮತ್ತು ಈ ಲಿಂಗ ಪೂಜೆಯ ನೀರು ಹೊರಗೆ ಹೋಗಲು ಒಂದು ಪ್ರಣಾಳವಿದ್ದು, ಗರ್ಭಗುಡಿಯ ಗೋಪುರದಲ್ಲಿ ವಿವಿಧ ಮೂರ್ತಿಗಳು ಹಾಗೂ ಒಂದು ಕಳಶವನ್ನು ಇರಿಸಲಾಗಿದೆ.

ಅಂತರಾಳ : ಗರ್ಭಗೃಹದ ನಂತರದ ಭಾಗವು ಅಂತರಾಳವಾಗಿದ್ದು. ಈ ಅಂತರಾಳದಲ್ಲಿ ನಂದಿಯ ವಿಗ್ರಹವನ್ನಿಡಲಾಗಿದೆ. ಇದರ ಮೇಲ್ಛಾವಣಿಯು ಚೌಕು ಆಯತ ಆಕಾರದಲ್ಲಿದೆ. ಅಂತರಾಳದ ಪ್ರವೇಶದಲ್ಲಿ ಎರಡು ಕಂಬಗಳಿದ್ದು ಇವು ನವರಂಗದ ಕಂಬಗಳಷ್ಟು ದೊಡ್ಡವಾಗಿಲ್ಲ. ಇವುಗಳ ಮಧ್ಯಭಾಗವು ಅಷ್ಟಕೋನಾಕೃತಿ ಮತ್ತು ವೃತ್ತಾಕಾರದ ಪಟ್ಟಿಕೆಗಳನ್ನು ಹೊಂದಿದ್ದು. ಕೆಳಭಾಗವು ಚೌಕಾಗಿದ್ದು ಹೂವುಗಳಿಂದ ಅಲಂಕೃತವಾಗಿದೆ. ಅಂತರಾಳದ ಎರಡು ಅಕ್ಕಪಕ್ಕದಲ್ಲಿ ದೊಡ್ಡ ದೇವ

ಕೋಷ್ಟಕಗಳಿವೆ. ಹಿಂದೆ ಅವುಗಳಲ್ಲಿ ಮೂರ್ತಿಗಳನ್ನಿಡುತ್ತಿದ್ದರು. ಆದರೆ ಈಗ ಅಂಥ ಮೂರ್ತಿಗಳಾವುವು ಇಲ್ಲ. ಬದಲಾಗಿ ಬಲಗಡೆಯ ಕೋಷ್ಟಕದ ಕೆಳಗೆ ಒಳಪದ ಜಾತಿಗೆ ಸೇರಿದ ಕಲ್ಲಿನಲ್ಲಿ ಕೆತ್ತಿದ ಗಣೇಶ ವಿಗ್ರಹವಿದೆ. ಅದು ೫೨" ಎತ್ತರ ೪೨" ಅಗಲವಾಗಿದೆ. ಕೆಳಗೆ ಇಲಿಯನ್ನು ಚಿಕ್ಕದಾಗಿ ಚಿತ್ರಿಸಲಾಗಿದೆ. ಇದರ ಎಡಭಾಗದಲ್ಲಿಯು ಒಂದು ಸಣ್ಣ ಆಂಜನೇಯ ವಿಗ್ರಹವಿದೆ.

ಸಭಾಮಂಟಪ : ಮೇಲಶಂಕರ ದೇವಾಲಯದ ಸಭಾಮಂಟಪವು ಗಬ್ಬೂರಿನಲ್ಲಿರುವ ಎಲ್ಲಾ ದೇವಾಲಯಗಳಿಗಿಂತಲೂ ವಿಶಾಲವಾಗಿದ್ದು, ಈ ನವರಂಗ ಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಇವುಗಳ ಪೀಠ ಚಚ್ಚೌಕಾಗಿದ್ದು ಮಧ್ಯದಲ್ಲಿ ೧೬-೮-೧೬ ಮುಖ ಪಟ್ಟಿಕೆಗಳಿದ್ದು. ಇದರ ಮೇಲೆ ಚೌಕ ವೃತ್ತಕಾರದ ಮುಚ್ಚಳದ ಮೇಲೆ ಫಲಕವು ಚೌಕಾಗಿದ್ದು ಅದರ ಮೇಲೆ ಸಾದಾ ಬೋಧಿಗೆಗಳನ್ನು ರಚಿಸಲಾಗಿದೆ.

ಈ ನವರಂಗ ಮಂಟಪಕ್ಕೆ ಪೂರ್ವ, ಪಶ್ಚಿಮ, ಉತ್ತರ ಕಡೆಗೆ ಪ್ರವೇಶವನ್ನು ಹೊಂದಿದ್ದು ಪ್ರತಿಯೊಂದರ ಮುಂದೆ ಸೋಪಾನಗಳಿವೆ. ಪಶ್ಚಿಮದ ಪ್ರವೇಶದ ಕಡೆಗೆ ದೇವಾಲಯದ ಮೇಲೆ ಹೋಗಲು ಸುಮಾರು ೨೪ ಸೋಪಾನಗಳಿವೆ. ಅಲ್ಲದೆ ಚಿಕ್ಕದಾದ ಒಂದು ಬಾಗಿಲನ್ನು ಮಾಡಲಾಗಿದೆ. ನವರಂಗವು ಒಟ್ಟು ೯ ಅಂಕಣಗಳನ್ನು ಹೊಂದಿದೆ.

ಮುಖಮಂಟಪ : ಈ ದೇವಾಲಯದ ಮುಖಮಂಟಪದ ಎರಡು ಪಾರ್ಶ್ವಗಳಲ್ಲಿ ದ್ವಾರಪಾಲಕರಿದ್ದಾರೆ. ೮೦" ಎತ್ತರ ಮತ್ತು ೨೯" ಅಗಲವಿರುವ ಈ ಬೃಹದಾಕಾರದ ಉಬ್ಬುಶಿಲ್ಪಗಳು ಆಕರ್ಷಕವಾಗಿವೆ. ಅವರು ತಮ್ಮ ಎಡಭಾಗದ ಮೇಲಿನ ಕೈಯಲ್ಲಿ ಡಮರು ಕೆಳಗಿನ ಕೈಯಲ್ಲಿ ಗದೆಯನ್ನು ಹಿಡಿದಿದ್ದರೆ, ಬಲಗಡೆಯ ಮೇಲಿನ ಕೈಯಲ್ಲಿ ಹಾವನ್ನು ಹಿಡಿದಿದ್ದಾರೆ. ಕೆಳಗಿನ ಕೈಮಂಗಲ ಹಸ್ತವಾಗಿದೆ. ಈ ಶಿಲ್ಪಗಳು ಕಂಠಾಭರಣ, ಕಾಲ್ಗಡಗ ಮುಂಗೈಯಲ್ಲಿ ರುದ್ರಾಕ್ಷಿಯನ್ನು ಧರಿಸಿವೆ(ತಿರುಳ್ಗನ್ನಡ, ಪು.೧೭). ಇದರ ಮೇಲೆ ತೋರಣವಿದ್ದು, ಕೊನೆಗೆ ಕೀರ್ತಿಮುಖವಿದೆ. ದ್ವಾರದ ಲಲಾಟ ಬಿಂಬದ ಸ್ಥಳದಲ್ಲಿ ದೊಡ್ಡ ಕಪೋತವಿದೆ. ಮುಖಮಂಟಪದಲ್ಲಿರುವ ಎರಡು ಕಂಬಗಳು ವೃತ್ತಾಕಾರವಾಗಿವೆ. ಇದರ ಅಕ್ಕಪಕ್ಕದ ಕಕ್ಷಾಸನ ಮೇಲೆ ಹತ್ತು ಕಂಬಗಳನ್ನು ನಿಲ್ಲಿಸಲಾಗಿದೆ. ಪೂರ್ವದ್ವಾರಗಳಲ್ಲಿ ಅರ್ಧಕಂಬಗಳು ಮತ್ತು ಸಮಪಾತಳಿಯ ಲಲಾಟ, ಕಪೋತ ಮುಂದೆ ಬಂದ, ಹಿಂದೆ ಸರಿದ ಭಾಗಗಳಿರುವುದು ಕಂಡುಬರುತ್ತದೆ. ಇದರ ಮೇಲಿನ ಭಾಗದಲ್ಲಿ ಒಂದು ಮೇಲ್ಛಾವಣಿಯಿದೆ. ಮುಖಮಂಟಪದ ದ್ವಾರ ಬಾಗಿಲ ಮೇಲೆ ನಂತರ ಕಾಲದಲ್ಲಿ ಮಾಡಿದ ಮಂಟಪದ ಆಕಾರದಲ್ಲಿರುವ ಗೋಪುರವಿದ್ದು ಅದರಲ್ಲಿ ಶಿವಪಾರ್ವತಿ ಹಾಗೂ ಋಷಿಮುನಿಗಳಿವೆ. ಇದರ ಮೇಲೆ ಒಟ್ಟು ಸಣ್ಣ ಸಣ್ಣ ಐದು ಕಳಶಗಳಿವೆ.

ಅಧಿಷ್ಠಾನ : ಉತ್ತರಾಭಿಮುಖವಾಗಿರುವ ಮೇಲಶಂಕರ ದೇವಾಲಯವು ಸುಮಾರು ಏಳು ಅಡಿ ಎತ್ತರದ ಅಧಿಷ್ಠಾನದ ಮೇಲೆ ರಚನೆಗೊಂಡಿದೆ. ಈ ಅಧಿಷ್ಠಾನಕ್ಕೆ ಪುಷ್ಪದಳಗಳ ಶಿಲ್ಪವನ್ನು ಕೆತ್ತಲಾಗಿದೆ.

ಭಿತ್ತಿ : ಇದರ ಭಿತ್ತಿಯು ಸಮಪಾತಳಿಯಲ್ಲಿದೆ. ಭಿತ್ತಿಯ ಎಲ್ಲಾ ಭಾಗದಲ್ಲಿ ಹೆಚ್ಚಿನ ಭಾರವನ್ನು ಹೊರಲು ಮಧ್ಯದಲ್ಲಿ ಚಿಕ್ಕ ಉಬ್ಬು ಕಂಬಗಳಿವೆ. ಭಿತ್ತಿಯ ಮೇಲ್ಭಾಗದಲ್ಲಿ ಅಂದರೆ ಕುಂಬೆಯಲ್ಲಿ ಬಸವ ಮತ್ತು ಇತರ ಮೂರ್ತಿಗಳನ್ನಿಡಲಾಗಿದೆ.

ಮಂಜೂರು : ಈ ದೇವಾಲಯದ ಮಂಜೂರು ಇಳಿಬಿದ್ದಂತೆ ಕಾಣುತ್ತದೆ. ಇದು ಒಂದೇ ಹಾಸಗಲ್ಲಿನಿಂದ ಮಾಡಲಾಗಿದೆ.

ಕಂಬಗಳು : ಮೇಲಶಂಕರ ದೇವಾಲಯದ ಸ್ತಂಭಗಳು ಒಟ್ಟು ಇಪ್ಪತ್ತೆರಡು ಇದ್ದು ಇವುಗಳಲ್ಲಿ ಮೊದಲನೆಯ ಪ್ರಕಾರದ ಕಂಬಗಳು ಚಚ್ಚೌಕಾಗಿದ್ದು. ಕಂಠಬಾಗದಲ್ಲಿಯು ಚೌಕಾಗಿದ್ದು, ಸಾದಾ ಬೋದುಗೆಗಳನ್ನು ಹೊಂದಿವೆ. ಮೂರನೆಯ ಪ್ರಕಾರದ ಕಂಬಗಳು ಕೆಳಗಿನಿಂದ ಕಂಠಭಾಗದವರಿಗೆ ವೃತ್ತಾಕಾರವಾಗಿದ್ದು, ಹಲವು ಪಟ್ಟಿಕೆಗಳು ಮಧ್ಯದಲ್ಲಿ ಬರುತ್ತಿದ್ದು ಕಂಠಭಾಗದಲ್ಲಿ ಗೋಲಾಕಾರದ ಮುಚ್ಚಳ, ಅದರ ಮೇಲೆ ಚೌಕಕಾರದ ಹಲಗೆ ಇದ್ದು ಸಾದ ಬೋದುಗೆಯನ್ನು ಹೊಂದಿವೆ.

ಇತರೆ : ಈ ದೇವಾಲಯವು ಗಬ್ಬೂರಿನಲ್ಲಿರುವ ಶೈವ ದೇವಾಲಯವಾಗಿದ್ದು ಇಂದಿಗೂ ಈ ದೇವಾಲಯದಲ್ಲಿ ಶ್ರಾವಣ ಮಾಸದಲ್ಲಿ ವಿಶೇಷವಾದ ಪೂಜೆಪುನಸ್ಕಾರ ಮತ್ತು ಒಂದು ತಿಂಗಳ ಭಜನೆ ಮಾಡುವರು. ಅಲ್ಲದೆ ಮಳೆ ಬಾರದಿದ್ದರೆ ಇಲ್ಲಿ ಸಪ್ತಭಜನೆ ಮಾಡುವರು ಮತ್ತು ಈ ದೇವಾಲಯದ ಮುಂದೆ ಮೂರು ನಾಗ ಮೂರ್ತಿಗಳು ನಾಲ್ಕು ವೀರಗಲ್ಲು ಶಿಲ್ಪಗಳಿವೆ. ಅಲ್ಲದೆ ಬೃಹತ್ತಾದ ಕಲ್ಯಾಣಿ ಚಾಲುಕ್ಯರ ಕಾಲದ ಒಂದು ಪುಷ್ಕರಣಿ ಇದೆ.

೨. ವೆಂಕಟೇಶ್ವರ ದೇವಾಲಯ

ಸ್ಥಳ : ನೀರಕೋಟೆಯ ಮುಂದೆ

ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ನಾಗರಿಲಿಪಿ ಹಾಗೂ ಸಂಸ್ಕೃತ ಭಾಷೆಯಲ್ಲಿರುವ ಕ್ರಿ.ಶ.೧೨೧೪ರ ಶಾಸನದಲ್ಲಿ ಯಾದವ ಸಿಂಹಣನು ಗೋಪುರದಲ್ಲಿ ಪ್ರಸನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿದ ವಿಷಯ ತಿಳಿದುಬರುತ್ತದೆ. ಇದರೊಂದಿಗೆ ಕೇಶವಾದಿ ಚರ್ತುರ್ವಿಂಶತಿ ಮೂರ್ತಿಗಳನ್ನು ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದ ಗೋಪುರವನ್ನು ಇವನ ದಂಡನಾಯಕ ಲಕ್ಷ್ಮೀದೇವನು ಆಳುತ್ತಿದ್ದ. ಅವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ ಮತ್ತು ನೇರುಡಿಗ ಗ್ರಾಮವನ್ನು ನೀಡಿದ.

ಯಾದವರಿಂದ ರಚಿತವಾದ ಈ ದೇವಾಲಯವು ನಕ್ಷತ್ರಕಾರವಲ್ಲದ, ಚೌಕಾಕಾರವಿಲ್ಲದ ರೀತಿಯಲ್ಲಿ ರಚಿತವಾಗಿದೆ. ಈ ದೇವಾಲಯದ ಭಿತ್ತಿಯಲ್ಲಿ ವಾತಾಯನಕ್ಕಾಗಿ ಸಣ್ಣರಂಧ್ರಗಳುಳ್ಳ ಜಾಲಂಧ್ರಗಳನ್ನು ಜಿಡಿಸಲಾಗಿದೆ. ಭಿತ್ತಿಗಳಲ್ಲಿ ವಿವಿಧ ಮಾದರಿಯ ಗೋಪುರ ಪ್ರತಿಕೃತಿಗಳನ್ನು ಜಿಡಿಸಲಾಗಿದೆ. ಶಿವ ಮತ್ತು ವಿಷ್ಣುವಿನ ಅಭೇದ ಕಲ್ಪನೆಯ ಫಲವೆಂಬಂತೆ ದೇವಾಲಯದಲ್ಲಿ ಎರಡು ಗರ್ಭಗೃಹಗಳಿದ್ದು ಒಂದು ಈಶ್ವರ ಲಿಂಗವು ಇನ್ನೊಂದು ವಿಷ್ಣುವಿಗೂ ಮೀಸಲಾಗಿದೆ. ಈ ಪ್ರದೇಶದಲ್ಲಿ ದೊರೆತಿರುವ ದೇವಗಿರಿಯ ಯಾದವರ ಅತ್ಯಂತ ಪ್ರಾಚೀನ ದೇವಾಲಯ ಇದಾಗಿದೆ.

ತಳವಿನ್ಯಾಸ : ಈ ದೇವಾಲಯವು ಉತ್ತರಾಭಿಮುಖವಾಗಿದ್ದು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಪ್ರದಕ್ಷಿಣೆ ಪಥ ಮತ್ತು ಸಭಾಮಂಟಪ ಮತ್ತು ಮುಖಮಂಟಪಗಳನ್ನು ಒಳಗೊಂಡ ದ್ವಿಕೂಟದಲ್ಲಿ ನಿರ್ಮಾಣವಾದ ದೇವಾಲಯವಾಗಿದೆ.

ದಕ್ಷಿಣದ ಗರ್ಭಗೃಹ : ಈ ದೇವಾಲಯದ ದಕ್ಷಿಣಕ್ಕಿರುವ ಗರ್ಭಗೃಹದ ಪಾಣಿವಾಠದ ಮೇಲೆ ವೆಂಕಟೇಶ್ವರ ಮೂರ್ತಿ ಇದೆ. ಇದು ನಿಂತ ಭಂಗಿಯಲ್ಲಿದ್ದು. ಇದಕ್ಕೆ ನಾಲ್ಕು ಕೈಗಳಿವೆ. ಬಲಗೈಯಲ್ಲಿ ಚಕ್ರ, ವರದಮುದ್ರೆ ಎಡಗೈಯಲ್ಲಿ ಶಂಖ, ಅಭಯ ಮುದ್ರೆ ಹಿಡಿದ ಕೈಗಳಿವೆ. ತಲೆಯ ಮೇಲೆ ಕಿರೀಟವಿದೆ. ಈ ಮೂರ್ತಿ ಕೆಳಗಿನ ಎಡ, ಬಲ ಪಾರ್ಶ್ವದಲ್ಲಿ ಕೈಮುಗಿದುಕೊಂಡು ಇರುವ ಪದ್ಮಾವತಿ ಲಕ್ಷ್ಮಿಯ ಶಿಲ್ಪಗಳಿವೆ. ಗರ್ಭಗೃಹದ ಬಾಗಿಲ ಎಡಬಲ ಭಾಗದಲ್ಲಿ ವೈಷ್ಣವ ದ್ವಾರಪಾಲಕರು ನಿಂತಿದ್ದಾರೆ. ಇವರ ಎಡಬದಿಯ (ಪಶ್ಚಿಮ) ಭಾಗದಲ್ಲಿ ರಾಘವೇಂದ್ರ ಸ್ವಾಮಿಗಳ ವರ್ಣಚಿತ್ರವನ್ನು ಬಲ(ಪೂರ್ವ) ಭಾಗದಲ್ಲಿ ಶಿವಪಾರ್ವತಿಯ ವರ್ಣ ಚಿತ್ರಗಳನ್ನು ಇತ್ತೀಚೆಗೆ ತೆಗೆದಿದ್ದಾರೆ. ಇದರ ಭಿತ್ತಿನಲ್ಲಿ ಒಂದು ಮೇಲ್ಛಾವಣಿಯಿದೆ.

ಅಂತರಾಳ : ವೆಂಕಟೇಶ್ವರ ದೇವಾಲಯದ ಅಂತರಾಳವು ಜಾಲಂಧ್ರದಿಂದ ಕೂಡಿದ್ದು ಪಶ್ಚಿಮ ದೇವಕೋಷ್ಠದಲ್ಲಿ ವಿಷ್ಣು ಲಕ್ಷ್ಮಿಯರಿದ್ದು ಇದರ ಕೆಳಗೆ ಹಾರುತ್ತಿರುವ ಗರುಡ ಶಿಲ್ಪವು ಇದೆ. ಆದರೆ ಇಲ್ಲಿನ ಸ್ಥಳಿಯರು ಶ್ರೀಕೃಷ್ಣ ರುಕ್ಮಿಣಿಯರ ಶಿಲ್ಪವೆಂದು ಹೇಳುತ್ತಾರೆ. ಪೂರ್ವದ ದೇವಕೋಷ್ಠದಲ್ಲಿ ಅಂಜನೇಯ ಮೂರ್ತಿ ಇದ್ದು ಈ ಅಂತರಾಳದ ಭಿತ್ತಿನಲ್ಲಿ ಮೇಲ್ಛಾವಣಿ ಇದ್ದು ಇದರ ಬಾಗಿಲಿನಲ್ಲಿ ಇಬ್ಬರು ದ್ವಾರಪಾಲಕರಿದ್ದಾರೆ.

ಪ್ರದಕ್ಷಿಣಾ ಪಥ : ವೆಂಕಟೇಶ್ವರ ದೇವಾಲಯದ ಗರ್ಭಗೃಹದ ಸುತ್ತಲು ಪ್ರದಕ್ಷಿಣಾ ಪಥವಿದೆ. ಪ್ರದಕ್ಷಿಣೆ ಮಾಡುವಾಗ ಗಾಳಿ ಮತ್ತು ಬೆಳಕಿಗಾಗಿ ಮೂಲೆಯಲ್ಲಿ ಸಣ್ಣ ಸಣ್ಣರಂಧ್ರಗಳನ್ನು ಜಿಡಲಾಗಿದೆ. ಇದರ ಸುತ್ತಲು ಕಕ್ಷಾಸನವಿದ್ದು. ಕಕ್ಷಾಸನದಲ್ಲಿ ೩-೩-೩ರಂತೆ ಒಂಭತ್ತು ಕಂಬಗಳಿವೆ.

ಮತ್ತು ಪ್ರತಿಯೊಂದು ಕಡೆ ಒಂಭತ್ತರಂತೆ ಒಟ್ಟು ಇಪ್ಪತ್ತೇಳು ಪೀಠಗಳಿವೆ. ಕಕ್ಷಾಸನವು ಒಂದು ಪದ್ಮ ಒಂದು ಕಾಂತ ಚೌಕಾಕಾರದ ಹೂಗಳಿವೆ.

ಪೂರ್ವದ ಗರ್ಭಗೃಹ : ಪೂರ್ವದ ಗರ್ಭಗೃಹದಲ್ಲಿ ಬೃಹತ್ತಾದ ಪಾಣಿಪೀಠದ ಮೇಲೆ ೧.೫.ಮೀ ಎತ್ತರದ ಲಿಂಗವಿದೆ. ಈ ಪೀಠವು ಪದ್ಮ ಮತ್ತು ಕುಮುದವನ್ನು ಹೊಂದಿದೆ. ಲಿಂಗಕ್ಕೆ ಅಭಿಷೇಕ ಮಾಡಿ ನೀರು ಹೊರಗೆ ಬರಲು ತೀರ್ಥನಾಳವಿದೆ. ಇದು ಭಿತ್ತಿಯಿಂದ ಹೊರಬಂದಿದೆ. ಇದರ ಮುಂಭಾಗದಲ್ಲಿ ಪುರುಷನ ಮೇಲೆ ಸ್ತ್ರೀಯರು ಕೈಗಳಿಂದ ನೀರು ಸುರಿಯುವುದನ್ನು ಕಾಣಬಹುದು. ಇದರ ಮೇಲಿನ ಛತ್ತಿನಲ್ಲಿ ಸಹ ಒಂದು ಮೇಲ್ಛಾವಣಿಯಿದೆ. ಈ ದೇವರನ್ನು ಕಾಶೀಶ್ವರ ಎಂದು ಸ್ಥಳೀಯರು ಕರೆಯುತ್ತಾರೆ.

ಅಂತರಾಳ : ಈ ಅಂತರಾಳದಲ್ಲಿ ೧.೫.ಮೀ ಎತ್ತರದ ಒಂದು ನಂದಿ ವಿಗ್ರಹವಿದೆ. ಈ ನಂದಿಯ ಕೊರಳಿನಲ್ಲಿ ಗೆಜ್ಜೆಸರವಿದ್ದು ಇದರ ಮೇಲಿನ ಛತ್ತಿನಲ್ಲಿ ಮೇಲ್ಛಾವಣಿಯಿದೆ. ಅಂತರಾಳದ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ. ಅಂತರಾಳದ ಎರಡು ಬದಿಯಲ್ಲಿ ದೇವಕೋಷ್ಟಗಳಿವೆ. ಇದರಲ್ಲಿ ಈಗ ಯಾವ ಮೂರ್ತಿಗಳಿಲ್ಲ ಇದರ ಬಾಗಿಲುವಾಡವು ಜಾಲಂಧ್ರದಿಂದ ಕೂಡಿದೆ.

ಸಭಾಮಂಟಪ : ಸಭಾಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು, ಈ ಕಂಬಗಳು ಪೀಠ ಚಚ್ಚೌಕೆ, ಪಟ್ಟಿಕೆ, ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳವನ್ನು ಹೊಂದಿದೆ ಇದರ ಮೇಲೆ ಚೌಕಾಕಾರದ ಹಲಗೆಯ ಮೇಲೆ ಸದಾಬೋದುಗೆಗಳನ್ನು ಹೊಂದಿದೆ. ಇದರ ಛತ್ತಿನಲ್ಲಿ ಸಭಾಮಂಟಪದ ಮಧ್ಯದಲ್ಲಿ ಬೃಹತ್ತಾದ ಅರಳಿದ ಕಮಲದ ಆಕಾರದಲ್ಲಿರುವ ಮೇಲ್ಛಾವಣಿ ಇದೆ. ಈ ಮೇಲ್ಛಾವಣಿ ೬೪ ಮೂರ್ತಿಗಳಿಂದ ಕೂಡಿದ್ದು ಈಗ ಬಣ್ಣದಲ್ಲಿ ಮುಳಗಿರುವುದರಿಂದ ಕಾಣದಂತೆ ಆಗಿವೆ. ಇದರ ಸುತ್ತಲು ಒಟ್ಟು ಒಂಬತ್ತು ಭುವನೇಶ್ವರಿಗಳಿವೆ. ನವರಂಗದ ಸ್ತಂಭಗಳಲ್ಲಿ ವಿವಿಧ ಮೂರ್ತಿಶಿಲ್ಪಗಳು ಕೂಡ ಕೆತ್ತಲಾಗಿದೆ. ಪಶ್ಚಿಮ ಭಾಗದ ಸಭಾಮಂಟಪದ ಭಾಗದಲ್ಲಿಕೇಶವನ ಶಿಲ್ಪವಿದೆ. ಕರಿಶಿಲೆಯಲ್ಲಿರುವ ಅದು ೫೨" ಎತ್ತರ ೧೬" ಅಗಲವಿದೆ. ಎಡಬಲಕ್ಕೆ ಇಬ್ಬಿಬ್ಬರು ಸ್ತ್ರೀಯರಿದ್ದಾರೆ. ಅವರಲ್ಲಿ ಒಬ್ಬಳು ನಾಟ್ಯ ಭಂಗಿಯಲ್ಲಿದ್ದರೆ ಮತ್ತೊಬ್ಬಳು ತಟಸ್ಥವಾಗಿದ್ದಾಳೆ.

ಮುಖಮಂಟಪ : ಮುಖಮಂಟಪದ ದ್ವಾರವು ಸಣ್ಣದಾದ ಪಟ್ಟಿಯನ್ನು ಹೊಂದಿದ್ದು ಲತಾಸುರುಳಿ ಹಾಗೂ ಕಂಬ ಶಾಖೆಗಳನ್ನು ಹೊಂದಿರುವುದು ಕಂಡುಬರುತ್ತದೆ. ಈ ದ್ವಾರದ ಬಾಗಿಲಿನಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಈ ದ್ವಾರಬಾಗಿಲಿನ ಎರಡು ಬದಿಯ ಗೋಡೆಗೆ ಜಾಲಂಧ್ರಗಳು ಇದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಇಲ್ಲಿಯ ಭುವನೇಶ್ವರಿ ಅರಳುವ ಕಮಲದ

ಕೆತ್ತನೆಗಳನ್ನೊಳಗೊಂಡಿದೆ. ಕಕ್ಷಾಸನದಲ್ಲಿ ಒಟ್ಟು ನಾಲ್ಕು ಸ್ತಂಭಗಳಿದ್ದು ಅವುಗಳಲ್ಲಿ ಮಣಿಸರ, ಕಪೋತ, ಚೌಕಾಕಾರದ ಬೋದಿಗೆ ಕೆಳಗಿನ ಭಿತ್ತಿಯಲ್ಲಿ ಲತಾಬಳ್ಳಿಯನ್ನು ಕಾಣಬಹುದು.

ಸ್ತಂಭಗಳು : ನವರಂಗದಲ್ಲಿ ಒಟ್ಟು ನಾಲ್ಕು ಕಂಬಗಳು ಇದ್ದು. ಉತ್ತರ ಪೂರ್ವವಾಗಿರುವ ಕಂಬದ ಮೇಲೆ ಸರಸ್ವತಿ ಚಿತ್ರ ಬಿಡಿಸಿದರೆ ಜೊತೆಯಲ್ಲಿ ಸೂರ್ಯವೇಣುಗೋಪಾಲ ಮತ್ತು ಕೀರ್ತಿಮುಖವು ಕಾಣುತ್ತವೆ. ಉತ್ತರ ಪಶ್ಚಿಮವಾದ ಕಂಬದಲ್ಲಿ ಕೀರ್ತಿಮುಖ ಮತ್ತು ಉಗ್ರನರಸಿಂಹನು ಹಿರಣ್ಯಕಶ್ಯಪುವನ್ನು ಕೊಲ್ಲುತ್ತಿರುವುದು ಕಾಣುತ್ತದೆ. ಇನ್ನುಳಿದ ಕಕ್ಷಾಸನದ ನಾಲ್ಕು ಕಂಬಗಳಲ್ಲಿ ಚೌಕಾಕಾರದ ಬೋದುಗೆ, ಮಣಿಸರದ ಚಿತ್ರ ಕಪೋತ ಕೆಳಗಡೆ ಎಲೆಗಳ ಗೆರೆ ಎಳೆದಂತಾಗಿದೆ. ಗರ್ಭಗುಡಿ ಅಂತರಾಳದಲ್ಲಿ ಅರ್ಧಕಂಬಗಳು ಇವೆ. ಗರ್ಭಗುಡಿಯ ಪ್ರದಕ್ಷಿಣ ಪಥದ ಸುತ್ತಲು ಪ್ರತಿ ಮೂರರಂತೆ ಒಟ್ಟು ಒಂಭತ್ತು ಕಂಬಗಳಿವೆ. ದೇವಾಲಯದ ಹೊರ ಒಳಗಡೆ ಭಿತ್ತಿಯಲ್ಲಿಯ ಕುಡ್ಯಸ್ತಂಭಗಳನ್ನು ಕೂಡ ಕಾಣಬಹುದು.

ಭಿತ್ತಿ : ವೆಂಕಟೇಶ್ವರ ದೇವಾಲಯದ ಭಿತ್ತಿಯನ್ನು ಬಹು ಸೂಕ್ಷ್ಮವಾಗಿ ಕೆತ್ತಿದ್ದಾರೆ. ಈ ಭಿತ್ತಿಯಲ್ಲಿ ಅರ್ಧಕಂಬಗಳು, ಶಿಖರಗಳು, ಕೋಷ್ಟಗಳು ಇದ್ದು ಮಣಿಸರಗಳು ಶಿಖರವನ್ನು ಹೊಂದಿದ್ದು, ಕೆಳಭಾಗದಲ್ಲಿ ಆನೆಗಳ ಸಾಲು ಇದೆ. ಈ ಕೋಷ್ಟಗಳ ಒಳಗಡೆ ಮೂರ್ತಿಯು ಇರುವುದಿಲ್ಲ. ಪ್ರವೇಶ ದ್ವಾರಗಳಲ್ಲಿರುವ ಲಾಂಗುಲ ಭಿತ್ತಿಯಲ್ಲಿ ದ್ವಾರಪಾಲಕರು ಜಾಲಂಧ್ರ ಗಜಲಕ್ಷ್ಮಿ ಅರ್ಧಕಂಬಗಳು, ಮಣಿಸರದಂತಿರುವ ತೋರಣ ಸ್ತ್ರೀಯ ಸೇವಕಿಯರ ಚಿತ್ರಗಳು ಇಲ್ಲಿ ಕಾಣಬಹುದು.

ಪೂರ್ವದ ಭಿತ್ತಿಯಲ್ಲಿ ಅರ್ಧಕಂಬಗಳು ಇದರಲ್ಲಿ ಗೋಪುರದ ಆಕಾರವಿದೆ. ಕೆಳಗಡೆ ಲತಾಬಳ್ಳಿ, ಭಿತ್ತಿಯ ಮೇಲ್ಭಾಗದಲ್ಲಿ ಜಾಲಂಧ್ರ ಮಣಿಸರ, ಹೂಗಳ ಸರದಂತೆ ವಿವಿಧ ತೋರಣಗಳು ವಿವಿಧ ಮೂರ್ತಿಶಿಲ್ಪಗಳು, ಮೂರು ಕೋಷ್ಟ ಗುಡಿಗಳಿವೆ. ಸೂರ್ಯ ಆನೆಗಳ ಚಿತ್ರವಿರುವ ಸಾಲು ದಕ್ಷಿಣದ ಭಿತ್ತಿಯಲ್ಲಿ ಕೋಷ್ಟಗುಡಿ ಇದ್ದು ಅದರ ಅಕ್ಕಪಕ್ಕದಲ್ಲಿ ಆನೆಗಳ ಸಾಲು ಇದೆ. ಪಶ್ಚಿಮದ ಭಿತ್ತಿಯಲ್ಲಿ ಕೂಡ ಕೋಷ್ಟಗುಡಿ ಇದ್ದು ಇದರಲ್ಲಿ ಯಾವ ಮೂರ್ತಿಇರುವುದಿಲ್ಲ. ಸೇವಕರು, ಪೂಜಾರಿಗಳು ಮೂರ್ತಿಶಿಲ್ಪಗಳು, ಮಂಟಪಗಳು ಕಾಣಬಹುದು. ಹೊರಗಡೆಯ ಭಿತ್ತಿಯಲ್ಲಿ ಜಾಲಂಧ್ರ ವಜ್ರಾಕೃತಿಯ ಜೊತೆಗೆ ಪುಷ್ಪದಳಗಳಿಂದ ಕೂಡಿದ್ದು ಸುಂದರವಾಗಿದೆ. ಇದರ ಕೆಳಭಾಗದಲ್ಲಿ ದೊಡ್ಡ ದೊಡ್ಡ ಆನೆಗಳ ಸಾಲು ಇದೆ. ಉತ್ತರ ದಿಕ್ಕಿನ ಭಿತ್ತಿಯಲ್ಲಿ ತೀರ್ಥನಾಳವು ಇದ್ದು, ಇದರ ಮುಖಾಂತರ ದೇವರ ಅಭಿಷೇಕದ ನೀರು ಹೊರಬರುತ್ತವೆ. ಇದರ ಮುಂಭಾಗದಲ್ಲಿ ಪುರುಷನಿಗೆ ಇಬ್ಬರು ಸ್ತ್ರೀಯರು ಕೈಯಿಂದ ನೀರು ಹಾಕುತ್ತಿರುವ ಶಿಲ್ಪವನ್ನು ಸುಂದರವಾಗಿ ಕೆತ್ತಿದ್ದಾರೆ. ಇದರ ಪಕ್ಕದಲ್ಲಿಯೇ ಶಾಸನ ಫಲಕವಿದೆ.

ಅಧಿಷ್ಠಾನ : ವೆಂಕಟೇಶ್ವರ ದೇವಾಲಯವು ಮೂರು ಅಡಿ ಅಧಿಷ್ಠಾನವನ್ನು ಹೊಂದಿದೆ. ಅಲ್ಲಿಯ ಉಪಾನ, ಜಗತಿ, ಕಂಪ, ಕಂಠ ಮತ್ತು ಪಟ್ಟಿಕೆಗಳು ಹೆಚ್ಚು ಹೆಚ್ಚು ಕಾಣುತ್ತದೆ. ಅವುಗಳಲ್ಲಿ ಸಿಂಹ, ಯಕ್ಷ, ವರ್ತಕರ, ಸ್ತ್ರೀಯರ ಚಿಕ್ಕ ಚಿಕ್ಕ ಶಿಲ್ಪಗಳಿವೆ.

ಮಂಜೂರು : ಮಂಜೂರಿನ ಕೆಳಭಾಗದ ಗೋಡೆಯಲ್ಲಿ ಅರ್ಧಕಂಬಗಳನ್ನು ಕೆತ್ತಲಾಗಿದ್ದು. ಆ ಕಂಬಗಳ ಮೇಲೆ ಕೊರೆದ ಹಲಗೆ, ಪಟ್ಟಿಕೆ ಮತ್ತು ತರಂಗ ಬೋದುಗೆಗಳನ್ನು ಕೂಡಿಸಲಾಗಿದೆ. ಮಂಜೂರು ಒಳಭಾಗದಲ್ಲಿ ಕೊರೆದ ಮುತ್ತಿನ ಸರ, ತೆಂಗಿನಕಾರದ ಗಂಟೆಗಳನ್ನು ಕೆತ್ತಲಾಗಿದೆ. ಇದು ನೋಡುಗರಿಗೆ ಆಕರ್ಷಣೆಯನ್ನುಂಟು ಮಾಡುತ್ತದೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಈ ದೇವಾಲಯಕ್ಕೆ ಶಿಖರವಿದ್ದು ಈಗ ಅದು ನಶಿಸಿ ಹೋಗಿದ್ದು ಈಗ ಮಂಜೂರು ಭಾಗದವರೆಗೆ ಸುಧಾರಣೆ ವ್ಯವಸ್ಥೆಯಲ್ಲಿದೆ.

ಉತ್ಸವ, ಆಚರಣೆ : ಈ ದೇವಾಲಯದ ಪೂಜಾರಿಗಳು ನವರಾತ್ರಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಒಂಭತ್ತು ದಿನದಲ್ಲಿ ದಿನಕ್ಕೆ ಒಂದು ವಾಹನವು ವೆಂಕಟೇಶ್ವರ ದೇವಾಲಯದಿಂದ ಭಜನೆ ಮತ್ತು ಸಕಲ ಸಂಗೀತದೊಂದಿಗೆ ವೆಂಕಟೇಶ್ವರ ಸನ್ನಿದಿಗೆ ಪಲ್ಲಕ್ಕಿ ಉತ್ಸವವು ತೆರಳಿ ಬನ್ನಿಯನ್ನು ಮುಡಿದು ವಿಜಯದಶಮಿಯ ಹಬ್ಬವನ್ನು ಬಹು ವಿಜೃಂಬಣೆಯಿಂದ ಆಚರಿಸುತ್ತಾರೆ.

ಇತರೆ : ವೆಂಕಟೇಶ್ವರ ದೇವಾಲಯದಲ್ಲಿ ಇಂದಿಗೂ ಪೂಜೆಯಿದ್ದು ಇದರ ಕಾರ್ಯಭಾರವನ್ನು ಇಲ್ಲಿನ ಬ್ರಾಹ್ಮಣರು ನಿರ್ವಹಿಸುತ್ತಾರೆ. ಈ ದೇವಾಲಯದ ಹಿಂದೆ ಒಂದು ತೀರ್ಥಪುಷ್ಕರಣಿ ಇದೆ. ಅಲ್ಲದೆ ದೇವಾಲಯದ ಒಳಭಾಗದಲ್ಲಿ ಭಾವಿ ಇದ್ದು ಅದು ಇಂದು ಮುಚ್ಚಲಾಗಿದೆ.

೩. ಏಳು ಬಾವಿ ಬಸವಣ್ಣ ದೇವಾಲಯ

ಸ್ಥಳ : ವೆಂಕಟೇಶ್ವರ ದೇವಾಲಯದ ಪೂರ್ವಭಾಗದಲ್ಲಿ ಉತ್ತರಾಭಿಮುಖವಾಗಿದೆ

ಗಬ್ಬೂರಿನ ಚಂಡಿದರ್ವಾಜಿಗೆ ಸೇರಿಸಿರುವ ಶಾಸನದಲ್ಲಿ ಗಬ್ಬೂರಿನ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣ ದೇವರ ಪೂಜೆ ಪುನಸ್ಕಾರಕ್ಕೆ ಗಬ್ಬೂರಿನ ಮಾಲೆಗಾರ ಅರವತ್ತೊಕ್ಕಲು ಮತ್ತು ಬಿಲ್ಲ ಮುಸ್ನೂರು ಬಾಡುಬಾಯಿ ಮಾರಿದ ಹೆಡಗೆಗೆ ಅರವಾನ ಭತ್ತ ನೀಡಬೇಕೆಂದಿದೆ. ಇದನ್ನು ಹೊರಗೆ ಮಾರಿದಲ್ಲಿ ಬಿಲ್ಲಕಾಯಿ ಹೆಡಗೆಗೆ ಒಮ್ಮಾನ ಉಪ್ಪಿನ ಹಡಗಗೆ ಅರವಾನ ಭತ್ತ ಕೂಡಬೇಕೆಂದು ತೀರ್ಮಾನಿಸುತ್ತಾರೆ. ಮಹಾಜನಗಳು ನಾಗಭೂಷಣ ದೇವರಿಗೆ ದಾನ ನೀಡಿದ್ದನ್ನು ದಾಖಲಿಸುತ್ತದೆ. ಈ ನಾಗಭೂಷಣ ಲಿಂಗ ಏಳುಬಾವಿ ಬಸವಣ್ಣ ದೇವಾಲಯದ ಪಶ್ಚಿಮ ದಿಕ್ಕಿನ ಗರ್ಭಗೃಹದಲ್ಲಿರುವುದನ್ನು ಕಾಣಬಹುದು.

[illegible]

ತಲವಿನ್ಯಾಸ : ಇದು ಉತ್ತರಾಭಿಮುಖವಾಗಿರುವ ಒಂದು ತ್ರಿಕೂಟ ದೇವಾಲಯ ದಕ್ಷಿಣದಲ್ಲಿ ಏಳು ಬಾವಿಗಳ ದಂಡೆಯ ಮೇಲಿದೆ ಅಷ್ಟೇನೂ ಎತ್ತರದ ತಲವಿನ್ಯಾಸವನ್ನು ಹೊಂದಿರದ ಈ ಗುಡಿಯು ಮೂರು ಗರ್ಭಗೃಹ, ಸುಕನಾಸಿ ಒಂದು ನವರಂಗವನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ದಕ್ಷಿಣದ ಗರ್ಭಗುಡಿಯಲ್ಲಿ ಶಿವನ ನಿಂತ ಭಂಗಿ ಸುಂದರ ಶಿಲ್ಪವಿದೆ. ೫೨ ಅಡಿ ಅಲ, ೧೫" ಎತ್ತರ, ೨೩" ಉದ್ದ ಪೀಠದ ಮೇಲೆ ನಿಂತಿರುವ ಈ ಶಿಲ್ಪವು ೪೮" ಎತ್ತರ ೨೫" ಅಗಲವಾಗಿದೆ. ಕರಿಶಿಲೆಯಲ್ಲಿರುವ ಈ ವಿಗ್ರಹಕ್ಕೆ ನಾಲ್ಕು ಕೈಗಳಿದ್ದು, ಈಗ ಕೈಗಳು ಮತ್ತು ಬಲ ಕಿವಿ ಭಗ್ನಗೊಂಡಿವೆ.ಇದರ ಕೆಳಗೆ ಮೊಳಕಾಲೂರಿ ಕುಳಿತಿರುವ ಗರುಡ ವಿಗ್ರಹವನ್ನು ಎಡಗಡೆ ಕಾಣಬಹುದು. ಶಿವನ ಎಡ ಕಿವಿಯಲ್ಲಿ ಚಕ್ರ ಕುಂಡಲ ಧರಿಸಿದ್ದು ಬಲಗಡೆ ನಂದಿಯ ಶಿಲ್ಪವಿದೆ. ಈ ಶಿವನ ಮೂರ್ತಿಯು ಕಂಠಾಭರಣ, ಕಾಲ್ಗಡಗ, ಸೊಂಟಪಟ್ಟಿಕೆಗಳನ್ನು ಧರಿಸಿದ್ದಾನೆ. ಇದಕ್ಕೆ ಮೇಲ್ಛಾವಣಿ ಇದ್ದು ಇದರ ಬಾಗಿಲ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಅಂತರಾಳದಲ್ಲಿ ಗಣೇಶನ ವಿಗ್ರಹ ಹಾಗೂ ಛತ್ತಿನಲ್ಲಿ ಮೇಲ್ಛಾವಣಿ ಕೂಡ ಈ ಅಂತರಾಳದಲ್ಲಿ ಕಾಣಬಹುದು.

ಪೂರ್ವದ ಗರ್ಭಗೃಹ : ಪಶ್ಚಿಮ ಮುಖವಾಗಿರುವ ಈ ಗರ್ಭಗುಡಿಯಲ್ಲಿ ದೊಡ್ಡ ನಂದಿ ಇದೆ. ಅದು ೬೧" ಎತ್ತರ, ೮೭" ಉದ್ದ ಮತ್ತು ೩೪ ಅಡಿ ಅಗಲವಾಗಿದೆ. ದೊಡ್ಡ ಗಂಟೆಗಳ ಸರವನ್ನು ಕೊರಳಿನಲ್ಲಿ ಧರಿಸಿದೆ. ಅದರ ಹಣೆಪಟ್ಟಿ ಸುಂದರವಾಗಿದೆ. ನಂದಿಯ ಮೇಲೆ ನೇರವಾಗಿ ಸೂರ್ಯಕಿರಣಗಳು ಬೀಳುವಂತೆ ಪೂರ್ವದ ಗೋಡೆಯಲ್ಲಿ ಸಣ್ಣದಾದ ಜಾಲಂಧ್ರ ಮಾಡಲಾಗಿದೆ. ಒಟ್ಟು ಇಲ್ಲಿ ೬ ಭಿತ್ತಿ ಕಂಬಗಳಿದ್ದು ೨ ಕಂಬಗಳು ನಂದಿಯ ಹಿಂದಿನ ಭಾಗದಲ್ಲಿ ಇರಿಸಲಾಗಿದೆ. ಈಗ ನಂದಿಯ ಬಾಲವು ಸ್ವಲ್ಪ ಭಿನ್ನವಾಗಿದೆ. ಇದರಲ್ಲಿ ೨ ಭುವನೇಶ್ವರಿಗಳಿವೆ.

ಪಶ್ಚಿಮದ ಗರ್ಭಗೃಹ : ಪೂರ್ವಾಭಿಮುಖವಾಗಿರುವ ಈ ಗರ್ಭಗುಡಿಯಲ್ಲಿ ಚೌಕಾಕಾರದ ಪೀಠದ ಮೇಲೆ ನಾಗಭೂಷಣ ಲಿಂಗವಿದ್ದು, ಇದರ ಬಾಗಿಲಿನಲ್ಲಿ ಇಬ್ಬರು ಚೌರಿದಾರಿಗಳಿದ್ದಾರೆ. ಮೇಲೆಗಡೆ ಗಜಲಕ್ಷ್ಮಿಯ ಶಿಲ್ಪವಿದೆ. ಇದರಲ್ಲಿ ಒಂದು ಭುವನೇಶ್ವರಿಯ ಶಿಲ್ಪವನ್ನು ಮೇಲಿನ ಭಾಗದಲ್ಲಿ ಕಾಣಬಹುದು.

ಅಂತರಾಳ : ಸುಖನಾಸಿಯ ತೋರಣವು ತುಂಬ ಆಕರ್ಷಕವಾಗಿದೆ. ಅದು ಹೋಲಿಕೆಯಲ್ಲಿ ಕುಕನೂರಿನ ನವಲಿಂಗೇಶ್ವರ ಗುಡಿಯಲ್ಲಿರುವಂತೆ ಇವೆ. ಈ ಸುಖನಾಸಿಯ ತೋರಣದಲ್ಲಿ ಚಿಕ್ಕ ಮಂಟಪವಿದೆ. ಅದರಲ್ಲಿ ಶಿವಪಾರ್ವತಿಯರು ಕುಳಿತಿದ್ದಾರೆ. ಅವರ ಎಡ ಬಲಕ್ಕಿರುವ ಮಕರಗಳ ಬಾಲವು ಕಲಾತ್ಮಕತೆಯಿಂದ ಕೂಡಿದೆ. ಶಿವನ ಪಕ್ಕದಲ್ಲಿ ನಂದಿ ಇದೆ. ಈ ತೋರಣದ ಬಲ ತುದಿಯಲ್ಲಿ ಬ್ರಹ್ಮ ಸರಸ್ವತಿಯರಿದ್ದಾರೆ. ಎಡ ತುದಿಯಲ್ಲಿ ಅರೆನಗ್ನ ಸ್ಥಿತಿಯಲ್ಲಿರುವ ಸ್ತ್ರೀಯು

ಓಲೆಯನ್ನು ಬರೆಯುತ್ತಿದ್ದಾಳೆ. ಅವಳ ಬಲಕ್ಕೆ ವಿಷ್ಣು ಲಕ್ಷ್ಮಿಯರಿದ್ದಾರೆ. ಈ ಎಲ್ಲ ಶಿಲ್ಪಗಳ ಮೇಲ್ಭಾವಣಿಯಲ್ಲಿ ನಾಲ್ಕು ಜನ ದಂಪತಿಗಳು ತಮ್ಮ ವಾಹನಗಳ ಮೇಲೆ ಕುಳಿತು ಸಂಗೀತ ಮೇಳದೊಂದಿಗೆ ಹೋಗುವ ಶಿಲ್ಪಗಳಿವೆ. ಅದರಲ್ಲಿ ಜಿಂಕೆ, ಕುದುರೆ ಮತ್ತು ನಂದಿಗಳಿವೆ. ಅಷ್ಟೇ ಅಲ್ಲದೆ ಸುಖನಾಸಿಯಲ್ಲಿ ಒಂದು ಭುವನೇಶ್ವರಿ ಇದ್ದು ಬಾಗಿಲಿನಲ್ಲಿ ದ್ವಾರಪಾಲಕರು ನಿಂತಿದ್ದಾರೆ.

ನವರಂಗ : ಇದು ನಾಲ್ಕು ಕಂಬಗಳಿಂದ ಕೂಡಿದ್ದು, ಪೀಠ ಚಚ್ಚೌಕ, ಕಂಠ ಭಾಗದಲ್ಲಿ ವರ್ತುಲಾಕಾರದ ಮುಚ್ಚಳವಿದ್ದು ಇದರ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಸಭಾಮಂಟಪದ ಪೂರ್ವದ ಕಡೆಯ ಗೋಡೆಯಲ್ಲಿ ಗಣೇಶ ಮಹಿಷಾಸುರ ಮರ್ದಿನಿಯರ ವಿಗ್ರಹಗಳನ್ನು ಕಾಣಬಹುದು. ಈ ದೇವಾಲಯದ ಅಧಿಷ್ಠಾನವು ಹೂತುಹೋಗಿದೆ. ಏಳುಬಾವಿ ಬಸವಣ್ಣ ದೇವಾಲಯದ ಮುಖಮಂಟಪ ಉತ್ತರಕ್ಕೆ ಇದ್ದು ಇದರ ಬಾಗಿಲು ಸರಳವಾಗಿದೆ. ಇತ್ತೀಚಿಗೆ ಈ ಬಾಗಿಲಿಗೆ ಕಟಾಂಜನವನ್ನು ಮಾಡಿ ಬಾಗಿಲು ಮುಚ್ಚುವ ವ್ಯವಸ್ಥೆ ಮಾಡಿದ್ದಾರೆ. ನವರಂಗದ ಛತ್ತಿನ ಮೇಲೆ ಒಂದು ಭುವನೇಶ್ವರಿ ಇದ್ದು, ಗೋಡೆಯಲ್ಲಿ ಆನೆಗಳ ಸಾಲು ಇದೆ. ಬೆಳಕಿಗಾಗಿ ಎರಡು ದೊಡ್ಡ ಕಿಟಕಿಗಳನ್ನು ಮಾಡಲಾಗಿದೆ.

ಮುಖಮಂಟಪ : ಮುಖಮಂಟವು ಭಿತ್ತಿಸ್ತಂಭಗಳನ್ನು ಹೊಂದಿದ್ದು. ಇದರ ಬಾಗಿಲಿನಲ್ಲಿ ಮಂಜೂರವು ಇಳಿಜಾರು ರೂಪದಲ್ಲಿದೆ ಮತ್ತು ಬಾಗಿಲಿನ ಮೇಲೆ ಗಜಲಕ್ಷ್ಮಿಯ ಚಿತ್ರವಿದ್ದು ಅರ್ಧಕಂಬಗಳು ಕೆಳಗಡೆ ಪೂರ್ಣಕುಂಬಗಳ ಚಿತ್ರವನ್ನು ಕಾಣಬಹುದು. ಮುಖಮಂಟಪದ ಬಲಗಹಡೆಯ ಸ್ಥಳದಲ್ಲಿ ಶಾಸನ ಕಲ್ಲನ್ನು ನಿಲ್ಲಿಸಲಾಗಿದೆ. ಅದರ ಮುಂದೆ ಎರಡು ನಾಗಮೂರ್ತಿಗಳಿವೆ.

ಸ್ತಂಭಗಳು : ನವರಂಗ ಮಂಟಪದಲ್ಲಿ ನಾಲ್ಕುಕಂಬಗಳಿದ್ದು ಪೀಠ ಚಚ್ಚೌಕದ ಕಂಠ ಭಾಗದಲ್ಲಿ ವರ್ತುಲಕಾರದ ಮುಚ್ಚಳ ಇದ್ದು. ಇದರ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ನಂದಿಮಂಟಪದ ಕಂಬಗಳು ಹೊಸದಾಗಿ ನಿರ್ಮಿತವಾಗಿದ್ದು ಇವು ಪೀಠ ಚಚ್ಚೌಕದ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ ಮತ್ತು ಕಕ್ಷಾಸನವೂ ಕಂಬಗಳನ್ನು ಹೊಂದಿದ್ದು. ಅದಕ್ಕೆ ಚೌಕ, ಮಧ್ಯ, ಅಷ್ಟಕೃತಿ ಮತ್ತು ವೃತ್ತದಂತಹ ಮುಚ್ಚಳಗಳಿವೆ. ಮಣಿಕಟ್ಟು ಅಲಂಕೃತವಾಗಿದೆ. ಇದು ಡಬ್ಬದ ರೂಪದಲ್ಲಿವೆ. ಎಲ್ಲದಕ್ಕೂ ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿದೆ. ಭಿತ್ತಿಯಲ್ಲಿ ಕೂಡಾ ಕುಡ್ಯಸ್ತಂಭಗಳಿವೆ.

ಭಿತ್ತಿ : ಭಿತ್ತಿಯಲ್ಲಿ ಆನೆಗಳ ಸಾಲು ಇದ್ದು ಅದರಲ್ಲಿ ಒಂದು ಆನೆಯು ಮರಿ ಹಾಕುವ ಚಿತ್ರ ಗಮನಾರ್ಹವಾಗಿದೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳು ಹಾಗೂ ಎಡಗೋಡೆಯಲ್ಲಿ ಲತಬಳ್ಳಿಯ ಚಿತ್ರವಿದ್ದು ಹಿಂದಿನ ಗೋಡೆಯಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಮೂರ್ತಿಯ ಶಿಲ್ಪವಿದೆ. ಭಿತ್ತಿಯ

[illegible]

[illegible]

[illegible]

ಬಾಗಿಲಿನಲ್ಲಿ ದ್ವಾರಪಾಲಕರು, ಗಜಲಕ್ಷ್ಮಿಯ ಶಿಲ್ಪ, ಪೂರ್ಣಕುಂಭಗಳು, ತೋರಣದ ಶಿಲ್ಪಗಳಿರುವುದನ್ನು ಕಾಣಬಹುದು.

ಇತರೆ : ಈ ದೇವಾಲಯಕ್ಕೆ ಇಂದಿಗೂ ಚಿಕ್ಕಮಠದವರು ಪೂಜಾರಿಗಳಾಗಿದ್ದು ಈ ನಂದಿಯ ದೇವರಿಗೆ ಕಾರ್ತೀಕಮಾಸದಲ್ಲಿ ವಿಶೇಷ ಪೂಜೆ ಮತ್ತು ಎಲೆಪೂಜೆಯನ್ನು ಮಾಡುತ್ತಾರೆ.

೪. ಈಶ್ವರ ದೇವಾಲಯ

ಸ್ಥಳ : ವೆಂಕಟೇಶ್ವರ ದೇವಾಲಯದ ಪೂರ್ವದ ಕಡೆಗೆ

ತಲವಿನ್ಯಾಸ : ಈ ದೇವಾಲಯವು ಗಬ್ಬೂರಿನ ಪ್ರಸಿದ್ಧ ದೇವಾಲಯವಾದ ವೆಂಕಟೇಶ್ವರ ದೇವಾಲಯದ ಪೂರ್ವ ಭಾಗದಲ್ಲಿದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದ್ದು ಏಕಕೂಟ ದೇವಾಲಯವಾಗಿದೆ. ಈ ದೇವಾಲಯವು ಪೂರ್ವಕ್ಕೆ ಮುಖಮಾಡಿ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮುಖಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಗರ್ಭಗೃಹವು ಚೌಕಾಕಾರವಾಗಿದ್ದು ಗರ್ಭಗೃಹ ಮಧ್ಯದಲ್ಲಿ ವೃತ್ತಾಕಾರದ ಪೀಠದ ಮೇಲೆ ಲಿಂಗವನ್ನು ಇಡಲಾಗಿದೆ. ಇದರ ಜೊತೆಗೆ ಐದು ಮುಖದ ಕಾರ್ತಿಕೇಯನ ಶಿಲ್ಪವಿದ್ದು, ಕಾರ್ತಿಕೇಯನು ನವಿಲಿನ ಮೇಲೆ ಕುಳಿತಿದ್ದಾನೆ. ಈ ಗರ್ಭಗೃಹದ ಬಾಗಿಲು ಪಟ್ಟಿಕೆಗಳು ಶಾಖೆಗಳನ್ನು ಹೊಂದಿದ್ದು, ತಳಭಾಗದಲ್ಲಿ ಕುಂಬಾಲತಾಗಳನ್ನು ಕಾಣಬಹುದು. ಬಾಗಿಲಿಗೆ ಅರ್ಧಕಂಬಗಳು ಹಾಗೂ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ.

ಅಂತರಾಳ : ಇದರ ಅಂತರಾಳವು ತೆರೆದುಕೊಂಡಿದ್ದು ಇಲ್ಲಿ ನಾಲ್ಕು ಕಂಬಗಳಿದ್ದು ಇದರ ಛತ್ತಿನಲ್ಲಿ ಚೌಕಾಕಾರದ ಕಮಲವನ್ನು ಕಾಣಬಹುದು.

ನವರಂಗ : ನವರಂಗದಲ್ಲಿ ನಾಲ್ಕು ಕಂಬಗಳಿದ್ದು. ಅವು ಪೀಠ ಚೌಕವೃತ್ತಾಕಾರದ ಪಟ್ಟಿಕೆಗಳ ಜೊತೆಗೆ ಪುಷ್ಪದಳಗಳನ್ನು ಹೊಂದಿ ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳವನ್ನು ಹೊಂದಿ ಅದರ ಮೇಲೆ ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದುಗೆಗಳಿರುವುದನ್ನು ಕಾಣಬಹುದು.

ಉತ್ತರಕ್ಕಿರುವ ಕಂಬಗಳು,ಮಂಟಪದ ಗೋಡೆಗಳು ಅಷ್ಟು ಆಳವಾಗಿ ನೆಟ್ಟಿಲ್ಲ. ಮಧ್ಯಭಾಗದಲ್ಲಿ ಕಮಲದ ಹೂ ಚಿತ್ರಿಸಲಾಗಿದೆ. ಉಳಿದವುಗಳು ಆಯತಾಕಾರದ ಮತ್ತು ಚೌಕಾಕಾರ ಇದ್ದು ಸಮಪಾಟಾಗಿದೆ. ನಡುವಿನ ಅಂಕಣವು ದೊಡ್ಡದಾಗಿಯೂ ಇಕ್ಕಟ್ಟಾಗಿಯೂ ಇದೆ. ಪ್ರವೇಶದ ಬಾಗಿಲಿನಲ್ಲಿ ಎರಡು ಕಂಬಗಳಿವೆ. ಸಭಾಮಂಟಪ ಕಂಬಗಳು ಅದಕ್ಕೆ ಹೋಲುತ್ತವೆ. ಆದರೆ ಅವುಗಳನ್ನು ತಿರುವು ಮಾಡಿ ಕವಚ ರೂಪದಲ್ಲಿ ಇಡಲಾಗಿದೆ.

ಭಿತ್ತಿ ಮತ್ತು ಸ್ತಂಭಗಳು : ಮಂಟಪದ ಗೋಡೆಗಳ ಅಷ್ಟು ಆಳವಾಗಿ ನೆಟ್ಟಿಲ್ಲ ಗೋಡೆಗಳ ಆಳವಲ್ಲಿ ಹೋತು ಕೂಡಿದೆ. ಹೊರಗೋಡೆಗಳಲ್ಲಿ ಅಂತಹ ಸುಂದರವಾದ ಕೆತ್ತನೆ ಏನು ಕಾಣುವುದಿಲ್ಲ. ಆದರೆ ದೇವಾಲಯದ ಒಳಭಾಗದಲ್ಲಿ ಸ್ವಲ್ಪ ಅಲಂಕೃತವಾದ ಕೆಲವೊಂದು ಚಿತ್ರಗಳನ್ನು ಕಂಬಗಳಲ್ಲಿ ಕಾಣಬಹುದು. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಅವುಗಳನ್ನು ನೋಡಿದರೆ ಚೌಕಾಕಾರದ ಮಧ್ಯಮಕಾರದ ಅಷ್ಟಾಕಾರದ ಗೋಲಾಕಾರದ ಮತ್ತು ಬೋರಲು ಮಾಡಿದ ಮಣಿಕಟ್ಟುಗಳು ಕಾಣುತ್ತವೆ. ದೇವಾಲಯವು ಸಣ್ಣದಿರುವುದರಿಂದ ಸಣ್ಣ ಕಂಬಗಳನ್ನು ಹಾಕಲಾಗಿದೆ.

ಇತರೆ : ಈಶ್ವರ ಗುಡಿಯ ಪೂಜೆಯನ್ನು ಬಸವಣ್ಣ ದೇವಾಲಯದ ಪೂಜಾರಿಗಳು ಪೂಜೆ ಮಾಡುತ್ತಾರೆ. ಈ ದೇವಾಲಯದ ಎದುರು ಕಟ್ಟೆಯ ಮೇಲೆ ದೀಪಸ್ತಂಭವಿದೆ. ಇದರ ಎಡ ಭಾಗದಲ್ಲಿ ಸೋಪಾನಗಳಿದ್ದು ಜೊತೆಯಲ್ಲಿ ಎರಡು ಗಜಗಳಿವೆ.

೫. ಹರಿಹರ ದೇವಾಲಯ

ಸ್ಥಳ : ವೆಂಕಟೇಶ್ವರ ದೇವಾಲಯದ ಪಶ್ಚಿಮ ಭಾಗದಲ್ಲಿ ಪೂರ್ವಭಿಮುಖವಾಗಿದೆ

ದಿನಾಕ : ಕ್ರಿ.ಶ.೧೧೭೧

ಕ್ರಿ.ಶ.೧೧೭೧ರ ಶಾಸನದಲ್ಲಿ ರಾಯಿಕೊಡ ಹರಿಹರ ದಾಸರಾವ ಸೋಮೇಶ್ವರ ಭಟ್ಟರ ಮಗಳು ಮಕ್ಕುಮಕ್ಕ ಸರ್ವನಮಸ್ಯದ ಅಗ್ರಹಾರವಾದ ಹಿರಿಯ ಗಬ್ಬೂರಿನ ಮೊಸಂಗಿಯ ಭಾಗದಲ್ಲಿ ರಾಯಿಕೊಡವರ ಭಾಗದಲ್ಲಿ ತನ್ನ ತಂದೆಯ ಕಡೆಯಿಂದ ತನ್ನ ಭಾಗವಾಗಿ ಬಂದ ಬೆಳೆಯ ಭಾಗವನ್ನು ಕೋಟಿ ಹೋಮಕ್ಕೆ ಮತ್ತು ತನ್ನ ತಂದೆ ಗೊಬ್ಬೂರಿನಲ್ಲಿ ಪ್ರತಿಷ್ಠೆ ಮಾಡಿಸಿದ ಹರಿಹರ ದೇವರಿಗೆ ಮತ್ತು ಸಿದ್ಧ ಸೋಮನಾಥದೇವರಿಗೆ ಪೂಜೆ ಪುನಸ್ಕಾರ ಧೂಪದೀಪ ನೈವೇದ್ಯ ವಸ್ತ್ರಾಲಂಕಾರ ಚೈತ್ರ ಘೂತ್ರ ಧರ್ಮದ ಛತ್ರಕ್ಕೆ ಸಲ್ಲುವಂತೆ ತನ್ನ ತಂದೆ ಮತ್ತು ತನ್ನ ಗಂಡನ ಶ್ರೇಯೋಭಿವೃದ್ಧಿಗೆಂದು ಬಿಡುತ್ತಾಳೆ.

ತಲವಿನ್ಯಾಸ : ಹರಿಹರ ದೇವಾಲಯವು ತ್ರಿಕೂಟ ಮಾದರಿಯ ದೇವಾಲಯವಾಗಿದ್ದು ಇದರ ಗರ್ಭಗೃಹಗಳು ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕಿನ ಕಡೆಗೆ ಇದ್ದು ಪೂರ್ವದ ಕಡೆಗೆ ಮುಖ ಮಾಡಿದ್ದು, ಒಂದು ಸಭಾಮಂಟಪವಿದೆ.

ಗರ್ಭಗೃಹ : ಹರಿಹರ ದೇವಾಲಯದ ಗರ್ಭಗೃಹಗಳ ಬಾಗಿಲುಗಳು ಸಮತಟ್ಟಾದ ಪಟ್ಟಿಯನ್ನು ಹೊಂದಿವೆ. ಇಲ್ಲಿ ಪೂರ್ಣಕುಂಭವನ್ನು ಕೆತ್ತಲಾಗಿದೆ. ಇದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಮತ್ತು ಅರ್ಧಕಂಬಗಳಿದ್ದು ಇವುಗಳಲ್ಲಿ ಮಣಿಸರ ಆಕಾರದ ಚಿತ್ರವನ್ನು

ಕೆತ್ತಲಾಗಿದೆ. ಉತ್ತರದ ಗರ್ಭಗೃಹದ ಎಡಭಾಗದಲ್ಲಿ ಮತ್ತೊಂದು ಚಿಕ್ಕ ಗರ್ಭಗುಡಿ ಮಾಡಲಾಗಿದೆ. ಈ ಎಲ್ಲಾ ಗರ್ಭಗೃಹಗಳಲ್ಲಿ ಮೇಲ್ಛಾವಣಿಗಳಿದ್ದು ಇವುಗಳಲ್ಲಿ ಯಾವ ಮೂರ್ತಿ ಇಲ್ಲದೆ, ಖಾಲಿಯಾದ ಗರ್ಭಗೃಹಗಳಾಗಿವೆ.

ಅಂತರಾಳ : ಗರ್ಭಗೃಹ ಆದ ನಂತರ ಬರುವ ಮಂಟಪವೇ ಅಂತರಾಳ ಮಂಟಪವಾಗಿದ್ದು. ಈ ಮಂಟಪಗಳು ಚೌಕಾಕಾರದಲ್ಲಿವೆ. ಇದರ ಅಂತರಾಳದ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಬಾಗಿಲಿನಲ್ಲಿ ಪೂರ್ಣಕುಂಭಗಳಿದ್ದು ಈ ಅಂತರಾಳದ ಛತ್ತಿನಲ್ಲಿ ಭುವನೇಶ್ವರಿಯ ಶಿಲ್ಪಗಳಿವೆ.

ಸಭಾಮಂಟಪ : ಸಭಾಮಂಟಪದ ಅಂಗಳವು ಬಯಲಾಗಿದೆ. ಪೂರ್ವದಲ್ಲಿ ನಾಲ್ಕು ಕಂಬಗಳು ಹಾಗೂ ನಡುವಿನಲ್ಲಿ ನಾಲ್ಕು ಕಂಬಗಳಿವೆ. ಅದರಲ್ಲಿ ತರಹತರಹದ ಚಿತ್ರಗಳನ್ನು ತೆಗೆಯಲಾಗಿದೆ. ಮೂಲೆಯಲ್ಲಿರುವ ಕಂಬಗಳು ಚೌಕಾಕಾರವಾಗಿವೆ. ಮತ್ತು ಧನ ಚಿಹ್ನೆಯಿಂದ ಗುರುತಿಸಲಾಗಿದೆ. ಕಂಬಗಳು ಅಷ್ಟಾಕೃತಿ, ಪಂಚಾಕೃತಿಗಳಿಂದ ಒಳಪಟ್ಟು ಗಂಟೆ ಹೊಂದಿವೆ. ಅದಕ್ಕೆ ತಳಿರು ತೋರಣ ಕಟ್ಟಿದಂತಿದೆ. ಉಳಿದೆಡೆಗಳಲ್ಲಿಯೂ ಕೂಡ ತಳಿರು ತೋರಣ ಕಟ್ಟಿದಂತಿದೆ. ನಡುಭಾಗದಲ್ಲಿ ಕಮಲದ ಹೂವಿನ ಮೇಲ್ಛಾವಣಿ ಇದೆ.

ಭಿತ್ತಿ ಮತ್ತು ಸ್ತಂಭಗಳು : ಪಶ್ಚಿಮದ ಗೋಡೆಯು ಮತ್ತು ದಕ್ಷಿಣದ ಗೋಡೆಯು ಕೆಳಗಿಳಿದಂತೆ ತೋರುತ್ತದೆ. ಅಂದರೆ ಸುಮಾರು ೩ ಅಡಿ ಆಳದಲ್ಲಿದೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳು ಇವೆ. ಹರಿಹರ ದೇವಾಲಯದ ಭಿತ್ತಿಯು ಯಾವುದೇ ಅಲಂಕೃತವಿಲ್ಲದೆ ಸಾದಾರೂಪವಾಗಿವೆ. ಪ್ರವೇಶ ಭಾಗದಲ್ಲಿ ಕಂಬಗಳು ನವರಂಗದ ನಾಲ್ಕು ಕಂಬಗಳು ಇದ್ದು ಈ ಕಂಬಗಳ ನಡುವೆ ಒಂದು ತರಹದ ಕವಚವಿದೆ ಮತ್ತು ಕಂಬವು ಪರದೆ ಹೊಂದಿದಂತಿದೆ.

ಇತರೆ : ಗುಡಿಯ ಎಲ್ಲಾ ಬಾಗಿಲುಗಳು ಪೂರ್ಣಕುಂಭಗಳಿಂದ ಕೂಡಿದ್ದು ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಕಪೋತವಿಲ್ಲ. ತ್ರಿಕೋಣ ಆಕಾರದ ಐದು ಬುರುಜಗಳಿವೆ. ಮತ್ತು ಹರಿಹರ ದೇವಾಲಯದ ಆವರಣದಲ್ಲಿ ಶಾಸನವನ್ನು ಇರಿಸಲಾಗಿದೆ ಮತ್ತು ಇದರ ಮುಂದೆ ಒಂದು ಸಣ್ಣ ಬಾವಿ ಇದ್ದು ಇದನ್ನು ಈಗ ಮುಚ್ಚಲಾಗಿದೆ. ಅದರ ಪಕ್ಕದಲ್ಲಿ ಆನೆಯನ್ನು ಕಟ್ಟಿ ಹಾಕಲು ಕಲ್ಲಿನಿಂದ ಮಾಡಿದ ಒಂದು ಗಜಕಂಬವಿದೆ. ಈ ದೇವಾಲಯವನ್ನು ಇತ್ತೀಚೆಗೆ ಸ್ಥಳೀಯರು ಬಿಚ್ಚಾಲಿಮಠವೆಂದು ಕರೆಯುತ್ತಾರೆ.

೬. ಚಿಕ್ಕಮಠ (ಈಶ್ವರ ಗುಡಿ)

ಸ್ಥಳ : ವೆಂಕಟೇಶ್ವರ ದೇವಾಲಯದ ಮುಂದಿನ ಭಾಗದಲ್ಲಿ ಉತ್ತರಾಭಿಮುಖವಾಗಿದೆ.

ತಲವಿನ್ಯಾಸ : ಈ ದೇವಾಲಯವು ಏಕಕೋಟ ದೇವಾಲಯವಾಗಿದ್ದು. ಇದು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ-ಮಂಟಪಗಳನ್ನು ಹೊಂದಿದ ದೇವಾಲಯವಾಗಿದ್ದು ಇದು ವೆಂಕಟೇಶ್ವರ ದೇವಾಲಯದ ಉತ್ತರ ಭಾಗದಲ್ಲಿದೆ.

ಗರ್ಭಗೃಹ : ಗರ್ಭಗೃಹದಲ್ಲಿ ಈಶ್ವರ ಲಿಂಗವಿದ್ದು. ಮೇಲಿನ ಛತ್ತಿನಲ್ಲಿ ಕಮಲದ ಭುವನೇಶ್ವರಿಯ ಶಿಲ್ಪವಿದೆ. ಮತ್ತು ಗರ್ಭಗೃಹದ ಬಾಗಲಿನಲ್ಲಿ ಅರ್ಧಕಂಬಗಳು ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ ಹಾಗೂ ಈ ಅರ್ಧಕಂಬಗಳ ಕೆಳಭಾಗದಲ್ಲಿ ಪೂರ್ಣಕುಂಭಗಳಿದ್ದು. ಗರ್ಭಗೃಹದಲ್ಲಿ ಪೂಜಾವಸ್ತುಗಳನ್ನು ಇಡಲು ಪ್ರತ್ಯೇಕ ಜಾಗವನ್ನು ಮಾಡಲಾಗಿದೆ. ಇದರ ಸುಖನಾಸಿಯು ನಾಲ್ಕು ಕಂಬಗಳಿದ್ದು ಅವು ಪೀಠ, ಪಟ್ಟಿಕೆ ಹಾಗೂ ಬೋದುಗೆಗಳನ್ನು ಹೊಂದಿವೆ. ಈ ಸುಖನಾಸಿಯ ಮೇಲಿನ ಭಾಗದಲ್ಲಿ ಒಂದು ಮೇಲ್ಛಾವಣಿಯಿದೆ.

ನವರಂಗ : ನವರಂಗವು ಮುಖ್ಯವಾದ ನಾಲ್ಕುಕಂಬಗಳಿಂದ ಕೂಡಿದ್ದು ನವರಂಗ ಮಂಟಪದಲ್ಲಿ ಗಣೇಶ ಮೂರ್ತಿಯನ್ನು ಇಡಲಾಗಿದೆ. ನವರಂಗದ ಪಶ್ಚಿಮ ಭಾಗದಲ್ಲಿ ಕೆಲವು ಒಡೆದಿರುವ ದೇವಮೂರ್ತಿಗಳಿವೆ. ಇದರ ಛತ್ತಿನ ಮೇಲೆ ಸುಂದರವಾದ ಒಂದು ಮೇಲ್ಛಾವಣಿ ಇದೆ. ಮುಖ ಮಂಟಪವು ಯಾವುದೇ ರೀತಿಯಿಂದ ಅಲಂಕೃತವಾಗಿಲ್ಲ ಹಾಗೂ ಸದ್ಯದಲ್ಲಿ ಉತ್ತರ ದಿಕ್ಕಿನ ಭಿತ್ತಿ ಮತ್ತು ಪೂರ್ವದಿಕ್ಕಿನ ಭಿತ್ತಿಯು ಶಿಥಿಲಗೊಂಡಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಅವು ಪೀಠ ಚೌಕವೃತ್ತಕಾರದ ಪಟ್ಟಿಕೆಗಳ ಜೊತೆಗೆ ಪುಷ್ಪದಳಗಳನ್ನು ಹೊಂದಿ ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳವನ್ನು ಹೊಂದಿ ಸಾದಾ ಬೋದುಗೆಗಳನ್ನು ಕಾಣಬಹುದು.

೭. ಚಿಂಚೋಳಿ ಬಸವಣ್ಣ ಗುಡಿ

ಸ್ಥಳ : ಊರಿನ ಪಶ್ಚಿಮ ಭಾಗದಲ್ಲಿ ಪೂರ್ವದ ಕಡೆಗೆ

ದಿನಾಕ : ಕ್ರಿ.ಶ.೧೧೪೧

ಕ್ರಿ.ಶ.೧೧೪೨ರ ಶಾಸನದಲ್ಲಿ ಗಬ್ಬೂರಿನ ಪರಮ ಭಾಗವತನಾದ ವೈಷ್ಣವ ಮಂಚೈಪ್ಪಣ್ಣನು ಜಗದೇಕಮಲ್ಲನ ಆಳ್ವಿಕೆಯ ಕಾಲದಲ್ಲಿ ನಿಟ್ಟೂರಿಯ ವೈಷ್ಣವ ಕಂದರ್ಪಭಟ್ಟನಿಂದ ಪ್ರಥಮ ಮತ್ತು ದ್ವಿತಿಯ ನಿವೇಶಗಳನ್ನು ಹೊಲದ ಬೆಳೆಯನ್ನು ಕ್ರಯಕ್ಕೆ ಪಡೆದು ತಾನು ಪ್ರತಿಷ್ಠೆ ಮಾಡಿದ ಪ್ರಸನ್ನಕೇಶವ ದೇವರ ಪೂಜೆಗಾಗಿ ನೀಡುತ್ತಾನೆ.

ತಲವಿನ್ಯಾಸ : ದೇವಾಲಯವು ಊರ ಹೊರಗಿನ ಪಶ್ಚಿಮ ಭಾಗಕ್ಕಿದೆ. ಇದು ಪೂರ್ವಕ್ಕೆ ಮುಖವಿದ್ದು, ದ್ವಿಕೂಟ ದೇವಾಲಯವಾಗಿದೆ. ತಲವಿನ್ಯಾಸದಲ್ಲಿ ಎರಡು ಗರ್ಭಗೃಹಗಳು, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ(Temple of Richur & Bellary Districts, Dr.C.S.Patil).

ಗರ್ಭಗೃಹ : ಉತ್ತರ ಭಾಗದ ಗರ್ಭಗೃಹವು ಯಾವುದೇ ಮೂರ್ತಿಯಿಲ್ಲದೆ ಖಾಲಿಯಾಗಿದೆ. ಇದರ ಗರ್ಭಗೃಹದ ಬಾಗಿಲುವಾಡವು ಚೌಕಾಕಾರದ ಹೂವಿನ ಶಾಖೆಗಳಿಂದ ಕೂಡಿದ್ದು. ತಳಭಾಗವು ಪೂರ್ಣಕುಂಭಗಳಿಂದ ಕೂಡಿದೆ. ಇದರ ಲಲಾಟ ಪಟ್ಟಿಯಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ತೆಗೆಯಲಾಗಿದೆ. ಇದರ ಅಂತರಾಳದ ಭಾಗವು ತೆರೆದುಕೊಂಡಿದ್ದು. ಇದರ ಛತ್ತಿನ ಮೇಲ್ಭಾಗದಲ್ಲಿ ಕಮಲದ ಚಿತ್ರದ ಭುವನೇಶ್ವರಿಯನ್ನು ಕೆತ್ತಲಾಗಿದೆ. ದಕ್ಷಿಣ ಭಾಗದ ಗರ್ಭಗೃಹದಲ್ಲಿ ಯಾವುದೇ ದೇವರಮೂರ್ತಿ ಇರುವುದಿಲ್ಲ. ಗುಡಿಯ ಅಂತರಾಳದಲ್ಲಿ ಅಂದರೆ ದಾರಿಯ ಎರಡು ಬದಿಯಲ್ಲಿ ಎರಡು ಕಂಬಗಳಿವೆ. ಅವು ಕಕ್ಷಾಸನಾಗಳಂತಿವೆ. ಮಣಿಯ ಚೌಕಟ್ಟು ಇದರಲಿಲ್ಲ. ಅಂತರಾಳದ ಛಾವಣಿ ಆಯತಾಕಾರವಾಗಿದ್ದು ಕಮಲದ ಹೂ ಹೋಲುತ್ತದೆ. ಗರ್ಭಗುಡಿಯ ಎದುರಿನಲ್ಲಿರುವ ನೆಲದ ಮೇಲೆ ಚಂದ್ರಶಿಲಾವಿದೆ.

ಸಭಾಮಂಟಪ : ಇದರ ಸಭಾಮಂಟಪವು ಪೂರ್ವಕ್ಕೆ ತೆರೆದುಕೊಂಡಿದ್ದು ಮಧ್ಯದಲ್ಲಿ ನಾಲ್ಕುಕಂಬಗಳನ್ನು ಹೊಂದಿವೆ. ಎರಡು ಕಂಬಗಳನ್ನು ಕಕ್ಷಾಸನದಲ್ಲಿ ಕೂಡಿಸಲಾಗಿದೆ. ನಡುವಿನ ಕಂಬಗಳು ಮಡಿಚಿದ ಗಳಿಗೆಗಳು, ಸಪಾಟಾದ ನಾಲ್ಕು ಚೌಕುಗಳು, ಮಧ್ಯಭಾಗದಲ್ಲಿ ಅಷ್ಟಮುಖಿ ಆಕಾರ ಹೊಂದಿದೆ. ಗಂಟೆಯು ಅದರ ಒಳಭಾಗದಲ್ಲಿ ಹೊಂದಿಸಲಾಗಿದೆ. ಬೋರಲ ಕೊಡದ ರೂಪದಲ್ಲಿ ಕುಡುಕೀರ್ತಿ ಮುಖಗಳು ರಕ್ಷಕವಚ ನಾಲ್ಕು ಮೂಲೆಗಳಿಂದ ಕೂಡಿದ ಆಕರ್ಷಕ ಕ್ಷೇತ್ರವಿದೆ. ನಡುವಿನಲ್ಲಿ ಸುಂದರವಾದ ಸಲಕರಣೆಗಳಿಂದ ಅಲಂಕೃತವಾಗಿದೆ. ಇತ್ತೀಚಿಗೆ ಒಂದು ನಂದಿಯನ್ನು ಇದರಲ್ಲಿ ಇಡಲಾಗಿದೆ.

ಭಿತ್ತಿ : ಮೂರು ಕಡೆಯ ಗೋಡೆ ಭಾಗಗಳು ಕಕ್ಷಾಸನವು ಕಾಂತಿಯಿಂದ ಬೆಳಗುತ್ತಿದೆ. ದಕ್ಷಿಣದಲ್ಲಿ ಮತ್ತು ಪೂರ್ವದಲ್ಲಿರುವ ಗೋಡೆಗಳು ಈಗ ಬದಲಾವಣೆ ಮಾಡಲಾಗಿದೆ. ಈ ದೇವಾಲಯದ ಎಡಭಾಗದಲ್ಲಿ ಶಾಸನದ ಕಲ್ಲನ್ನು ಇರಿಸಲಾಗಿದೆ. ಎಲ್ಲಾ ಗೋಡೆಗಳಲ್ಲಿ ಕುಡ್ಯಸ್ತಂಭಗಳನ್ನು ಹೊಂದಿವೆ. ಈ ದೇವಾಲಯದ ಅಧಿಷ್ಠಾನ ಮಣ್ಣಿನಲ್ಲಿ ಹೂತು ಹೋಗಿದೆ. ಕಕ್ಷಾಸನ ಗೋಡೆಯಲ್ಲಿ ಆನೆಗಳ ಸಾಲು, ಲತಾಬಳ್ಳಿಯಿಂದ ಅಲಂಕೃತಗೊಂಡಿದೆ.

ಇತರೆ : ಈ ದೇವಾಲಯದ ಸುತ್ತಲು ಅನೇಕ ಮನೆಗಳಾಗಿದ್ದು ಇಲ್ಲಿ ಯಾವುದೇ ತರಹದ ಹೆಚ್ಚಿನ ಪೂಜೆಗಳಿಲ್ಲ.

೮. ಬಂಗಾರು ಬಸವಣ್ಣ ದೇವಾಲಯ

ಸ್ಥಳ : ಊರಿನ ಮಧ್ಯಮಭಾಗದಲ್ಲಿ ದಕ್ಷಿಣ ಕಡೆಗೆ

ಕ್ರಿ.ಶ. ೧೧೯೭ರ ಶಾಸನದಲ್ಲಿ ಸರ್ವಕ್ರಮ ಏಶಿಯನ್ ಭಟ್ಟೋಪಾಧ್ಯಾಯ ಸೋಮಯಾಜಿಯು ವಿಷ್ಣುದೇವ, ರಾಮೇಶ್ವರದೇವ ಹಲವು ದೇವರುಗಳಿಗೆ ಭೂದಾನ ಕೊಟ್ಟಿದ್ದನ್ನು ತಿಳಿಸುವುದರ ಜೊತೆಗೆ ಈ ಭೂಮಿಯನ್ನು ಹೂವಿನ ಹಾಳು ಮತ್ತು ಕಲ್ಮಲೆಯ ಅರಸನಿಂದ ದಾನಿಯು ೨೦೦ಮಹಾ ಜನಗಳಿಂದ ಪಡೆದನು. ಅಷ್ಟೇ ಅಲ್ಲದೆ ಗಬ್ಬೂರನ್ನು ಅಹಮಲ್ಲನು ಮಹಾಜನರಿಗೆ ದಕ್ಷಿಣೆಯಾಗಿ ಕೋಟಿಹೋಮ ಆಚರಿಸುವಾಗ ನೀಡಿದ್ದನೆಂದು ತಿಳಿಸುತ್ತದೆ. ಈ ಶಾಸನದಲ್ಲಿ ಈ ದೇವಾಲಯದ ಉಲ್ಲೇಖವಿರುವುದಿಲ್ಲ.

ತಲಾವಿನ್ಯಾಸ : ಬಂಗಾರ ಬಸವಣ್ಣ ದೇವಾಲಯವು ದಕ್ಷಿಣ ದಿಕ್ಕಿನ ಕಡೆಗೆ ಇದ್ದು ಇದು ತಲವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ, ನವರಂಗ, ಮುಖಮಂಟಪಗಳಿದ್ದು, ತ್ರಿಕೂಟ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹ ಸಂಪೂರ್ಣ ಶಿಥಿಲವಾಗಿದ್ದು ನವರಂಗ ಮಂಟಪದಲ್ಲಿ ನಂದಿಯನ್ನು ಇರಿಸಲಾಗಿದೆ. ಈ ದೇವಾಲಯವು ತ್ರಿಕೂಟ ದೇವಾಲಯವಾಗಿದ್ದು ಎರಡು ಗರ್ಭಗೃಹಗಳು ಮುಚ್ಚಿಕೊಂಡಿವೆ. ಈ ಬೃಹತ್ತಾದ ನಂದಿಯ ಕೊರಳಿನಲ್ಲಿ ಗಂಟೆಗಳ ಸರವು ತುಂಬಾ ಆಕರ್ಷಿತವಾಗಿದೆ.

ನವರಂಗ : ಬಂಗಾರದ ಬಸವಣ್ಣ ದೇವಾಲಯದ ನವರಂಗ ಮಂಟಪದಲ್ಲಿ ನಾಲ್ಕು ಕಂಬಗಳಿವೆ. ಅವುಗಳು ಪೀಠ ೧೬-೮-೧೬ ಪಟ್ಟಿಕೆಗಳು ಮೇಲ್ಭಾಗದಲ್ಲಿ ಚಚ್ಚೌಕಾದ ಜೊತೆ ಗೋಲಾಕಾರದ ಮುಚ್ಚಳದ ಮೇಲೆ ಸಾದಾ ಬೋದುಗೆಗಳನ್ನು ಹೊಂದಿದೆ. ನವರಂಗ ಮಂಟಪದಲ್ಲಿ ಎರಡು ನಂದಿಗಳಿವೆ. ಅದರಲ್ಲಿ ಒಂದು ದೊಡ್ಡ ನಂದಿ ಮತ್ತು ಸಣ್ಣ ನಂದಿ. ಈಗ ಸಣ್ಣ ನಂದಿಯು ಸ್ವಲ್ಪ ಒಡೆದು ಹೋಗಿದೆ. ದೊಡ್ಡ ನಂದಿಯ ಕೊರಳಿನಲ್ಲಿ ಗಂಟೆಯ ಸರ ಇದೆ.

ಮುಖಮಂಟಪ : ಈ ಭಾಗ ತೆರೆದುಕೊಂಡಿದ್ದು. ಇಲ್ಲಿ ಎರಡು ಕಂಬಗಳು ಬರುತ್ತವೆ. ಇವರ ಪಶ್ಚಿಮದಲ್ಲಿ ಗಣೇಶನ ವಿಗ್ರಹವಿದೆ. ಪೂರ್ವದಲ್ಲಿ ವಿಷ್ಣು ವಿಗ್ರಹ ಇಡಲಾಗಿದೆ. ಇನ್ನುಳಿದ ಕಂಬಗಳು ಈಗ ಇಲ್ಲವಾದ್ದರಿಂದ ಅದು ಬಯಲಾಗಿ ಕಾಣುತ್ತದೆ. ಮುಖಮಂಟಪದ ಕಂಬಗಳು ಗೋಲಾಕಾರದಲ್ಲಿ ಮತ್ತು ಚೌಕಾಕಾರದಲ್ಲಿವೆ.

ಭಿತ್ತಿ ಮತ್ತು ಸ್ತಂಬಗಳು : ಈ ದೇವಾಲಯ ಬಹುತೇಕ ಭಾಗದ ಗೋಡೆ ಶಿಥಿಲಗೊಂಡಿದೆ. ಈಗ ಕೇವಲ ಒಂದೇ ಮಂಟಪವಿದೆ. ಭಿತ್ತಿಯಲ್ಲಿ ಒಟ್ಟು ಹತ್ತು ಕುಡ್ಯಸ್ತಂಭಗಳು ಬರುತ್ತವೆ. ಪಶ್ಚಿಮದಲ್ಲಿ

ಐದು ಕುಡ್ಯಸ್ತಂಭಗಳು ಪೂರ್ವದಲ್ಲಿ ಐದು ಕುಡ್ಯಸ್ತಂಭಗಳು, ಉತ್ತರದಲ್ಲಿ ಮತ್ತೆ ಎರಡು ಕುಡ್ಯಸ್ತಂಭಗಳಿವೆ. ಒಟ್ಟು ಈ ದೇವಾಲಯದಲ್ಲಿ ೨೪ ಕಂಬಗಳಿದ್ದು ೧೨ ಭಿತ್ತಿಕಂಬಗಳಾದರೆ ಇನ್ನುಳಿದ ಮಂಟಪದ ೧೨ ಕಂಬಗಳು. ನವರಂಗ ಮಂಟಪದ ಕಂಬಗಳ ಕೆಳಗಡೆ ಭಾಗದಲ್ಲಿ ಗಣೇಶ ಮತ್ತು ವಿಷ್ಣುವಿನ ಮೂರ್ತಿಗಳನ್ನಿಡಲಾಗಿದೆ.

ಅಧಿಷ್ಠಾನ : ಬಂಗಾರ ಬಸವಣ್ಣ ದೇವಾಲಯದ ಅಧಿಷ್ಠಾನವು ಹೂತು ಹೊಗಿದ್ದು. ಇದರ ಸುತ್ತಲು ಮನೆಗಳು ಇರುವುದರಿಂದ ಮತ್ತು ಈ ದೇವಾಲಯದ ಹೆಚ್ಚಿನ ಭಾಗ ಶಿಥಿಲವಾಗಿದ್ದ ಕಾರಣ ಅಧಿಷ್ಠಾನ ಕಂಡುಬರುವುದಿಲ್ಲ.

ಮಂಜೂರು : ಈ ದೇವಾಲಯದ ಮಂಜೂರು ಇಳಿ ಬಿದ್ದಂತೆ ಕಾಣುತ್ತಿದ್ದು. ಇದರ ಭಾಗವು ಶಿಥಿಲವಾಗುವ ಹಂತದಲ್ಲಿದೆ. ಇದು ದಕ್ಷಿಣದ ಕಡೆಗಿದೆ.

ಇತರ : ಈ ದೇವಾಲಯದಲ್ಲಿ ಯಾವುದೇ ರೀತಿಯ ಅಲಂಕಾರವಾಗಿಲ್ಲ. ಸಾದಾ ರೀತಿಯಲ್ಲಿದ್ದು. ಆದರೆ ಇತ್ತೀಚಿಗೆ ಈ ದೇವಾಲಯವು ಪಶುಗಳ ವಾಸಸ್ಥಾನವಾಗಿದ್ದು ಜನರು ಕೂಡ ಇಲ್ಲಿ ವಾಸ ಮಾಡುತ್ತಿದ್ದ ಕಾರಣ ನಂದಿಯ ಕಂಬಗಳು ಮಾಸಿ ಹೋಗಿದ್ದು ಅವು ತಮ್ಮ ಮೂಲ ಸ್ವರೂಪವನ್ನು ಕಳೆದು ಕೊಳ್ಳುತ್ತಿವೆ.

೯. ಮಹಾಬಲೇಶ್ವರ ದೇವಾಲಯ

ಸ್ಥಳ : ಊರಿನ ಮಧ್ಯಭಾಗದಲ್ಲಿ ಉತ್ತರಾಭಿಮುಖವಾಗಿದೆ.

ತಲಾವಿನ್ಯಾಸ : ಈ ದೇವಾಲಯವು ಊರಿನ ಮಧ್ಯಭಾಗದಲ್ಲಿದೆ ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದೆ. ಇದು ಏಕಕೂಟ ದೇವಾಲಯವಾಗಿದ್ದು, ಹೆಚ್ಚಿನ ಭಾಗ ಶಿಥಿಲವಾಗಿದ್ದು, ಅದರ ಅವಶೇಷಗಳು ನಾಶವಾಗಿವೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಒಳಗೊಂಡಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಆಯತಾಕಾರವಾಗಿದ್ದು, ಗರ್ಭಗೃಹದಲ್ಲಿ ನಂದಿ ಮತ್ತು ಈಶ್ವರ ಲಿಂಗಗಳಿವೆ. ಗರ್ಭಗೃಹದ ಬಾಗಿಲುವಾಡವು ಪುಷ್ಪದಳಗಳಿಂದ ಅಲಂಕಾರವಾಗಿದ್ದು. ಇದರ ಲಲಾಟ ಪಟ್ಟಿಯಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಇದರ ಅಂತರಾಳವು ತೆರೆದು ಕೊಂಡಿದ್ದು ಎರಡು ಕಂಬಗಳಿಂದ ಕೂಡಿದೆ. ಇವುಗಳು ಪೀಠ, ಚೌಕ, ಪಟ್ಟಿಕೆ, ಚೌಕಕಂಠ ಭಾಗದಲ್ಲಿ ಗೋಲಾಕಾರದ ಮುಚ್ಚಳದ ಮೇಲೆ ಚೌಕಾಕಾರದ ಹಲಗೆಯ ಸಾದಾ ಬೋದುಗೆಗಳನ್ನು ಹೊಂದಿವೆ.

ಸಭಾಮಂಟಪ : ಸಭಾಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು ಎರಡು ಕಂಬಗಳು ಗೋಲಕಾರದಲ್ಲಿ, ಎರಡು ಚೌಕಾಕಾರದಲ್ಲಿವೆ. ಕಂಬದ ಕೆಳಗಿನ ಭಾಗದಲ್ಲಿ ಚೌಕಾಕಾರವಾಗಿದ್ದು, ಗೋಲಾಕಾರವಾಗಿಯೂ

ಮತ್ತು ಅಷ್ಟಾಕಾರವಾಗಿಯೂ ಗುಂಪುಗಟ್ಟಿ ಮಧ್ಯ, ಮೇಲ್ಭಾಗದಲ್ಲಿ ಬೋರಲು ಕೊಡದಂತೆ ಮಣಿಕಟ್ಟು ಕವಚವಿದೆ. ಈ ಮಂಟಪದ ಛತ್ತು ಸಪಾಟಾಗಿದೆ. ಈ ದೇವಾಲಯದ ಅಧಿಷ್ಠಾನ ಹೊತು ಹೋಗಿದೆ.ಇವರ ಗೋಡೆಗಳು ಹೊಸದಾಗಿ ನಿರ್ಮಿಸಲ್ಪಟ್ಟಿದ್ದು ಮೇಲಿನ ಭಾಗ ಐದು ದ್ರಾವಿಡ ಗೋಪುರಗಳಿಂದ ಅಲಂಕೃತಗೊಂಡಿದೆ.

೧೦. ನೀಲಕಂಠೇಶ್ವರ ದೇವಾಲಯ

ಸ್ಥಳ : ಊರಮಧ್ಯದಲ್ಲಿರುವ ಚಂಡಿದರ್ವಾಜ ಪಕ್ಕದಲ್ಲಿ ಉತ್ತರಾಭಿಮುಖವಾಗಿದೆ.

ತಲಾವಿನ್ಯಾಸ : ಇದು ಉತ್ತರಕ್ಕೆ ಮುಖ ಮಾಡಿದ್ದು ಏಕಕೂಟ ದೇವಾಲಯವಾಗಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳಿವೆ. ಇದರ ಪಶ್ಚಿಮಕ್ಕೆ ಚಂಡಿದರ್ವಾಜ ಕೇಶವ ದೇವಾಲಯಗಳಿದ್ದು ಉತ್ತರಕ್ಕೆ ಬಾಲ ಹನುಮಾನ ದೇವಾಲಯವಿದೆ.

ಗರ್ಭಗೃಹ : ನೀಲಕಂಠೇಶ್ವರ ದೇವಾಲಯದ ಗರ್ಭಗೃಹ ಚೌಕಾಕಾರವಾಗಿದ್ದು. ಇದರ ಮಧ್ಯದಲ್ಲಿ ಈಶ್ವರ ಲಿಂಗವಿದೆ. ಇದರ ಬಾಗಿಲುವಾಡವು ಹೂಬಳ್ಳಿ, ಪುಷ್ಪದಳಗಳಿಂದ ಕೆತ್ತಿದ್ದಾರೆ. ಇದರ ಮೇಲ್ಗಡೆ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಗರ್ಭಗೃಹದ ಬಾಗಿಲಿನಲ್ಲಿ ಪೂರ್ಣಕುಂಭಗಳು ಮತ್ತು ಅರ್ಧಕಂಬಗಳು ಹಾಗೂ ಗರ್ಭಗೃಹದ ಒಳಗಡೆ ಒಂದು ಮೇಲ್ಛಾವಣಿಯೂ ಇದೆ. ಇದರ ಅಂತರಾಳವು ಒಟ್ಟು ನಾಲ್ಕುಕಂಬಗಳನ್ನು ಹೊಂದಿದ್ದು, ಎರಡು ಕಂಬಗಳು ಗೋಲಾಕಾರದಲ್ಲಿದ್ದರೆ ಇನ್ನೆರಡು ಕಂಬಗಳು ಚೌಕಾಕಾರದಲ್ಲಿವೆ. ಇದರಲ್ಲಿ ಒಂದು ಮೇಲ್ಛಾವಣಿ ಇದೆ.

ನವರಂಗ : ಈ ದೇವಾಲಯದ ನವರಂಗದಲ್ಲಿ ನಾಲ್ಕು ಕಂಬಗಳಿದ್ದು. ಇವು ಪೀಠ, ಚೌಕಾಕಾರದ ಪಟ್ಟಿಕೆಗಳನ್ನು ಹೊಂದಿದ್ದು ಮೇಲಿನ ಭಾಗ ಗೋಲಾಕಾರದ ಮುಚ್ಚಳದ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಹಾಗೆಯೇ ನವರಂಗದ ಗೋಡೆಯಲ್ಲಿ ಅರ್ಧಕಂಬಗಳನ್ನು ಹೊಂದಿರುವುದನ್ನು ಕಾಣಬಹುದು.

ಮುಖಮಂಟಪ : ನೀಲಕಂಠೇಶ್ವರ ದೇವಾಲಯದ ಮುಖಮಂಟಪ ಉತ್ತರ ದಿಕ್ಕಿನ ಕಡೆಗೆ ಇದ್ದು. ಇಲ್ಲಿ ಪೂರ್ವಕ್ಕೆ ಎರಡು ಕಂಬಗಳು, ಪಶ್ಚಿಮಕ್ಕೆ ಎರಡು ಕಂಬಗಳಿದ್ದು ಇವುಗಳನ್ನು ಕಕ್ಷಾಸನದ ಮೇಲೆ ನಿಲ್ಲಿಸಲಾಗಿದೆ. ಇವುಗಳು ಕೆಳಭಾಗದಲ್ಲಿ ಚೌಕಾಗಿದ್ದು ವೃತ್ತಕಾರದ ಮುಚ್ಚಳದ ಮೇಲೆ ಸಾದಾ ರೀತಿಯ ಬೋದುಗೆಗಳನ್ನು ನಿರ್ಮಾಣ ಮಾಡಿದ್ದಾರೆ. ಇತ್ತೀಚೆಗೆ ಮುಖಮಂಟಪದ ತೊಲೆ ಮುರಿದ ಕಾರಣ ಇದರ ದ್ವಾರದಲ್ಲಿ ಮತ್ತೊಂದು ಹೊಸ ಕಂಬವನ್ನು ಜೋಡಿಸಲಾಗಿದೆ. ಇವೆಲ್ಲಾವುಗಳಿಗೆ ಬಣ್ಣ ಬಳಿದ ಕಾರಣ ತಮ್ಮ ಮೂಲ ಸ್ವರೂಪವನ್ನು ಕಳೆದು ಕೊಂಡಿವೆ.

ಸೋಪಾನಗಳು : ಈ ದೇವಾಲಯದ ಒಳಗೆ ಹೋಗಲು ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಇವು ದೇವಾಲಯ ಮುಂದೆ ಇದ್ದು. ಇವುಗಳ ಎರಡು ಬದಿಯಲ್ಲಿ ಕಟ್ಟೆಗೆಗಳಿವೆ. ಈ ಮೆಟ್ಟಿಲು ಹತ್ತುವಾಗ ಎರಡು ಸುಂದರವಾದ ಆನೆಗಳ ಮೂರ್ತಿಗಳನ್ನು ಎರಡು ಕಡೆಗೆ ನಿಲ್ಲಿಸಿದ್ದಾರೆ. ಇವುಗಳು ದೇವಾಲಯವನ್ನು ಎಳೆಯುವ ರೀತಿಯಲ್ಲಿ ಕೆತ್ತಿದ್ದಾರೆ. ಆದುದರಿಂದ ಈ ದೇವಾಲಯಕ್ಕೆ ಇಲ್ಲಿನ ಸ್ಥಳೀಯರು ಆನೆಗುಡಿ ಎಂಬುದಾಗಿ ಕರೆಯುವುದುಂಟು.

ಅಧಿಷ್ಠಾನ : ನೀಲಕಂಠೇಶ್ವರ ದೇವಾಲಯದ ಅಧಿಷ್ಠಾನವು ಬಹಳ ಎತ್ತರವಾಗಿದ್ದು, ಮತ್ತು ಸರಳ ರೀತಿಯಲ್ಲಿದೆ. ಯಾವುದೇ ರೀತಿಯ ಶಿಲ್ಪಗಳು ಪುಷ್ಪದಳಗಳ ಚಿತ್ರಗಳು ಇಲ್ಲಿಇರುವುದಿಲ್ಲ. ಇದು ಗಬ್ಬೂರಿನಲ್ಲಿರುವ ಎಲ್ಲಾ ಕಲ್ಯಾಣ ಚಾಲುಕ್ಯರ ದೇವಾಲಯಗಳಿಗಿಂತಲೂ ಎತ್ತರವಿರುವ ಅಧಿಷ್ಠಾನ ಹೊಂದಿದ ದೇವಾಲಯವಾಗಿದೆ.

ಮಂಜೂರು : ಇದರ ಮಂಜೂರು ಉತ್ತರ ದಿಕ್ಕಿನ ಕಡೆ ಇಳಿಬಿದ್ದಂತೆ ಕಾಣುತ್ತದೆ. ಇದರ ಮೇಲೆ ಇತ್ತೀಚೆಗೆ ಎತ್ತರದ ಕುಂಬಿಯನ್ನು ನಿರ್ಮಿಸಿರುವರು. ಇದರ ಮೇಲೆ ಎರಡು ಕಡೆ ಎತ್ತರದ ಸಾದಾ ರೀತಿಯ ಕಂಬಗಳನ್ನು ನಿರ್ಮಿಸಿದ್ದಾರೆ. ಒಟ್ಟಿನಲ್ಲಿ ಈ ದೇವಾಲಯ ಮೂಲ ಸ್ವರೂಪವನ್ನು ಉಳಿಸಿಕೊಳ್ಳದೆ ಇತ್ತೀಚೆಗೆ ಗೋಡೆಯ ಕೆಲವು ಭಾಗಗಳ ನಿರ್ಮಾಣದ ಜೊತೆಗೆ ಇದಕ್ಕೆ ಬಣ್ಣವನ್ನು ಬಳೆದಿದ್ದಾರೆ.

ಇತರೆ : ಈ ದೇವಾಲಯಕ್ಕೆ ಇಂದಿಗೂ ಪೂಜೆಯ ವಿಧಿ ವಿಧಾನಗಳಿವೆ. ಜಾಡರು ಎಂಬ ಕುಲಬಾಂಧವರು ಈ ದೇವಾಲಯದ ಕಾರ್ಯಭಾರವನ್ನು ಹೊತ್ತಿದ್ದಾರೆ. ಈ ದೇವಾಲಯ ಒಂದು ಕೋಣೆಯಲ್ಲಿ ಇತ್ತೀಚಿಗೆ ಬೂದಪ್ಪನಾಗಲೀಕರ್ ಇವರ ಕೈಯಲ್ಲಿ ಒಂದು ಶರಣರ ಆಶ್ರಮವನ್ನು ಮಾಡಿದ್ದಾರೆ.

೧೧. ಕೇಶವ ದೇವಾಲಯ

ಸ್ಥಳ : ಚಂಡಿ ದರ್ವಾಜ ಪಶ್ಚಿಮ ಭಾಗದಲ್ಲಿ ಉತ್ತರಾಭಿಮುಖವಾಗಿದೆ.

ಕ್ರಿ.ಶ. ೧೧೮೬ರ ಶಾಸನ ಪ್ರಕಾರ ಗೋಬ್ಬರ ಪಟ್ಟಣ ಕೇಶವದೇವರಿಗೆ ಬೇತಾಳಿಯ ಸೋಮೇಶ್ವರ ಭಟ್ಟನ ಮಗ ಮಲ್ಲಿ ದೇವನ ಭಟ್ಟನು ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. ೧೧೫೮ರ ಶಾಸನದಲ್ಲಿ ಅಯ್ಯಣವಾಡಿ ಅದರಲ್ಲಿ ಹಿರಿಯ ಗೋಬ್ಬೂರು ಅದರಲ್ಲಿನ ೨೦೦ಮಹಾಜನರ ಬಗ್ಗೆ ವಿವರಗಳಿವೆ. ಗಬ್ಬೂರಿನಲ್ಲಿ ತ್ರಿಪುರಾಂತಕ ದೇವರ ಪ್ರತಿಷ್ಠೆ ಮಾಡಿ ಅದರ ಪೂಜೆ ಪುನಸ್ಕಾರಕ್ಕೊಂದು ಕೆಲವು ಶೆಟ್ಟರು ದಾನ ನೀಡುತ್ತಾರೆ. ತ್ರಿಪುರಾಂತಕ ಮುಂದೆ ಇದ್ದ ಕೇಶವ ದೇವರಿಗೆ ಇದರ ಜೊತೆಯಲ್ಲಿಯೇ

ದಾನ ನೀಡುತ್ತಾರೆ. ಮಾಲೆಗಾರರು ಎರಡು ದೇವರ ಹೋದೋಟಕ್ಕೆ ದಾನ ನೀಡುತ್ತಾರೆ. ಭಾವ ಸಂವತ್ಸರದಲ್ಲಿ ಆಗ್ರಹಾರ ಕಲ್ಲೂರಿನ ಉತ್ತರಕ್ಕಿದ್ದ ಗವರೇಶ್ವರ ದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಗೊಬ್ಬೂರಿನ ತ್ರಿಪುರಾಂತಕ ದೇವರ ಉತ್ತರಕ್ಕಿದ್ದ ಪ್ರಸನ್ನ ಕೇಶವ ದೇವರ ಪೂಜೆ ಇತ್ಯಾದಿಗಳಿಗೆ ಭಾಗ ಕೊಡಬೇಕೆಂದು ನಿರ್ಣಯಿಸಿದರು.

ತಲವಿನ್ಯಸ :ಈ ದೇವಾಲಯವು ಉರ ಮಧ್ಯದಲ್ಲಿ ಚಂಡಿ ದರ್ವಾಜ ಪಶ್ಚಿಮದ ಭಾಗದಲ್ಲಿದ್ದು. ಇದು ತಲ ವಿನ್ಯಾಸದಲ್ಲಿ ಗರ್ಭಗೃಹ ಅಂತರಾಳ, ನವರಂಗ ಮತ್ತು ಮುಖ ಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದ್ದು ಗರ್ಭಗೃಹದ ಮಧ್ಯಭಾಗದ ಪಾಣಿವಾಟದ ಮೇಲೆ ಕೇಶವನ ಮೂರ್ತಿಯು ನಾಲ್ಕೂ ಕೈಗಳನ್ನು ಹೊಂದಿದ್ದು ಮೂರ್ತಿಯ ಕೈಯಲ್ಲಿ ಚಕ್ರ, ಶಂಖ, ಗೆದೆಗಳನ್ನು ಹಿಡಿದುಕೊಂಡಿದ್ದಾನೆ. ಈ ಕೇಶವ ಮೂರ್ತಿಯ ಎಡ ಭಾಗಕ್ಕೆ ಪದ್ಮಾಸನ ಹಾಕಿದ ಧನಲಕ್ಷ್ಮಿಯ ಚಿತ್ರವಿದೆ. ಗರ್ಭಗೃಹದ ಮೇಲೆ ಒಂದು ಭುವನೇಶ್ವರಯ ಚಿತ್ರವಿದೆ ಪಶ್ಚಿಮ ಭಾಗದಲ್ಲಿ ಒಂದು ಕಿಟಿಕಿಯನ್ನು ಮಾಡಲಾಗಿದೆ. ಗರ್ಭಗೃಹದ ಬಾಗಿಲು ವಾಡವು ಸರಳವಾಗಿದ್ದು ಲತೆಗಳಿಂದ ಕೂಡಿದೆ. ಇದರಲ್ಲಿ ಓಂದು ದೇವಕೂಷ್ಟವಿದೆ.

ಅಂತರಾಳ : ಇದರ ಅಂತರಾಳವು ತೆರೆದುಕೊಂಡಿದ್ದು. ಇದು ನಾಲ್ಕು ಕಂಬಗಳನ್ನು ಹೊಂದಿದೆ. ಇದರಲ್ಲಿ ಎರಡು ಚೌಕಾಕಾರದ ಕಂಬಗಳು. ಬಾಗಿಲಿನಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಅರ್ಧಕಂಬ ಹಾಗು ಪೂರ್ಣಕುಂಭಗಳನ್ನು ಹೊಂದಿದೆ.ಅಂತಾರಾಳದಲ್ಲಿ ಒಂದು ಮೇಲ್ಛಾವಣೆ ಇದ್ದು ಅಂತರಾಳವು ದೊಡ್ಡ ಪ್ರಮಾಣದಲ್ಲಿರುವ ಎರಡು ದೇವ ಕೋಷ್ಟಗಳನ್ನು ಹೊಂದಿದೆ.

ನವರಂಗ : ನವರಂಗ ಮಂಟಪವು ನಾಲ್ಕುಕಂಬಗಳನ್ನು ಹೊಂದಿದೆ.ಈ ಕಂಬಗಳು ಪೀಠ, ಚೌಕ,ಪಟ್ಟಿಕೆಗಳು ಕಾಂಡಭಾಗದಲ್ಲಿ ಚೌಕವಾಗಿದ್ದು. ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳ ಇದ್ದು ಇದರ ಮೇಲೆ ಚೌಕಾಕಾರದ ಹಲಗೆಯ ಸಾದಾ ಬೋದುಗೆಗಳನ್ನು ಹೊಂದಿದೆ, ನವರಂಗ ಮಂಟಪದಲ್ಲಿ ಒಂದು ಮೇಲ್ಛಾವಣೆವಿದೆ. ಮುಖ ಮಂಟಪವು ತೆರೆದು ಕೊಂಡಿದ್ದು ಇಲ್ಲಿಯ ಕಂಬಗಳು ನವರಂಗ ಕಂಬಗಳ ರೀತಿಯಲ್ಲಿವೆ. ಇದರ ಮುಂದೆ ಎರಡು ಕಟ್ಟೆಗಳಿವೆ. ಇದರ ಅಧಿಷ್ಠಾನವು ಎತ್ತರವಾದ ಜಗತಿಯ ಮೇಲೆ ನಿರ್ಮಾಣವಾಗಿದ್ದು ಈ ದೇವಾಲಯವನ್ನು ಏರಲು ಸೋಪಾನಗಳಿವೆ.

ಇತರ : ಈ ದೇವಾಲಯವು ಈಗ ಗೋಪುರವಿಲ್ಲ ಮತ್ತು ಪೂರ್ವದ ಗೋಡೆ ಶಿಥಲವಾಗಿದೆ.

೧೨. ಬಾಲ ಹನುಮಾನ್ ದೇವಾಲಯ

ಸ್ಥಳ : ಊರ ಮಧ್ಯದ ಭಾಗದಲ್ಲಿ ದಕ್ಷಿಣಾಭಿಮುಖವಾಗಿದೆ.

ಈ ದೇವಾಲಯವು ತಳಹದಿಯಲ್ಲಿ ಶಾಸನವು ಮೂರು ಭಾಗಗಳಲ್ಲಿವೆ. ಇದು ಈಗ ಬಹಳಷ್ಟು ನಷ್ಟವಾಗಿದೆ. ಆದಿಲ್ ಶಾಹಿಗಳ ಅಂತಿಮ ಕಾಲದ್ದಿರಬೇಕು. ಕನ್ನಡ ಭಾಷೆಯು ಹೆಚ್ಚು ಉರ್ದು ಮಾಯವಾಗಿದೆ. ಗೊಬ್ಬರ ಹೊಲದ ಬೆಳೆಯಲ್ಲಿನ ಪಾಲನ್ನು ವಿನಾಯತಿ ನೀಡಿದಂತೆ ತಿಳಿಯುತ್ತದೆ. ಆದರ ಈ ಶಾಸನದಲ್ಲಿ ದೇವಾಲಯದ ಬಗ್ಗೆ ಉಲ್ಲೇಖವಿರುವುದಿಲ್ಲ.

ತಲವಿನ್ಯಾಸ : ಈ ದೇವಾಲಯವು ಊರ ಮಧ್ಯದ ಭಾಗದಲ್ಲಿದ್ದು ಇದರ ಮುಂದೆ ನೀಲಕಂಠೇಶ್ವರ ದೇವಾಲಯ ಮತ್ತು ಚಂಡಿ ದರ್ವಾಜ ಬರುತ್ತದೆ. ಇದು ಏಕ ಕೂಟ ದೇವಾಲಯವಾಗಿದೆ ಈ ಗುಡಿಯ ದಕ್ಷಿಣಕ್ಕೆ ಮುಖಮಾಡಿದ್ದ ತಲ ವಿನ್ಯಾಸದಲ್ಲಿ ಗರ್ಭಗೃಹ, ನವರಂಗ, ಮುಖ ಮಂಟಪಗಳಿಂದ ಕೂಡಿದ ದೇವಾಲಯವಾಗಿದೆ

ಗರ್ಭಗೃಹ : ಈ ದೇವಾಲಯದ ಗರ್ಭಗೃಹ ಚೌಕವಾಗಿದ್ದು ಗರ್ಭಗೃಹ ಮಧ್ಯದಲ್ಲಿ ಪಾಣಿವಾಠದಮೇಲೆ ಆಂಜನೇಯ ಮೂರ್ತಿಯನ್ನು ನಿರ್ಮಿಸಲಾಗಿದೆ. ಈ ಗರ್ಭಗೃಹದ ಬಾಗಿಲು ಮೊದಲು ನಾಲ್ಕುಕಡೆ ಇದ್ದು ಈಗ ಮೂರು ಕಡೆ ಮುಚ್ಚಿದ್ದು ದಕ್ಷಿಣದ ಕಡೆ ಮಾತ್ರ ತೆರೆಯಲಾಗಿದೆ. ಗರ್ಭಗೃಹದ ನಾಲ್ಕು ಕಡೆಯು ಅಂದರೆ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಗರ್ಭಗೃಹದ ಬಾಗಿಲಿನಲ್ಲಿ ದ್ವಾರ ಪಾಲಕರು ಜಾಲಾಂಧ್ರ ಮತ್ತು ಲತಬಳ್ಳಿಯ ಮೇಲೆ ಹಾಗು ಒಂದು ಮೇಲ್ಛಾವಣೆ ಇದ್ದು ಈ ಗರ್ಭಗೃಹಕ್ಕೆ ಸುತ್ತಲು ಪ್ರದಕ್ಷಣೆ ಪಥವಿದೆ.ಗರ್ಭಗೃಹದದಲ್ಲಿ ಚಿಕ್ಕದೇವ ಕೊಷ್ಟಗಳು ಮತ್ತು ಪೂರ್ಣಕುಂಭ ಹಾಗು ಅರ್ಧಕಂಬಗಳನ್ನು ಕಾಣಬಹುದು.

ನವರಂಗ ಇದರ ನವರಂಗವು ನಾಲ್ಕು ಕಂಬಗಳಿಂದ ಕೂಡಿದೆ. ಈ ಕಂಬಗಳು ಪೀಠ ಚೌಕ ಪಟ್ಟಿಕೆಗಳು, ವರ್ತುಲಾಕಾರಾದ ಮುಚ್ಚುಳದ ಮೇಲೆ ಚಚ್ಚೌಕದ ಹಲಗೆಯು ಸಾದಾ ಬೋದುಗೆಗಳನ್ನು ಹೊಂದಿದೆ. ಇವುಗಳಲ್ಲದೆ ನವರಂಗದ ಗೋಡೆಯಲ್ಲಿರುವ ಕಂಬಗಳು ಸರಳವಾಗಿದ್ದು ಕೆಳಗಿನಿಂದ ಮೇಲಬಾಗದವರೆಗೆ ಚಚ್ಚೌಕಾದ ಕಂಠಭಾಗದಲ್ಲಿ ಚಚ್ಚೌಕಾದ ಹಲಗೆಯು ಮೇಲೆ ಸಾದಾ ಬೋದುಗೆಗಳನ್ನು ಹೊಂದಿದೆ. ಈ ದೇವಾಲಯದ ಎರಡು ಕಡೆಯ ಒಳಗೋಡೆಯಲ್ಲಿ ದೇವಕೋಷ್ಠಕಗಳಿದ್ದು ಬಲಗಡೆ ಪಶ್ಚಿಮದಲ್ಲಿ ಎರಡು ಕೋಷ್ಟಗಳಿದ್ದು. ಒಂದು ದೇವಕೋಷ್ಠದಲ್ಲಿ ಗಣೇಶನ ಮೂರ್ತಿಯಿದ್ದು ಇದರ ಮೇಲೆ ಸುಂದರವಾದ ನಂದಿಯ ಮೇಲೆ ಈಶ್ವರ ಲಿಂಗವಿದೆ. ಇದರ ಪಕ್ಕದಲ್ಲಿ ಇಬ್ಬರು ಸೇವಕಿಯರು ಕೈಮುಗಿಯುತ್ತಿರುವುದು ಕಂಡು ಬರುತ್ತದೆ. ಎಡಗಡೆ (ಪೂರ್ವ)ಯಲ್ಲಿ ದೇವಕೋಷ್ಠದಲ್ಲಿ ಒಂದು ಚಿಕ್ಕ ಲಿಂಗವಿದೆ. ಮತ್ತು ಕೇಶವ ಪಂಡಿತರ ಮೂರ್ತಿಯಿದ್ದು ಇದರ ಮೇಲಿನ ಭಾಗದಲ್ಲಿ ಸಂಕರ

ದಾಸರಲಿಂಗ ಸನ್ಯಾಸಿ ಕೇಶವ ಪಂಡಿತನಿಂದಿದೆ. ಈ ದೇವಾಲಯದ ಮುಖ ಮಂಟಪವು ತೆರೆದು ಕೊಂಡಿದ್ದು ಎರಡು ಕಡೆಯ ಗೋಡೆಯಲ್ಲಿ ಎರಡು ಕಂಬಗಳಿವೆ.

ಭಿತ್ತಿ ಮತ್ತು ಸ್ತಂಭಗಳು : ಈ ದೇವಾಲಯದ ಭಿತ್ತಿಯು ಗಟ್ಟಿಕಲ್ಲುಗಳಿಂದ ನಿರ್ಮಾಣಮಾಡಿದ್ದು ಪ್ರತಿಗೋಡೆಯಲ್ಲಿ ಸುಂದರವಾದ ವಿಗ್ರಹಗಳಿವೆ. ಅದರಲ್ಲಿ ಕೇಶವ ಪಂಡಿತರ ವಿಗ್ರಹ, ನಂದಿಯ ಮೇಲೆ ಈಶ್ವರ ಹಾಗು ಸೇವಕೀಯರು ದೇವಕೋಷ್ಠಗಳಲ್ಲಿ ಲಿಂಗ ಗಣೇಶನ ಮೂರ್ತಿಗಳಿವೆ. ಇವುಗಳಲ್ಲದೆ ಇತ್ತಿಚಿಗೆ ತಂದು ಜೋಡಿಸಿರುವ ಅತ್ಯಂತ ಸುಂದರವಾದ ಒಂದು ವೀರಗಲ್ಲುವಿದೆ. ಈ ದೇವಾಲಯದ ಸ್ತಂಭಗಳು ಗೋಲಾಕಾರ ಹಾಗು ಚೌಕಾಕಾರವಾಗಿದ್ದು ಪೀಠ ಚೌಕ ಪಟ್ಟಿಕೆಗಳು ಸಾದಾ ಬೋದುಗೆಗಳನ್ನು ಹೊಂದಿವೆ,

ಅಧಿಷ್ಠಾನ : ಇದರ ಅಧಿಷ್ಠಾವು ಸಾಮಾನ್ಯವಾಗಿ ೨ ಅಡಿಯಷ್ಟು ಎತ್ತರವಾಗಿದ್ದು ಈ ಅಧೀಷ್ಠಾನದ ಬಂಡೆಗಲ್ಲುನಲ್ಲಿ ಆದಿಲ್‌ಶಾಹಿಗಳ ಶಾಸನವು ಮೂರು ಭಾಗಗಳಲ್ಲದೆ. ಈಗ ಅಕ್ಷರ ಕಾಣದಂತೆ ಮಾಸಿಹೋಗಿವೆ.

ಮಂಜೂರು : ಈ ಭಾಗವು ಇಳಿ ಬಿದ್ದಂತೆ ಕಾಣುತ್ತದೆ. ಇದರ ಮೇಲೆ ಇತ್ತೀಚಿಗೆ ಕುಂಬಿಯನ್ನು ನಿರ್ಮಿಸಿದ್ದಾರೆ.

ಪ್ರಾಕಾರ : ಈ ದೇವಾಲಯದ ಕೆಳಗಡೆಯ ಭಿತ್ತಿಯಲ್ಲಿ ಲತಬಳ್ಳಿ ಹಾಗು ಮುಂದೆ ಅವರಣದಲ್ಲಿ ಮಾರುತಿ ದೇವಾಲಯಕ್ಕೆ ಸಂಬಂದಿಸಿದ ದೀಪಸ್ತಂಭವಿದೆ. ಇದರ ಎರಡು ಕಡೆ ಕಟ್ಟೆಯು ಇದೆ.

ಇತರೆ : ಈ ಸದ್ಯದಲ್ಲಿ ಈ ದೇವಾಲಯಕ್ಕೆ ಕಾರ್ಯಕರ್ತರಿದ್ದು ಈಗ ಈ ದೇವಾಲಯದ ಸುಧಾರಣೆ ನಡೆದಿದೆ.

೧೩. ವೀರಭದ್ರೇಶ್ವರ ದೇವಾಲಯ

ಸ್ಥಳ : ಊರ ಪಶ್ಚಿಮ ಭಾಗದಲ್ಲಿ ಉತ್ತರಾಭಿಮುಕವಾಗಿದೆ

ತಲವಿನ್ಯಾಸ : ಈ ದೇವಾಲಯ ಊರ ಮಧ್ಯದಲ್ಲಿದ್ದು, ಏಕಕೂಟ ದೇವಾಲಯುವಾಗಿದೆ. ಇದು ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ.

ಗರ್ಭಗೃಹ : ಇದರ ಗರ್ಭಗೃಹವು ಚೌಕಾಕಾರವಾಗಿದ್ದು ಗರ್ಭಗೃಹದಲ್ಲಿ ದೊಡ್ಡ ಪಾಣಿವಾಠದ ಮೇಲೆ ಬೃಹತ್ತಾದ ವೀರಭದ್ರ ಮೂರ್ತಿಯನ್ನು ನಿಲ್ಲಿಸಲಾಗಿದೆ. ಈ ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು ಖಡ್ಗ, ಬಿಲ್ಲು, ಗದೆ ಹಾಗೂ ಒಂದು ಕೈ ಅಭಯಸ್ತದ ಸಂಕೇತವಾಗಿದೆ. ಈ ವೀರಭದ್ರ ಮೂರ್ತಿಯ ಕೊರಳಿನಲ್ಲಿ ಸರ ಹಾಗೂ ಕೆಳಗಡೆ ಸೇವಕರ ಮೂರ್ತಿ ಇವೆ. ಗರ್ಭಗೃಹದ ಮೇಲೆ

ಭುವನೇಶ್ವರಿ ಇದ್ದು. ಗರ್ಭಗೃಹದ ಬಾಗಿಲಿನಲ್ಲಿ ದ್ವಾರಪಾಲಕರು ಮತ್ತು ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ.

ಅಂತರಾಳ : ಈ ದೇವಾಲಯದ ಅಂತರಾಳದಲ್ಲಿ ನಾಲ್ಕುಕಂಬಗಳಿವೆ. ಇದರಲ್ಲಿ ಎರಡು ಕಂಬಗಳು ಗೋಲಾಕಾರದಲ್ಲಿದ್ದರೆ ಎರಡು ಕಂಬಗಳು ಚೌಕಾಕಾರದಲ್ಲಿವೆ. ಈ ಕಂಬಗಳು ಪೀಠ, ಪಟ್ಟಿಕೆಗಳು ಗೋಲಾಕಾರದ ಮುಚ್ಚಳ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಅಂತರಾಳದಲ್ಲಿಂದು ಮೇಲ್ಛಾವಣಿ ಇದೆ.

ನವರಂಗ : ನವರಂಗವು ನಾಲ್ಕು ಕಂಬಗಳನ್ನು ಹೊಂದಿದ್ದು ಮೇಲೆ ಒಂದು ಭುವನೇಶ್ವರಿ, ಇತ್ತೀಚೆಗೆ ಎಡಗಡೆಯ ಕಟ್ಟೆಯ ಮೇಲೆ ನಂದಿ ಹಾಗೂ ಗಣೇಶನ ವಿಗ್ರಹಗಳಿವೆ. ಇದರ ಭಿತ್ತಿಯು ಹೊಸದಾಗಿ ಮಾಡಲಾಗಿದೆ. ಸಭಾಮಂಟಪವು ಎರಡು ದಿಕ್ಕಿನಲ್ಲಿ ಬಾಗಿಲುಗಳಿವೆ. ಪೂರ್ವದಲ್ಲಿ ಇರುವ ಬಾಗಿಲು ಸರಳವಾಗಿದ್ದು ಲತೆಗಳಿಂದ ಮಕರ ತೋರಣ ಅರ್ಧಕಂಬಗಳು ನಾಲ್ಕು ಸ್ತ್ರೀ ಸೇವಕರು, ಜಾಲಾಂಧ್ರದಿಂದ ಕೂಡಿದೆ. ಇನ್ನೂ ಉತ್ತರಕ್ಕೆ ಇರುವ ಗರ್ಭಗೃಹದ ಬಾಗಿಲಿನ ಎರಡು ಕಡೆ ಪೂರ್ಣಕುಂಭಗಳು ಅರ್ಧಕಂಬಗಳಿವೆ. ಇಲ್ಲಿ ಎರಡು ಕಡೆ ದ್ವಾರಪಾಲಕರಿದ್ದು ಬಲಗೈಯಲ್ಲಿ ರುದ್ರಾಕ್ಷಿ ಸರ ತ್ರಿಶೂಲವಿದ್ದರೆ ಎಡಗೈಯಲ್ಲಿ ಗದೆ ಮತ್ತು ಡಮರುಗವಿದೆ.

ಇತರೆ : ಇಂದಿಗೂ ಈ ದೇವಾಲಯಕ್ಕೆ ಪೂಜಾರಿಗಳಿದ್ದು ಈ ದೇವಾಲಯದ ಪೂರ್ವ ದಿಕ್ಕಿನಲ್ಲಿ ವೀರಭದ್ರೇಶ್ವರ ಅಗಸಿ ಇದೆ. ಇದು ಉತ್ತರ ದಿಕ್ಕಿಗೆ ಮುಖ ಮಾಡಿದ್ದು ಇದರ ಮೇಲೆ ಲಲಾಟ ಪಟ್ಟಿಯಲ್ಲಿ ಪುಷ್ಪದಳಗಳ ಶಿಲ್ಪವನ್ನು ಕೆತ್ತಿದ್ದು ಇದರ ಮೇಲೆ ಕೀರ್ತಿಮುಖದ ಶಿಲ್ಪವನ್ನು ನಿರ್ಮಿಸಿದ್ದಾರೆ. ಈ ದೇವಾಲಯದ ಆರಾಧನಾ ನಿಮಿತ್ಯವಾಗಿ ಪ್ರತಿವರ್ಷವು ಭಜನೆ, ಉತ್ಸವಗಳು, ನಂತರ ಊರಿನ ಜನತೆಗೆ ಅನ್ನಸಂತಾರ್ಪಣೆಯನು ಮಾಡಲಾಗುತ್ತದೆ.

೧೪. ಚೌಡೇಶ್ವರಿ ದೇವಾಲಯ

ಸ್ಥಳ : ಊರಿನ ಮಧ್ಯಭಾಗದಲ್ಲಿ ಪೂರ್ವದ ಕಡೆಗೆ

ತಲವಿನ್ಯಾಸ : ಈ ದೇವಾಲಯವು ಊರ ಮಧ್ಯದಲ್ಲಿದ್ದು ಪೂರ್ವಕ್ಕೆ ಮುಖಮಾಡಿದ ಪಂಚಕೂಟ ದೇವಾಲಯವಾಗಿದೆ. ಐದು ಗರ್ಭಗೃಹಗಳು ಸಭಾಮಂಟಪಗಳನ್ನೊಳಗೊಂಡ ಸುಂದರ ದೇವಾಲಯ ವಾಗಿದೆ.

ಗರ್ಭಗೃಹ : ಈ ದೇವಾಲಯವು ಹೊರಗಡೆಯಿಂದ ನೋಡಿದರೆ ಒಂದು ಮನೆಯ ರೀತಿಯಲ್ಲಿ ಕಂಡರು. ಒಳಗೆ ಹೋಗಿ ನೋಡಿದರೆ ಇದು ಐದು ಗರ್ಭಗೃಹಗಳನ್ನು ಹೊಂದಿದ ದೇವಾಲಯವಾಗಿದೆ.

ಒಂದನೇ ಗರ್ಭಗೃಹದಲ್ಲಿ ಲಿಂಗವಿದ್ದು ಈಗ ಈ ಲಿಂಗವನ್ನು ಹೊರಗಡೆ ಇಡಲಾಗಿದೆ. ಗರ್ಭಗೃಹವನ್ನು ಈಗ ಮುಚ್ಚಲಾಗಿದೆ. ಎರಡನೆಯ ಗರ್ಭಗೃಹದಲ್ಲಿ ಪಾಣಿವಾಠದಲ್ಲಿ ಈಶ್ವರ ಲಿಂಗವಿದೆ. ಇದರ ಗರ್ಭಗೃಹದಲ್ಲಿ ಒಂದು ಭುವನೇಶ್ವರಿ ಇದೆ. ಇದರ ಅಂತರಾಳವು, ಮೇಲ್ಛಾವಣಿ ಇದ್ದು ಅಂತರಾಳದಲ್ಲಿ ಗಣೇಶ, ನಾಗಮೂರ್ತಿಗಳಿದ್ದು ಅರ್ಧಕಂಬಗಳು ಮತ್ತು ಪೂರ್ಣಕುಂಬಗಳು ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಮೂರನೆಯ ಗರ್ಭಗೃಹವು ಒಂದು ಮೇಲ್ಛಾವಣಿ ಹೊಂದಿದ್ದು ಗರ್ಭಗೃಹದಲ್ಲಿ ಚೌಡೇಶ್ವರಿ ಮೂರ್ತಿ ಇದೆ. ಇದರ ತಲೆಯ ಮೇಲೆ ಕಿರೀಟವಿದೆ. ಗರ್ಭಗೃಹದ ಬಾಗಿಲ ಮೇಲೆ ಗಜಲಕ್ಷ್ಮಿಯ ಶಿಲ್ಪವಿದ್ದು ಪೂರ್ಣಕುಂಭ ಹಾಗೂ ಅರ್ಧಕಂಬಗಳಿವೆ. ನಾಲ್ಕನೆಯ ಗರ್ಭಗೃಹವು ಮಧ್ಯದಲ್ಲಿ ಈಶ್ವರ ಲಿಂಗವಿದ್ದು ಮೇಲ್ಛಾವಣಿ ಬಾಗಿಲಿನಲ್ಲಿ ದ್ವಾರಪಾಲಕರಿದ್ದಾರೆ. ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಇದರ ಅಂತರಾಳದಲ್ಲಿ ನಂದಿಯನ್ನು ಇಡಲಾಗಿದೆ. ಐದನೆಯ ಗರ್ಭಗೃಹವು ಈಶ್ವರ ಲಿಂಗವನ್ನು ಹೊಂದಿದ್ದು. ಒಂದು ಭುವನೇಶ್ವರಿಯ ಚಿತ್ರ ಹಾಗೂ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಅಂತರಾಳದಲ್ಲಿ ಭುವನೇಶ್ವರಿ ಶಿಲ್ಪವಿದ್ದು ಉತ್ತರ ಗೋಡೆಯಲ್ಲಿ ಕಿಟಕಿಯ ಕೆಳಗಡೆ ಮೊದಲ ಗರ್ಭಗೃಹದಲ್ಲಿದ್ದ ಈಶ್ವರ ಲಿಂಗವನ್ನು ಇಡಲಾಗಿದೆ. ಈ ಮೇಲಿನ ನಾಲ್ಕು ಈಶ್ವರ ಲಿಂಗಗಳು ಒಂದರಂತೆ ಇನ್ನೊಂದು ಇರುವುದಿಲ್ಲ.

ನವರಂಗ : ಈ ದೇವಾಲಯದ ನವರಂಗ ಮಂಟಪವು ಪೂರ್ವದ ಕಡೆಗೆ ದ್ವಾರವನ್ನು ಹೊಂದಿದ್ದು. ಸಭಾಮಂಟಪವು ಮೂರು ಕಂಬಗಳಂತೆ ನಾಲ್ಕು ಸಾಲುಗಳಿವೆ. ಒಟ್ಟು ೧೨ ಕಂಬಗಳಿದ್ದು, ಅವು ಪೀಠ, ಚೌಕಾಕಾರ, ಕಂಠ ಭಾಗದಲ್ಲಿ ಚಚ್ಚೌಕಾದ ಹಲಗೆಯ ಮೇಲೆ ಸಾದಾ ಬೋದುಗೆಗಳಿರುತ್ತವೆ. ಇದರಲ್ಲಿ ಚೌಡೇಶ್ವರಿಯ ಪಾದಗಳು, ನಂದಿ, ಗಣೇಶನ ಮೂರ್ತಿಗಳಿವೆ. ಈಗ ಇವುಗಳಿಗೆ ದಪ್ಪವಾಗಿ ಬಣ್ಣ ಬಳಿದ ಕಾರಣ ಮೂರ್ತಿಗಳು ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ನಾಲ್ಕು ದಿಕ್ಕಿನ ಭಿತ್ತಿಯಲ್ಲಿ ಐದರಂತೆ ಕುಡ್ಯಸ್ತಂಭಗಳಿವೆ.

ಇತರೆ : ಈ ದೇವಾಲಯವು ಎತ್ತರದ ಅಧಿಷ್ಠಾನದಲ್ಲಿದ್ದು, ಇಂದಿಗೂ ಪೂಜೆಪುನಸ್ಕಾರಗಳು ನಡೆಯುತ್ತಿವೆ.

೧೫. ಭೋಗೇಶ್ವರ ದೇವಾಲಯ

ಸ್ಥಳ : ಊರಿನ ಪಶ್ಚಿಮ ಭಾಗದಲ್ಲಿ ಪೂರ್ವದ ಕಡೆ ಮುಖವಾಗಿದೆ

ತಲವಿನ್ಯಾಸ : ಈ ದೇವಾಲಯವು ಪೂರ್ವದ ಕಡೆಗೆ ಇದ್ದು, ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಉತ್ತರಾಭಿಮುಖವಾಗಿದ್ದು ಇದರಲ್ಲಿ ಈಶ್ವರ ಲಿಂಗವಿದೆ. ಗರ್ಭಗೃಹವು ಛತ್ತಿನಲ್ಲಿ ಮೇಲ್ಛಾವಣಿಯಿದ್ದು. ಬಾಗಿಲಿನಲ್ಲಿ ಪೂರ್ಣಕುಂಭಗಳು, ಅರ್ಧಕಂಬ, ಪುಷ್ಪ ತೋರಣವಿದ್ದು ಸಿಂಹಗಳಿಂದ ಕೂಡಿದ ಸಾಲು ಇದೆ. ಮೇಲೆ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ.

ಅಂತರಾಳ : ಈ ದೇವಾಲಯದ ಅಂತರಾಳವು ನಾಲ್ಕು ಕಂಬಗಳಿಂದ ಕೂಡಿದ್ದು ಎರಡು ಗೋಲಾಕಾರದ ಕಂಬಗಳು ಮತ್ತು ಎರಡು ಚೌಕಾಕಾರದ ಕಂಬಗಳಿದ್ದು ಇದರ ಎರಡು ಕೋಷ್ಟಕಗಳಲ್ಲಿ ಗಣೇಶ ಮತ್ತು ಇತರ ಮೂರ್ತಿಗಳಿವೆ.

ನವರಂಗ : ನವರಂಗ ಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು, ಈ ನಾಲ್ಕು ಕಂಬಗಳು ಪೀಠ, ಪಟ್ಟಿಕೆಗಳು ಸಾದಾ ಬೋದುಗೆಗಳನ್ನು ಹೊಂದಿವೆ. ನವರಂಗ ಮಂಟಪದಲ್ಲಿ ನಂದಿಯ ವಿಗ್ರಹವಿದ್ದು ಇದರ ಪಕ್ಕದಲ್ಲಿ ಇತ್ತೀಚೆಗೆ ಇನ್ನೊಂದು ಲಿಂಗವನ್ನು ತಂದು ಇಡಲಾಗಿದೆ. ಛತ್ತಿನಲ್ಲಿ ಒಂದು ಮೇಲ್ಛಾವಣಿಯಿದೆ. ಕಕ್ಷಾಸನದಲ್ಲಿ ಒಟ್ಟು ಆರು ಕಂಬಗಳಿವೆ. ಇದರಲ್ಲಿ ಎರಡು ಕಂಬಗಳು ಸಾದಾ ರೀತಿಯ ಕಂಬಗಳಾದರೆ ಇನ್ನೂ ನಾಲ್ಕು ಕಂಬಗಳು ಗೋಲಾಕಾರದಲ್ಲಿವೆ. ಬಾಗಿಲಿನಲ್ಲಿ ಅರ್ಧಕಂಬಗಳು ತೋರಣವಿದ್ದು ಲಲಾಟದಲ್ಲಿ ನಂದಿಯ ಶಿಲ್ಪವಿದೆ. ಈ ದೇವಾಲಯಕ್ಕೆ ಏರಿ ಹೋಗಲು ಸೋಪಾನಗಳಿದ್ದು ಕೆಳಗಡೆ ಒಂದು ದ್ವಾರವಿದೆ. ಪೂರ್ವದ ಗೋಡೆಯಲ್ಲಿ ಕ್ರಿ.ಶ.೧೧೨೩ರ ಶಾಸನ ಫಲಕವಿದೆ.

೧೬. ಬಜಾರ ವೀರಭದ್ರೇಶ್ವರ ದೇವಾಲಯ

ಸ್ಥಳ : ಊರ ಪಶ್ಚಿಮ ಭಾಗದಲ್ಲಿ ಉತ್ತರಾಭಿಮುಕವಾಗಿದೆ

ತಲವಿನ್ಯಾಸ : ಈ ದೇವಾಲಯವು ಉತ್ತರ ದಿಕ್ಕಿನ ಕಡೆಗೆ ಇದ್ದು. ಇದು ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯವು ಮೂರು ಗರ್ಭಗೃಹಗಳನ್ನು ಹೊಂದಿದ್ದು ಪೂರ್ವದಿಂದ ಮೊದಲನೆಯ ಗರ್ಭಗೃಹದಲ್ಲಿ ಲಿಂಗವಿದೆ. ಮತ್ತು ಮೇಲ್ಛಾವಣಿಯಿದ್ದು, ಬಾಗಿಲಿನಲ್ಲಿ ಪೂರ್ಣಕುಂಭಗಳು, ಅರ್ಧಕಂಬ, ಮೇಲಿನ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಎರಡನೆಯ ಗರ್ಭಗೃಹದಲ್ಲಿ ವೀರಭದ್ರಮೂರ್ತಿಯಿದ್ದು, ಛತ್ತಿನಲ್ಲಿ ಒಂದು ಭುವನೇಶ್ವರಿಯಿದೆ. ಈ ವೀರಭದ್ರಮೂರ್ತಿಗೆ ನಾಲ್ಕು ಕೈಗಳಿದ್ದು ಬಲಕೈಯಲ್ಲಿ ಗದೆ, ಖಡ್ಗವಿದ್ದರೆ ಎಡಕೈಯಲ್ಲಿ ಜಂಬೆ ಮತ್ತು ಅಭಯಸ್ತವಾದ ಕೈಯಿದೆ. ಇದರ ಬಾಗಿಲಿನಲ್ಲಿ ಅರ್ಧಕಂಬಗಳು, ದ್ವಾರಪಾಲಕರು ನಿಂತಿದ್ದಾರೆ. ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದಲ್ಲದೆ ಎತ್ತು, ಸಿಂಹ, ಕೋಳಿ ಮುಂತಾದ ಪ್ರಾಣಿಗಳು ಹಾಗೂ ಅಲಂಕಾರವಾದ

ತೋರಣವಿದೆ. ಮೂರನೆಯ ಗರ್ಭಗೃಹದಲ್ಲಿ ಎರಡು ನಂದಿಗಳಿವೆ. ಇದರಲ್ಲಿ ಒಂದು ಚಿಕ್ಕನಂದಿ ಮತ್ತು ಸ್ವಲ್ಪ ದೊಡ್ಡದಾದ ನಂದಿ ಇವೆ. ಈ ಗರ್ಭಗೃಹದ ಬಾಗಿಲಿನಲ್ಲಿ ಅರ್ಧಕಂಬಗಳು, ಗಜಲಕ್ಷ್ಮಿ ಚಿತ್ರ, ಗಂಟೆ ಆಕಾರದಲ್ಲಿರುವ ತೋರಣ ಹಾಗೂ ಲಲಾಟ ಬಿಂಬದಲ್ಲಿ ಗೋಪುರ ಆಕಾರದ ಶಿಲ್ಪವಿದೆ.

ಅಂತರಾಳ : ಇದರ ಅಂತರಾಳದಲ್ಲಿ ಮೂರು ಭುವನೇಶ್ವರಿಗಳ ಶಿಲ್ಪವಿದ್ದು, ಇದರ ಭಿತ್ತಿಯು ಜಾಲಾಂಧ್ರದಿಂದ ಕೂಡಿದೆ. ಇದರಲ್ಲಿ ಒಟ್ಟು ನಾಲ್ಕು ಕಂಬಗಳಿದ್ದು ಇವು ಯಾವುದೇ ರೀತಿಯ ಅಲಂಕಾರವಾಗಿಲ್ಲ.

ಸಭಾಮಂಟಪ : ಈ ದೇವಾಲಯದ ಸಭಾಮಂಟಪವು ಇತ್ತೀಚೆಗೆ ಹೊಸಗೋಡೆಗಳಿಂದ ನಿರ್ಮಾಣವಾಗಿದ್ದು, ಯಾವುದೇ ರೀತಿಯಿಂದ ಅಲಂಕೃತವಾಗಿಲ್ಲ. ಈ ಸಭಾಮಂಟಪದ ಉತ್ತರದ ಕಡೆಗೆ ಒಂದು ಬಾಗಿಲು ಮತ್ತು ಪೂರ್ವದಿಕ್ಕಿನ ಕಡೆ ಒಂದು ಬಾಗಿಲು ಇದೆ. ಈ ದೇವಾಲಯದ ವೈಶಿಷ್ಟ್ಯತೆಯೆಂದರೆ ಮೂರು ಗರ್ಭಗೃಹದಲ್ಲಿ ಬೇರೆ ಬೇರೆ ಈಶ್ವರ, ವೀರಭದ್ರ ಮತ್ತು ನಂದಿ ಮೂರ್ತಿಗಳಿರುವುದನ್ನು ಕಾಣುತ್ತವೆ.

ಇತರೆ : ಇಂದಿಗೂ ಈ ದೇವಾಲಯದಲ್ಲಿ ಶ್ರಾವಣ ಮಾಸದಲ್ಲಿ ಭಜನೆ, ಆರಾಧನೆ ಮುಂತಾದ ಆಚರಣೆಗಳು ನಡೆಯುತ್ತವೆ.

೧೭. ಹಂಪಣ್ಣನವರ ದೇವಾಲಯ

ಸ್ಥಳ : ಊರ ಹೊರಗೆ

ತಲವಿನ್ಯಾಸ : ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ಮುಖಮಂಟಪಗಳಿಂದ ಕೂಡಿದ ಏಕಕೂಟ ದೇವಾಲಯವಾಗಿದೆ. ಇದು ಪೂರ್ವಾಭಿಮುಖವಾಗಿದ್ದು ಇದನ್ನು ನಿರ್ಮಿಸಲು ಬಳಿಬಣ್ಣದ ಕಲ್ಲನ್ನು ಬಳಸಲಾಗಿದೆ.

ಗರ್ಭಗೃಹ : ಗರ್ಭಗೃಹವು ಪೂರ್ವಕ್ಕೆ ಮುಖ ಮಾಡಿದ್ದು, ಚೌಕಾಕಾರದ ಈ ಗರ್ಭಗೃಹವು ನಾಲ್ಕು ಅಡಿ ಆಳದಲ್ಲಿದೆ. ಇದರ ಮಧ್ಯದಲ್ಲಿ ಈಶ್ವರಲಿಂಗ ಮತ್ತು ಅದರ ಎದುರಿಗೆ ನಂದಿ ಮೂರ್ತಿಯು ಇದೆ. ಭಿತ್ತಿನಲ್ಲಿ ಭುವನೇಶ್ವರಿಯ ಚಿತ್ರವಿದ್ದು, ಈ ಗರ್ಭಗೃಹದ ಬಾಗಿಲುಗಳ ಕೆತ್ತನೆ ಸುಂದರವಾಗಿದ್ದು, ಬಾಗಿಲಿನ ಎರಡು ಕಡೆಗೆ ದ್ವಾರಪಾಲಕರನ್ನು ಕೆತ್ತಲಾಗಿದೆ. ಈ ದ್ವಾರಪಾಲಕರಿಗೆ ನಾಲ್ಕು ಕೈಗಳಿದ್ದು ಬಲಗೈಯಲ್ಲಿ ತ್ರಿಶೂಲ, ಗದೆ ಇದ್ದರೆ ಎಡಗಡೆ ಕೈಯಲ್ಲಿ ಡಮರು ಮತ್ತು ಅಭಯಸ್ತ ಕೈ ಇದೆ. ಇವರ ಎಡಬಲಕ್ಕೆ ಇಬ್ಬರು ಚೌರಿದಾರಿಗಳಿದ್ದಾರೆ. ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವಿದ್ದು, ಅರ್ಧಕಂಬಗಳು ಮತ್ತು ಸರಪಳಿಯ ಆಕಾರದ ಮತ್ತು ಸಿಂಹಗಳ ತೋರಣವಿದೆ.

ಅಂತರಾಳ : ಈ ಗರ್ಭಗುಡಿಗೆ ಹೊಂದಿಕೊಂಡಂತೆ ಅಂತರಾಳವಿದ್ದು. ಇದು ಚೌಕಾಕಾರವಾಗಿದೆ. ಇದರ ಸುತ್ತಲು ಗೋಡೆ ಇರುವುದು. ಅಂತರಾಳಕ್ಕೆ ದ್ವಾರವಿದ್ದು ಇದಕ್ಕೆ ಮುಚ್ಚಿದ ಅಂತರಾಳ ಎಂದೂ ಕರೆಯುವರು. ಇದರ ಛತ್ತಿನಲ್ಲಿ ಕಮಲದ ಭುವನೇಶ್ವರಿಯನ್ನು ಕೆತ್ತಲಾಗಿದೆ. ಅಂತರಾಳದ ಗೋಡೆಯು ಜಾಲಾಂಧ್ರದಿಂದ ಕೂಡಿದ್ದು ಲತೆಯ ಬಳ್ಳಿ ಹಾಗೂ ಸ್ತ್ರೀಮೂರ್ತಿಗಳನ್ನು ಕಾಣಬಹುದು.

ಮುಖಮಂಟಪ : ಮುಖಮಂಟಪವು ಪೂರ್ವದಿಕ್ಕಿಗೆ ಇದ್ದು ಇದರ ದ್ವಾರಬಾಗಿಲಿಗೆ ಎರಡು ಕಡೆ ಚಾಲುಕ್ಯರ ಕಾಲದ ಬಾಗಿಲವಾಡದ ಪ್ರಾರಂಭಿಕ ಹಂತವನ್ನು ಕಾಣಬಹುದು. ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಇಂತಹ ನೂರಾರು ದೇವಾಲಯಗಳಲ್ಲಿ ಹೆಚ್ಚಿನ ಅಲಂಕಾರ ಇಲ್ಲದೆ. ಬಾಗಿಲು ವಾಡಗಳನ್ನು ಕಾಣಬಹುದು. ಈ ದೇವಾಲಯದ ಎರಡು ಬದಿಯ ಬಾಗಿಲುಗಳು ಮತ್ತು ಲಲಾಟ ಬಿಂಬದ ಮೇಲೆ ಚಿಕ್ಕ ಚಿಕ್ಕ ರಂಧ್ರಗಳನ್ನು ಹೊಂದಿವೆ. ಈ ದ್ವಾರ ಬಾಗಿಲು ಸರಳ ಶೈಲಿಯಲ್ಲಿದ್ದು. ಇದರ ಎರಡು ಬದಿಗೆ ಇಬ್ಬಿಬ್ಬರ ಚೌರದಾರಿಗಳ ಶಿಲ್ಪಗಳಿವೆ. ದ್ವಾರಬಾಗಿಲಿನ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕಾಣಬಹುದು. ಇಲ್ಲಿಯೇ ಎರಡು ಅರ್ಧಗಂಬಗಳನ್ನು ಗೋಡೆಯಲ್ಲಿ ನಿರ್ಮಿಸಿದ್ದಾರೆ.

ಇತರೆ : ಈ ದೇವಾಲಯದ ಮುಂದೆ ಎರಡು ಪಾದಗಳಿದ್ದು ದೇವಾಲಯದ ಬಲ (ದಕ್ಷಿಣ) ಬದಿಯಲ್ಲಿ ಎರಡು ಆನೆಗಳನ್ನು ನಿಲ್ಲಿಸಿದ್ದಾರೆ. ಇದರ ಎಡ (ಉತ್ತರ) ಬದಿಯಲ್ಲಿ ಬೃಹತ್ತಾಕಾರದ ಬಾವಿಯಿದೆ. ದೇವಾಲಯದ ಮುಂದೆ ಮತ್ತೊಂದು ಲಿಂಗವಿದ್ದು ಇದರ ಮುಂದೆ ಆರು ವೀರಗಲ್ಲುಗಳು ಮತ್ತು ನಾಗ ನಾಗಿಣಿಯರ ಶಿಲ್ಪಗಳಿವೆ. ಮತ್ತು ಕ್ರಿ.ಶ.೧೦೮೫ರ ಶಾಸನವಿದೆ. ಈಗ ಈ ಗುಡಿಯಲ್ಲಿ ಒಬ್ಬ ಸಾದು ಇದ್ದು ಈ ಗುಡಿಯ ಪೂಜೆ ಪುನಸ್ಕಾರ ಮತ್ತು ಸಣ್ಣ ಹುಡಗರಿಗೆ ಜ್ವರ, ಜೇನೆ, ಕಾಯಲೆ ಬಂದರೆ ಅಂತಹ ಹುಡುಗರಿಗೆ ಈ ಸಾದು ಅಂತ್ರಮಂತ್ರ ಮತ್ತು ಲೋಭಾನ ಕೊಡುವ ಪದ್ಧತಿ ಈ ಸಾಧುವಿನಲ್ಲಿದೆ.

೧೮. ಸೂಗುರೇಶ್ವರ ದೇವಾಲಯ

ಸ್ಥಳ : ಊರಿನ ಪಶ್ಚಿಮ ದಿಕ್ಕಿನಲ್ಲಿರುವ ಬೆಟ್ಟದ ಮೇಲಿದೆ

ಈ ದೇವಾಲಯದ ಉತ್ತರ ದಿಕ್ಕಿನ ಕಡೆಗೆ ಇರುವ ಕಂಬದಲ್ಲಿ ಶಾಸನವಿದ್ದು, ಜನರು ದುರುಪಯೋಗ ಪಡಿಸಿಕೊಂಡ ಕಾರಣ ಅಕ್ಷರಗಳು ಅಳಿಸಿ ಹೋಗಿವೆ. ಆದರೆ ಚಾಳುಕ್ಯ ತ್ರಿಭುವನ ಮಲ್ಲನು ರಾಜ್ಯಭಾರ ಮಾಡುತ್ತಿರುವಾಗ ಕ್ರಿ.ಶ.೧೦೮೫ರ ಶಾಸನವು ಈ ಬೆಟ್ಟದ ದಾರಿಯಲ್ಲಿದೆ.

ತಲವಿನ್ಯಾಸ : ಸೂಗುರೇಶ್ವರ ದೇವಾಲಯವು ಗಬ್ಬೂರಿಗೆ ಹೊಂದಿಕೊಂಡಂತೆ ಪಶ್ಚಿಮ ದಿಕ್ಕಿನಲ್ಲಿರುವ ಬೂದಿಬಸವೇಶ್ವರ ಬೆಟ್ಟದಲ್ಲಿದೆ. ಈ ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದು

ಇದನ್ನು ನಿರ್ಮಾಣ ಮಾಡಲು ಕೆಂಪು ಬಿಳುಪು ಶಿಲೆಯ ಗ್ರ್ಯಾನೇಟ್‌ದಿಂದ ನಾಜೂಕಾಗಿ ಕೆತ್ತಲಾಗಿದೆ. ನೋಡಲು ಬಹಳ ಸುಂದರವಾದ ಈ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದ ತ್ರಿಕೂಟ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗುಡಿಯು ಪೂರ್ವಕ್ಕೆ ಮುಖ ಮಾಡಿದ್ದು, ಚೌಕಾಕಾರವಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಗರ್ಭಗೃಹದ ಮಧ್ಯ ಶಿವಲಿಂಗವಿದ್ದು, ನಂತರದ ಕಾಲದಲ್ಲಿ ಈ ಗುಡಿಯಲ್ಲಿ ಶಿವಲಿಂಗವಿಲ್ಲದಂತಾಗಿದೆ. ಈಗ ಸದ್ಯ ಅಲ್ಲಿ ಶಿವಲಿಂಗವಿರದೆ ಖಾಲಿ ಗರ್ಭಗುಡಿ ಇರುವುದನ್ನು ಕಾಣಬಹುದು. ಇಲ್ಲಿಯ ಗರ್ಭಗೃಹದ ಬಾಗಿಲುಗಳನ್ನು ಸುಂದರವಾಗಿ ಕೆತ್ತಿದ್ದಾರೆ. ದ್ವಾರ ಬಾಗಿಲಿನ ಎರಡು ಬದಿಯಲ್ಲಿ ದ್ವಾರಪಾಲಕರು ನಿಂತಿದ್ದಾರೆ. ಇದು ಹೂಬಳ್ಳಿ, ಪುಷ್ಪದಳಗಳು, ಅರ್ಧಕಂಬಗಳನ್ನು ಹೊಂದಿದ್ದು ದ್ವಾರದ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕಾಣಬಹುದು. ಈ ದ್ವಾರ ಬಾಗಿಲಿಗೆ ಇತ್ತೀಚೆಗೆ ಕಬ್ಬಿಣದ ಬಾಗಿಲನ್ನು ಮಾಡಿ ಗರ್ಭಗೃಹಕ್ಕೆ ಮುಚ್ಚುವ ವ್ಯವಸ್ಥೆ ಮಾಡಿದ್ದಾರೆ. ಉತ್ತರದ ಗರ್ಭಗೃಹದಲ್ಲಿ ನಂದಿ ಇದೆ. ಈಗ ಸಂಪೂರ್ಣವಾಗಿ ಇದರ ಗರ್ಭಗೃಹ ನಾಶವಾಗಿದೆ. ಇದರ ಅಂತರಾಳ ಶಿಥಿಲವಾಗಿದ್ದು ಎರಡು ಕಂಬಗಳನ್ನು ಒಳಗೊಂಡಿದೆ. ದಕ್ಷಿಣದಲ್ಲಿರುವ ಗರ್ಭಗೃಹವು ಈಗ ಖಾಲಿಇದ್ದು ಅದರಲ್ಲಿ ಯಾವ ಮೂರ್ತಿಇಲ್ಲ. ಇದರ ಅಂತರಾಳದಲ್ಲಿ ನಾಲ್ಕು ಕಂಬಗಳಿವೆ. ಪಶ್ಚಿಮದಲ್ಲಿರುವ ಅಂತರಾಳದಲ್ಲಿ ಎರಡು ದೇವಕೋಷ್ಟಗಳಿವೆ. ಆದರೆ ಯಾವ ಮೂರ್ತಿಯು ಇರುವುದಿಲ್ಲ. ಈ ಅಂತರಾಳದಲ್ಲಿ ಎರಡು ಪ್ರತ್ಯೇಕ ಕಂಬಗಳನ್ನು ಹೊಂದಿದ್ದು. ಕಂಬಗಳು ಪೀಠ, ಚೌಕಾಕಾರ ಮುಚ್ಚಳವನ್ನು ಹೊಂದಿದ್ದು ಸರಳವಾಗಿವೆ. ಇವುಗಳ ಮಧ್ಯ ಎರಡು ಕಡೆಗೆ ಗೋಡೆಗಳನ್ನು ನಿರ್ಮಿಸಿದ್ದಾರೆ.

ನವರಂಗ : ಕಲ್ಯಾಣಿ ಚಾಲುಕ್ಯರ ದೇವಾಲಯಗಳಲ್ಲಿ ಒಂದಾದ ಈ ಸೂಗೂರೇಶ್ವರ ದೇವಾಲಯದ ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಮೂರು ದಿಕ್ಕಿನ ಕಡೆಗೆ ತೆರೆದುಕೊಂಡಿದೆ. ನವರಂಗದ ಕಂಬಗಳು ಪೀಠ, ಚೌಕಾಕಾರ ಪಟ್ಟಿಕೆಗಳು, ಇಲ್ಲಿ ಮೂರ್ತಿಶಿಲ್ಪಗಳಿದ್ದು ಅವು ಮಾಸಿವೆ. ಮೇಲಿನ ಕಂಠಭಾಗದಲ್ಲಿ ಗೋಲಾಕಾರದ ಮುಚ್ಚಳ, ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದುಗೆಗಳಿಂದ ಕೂಡಿದವು ಗಳಾಗಿವೆ. ಇಲ್ಲಿಯ ಛತ್ತಿನಲ್ಲಿ ಭುವನೇಶ್ವರಿ ಇರುವುದನ್ನು ಕಾಣುತ್ತೇವೆ. ಇದರ ಸುತ್ತ ಮಂಟಪದಲ್ಲಿ ಇನ್ನು ಎಂಟು ಭುವನೇಶ್ವರಿಗಳಿವೆ.

ಮುಖಮಂಟಪ : ಈ ದೇವಾಲಯದ ಮುಖಮಂಟಪ ಪೂರ್ವ ದಿಕ್ಕಿಗೆ ಇದ್ದು, ದಕ್ಷಿಣ, ಉತ್ತರ ದಿಕ್ಕಿನ ಕಡೆಗೂ ತೆರೆದುಕೊಂಡಿದ್ದು, ಸುಂದರವಾದ ಕಂಬಗಳಿಂದ ಕೂಡಿದೆ. ಇಲ್ಲಿಯ ಕಂಬಗಳು ಪೀಠ ೧೬-೮-೧೬ ಪಟ್ಟಿಕೆಗಳು ಇದ್ದು ಕಾಂಡಭಾಗದಲ್ಲಿ ಸಣ್ಣ ಕೋಷ್ಟಕಗಳಿವೆ. ಇವು ಮಣಿ

ಸರಗಳಿಂದ ಕೂಡಿದ್ದಾಗಿವೆ. ಕಂಠ ಭಾಗದಲ್ಲಿ ವೃತ್ತಾಕಾರದ ಮುಚ್ಚಳ ಹೊಂದಿ ಅವರ ಮೇಲೆ ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಈ ನಾಲ್ಕು ಕಂಬಗಳಲ್ಲಿ ಎರಡು ಕಂಬಗಳು ಚೌಕಾಕಾರದಲ್ಲಿದ್ದರೆ ಇನ್ನೆರಡು ಕಂಬಗಳು ಗೋಲಕಾರದಲ್ಲಿವೆ. ಆದರೆ ಇದರಲ್ಲಿ ಒಂದು ಕಂಬ ಈಗ ನಶಿಸಿ ಹೋಗಿದೆ. ಇದರ ಬಾಗಿಲ ಮೇಲೆ ಗಜಲಕ್ಷ್ಮಿಯ ಶಿಲ್ಪವಿದ್ದು, ಅರ್ಧಕಂಬಗಳು ಹಾಗೂ ಪೂರ್ಣಕಂಭಗಳಿಂದ ಕೂಡಿದೆ.

ಭಿತ್ತಿ : ಈ ದೇವಾಲಯದ ಗೋಡೆಗಳು ಸರಳವಾಗಿದ್ದು, ದೇವಾಲಯದ ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕಿನಲ್ಲಿ ಆನೆಗಳ ಶಿಲ್ಪಗಳನ್ನು ಕೆತ್ತಲಾಗಿದ್ದು, ಪಶ್ಚಿಮ ದಿಕ್ಕಿನ ಗರ್ಭಗೃಹದ ಗೋಡೆ ಶಿಥಿಲವಾಗಿದ್ದರಿಂದ ಇತ್ತೀಚೆಗೆ ಅದನ್ನು ನಿರ್ಮಾಣ ಮಾಡಿ ಇದರ ಮೇಲೆ ಸಾದಾ ರೀತಿಯಲ್ಲಿ ಶಿಖರವನ್ನು ನಿರ್ಮಾಣ ಮಾಡುತ್ತಲಿದ್ದಾರೆ.

ಅಧಿಷ್ಠಾನ : ಈ ದೇವಾಲಯದ ಅಧಿಷ್ಠಾನವು ಸುಮಾರು ಮೂರರಿಂದ ಐದು ಅಡಿ ಎತ್ತರವಾಗಿದ್ದು, ಪುಷ್ಪದಳಗಳ ಶಿಲ್ಪಗಳನ್ನು ಹೊಂದಿವೆ.

ಸೋಪಾನ : ಸೂಗೂರೇಶ್ವರ ದೇವಾಲಯವು ಬೂದಿ ಬಸವೇಶ್ವರ ಬೆಟ್ಟದಲ್ಲಿದ್ದು ಇದಕ್ಕೆ ಏರಿ ಹೋಗಲು ಮೆಟ್ಟಿಲುಗಳ ವ್ಯವಸ್ಥೆ ಮಾಡಿದ್ದಾರೆ. ಇವುಗಳು ಉತ್ತರ ದಿಕ್ಕಿನಲ್ಲಿವೆ.

ಇತರೆ : ಈ ದೇವಾಲಯದ ಹಿಂದೆ ಕೆಳಗಡೆ ಭಾಗದಲ್ಲಿ ಒಂದು ಸುಂದರವಾದ ಸಿಡಿಲು ಬಾವಿ ಇದೆ. ಈ ದೇವಾಲಯದ ಪೂಜೆಗಾಗಿ ಈ ಭಾವಿಯ ನೀರನ್ನು ಉಪಯೋಗಿಸಲಾಗುತ್ತಿತ್ತು. ಇತ್ತೀಚೆಗೆ ಸ್ಥಳೀಯರು ಒಂದು ಸೂಗೂರೇಶ್ವರ ಮೂರ್ತಿಯನ್ನು ಮಾಡಿಸಿದ್ದು, ಅದನ್ನು ಇನ್ನು ದೇವಾಲಯದ ಗರ್ಭಗೃಹದಲ್ಲಿ ತಂದು ಇರಿಸಿರುವುದಿಲ್ಲ.

೧೯. ನಾಗಭೂಷಣ ದೇವಾಲಯ

ಸ್ಥಳ : ಊರಿನ ಉತ್ತರ ಭಾಗದಲ್ಲಿ ಪಶ್ಚಿಮಾಭಿಮುಖವಾಗಿದೆ.

ನೀಲಕಂಠೇಶ್ವರ ದೇವಾಲಯದ ಅಗಸಿಗೆ ಸೇರಿಸಿರುವ ಕ್ರಿ.ಶ.೧೧೪೫ರ ಶಾಸನದ ಪ್ರಕಾರ ಗೂಬ್ಬೂರಿನ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣ ದೇವರ ಪೂಜೆ ಪುನಸ್ಕಾರಕ್ಕೆ ಗೂಬ್ಬೂರಿನ ಮಾಲೆಗಾರ ಅರವತ್ತೊಕ್ಕಲು ಮತ್ತು ಬಿಲ್ಲಿ ಮುನ್ನೂರುವರು ಬಾಡುಕಾಯಿ ಮಾರಿದ ಹಡಗೆಗೆ ಅರವಾನ ಭತ್ತ ನೀಡಬೇಕೆಂದಿದೆ. ಇದನ್ನು ಹೊರಗೆ ಮಾರಿದಲ್ಲಿ ಬಿಲ್ಲಿಕಾಯಿ ಹೆಡಗೆಗೆ ಒಮ್ಮಾನ ಉಪ್ಪಿನ ಹೆಡೆಗೆಗೆ ಅರವಾನ ಭತ್ತ ಕೊಡಬೇಕೆಂದು ತೀರ್ಮಾನಿಸುತ್ತಾರೆ. ಮಹಾಜನಗಳು ನಾಗಭೂಷಣ ದೇವರ ಸತ್ರಕ್ಕೆ ಜೋಳವನ್ನು ಬಿಡುತ್ತಾರೆ.

ತಲವಿನ್ಯಾಸ : ನಾಗಭೂಷಣ ದೇವಾಲಯವು ಗಬ್ಬೂರಿನ ಉತ್ತರ ದಿಕ್ಕಿಗೆ ಇದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದು ತಲವಿನ್ಯಾಸದಲ್ಲಿ ಗರ್ಭಗೃಹದ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಮತ್ತು ಬಾಗಿಲನಲ್ಲಿ ಅರ್ಧಕಂಬಗಳು ಹಾಗೂ ಪೂರ್ಣ ಕುಂಭಗಳಿದ್ದು ಛತ್ತಿನಲ್ಲಿ ಒಂದು ಮೇಲ್ಛಾವಣಿ ಇದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಪಶ್ಚಿಮಕ್ಕೆ ಮುಖ ಮಾಡಿದ್ದು, ಚೌಕಾಕಾರವಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಗರ್ಭಗೃಹದ ಮಧ್ಯದಲ್ಲಿ ಪಾಣಿವಾಠದ ಮೇಲೆ ಲಿಂಗವಿದ್ದು, ಈಗ ಕೇವಲ ಪಾಣಿವಾಠ ಮಾತ್ರವೇ ಇದೆ. ಗರ್ಭಗೃಹದ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಮತ್ತು ಬಾಗಿಲಿನಲ್ಲಿ ಅರ್ಧಕಂಬಗಳು ಹಾಗೂ ಪೂರ್ಣಕುಂಭಗಳಿದ್ದು, ಛತ್ತಿನಲ್ಲಿ ಒಂದು ಮೇಲ್ಛಾವಣಿ ಇದೆ.

ಅಂತರಾಳ : ಈ ದೇವಾಲಯದ ಅಂತರಾಳವು ಲತಾಜಾಲಾಂಧ್ರದಿಂದ ಕೂಡಿದ್ದು, ಅಂತರಾಳದ ಛತ್ತಿನಲ್ಲಿ ಒಂದು ಭುವನೇಶ್ವರಿಯ ಶಿಲ್ಪವಿದೆ. ಇದರ ಬಾಗಿಲಿನಲ್ಲಿ ಎಡಬದಿಯಲ್ಲಿ ಚೌರಿದಾರಿಗಳಿದ್ದಾರೆ. ಮತ್ತು ಎರಡು ಬದಿಯಲ್ಲಿ ಎರಡು ದೇವಕೋಷ್ಟಗಳಿದ್ದು, ಇವು ಮೊದಲ ದೇವರ ಮೂರ್ತಿಗಳನ್ನಿಡಲು ಮಾಡಲಾಗಿತ್ತು. ಆದರೆ ಸದ್ಯದಲ್ಲಿ ಯಾವ ಮೂರ್ತಿಗಳಿಲ್ಲ.

ನವರಂಗ : ನವರಂಗ ಮಂಟಪವು ನಾಲ್ಕುಕಂಬಗಳಿಂದ ಕೂಡಿದ್ದು ಇವು ಪೀಠ, ಪಟ್ಟಿಕೆಗಳು, ಸಾದಾ ರೀತಿಯ ಬೋದುಗೆಗಳನ್ನೊಳಗೊಂಡಿದೆ. ಇದರ ಛತ್ತಿನಲ್ಲಿ ನಕ್ಷತ್ರಾಕಾರದ ಒಂದು ಮೇಲ್ಛಾವಣಿಯು ಕೂಡ ಇದೆ. ಇದರ ಭಿತ್ತಿಯಲ್ಲಿ ನಾಲ್ಕರಂತೆ ಎರಡು ಕಡೆ ಎಂಟು ಕಂಬಗಳಿವೆ. ಇತ್ತೀಚೆಗೆ ದಕ್ಷಿಣ ಮತ್ತು ಉತ್ತರದ ಭಿತ್ತಿಯು ಶಿಥಿಲಗೊಂಡಿದೆ. ಮುಖಮಂಟಪದ ಮುಂದೆ ಎಲ್ಲವು ಶಿಥಿಲಗೊಂಡಿದ್ದು, ಈಗ ಕೇವಲ ಎರಡು ಕಂಬಗಳಿಂದ ಮಾತ್ರ ಕೂಡಿದ್ದಾಗಿದೆ.

ಅಧಿಷ್ಠಾನ : ಇದರ ಅಧಿಷ್ಠಾನವು ಈಗ ನೆಲದಲ್ಲಿ ಹೂತುಹೋಗಿದೆ. ಇದರ ಸುತ್ತಲೂ ಈಗ ಬೇಲಿಯ ಮರಗಳು ಬೆಳೆದುಬಿಟ್ಟಿವೆ. ಇದರ ಸ್ವಲ್ಪದೂರದಲ್ಲಿಯೆ ಒಂದು ಸುಂದರವಾದ ನಾಗರ ಪುಷ್ಕರಣಿ ಇದೆ. ಇವತ್ತಿಗೆ ಈ ಪುಷ್ಕರಣಿಗೆ ನೀರಿನ ಬುಗ್ಗಿಯಿದ್ದು ಮೂರು ಕಾಲಕ್ಕೆ ಇದರಲ್ಲಿ ನೀರು ತುಂಬಿರುತ್ತವೆ. ಇದರ ನೀರನ್ನು ಇತ್ತೀಚೆಗೆ ತೋಟಕ್ಕೆ ಉಪಯೋಗಪಡಿಸಿಕೊಳ್ಳುತ್ತಿದ್ದಾರೆ.

೨೦. ಪೇಟೆ ಬಸಪ್ಪನ ದೇವಾಲಯ

ಸ್ಥಳ : ಊರಿನ ಉತ್ತರ ಭಾಗದಲ್ಲಿದೆ

ತಲವಿನ್ಯಾಸ : ಈ ದೇವಾಲಯವು ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದ್ದು ತಲವಿನ್ಯಾಸದಲ್ಲಿ ಏಕಕೂಟ ದೇವಾಲಯವಾಗಿದೆ.

ಗರ್ಭಗೃಹ : ಇದರ ಗರ್ಭಗೃಹವು ಪೂರ್ವದ ದಿಕ್ಕಿಗೆ ಮುಖಮಾಡಿದ್ದು. ಇದು ಬೀದಿಯ ಮಧ್ಯದಲ್ಲಿರುವುದರಿಂದ ಇದಕ್ಕೆ ಪೇಟೆ ಬಸಪ್ಪ ಎಂದು ಹೆಸರು ಬಂದಿದೆ. ಇದರ ಗರ್ಭಗೃಹದಲ್ಲಿ ನಂದಿಯ ವಿಗ್ರಹವಿದ್ದು. ಈ ದೇವಾಲಯವು ಗೋಪುರವನ್ನು ಹೊಂದಿದ ದೇವಾಲಯವಾಗಿದೆ ಮತ್ತು ಇದರ ಗೋಪುರದಲ್ಲಿ ಕಳಶ ಕೂಡ ಇದೆ. ಈ ದೇವಾಲಯದ ಮುಂದಿನ ಕಟ್ಟೆಯ ಮೇಲೆ ವಿಷ್ಣುಮೂರ್ತಿ, ನಾಗ, ಗಣೇಶ ಮೂರ್ತಿಗಳಿವೆ. ಈ ದೇವಾಲಯದ ಮೇಲೆ ನಾಲ್ಕು ದಿಕ್ಕಿನ ಮೂಲೆಯಲ್ಲಿ ಒಂದರಂತೆ ನಾಲ್ಕು ನಂದಿ ವಿಗ್ರಹಗಳಿವೆ.

ಭಿತ್ತಿ : ಈ ದೇವಾಲಯದ ಭಿತ್ತಿಯು ಸಾದಾ ರೀತಿಯಿಂದ ಕೂಡಿದ್ದು, ಯಾವುದೇ ರೀತಿಯ ಕುಡ್ಯಸ್ತಂಭಗಳಾಗಲಿ ಅಥವಾ ಅಲಂಕೃತವಾದ ಶಿಲ್ಪಗಳಾಗಲಿ ಇದರ ಭಿತ್ತಿಯಲ್ಲಿ ಕಾಣವುದಿಲ್ಲ. ಈ ದೇವಾಲಯ ಇಂದಿಗೂ ಇಲ್ಲಿನ ಜನ ನಡೆದುಕೊಳ್ಳುತ್ತಾರೆ ಮತ್ತು ಪೂಜೆ ಇದೆ. ಈ ದೇವಾಲಯಕ್ಕೆ ಒಟ್ಟಿನಲ್ಲಿ ಅಷ್ಟೇನು ಸುಂದರವಲ್ಲದ ಎತ್ತರದ ಜಗತಿಯ ಮೇಲೆ ನಿರ್ಮಾಣವಾದ ದೇವಾಲಯವಾಗಿದೆ.

೨೧. ಮಹಾನಂದೀಶ್ವರ ದೇವಾಲಯ

ಹೆಸರು ಸೂಚಿಸುವಂತೆ ಈ ದೇವಾಲಯವು ಗಬ್ಬೂರು ಹಂಪಣ್ಣವರ ಗುರುವಾದ ದೊಡ್ಡಬಸಪ್ಪ ತನ್ನ ಆರಾಧ್ಯದೈವ. ಈಶ್ವರನನ್ನು ಮತ್ತು ಅಂಕಿತನಾಮದ ಹೆಸರನ್ನು ಹೊಂದಿದ ದೇವಾಲಯವಾಗಿದೆ. ಇದರ ಪ್ರಕಾರ ಮಹಾನಂದೀಶ್ವರ ಮಹಾದೊಡ್ಡ, ನಂದಿಬಸಪ್ಪ ಆರಾಧ್ಯದೈವ ಈಶ್ವರ ಅಥವಾ ಅಂಕಿತನಾಮವಾದ ಘನ ವೃಷಬೇಶ, ಘನದೊಡ್ಡ, ವೃಷಭನಂದಿ, ಈಶ ಆರಾಧ್ಯದೈವ ಈಶ್ವರ.

ಮಹಾನಂದೀಶ್ವರ, ಘನವೃಷಬೇಶ ಹಾಗೂ ಹಂಪಣ್ಣವರ ಗುರು ಮತ್ತು ಆರಾಧ್ಯದೈವ ಈಶ್ವರ ಈ ಮೂರು ಒಂದೇ ಹೆಸರಿನ ಪರ್ಯಾಯ ಪದಗಳಾಗಿದ್ದು, ಹಂಪಣ್ಣವರ ಅಂಕಿತನಾಮ ಗುರು ಆರಾಧ್ಯದೈವದ ಹೆಸರುಗಳನ್ನು ಹೊಂದಿದ ಒಂದು ಸುಂದರ ದೇವಾಲಯವಾಗಿದೆ. ಈ ದೇವಾಲಯವು ದಕ್ಷಿಣಕ್ಕೆ ತುಸು ದೂರದಲ್ಲಿ ಚಿಕ್ಕ ಬೆಟ್ಟದ ಮೇಲೆ ಈ ಮಹಾನಂದೀಶ್ವರ ದೇವಸ್ಥಾನವಿದೆ. ಎಪ್ಪತ್ತು ವರ್ಷಗಳ ಹಿಂದೆ ದೊಡ್ಡ ಬಂಡೆಕಲ್ಲುಗಳಿಂದ ಕೂಡಿದ ಈ ಬೆಟ್ಟವನ್ನು ಏರಿ ದೇವಸ್ಥಾನ ಮುಟ್ಟಲು ಬಹು ಪ್ರಯಾಸ ಪಡಬೇಕಾಗುತ್ತಿತ್ತು. ಈಗ ಇದು ಬಂಡೆಕಲ್ಲುಗಳನ್ನು ಕಳೆದುಕೊಂಡು ಪೂರ್ವ ಮತ್ತು ಪಶ್ಚಿಮಕ್ಕೆ ೫೦ ರಿಂದ ೬೦ ಪಾವಟಿಗೆಗಳನ್ನು ಹೊಂದಿದ ಸುಂದರ ತಾಣವಾಗಿದೆ. ಈ ಮಹಾನಂದೀಶ್ವರ ದೇವಸ್ಥಾನವು ತಲವಿನ್ಯಾಸದಲ್ಲಿ ಚಿಕ್ಕ ಗರ್ಭಗೃಹ ಹಾಗೂ ಒಂದು ಅಂತರಾಳವನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ : ಉತ್ತರಕ್ಕೆ ಮುಖ ಮಾಡಿದ ಗರ್ಭಗೃಹವು ಚೌಕಾಗಿದ್ದು. ಇದರ ಮಧ್ಯದಲ್ಲಿ ಪಾಣಿಪಾಠದ ಮೇಲೆ ಬೃಹತ್ತಾದ ಲಿಂಗವಿದೆ. ಗರ್ಭಗೃಹದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ

ಶಿಲ್ಪವನ್ನು ಕೆತ್ತಲಾಗಿದೆ. ಲತಾಬಳ್ಳಿಯ ಚಿತ್ರ ಮುಂತಾದವುಗಳಿಂದ ಕೂಡಿದ ಇದರ ಅಂತರಾಳವು ಚೌಕಾಗಿದ್ದು ಇದರ ಮೇಲಿನ ಭಾಗದಲ್ಲಿ ಗೋಲಾಕಾರದ ಒಂದು ಸುಂದರ ಭುವನೇಶ್ವರಿಯ ಶಿಲ್ಪವಿದೆ. ಈ ಗರ್ಭಗೃಹದ ಮೇಲೆ ಗೋಪುರ ಕಳಸವನ್ನು ಹೊಂದಿದ್ದು, ನಾಲ್ಕು ಮೂಲೆಯಲ್ಲಿ ನಂದಿಯ ವಿಗ್ರಹಗಳಿವೆ ಮತ್ತು ಎದುರು ಚಿಕ್ಕಮಂಟಪದಲ್ಲಿ ನಂದಿ ಮತ್ತು ವಿನಾಯಕನ ಮೂರ್ತಿಗಳನ್ನು ಹಾಗೂ ಅದರ ಅಕ್ಕಪಕ್ಕದ ಕೆಳಭಾಗದಲ್ಲಿ ನಾಗಮೂರ್ತಿಗಳು, ಶಿವ, ನಂದಿಯ ಇತರ ಹೊಡೆದ ಮೂರ್ತಿಗಳನ್ನು ಕಾಣಬಹುದಾಗಿದೆ. ಅಲ್ಲದೆ ಈ ಮಹಾನಂದೀಶ್ವರನ ಮೇಲೆ ಕುರಿತು ಹಂಪಣ್ಣ ತನ್ನ ವಚನದಲ್ಲಿ ಈ ರೀತಿಯಾಗಿ ಆಡಿದ್ದಾನೆ.

ಪೂರೆಯೇ ಗುರು ನಂದಿಶ್ವರಯೇ ನಿನ್ನ
ಚರಣನು ತಿಪೆನು ಚಂಡೀಶ್ವರಿಯೆ
ಜರಮರಣ ವಿರಹಿತ ಸುರನಮಿತೆ
ಗುರುಮಹಾನಂದೀಶ್ವರನರ್ಧಾಂಗಿನಿಯ (ಗೊಬ್ಬೂರು ಹಂಪಣ್ಣ ಪು.೩೧)

ಇತ್ತೀಚೆಗೆ ಮಹಾನಂದೀಶ್ವರ ದೇವಾಲಯದ ಮಹಾದ್ವಾರ ಹಾಗೂ ಗುಡಿಯ ಸುತ್ತ ಪಾಳಮಂಟಪಗಳು ನಿರ್ಮಾಣವಾಗಿವೆ. ಕಾಡು ಬೆಟ್ಟವನ್ನು ಸುಂದರ ತಾಣವನ್ನಾಗಿ ಮಾಡಿದವರು ಗಬ್ಬೂರಿನ ಲಿಂ. ಎಲೆ ಬೂದೆಣ್ಣನವರು ಲಕ್ಷಗಟ್ಟಲೆ ಹಣ ವೆಚ್ಚ ಮಾಡಿ ಐವತ್ತು ವರ್ಷಗಳವರೆಗೆ ಈ ಬೆಟ್ಟವನ್ನು ಕೊರೆಸಿ ಮನೋಹರ ಸ್ಥಾನವಾಗಿಸಿದ್ದಕ್ಕೆ ಕಾರಣವಿದೆ. ಎಲೆ ಬೂದೆಣ್ಣನವರ ಗುರುಮುದುಕೆಪ್ಪೆ ಮತ್ತು ಮುದಕಪ್ಪನ ಗುರು ಹಂಪಣ್ಣನವರ ಗೆದ್ದುಗೆ ದೇವಾಲಯಗಳಿವೆ. ಈ ಮಹಾನಂದೀಶ್ವರ ದೇವಾಲಯದ ಮುಂದಿನ ಭಾಗದಲ್ಲಿ ಬಿಚ್ಚಾಲಿ ಮಠವಿದೆ ಮತ್ತು ದೇವಾಲಯದ ಉತ್ತರ ಭಾಗದಲ್ಲಿ ಒಂದು ಪುಷ್ಕರಣಿ ಮತ್ತು ಸೂಗೋರೇಶ್ವರ ಬೆಟ್ಟವಿದೆ.

೨೨. ರಾಚೋಟಯ್ಯನ ಗುಡಿ

ಸ್ಥಳ : ಊರಿನ ಪೂರ್ವದ ಹೊರವಲಯದ ಪ್ರದೇಶದಲ್ಲಿದೆ

ಗರ್ಭಗೃಹ : ಉತ್ತರಕ್ಕೆ ಮುಖ ಮಾಡಿದ ಗರ್ಭಗುಡಿಯು ಚೌಕಾಗಿದ್ದು ಇದರ ಮಧ್ಯದಲ್ಲಿ ಈಶ್ವರಲಿಂಗವಿದೆ. ಗರ್ಭಗೃಹದ ದ್ವಾರವು ಆಕರ್ಷಕವಾಗಿದ್ದು, ಗರ್ಭಗೃಹದ ಬಾಗಿಲಿನಲ್ಲಿ ದ್ವಾರಪಾಲಕರಿದ್ದಾರೆ. ಈ ದ್ವಾರಪಾಲಕರು ತಮ್ಮ ಕೈಗಳಲ್ಲಿ ಗದೆಗಳನ್ನು ಹಿಡಿದಿದ್ದಾರೆ. ಹಾಗೂ ದ್ವಾರದಲ್ಲಿ ಅರ್ಧಕಂಬಗಳು ಮತ್ತು ಬಾಗಿಲಿನ ಮೇಲೆ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಸುತ್ತಲು ಅಲಂಕಾರದ ತೋರಣ ಹಾಗೂ ಆನೆ, ಹೂಗಳ ಚಿತ್ರಗಳಿವೆ.

ಅಂತರಾಳ : ಗರ್ಭಗೃಹದ ನಂತರದ ಬಾಗವೇ ಅಂತರಾಳವಾಗಿದ್ದು ಈ ಅಂತರಾಳದಲ್ಲಿ ಬಸವಣ್ಣನ ಮೂರ್ತಿಯನ್ನಿಡಲಾಗಿದೆ. ಅಂತರಾಳದ ಭಿತ್ತಿಯು ಕಂಬಗಳಿಂದ ಕೂಡಿದ್ದು, ಅಂತಹ ಬೃಹತ್ತಾದ ಕಂಬಗಳಿಲ್ಲ.

ನವರಂಗ : ಈ ದೇವಾಲಯದ ಮುಖಮಂಟಪ, ನವರಂಗ ಈಗ ಕುಸಿದು ಬಿಟ್ಟಿವೆ. ಇದು ಕೇವಲ ಗರ್ಭಗುಡಿ ಅಂತರಾಳದಿಂದ ಕೂಡಿದ ದೇವಾಲಯವಾಗಿದೆ.

ಅಧಿಷ್ಠಾನ : ಉತ್ತರಾಭಿಮುಖವಾಗಿರುವ ಈ ಗುಡಿಯು ಸುಮಾರು ಐದು ಅಡಿ ಎತ್ತರದ ಅಧಿಷ್ಠಾನದ ಮೇಲೆ ರಚನೆಗೊಂಡಿದೆ. ಈ ಅಧಿಷ್ಠಾನವು ಸೋಪಾನಗಳಿಂದ ಕೂಡಿದ್ದು ಇದರಲ್ಲಿ ವಿವಿಧ ಭಂಗಿಯಲ್ಲಿರುವ ಆನೆಗಳ ಸಾಲು ಇದೆ.

ಭಿತ್ತಿ : ಇದರ ಭಿತ್ತಿಯು ಸಮಪಾತಾಳಿಯಲ್ಲಿದೆ. ಈ ಭಿತ್ತಿಯು ಸ್ತಂಭಗಳಿಂದ ಕೂಡಿದ್ದು,ಇವು ಚಚ್ಚೌಕ ಸಾದಾ ಬೋದುಗೆಯನ್ನು ಹೊಂದಿದೆ. ಈಗ ಪೂರ್ವದ ಗೋಡೆಯು ಕುಸಿದುಬಿದ್ದುದರಿಂದ ಅಂತಹ ಆಕರ್ಷಕವಾದ ಶಿಲ್ಪಗಳನ್ನು ಈ ಭಿತ್ತಿಯಲ್ಲಿ ಕಾಣುವುದಿಲ್ಲ. ಮತ್ತು ಈ ದೇವಾಲಯಕ್ಕೆ ಯಾವುದೇ ತೆರನಾದ ಶಿಖರ ಕಳಶಗಳಿರುವುದಿಲ್ಲ.

೨೩. ಅರ್ಪಣ ಕಟ್ಟೆ

ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ ಗಬ್ಬೂರು ಧಾರ್ಮಿಕವಾಗಿಯೂ ಅಷ್ಟೇ ಪ್ರಸಿದ್ಧಿಯನ್ನು ಹೊಂದಿದೆ. ಗಬ್ಬೂರಿನ ಪೂರ್ವದಿಕ್ಕಿನಲ್ಲಿ ಸುಮಾರು ೬ ಕಿ.ಮೀ ದೂರದಲ್ಲಿ ಪ್ರಸಾದ ಪ್ರಸಿದ್ಧಿಯಾದ ಬಿಬ್ಬಿ ಬಾಚಯ್ಯನು ಈ ಹೊಲದಲ್ಲಿ ಜಂಗಮ ದಾಸೋಹ, ಅನುಭವ ಗೋಷ್ಠಿ ನಡೆಸುತ್ತಿದ್ದನೆಂದು ಹೇಳಲಾಗುವ ಅರ್ಪಣ ಕಟ್ಟೆಯೊಂದಿದೆ. ಸಮಸ್ತ ಗಬ್ಬೂರಿನ ಜನರು ತುಂಬಾ ಭಯಭಕ್ತಿಯಿಂದ ಈ ಕಟ್ಟೆಗೆ ನಡೆದುಕೊಳ್ಳುತ್ತಾರೆ.

ಬಾಚಯ್ಯ ಗಬ್ಬೂರಿನಿದ ಕಲ್ಯಾಣಕ್ಕೆ ಹೋದವನು ಮರಳಿ ಬರುವಾಗ ಕಲ್ಯಾಣದಲ್ಲಿದ್ದ ಚನ್ನವೀರರು ಮತ್ತು ಅವರ ಆರು ಸಾವಿರ ಜಂಗಮರನ್ನು ಜೊತೆಯಲ್ಲಿ ಕರೆತಂದನಂತೆ. ಅವರ ದಾಸೋಹದ ಕಟ್ಟೆಯೇ ಈ ಅರ್ಪಣ ಕಟ್ಟೆಯಾಗಿದೆ. ಈ ಅರ್ಪಣ ಕಟ್ಟೆಗೆ ಬಾಚಯ್ಯನವರ ಗದ್ದುಗೆ ಎಂದು ನಡೆದುಕೊಳ್ಳುತ್ತಾರೆ. ಬಿಬ್ಬಿಬಾಚಯ್ಯನವರ ಅರ್ಪಣೆ ಕಟ್ಟೆಗೆ ಪ್ರತಿ ಅಮವಾಸ್ಸೆಗೆ ವಿಶೇಷ ಪೂಜೆಪುನಸ್ಕಾರ ನಡೆಯುತ್ತದೆ. ಈ ಅರ್ಪಣ ಕಟ್ಟೆಗೆ ಚರ್ಮದ ವಸ್ತುಗಳು, ಚಪ್ಪಲಿ ಒಯ್ಯುವಂತಿಲ್ಲ. ಇಲ್ಲಿಗೆ ಮಡಿಯಿಂದ ಹೋಗಬೇಕು.

ಅರ್ಪಣಕಟ್ಟೆ ಕಲ್ಲುಗಾರೆಗಳಿಂದ ಕಟ್ಟಲಾಗಿರುವ ಸಾಮಾನ್ಯ ಕಟ್ಟೆಯಾಗಿದ್ದು. ಐವತ್ತಾದ ಬನ್ನಿಯ ಮರಗಳು ಎರಡು ಅಗಲಕ್ಕೆ ಚಾಚಿಕೊಂಡು ಕಟ್ಟೆಗೆ ನೆರಳಾಗಿ ದೂರದವರಿಗೆ ನೆಲೆ ತೋರುವ ತೋಪಿನಂತೆ ಕಂಗೊಳಿಸುತ್ತದೆ. ಈ ಕಟ್ಟೆಯ ಮೇಲೆ ಈಶ್ವರವಿದ್ದು ಎದುರು ಎತ್ತರದ ಕಟ್ಟೆಯ ಮೇಲೆ ನಂದಿವಿಗ್ರಹವಿದೆ.

೨೪. ಕಾಳಿಕಾ ದೇವಿ ಗುಡಿ

ಕಾಳಿಕಾದೇವಿಯ ಗುಡಿಯು ಪೂರ್ವದಿಕ್ಕಿಗೆ ಮುಖ ಮಾಡಿದ್ದು, ಇದರ ಗರ್ಭಗೃಹದಲ್ಲಿ ಪಾಣಿವಾಠದ ಮೇಲೆ ಕಾಳಿಕಾದೇವಿಯ ಮೂರ್ತಿಯಿದೆ. ಈ ದೇವಾಲಯದ ನವರಂಗ ಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು, ಈ ಕಂಬಗಳು ಪೀಠ, ಪಟ್ಟಿಕೆಗಳು ಮತ್ತು ಸಾದಾ ಬೋದುಗೆಗಳನ್ನು ಹೊಂದಿದ ಕಂಬಗಳಾಗಿವೆ. ಮುಖಮಂಟಪದ ಬಾಗಿಲನಲ್ಲಿ ಅರ್ಧಕಂಬಗಳು ಗಜಲಕ್ಷ್ಮಿಯ ಶಿಲ್ಪವನ್ನು ಬಿಡಿಸಲಾಗಿದೆ. ಈ ದೇವಾಲಯದ ಭಿತ್ತಿಗಳು ಸಾಧಾರಣವಾಗಿದ್ದು ಯಾವುದೇ ಅಲಂಕಾರಗಳಿಂದ ಕೂಡಿಲ್ಲ ಮತ್ತು ಈ ದೇವಾಲಯದ ಮುಂದೆ ಒಂದು ವಿಗ್ರಹವಿದೆ.

ಪಿಡಮ್ಮ ಗುಡಿ : ಈ ದೇವಾಲಯವು ಉತ್ತರ ದಿಕ್ಕಿನ ಕಡೆಗೆ ಮುಖಮಾಡಿದ್ದು. ಇತ್ತೀಚೆಗೆ ಈ ದೇವಾಲಯದಲ್ಲಿ ಒಂದು ಮಹಾಸತಿ ಕಲ್ಲನ್ನು ಇರಿಸಲಾಗಿದೆ. ಮತ್ತು ಇದರ ಮುಂದೆ ಮೂರು ವೀರಗಲ್ಲುಗಳಿವೆ.

ಮಾರಮ್ಮ ಗುಡಿ : ಈ ದೇವಾಲಯವು ಸುಬ್ಬಣ್ಣ ಬಾವಿಯ ಹತ್ತಿರವಿದ್ದು, ಇದರ ಮುಖವು ಪೂರ್ವದ ಕಡೆಗೆ ಇದೆ. ಇದರ ಗರ್ಭಗೃಹದಲ್ಲಿ ಮಾರಮ್ಮನ ಮೂರ್ತಿಗಳಿವೆ. ಈ ದೇವಾಲಯಕ್ಕೆ ಪ್ರತಿವರ್ಷವು ಬಲಿ ಕೊಡುವ ಪದ್ಧತಿ ಇಂದಿಗೂ ಇದೆ.

ಸಾವೆರಮ್ಮ ಗುಡಿ : ಈ ದೇವಾಲಯವು ಊರಿನ ಹೊರ ಹೂಲದಲ್ಲಿದ್ದು, ಪೂರ್ವದ ಕಡೆಗೆ ಮುಖ ಮಾಡಿದೆ. ಈ ದೇವಾಲಯದಲ್ಲಿ ಊರಿಗೆ ಮಳೆ ಬಾರದಿದ್ದರೆ ಹೆಚ್ಚಿನ ಪೂಜೆಗಳು ನಡೆಯುತ್ತವೆ.

೨೫. ಇತರೆ ದೇವಾಲಯಗಳು

೧. ಅಂಜನೇಯ ದೇವಾಲಯ : ಖಾನಪುರ ಅಗಸಿಯಲ್ಲಿರುವ ಈ ದೇವಾಲಯವು ಕಂಬಗಳು, ಲತಾಬಳ್ಳಿ, ನಾಗ, ಮಂಜೂರುಗಳನ್ನೊಳಗೊಂಡು ಗರ್ಭಗೃಹದಲ್ಲಿ ಅಂಜನೇಯ ವಿಗ್ರಹವಿದೆ. ಇದು ದಕ್ಷಿಣ ಕಡೆಗೆ ಮುಖ ಮಾಡಿದ ದೇವಾಲಯವಾಗಿದೆ.

೨. ಈಶ್ವರ ದೇವಾಲಯ : ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹದಲ್ಲಿ ಈಶ್ವರ ಮತ್ತು ನಂದಿಗಳಿವೆ. ಇಲ್ಲಿ ಗೋಪುರವಿದ್ದು ನಾಲ್ಕು ದಿಕ್ಕಿನ ಮೇಲೆ ನಾಲ್ಕು ನಂದಿ ವಿಗ್ರಹಗಳಿವೆ. ಇದರ ಬಾಗಿಲವಾಡವು ಕುಂಭತೋರಣ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಗರ್ಭಗೃಹದ ಭಿತ್ತಿನಲ್ಲಿ ಒಂದು ಭುವನೇಶ್ವರಿಯ ಶಿಲ್ಪವಿದ್ದು ಅಭಿಷೇಕದ ನೀರು ಹೊರಗೆ ಬರಲು ಒಂದು ಪ್ರಣಾಳವನ್ನು ಮಾಡಲಾಗಿದೆ. ಈ ದೇವಾಲಯದ ಮುಂದೆ ಒಂದು ದೀಪಸ್ತಂಭವಿದೆ.

೩. ಮಾರ್ತಾಂಡೇಶ್ವರ ಗುಡಿ : ಈ ದೇವಾಲಯದ ಗರ್ಭಗೃಹದಲ್ಲಿ ಮಾರ್ತಂಡೇಪ್ಪನವರ ಮೂರ್ತಿ ಇದ್ದು. ಇದರ ಮೇಲೆ ಒಂದು ಭುವನೇಶ್ವರಿಯ ಚಿತ್ರವಿದೆ. ಈ ದೇವಾಲಯದಲ್ಲಿ ಒಬ್ಬ ಸಾಧು ವಾಸವಾಗಿದ್ದಾನೆ. ಇದರ ಪಕ್ಕದ ಪಶ್ಚಿಮ ಭಾಗದಲ್ಲಿ ದಾಸರ ಬಾವಿಯಿದ್ದು, ಉತ್ತರ ಭಾಗದಲ್ಲಿ ಖಾನಪುರ ದ್ವಾರಬಾಗಿಲು ಇದೆ.

೪. ಮಲ್ಲಿಕಾರ್ಜುನ ಗುಡಿ : ಈ ದೇವಾಲಯವು ೩ ಅಡಿ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದ್ದು. ಇದರ ಮುಖವು ಪೂರ್ವದ ಕಡೆಗೆ ಇದೆ. ಈ ದೇವಾಲಯದ ಗರ್ಭಗೃಹದಲ್ಲಿ ಈಶ್ವರ ಮತ್ತು ನಂದಿ ವಿಗ್ರಹಗಳಿವೆ. ಇದರ ಬಾಗಿಲಿನಲ್ಲಿ ಅರ್ಧಕಂಬಗಳು ಹಾಗೂ ಪೂರ್ಣಕುಂಭಗಳಿವೆ. ಈ ದೇವಾಲಯವು ಗೋಪುರ ಮತ್ತು ಕಳಶಗಳನ್ನು ಒಳಗೊಂಡಿದ್ದು, ಇದರ ನಾಲ್ಕು ದಿಕ್ಕಿನಲ್ಲಿ ನಾಲ್ಕು ನಂದಿಗಳಿವೆ.

ಗಬ್ಬೂರಿನಲ್ಲಿ ಇನ್ನೂ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿರುವ ಅನೇಕ ದೇವಾಲಯಗಳಿವೆ. ಅವು ನೆಲದಲ್ಲಿ ಭೂಗತವಾಗಿದ್ದು, ಇನ್ನುಳಿದ ಕೆಲವು ದೇವಾಲಯಗಳು ವಾಸದ ಮನೆಗಳಾಗಿವೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿರುವ ಆಂದನೇಶ್ವರ ದೇವಾಲಯ ಪ್ರಮುಖವಾಗಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಈಶ್ವರ ಲಿಂಗ ಮತ್ತು ನಂದಿ ವಿಗ್ರಹಗಳಿವೆ. ಇದ ಪಕ್ಕದಲ್ಲಿಯೇ ಒಂದು ಬೃಹತ್ತಾದ ಒಂದು ಪುಷ್ಕರಣಿಯಿದೆ.

ಇನ್ನು ಅನೇಕ ಶಿವಶರಣರ ಗದ್ದುಗೆಗಳಾದ ಸಿದ್ಧಯ್ಯ ತಾತಾ ಗದ್ದುಗೆ, ಕರಿಯಪ್ಪ ತಾತಾನ ಗದ್ದುಗೆ, ಭಗವಂತನ ಗದ್ದುಗೆ, ಸೂಗಣ್ಣ ತಾತಾನ ಗದ್ದುಗೆ ಮುಂತಾದವುಗಳನ್ನು ಗಬ್ಬೂರಿನಲ್ಲಿ ಕಾಣಬಹುದು.

೩.೨. ಮಠಗಳು

ಧರ್ಮ ಎಂದರೆ ದೈವಗಳು ಹಾಗು ಭಕ್ತರು. ಧರ್ಮ ಸ್ಥಾಪಕರು ಹಾಗು ಅವರ ಭೋಧನೆಗಳು ಎಂದು ಸಾಮಾನ್ಯವಾಗಿಭಾವಿಸಲಾಗಿದೆ. ವಾಸ್ತವದಲ್ಲಿ ಧರ್ಮವು ಆಯಾ ನಾಡಿನ ಜನರ ಸಾಮಾಜಿಕ-ಆರ್ಥಿಕ ಜೀವನದ ಕಥನವೇ ಆಗಿದೆ. ಅದು ಜನರ ದಿನನಿತ್ಯದ ಬದುಕಿನ ಭಾಗವಾಗಿ ರೂಪಗೊಂಡಿದೆ. ಕರ್ನಾಟಕದ ಧರ್ಮಗಳು ಎಂದರೆ ಇಲ್ಲಿ ಬೇರೆ ಬೇರೆ ಧರ್ಮಗಳು. ಪಂಥಗಳು, ಆರಾಧನೆ ಸ್ಥಳಗಳು, ಮಠ ಪೀಠಗಳು ಮತ್ತು ಆಚರಣೆಗಳಾಗಿವೆ.

ಬಹು ಸಂಖ್ಯೆಯ ಜನ ಮಠ-ಪೀಠಗಳಿಗೆ ನಡೆದುಕೊಳ್ಳುತ್ತಾರೆ. ಮೂಲತಃ ಗುರು ಯತಿಗಳಿದ್ದ ಈ ಜಾಗಗಳು ಮುಂದೆ ಮಠಗಳಾದವು. ಈ ಮಠಗಳಲ್ಲಿ ಗುರು ಶಿಷ್ಯ ಪರಂಪರೆ ಇದ್ದು. ಮಠದ ನಿರ್ವಹಣೆಗೆ ಆಸ್ತಿ ಇರುತ್ತದೆ. ಮುಖ್ಯವಾಗಿ ಆಯಾ ಜಾತಿ ಮತದ ಸಮುದಾಯಗಳು ಮಠಕ್ಕೆ ಭಕ್ತರಾಗಿ ನಡೆದುಕೊಳ್ಳುತ್ತಾರೆ. ಇಂಥ ಮಠಗಳು ಗಬ್ಬೂರಿನಲ್ಲಿ ಸುಮಾರು ಏಳು ಮಠಗಳಿದ್ದವೆಂದು

ಹೇಳಲಾಗುತ್ತಿದ್ದರೂ, ಅವರಲ್ಲಿ ಬೂದಿಬಸವೇಶ್ವರ ಮಠ ಮತ್ತು ಬಿಚ್ಚಾಲಿ ಮಠ ಈಗ ಪ್ರಚಲಿತದಲ್ಲಿವೆ. ಇನ್ನುಳಿದ ಐದು ಮಠಗಳು ಯಾವುವೆಂದರೆ ಚಿಕ್ಕಮಠ, ಹಿರೇಮಠ ಮುತ್ತಿನ ಪೆಂಡಿನಮಠ, ಗಾಂಜಗುಡಿ ಮಠ ಮತ್ತು ಆದನಾ ಮಠ.

ಬೂದಿ ಬಸವೇಶ್ವರ ಮಠ : ಬೂದಿಬಸವೇಶ್ವರ ಮಠವು ಶೈವ ಮಠದವಾದ ಕಾಶೀಪೀಠದ ಉಪಪೀಠವಾಗಿದೆ ಈ ಮಠಕ್ಕೆ ಸುಮಾರು ೮೦೦ ವರ್ಷದ ಇತಹಾಸವಿದೆಂದು ಹೇಳುತ್ತಾರೆ. ಆದರೂ ಸ್ಪಷ್ಟ ದಾಖಲೆಗಳು ದೊರೆತಿಲ್ಲ. ಇಲ್ಲಿಯ ಸ್ವಾಮಿಗಳು ವಂಶ ಪರಂಪರೆಯಾಗಿ ಪೀಠಾಧಿಪತಿಗಳಾಗುತ್ತಾರೆ. ಈಗಿರುವ ಸ್ವಾಮಿಗಳು ೮ ನೇ ಪೀಠಧಿಪತಿಗಳಾಗಿದ್ದು, ಇದಕ್ಕೂ ಮೊದಲು ೭ ಜನ ಸ್ವಾಮಿಗಳು ಪೀಠಧಿಪತಿಗಳಾಗಿದ್ದಾರೆ. ಶ್ರೀ ಶಾಂತಮೂರ್ತಿ ಶಿವಾಚಾರ್ಯ, ಶ್ರೀ ಬೂದಿಬಸವೇಶ್ವರ ಶಿವಾಚಾರ್ಯ ಎಂಬ ಪರ್ಯಾಯ ನಾಮಗಳೊಂದಿಗೆ ಪೀಠಧಿಕಾರ ನಡೆದಿದೆ.

ಮೊದಲು ಬೂದಿಬಸವೇಶ್ವರ ಸ್ವಾಮಿಗಳು ಮಲೆನಾಡು ಪ್ರದೇಶದಿಂದ ಸಂಚಾರ ಮಾಡುತ್ತಾ ಶರಣರ ತತ್ವಗಳನ್ನು ಪ್ರಸಾರ ಮಾಡುತ್ತಾ ದೇವದುರ್ಗಕ್ಕೆ ಬಂದು ನೆಲೆಸಿದ್ದರು. ಇದಕ್ಕೆ ಸಾಕ್ಷಿಯಾಗಿ ದೇವದುರ್ಗದಲ್ಲಿ ಬೂದಿಬಸವೇಶ್ವರ ಮಠವಿದೆ. ಗಬ್ಬೂರಿನ ಉರಕಡ್ಲಿಯ ಮನೆತನದವರು ಗಬ್ಬೂರಿಗೆ ಸ್ವಾಮಿಗಳನ್ನು ಬರಮಾಡಿಕೊಂಡುರು ಎಂದು ನಮಗೆ ಮೌಖಿಕ ಆಧಾರದಿಂದ ತಿಳಿದುಬರುತ್ತದೆ. ಒಟ್ಟನಲ್ಲಿ ಬೂದಿಬಸವೇಶ್ವರ ಸ್ವಾಮಿಗಳ ೭ ಗದ್ದುಗೆಗಳು ಇಂದು ಗಬ್ಬೂರಿನಲ್ಲಿ ಕಾಣಬಹುದು. ೫ ನೇ ಪೀಠಧಿಪತಿಗಳಾದ ಶ್ರೀ ಶಾಂತಮೂರ್ತಿಶಿವಾಚಾರ್ಯ ಸ್ವಾಮಿಗಳ ಕೈ ಮೇಲೆ ಈಗಿನ ಮಠವೂ ನಿರ್ಮಾಣವಾಗಿದೆಯೆಂದು ತಿಳಿದುಬರುತ್ತದೆ.

ಒಂದು ದಿನ ಸಾಯಂಕಾಲ ವೃದ್ದೆಯೋರ್ವಳ ರೋಧನ ಕೇಳಿ ಬರುತ್ತಿತ್ತು. ಅದು ಚೆಲುವಾದಿ ಚೆನ್ನಮ್ಮನ ಮನೆಯೊಳಗಿಂದ. ಆಗ ಅಲ್ಲಿ ಬಂದ ಸ್ವಾಮಿಗಳು ತಾಯಿ ಎಂದು ಕರೆದರು. ಅಳುತ್ತಾ ಹೊರಬಂದಳು ಚೆನ್ನಮ್ಮ. ಆಗ ಸ್ವಾಮಿಗಳು ಯಾಕೆ ತಾಯಿ ಅಳುತ್ತೀ ಎಂದು ಕೇಳಿದಾಗ, ಯಪ್ಪಾ ಏನು ಹೇಳಲಿ ನನ್ನ ಸಂಕಟ ನನಗಾರು ದಿಕ್ಕಿಲ್ಲ ಪರದೇಶಿ ಇದ್ದದೊಂದೆ ಹೋರಿ ಬಸವ ಮುದ್ದಾಗಿ ಸಾಕಿ ಬೆಳಸಿದ್ದಿ. ಇಂದು ಆ ಬಸವ ಸತ್ತು ಹೋಗಿದೆಂದು ಹೇಳಿದಳು. ಆಗ ಆ ಬಡವಿಯ ಚಿಕ್ಕ ಚೊಕ್ಕವಾದ ಹಳೆಯ ಮನೆ ಅಂಕಣದಲ್ಲಿ ಬಸವ ಹೊಟ್ಟಿಯುಬ್ಬಿ ಸತ್ತಿದ್ದ ಅಚ್ಚ ಬಿಳಿಯ ಬಣ್ಣದ ಮುದ್ದು ಮುದ್ದಾದ ಬಸವ ಒದ್ದಾಡಿ ಸತ್ತಿದ್ದರಿಂದ ಅವನ ಮೈಯೆಲ್ಲಾ ಸೆಗಣಿ, ಉಚ್ಚಿಯ ಬಣ್ಣ ಮತ್ತಿಕೊಂಡಿತ್ತು. ಆಗ ಸತ್ತ ಬಸವನ ಮೇಲೆ ಸ್ವಾಮಿಗಳು ತುಂಬಿದ ಕೊಡ ನೀರನ್ನು ಮೈಮೇಲೆ ಚಿಮ್ಮಿಸಿ, ಜೋಳಿಗೆಯಿಂದ ಒಂದಿಷ್ಟುಬೂದಿಯನ್ನು ತೆಗೆದು, ಅದರ ಮೈತುಂಬ ಸವರಿ 'ಏಳು ಬಸವಾ' ಎಂದು ಡುಬ್ಬ ಚಪ್ಪರಿಸಿದರು. ಮಲಗಿತ್ತೇನೋ ಎಂಬುವಂತೆ ಬಸವ ದಿಗ್ಗನೆ ಎದ್ದು ನಿಂತಿತ್ತು ಬಸವ.

[illegible]

ಸತ್ತು ಹೋರಿಯನ್ನು ಹೊತ್ತೊಯ್ಯಲು ಬಂದ ಮಾದರ ಮಂದಿ ಕೇಳಿದರು ಯವ್ವಾ ಎಲ್ಲದೆ ಹೋರಿ ತೋರಿಸು ಎಂದು ಕೇಳಿದಾಗ ಆ ಮುದುಕಿ ಚೆನ್ನಮ್ಮ ಬದುಕಿದ ಬಸವನನ್ನು ತೋರಿಸಿದಳು. ಆಗ ಆ ಮಾದರ ಮಂದಿ ಏನವ್ವಾ ನೀನು ಹೇಳೋದು, ಹೋರಿ ಸತ್ತಾದ ಅಂತ ಹೇಳಿ ಕಳಿಸಿದ್ದೀ. ಒಯ್ಯಾಕ ಅಂತ ನಾವೇ ಬಂದ್ರೆ, ಬದುಕಿದ ಹೋರಿಯನ್ನು ತೋರಿಸ್ತಿ. ನಿನಗೇನು ಅರವೋ ಮರವೋ ಎಂದು ಕೇಳಿದರು ಮಾದರ ಮಂದಿ. ಆಗ ಆ ಮುದಕಿ ಹೇಳಿದಳು ಇಲ್ಲಪ್ಪ ಹೋರಿ ಸತ್ತಿತ್ತು ಖರೆ, ಆದರೆ ಆ ನಮ್ಮಪ್ಪ ಶರಣು ಬಂದು ಬದುಕಿಸಿದ ಎಂದು ಹೇಳಿದಳು ಮುದುಕಿ. ಇದನ್ನು ಕೇಳಿದ ಮಾದರಮಾಂದಿಗೆ ಆಶ್ಚರ್ಯವಾಯಿತು. ಆಗ ಈ ಜನರೆಲ್ಲಾ ಸೇರಿ ಆ ಶರಣನ ಹತ್ತಿರ ಹೋಗಿ, ತಾತಾ ನಿಮ್ಮ ಹೆಸರು, ಏನು ನಿಮ್ಮದು ಯಾವ ಊರು, ನಿಮ್ಮ ಗುರಿಯೇನು ಹೀಗೆ ಮುತಾದ ಪ್ರಶ್ನೆಗಳನ್ನು ಕೇಳಿದರು. ಆಗ ಸ್ವಾಮಿಗಳು ನನಗೆ ಹೆಸರಿಲ್ಲ, ನಾಮ ರೂಢಗಳು ದೇಹಕ್ಕಲ್ಲದೆ. ಆತ್ಮನಿಗಲ್ಲ. ನಾಮ ರೂಪ ಕ್ರಿಯೆಗಳಿಗೆ ಒಳಗಾದವನಲ್ಲ ನಾನು, ಶಬ್ದ, ರೂಪ, ರಸ, ಗಂಧ, ಸ್ಪರ್ಶಗಳಿಲ್ಲದವನು ಮತ್ತು ಇದ್ದದ್ದೇ ಊರು. ಬರುವುದೊಂದು ಊರು, ಹೋಗುವುದೊಂದು ಊರು ನಡುವೆ ಇರುವಷ್ಟು ಕಾಲದ ನಾಲ್ಕುದಿನದ ಬಾಳುವೆಯ ಊರೊಂದು(ಶ್ರೀ ಬೂದಿಬಸವನ ಚರಿತಾಮೃತ- ಶ್ರೀ ಮುಕ್ಕಣ್ಣ ಕರಿಗಾರ ಪು.ಸಂ.೯.೧೦).

ಇನ್ನೂ ಬ್ರಹ್ಮ ಸಾಕ್ಷಾತ್ಕಾರ. ಲೋಕೋದ್ಧಾರ ನನ್ನ ಗುರಿ ಎಂದು ನುಡಿದರು ಶರಣರು. ಇದೆನ್ನೆಲ್ಲಾ ಕೇಳಿದ ಆ ಜನರು ಹೆಸರಿಲ್ಲದೆ ಇವರನ್ನು ಏನೆಂದು ಕರೆಯುವುದೆಂದು ಜನ ಚರ್ಚಾಮಗ್ನ ರಾದರು ಬೂದೆಪ್ಪ ಎಂದರಾಯಿತು. ಬೂದಿ ಮಹಿಮೆಯ ಹೆಸರನ್ನು ಒಬ್ಬ ಸೂಚಿಸಿದರೆ ಮತ್ತೊಬ್ಬನು ಇನ್ನೊಂದು, ಮಗದೊಬ್ಬನು ಮತ್ತೊಂದು ತಮತಮಗೆ ತೋಚಿದ ಹೆಸರುಗಳನ್ನು ಸೂಚಿಸಲಾರಂಭಿಸಿದರು. ಆ ಸನ್ಯಾಸಿಯನ್ನು ಏನೆಂದು ಕರೆಯುವುದೆನ್ನುವ ವಿಷಯ ಒಮ್ಮತಕ್ಕೆ ಬರಲಾಗಲಿಲ್ಲ. ಆ ಗುಂಪಿನಲ್ಲಿದ್ದ ಬೀರಪ್ಪ ಎಂಬುವನೂ ತನ್ನದೊಂದು ಸಲಹೆ ನೀಡಿದ. ತಾತನವರು ಬೂದಿ ಚೆಲ್ಲಿ ಸತ್ತು ಹೋಗಿರುವ ಬಸವನನ್ನು ಎಬ್ಬಿಸ್ಯಾರ, ಅದಕ್ಕೆ ಬೂದಿ ಮತ್ತು ಬಸವ ಎಂದು ಕೂಡಿಹಾಂಗ ಬೂದಿಬಸವ ಅಂದರಾಯಿತು. ಇದು ಎಲ್ಲಾರಿಗೂ ಸರಿ ಎನಿಸಿತು. ಹೌದುದು ಬೂದಿಬಸವ ಎಂದು ಕರೆಯೋಣ. ಶಿವ, ಶಿವ ಮಹಾದೇವ ಬೂದಿಬಸವ ಮಹಾಯೋಗಿಗೆ ಜಯವಾಗಲಿ ಎಂದು ಜಯಘೋಷ ಮಾಡಿದರು. ಅಂದಿನಿಂದ ಸ್ವಾಮಿಗಳಿಗೆ ಬೂದಿಬಸವ ಎಂಬ ನಾಮ ಬಂದಿತ್ತು. ಮತ್ತೆ ಗುಂಪಿನಲ್ಲಿದ್ದ ಭಕ್ತನೊಬ್ಬ ಕೇಳಿದ ತಾತಾ ಎಲ್ಲಾರಿಗೂ ಬೂದಿ ಕೊಡುತ್ತಿಯಲ್ಲಾ, ಅಂಥಾದ್ದು ಏನಾದ ಬೂದಿನೋಳಗ ಎಂದು ಕೇಳಿದಾಗ ಸ್ವಾಮಿ ನಗುನಗುತ್ತಾ ಹೇಳಿದರು. ತಮ್ಮ ಈ ಬೂದಿಸಣ್ಣದಲ್ಲೋ ಶಿವನಿರುವುದೇ ಬೂದಿಯೊಳಗೆ, ಶಿವನು ಬೂದಿಬಡಕನಲ್ಲವೇನು? ಶಿವನಿರುವು ದಾದರೂ ಎಲ್ಲಿ? ಊರ ಸುತ್ತ ಹೆಣಗಳನ್ನು ಸುಡುವ ಕಾಡು ಸುಡುಗಾಡಿನಲ್ಲಪ್ಪಾ ಶಿವನು

ಬಡಿಮಕೊಳ್ಳುವ ಈ ಬೂದಿಗಿಂತ ಯಾವುದು ದೊಡ್ಡದಿದೆ. ಜಗತ್ತಿನಲ್ಲಿ ಶಿವನಿಗೆ ಪ್ರಿಯವಾದ ಬೂದೆಯೇ ಶಿವಶರಣರ ಅಸ್ತ್ರ ಆಸ್ತಿ.

ಆಗದುದು ಆಗುವುದು ಬೂದಿಯಿಂದ
ಬೇಗ ಬೇಸರಿಕೆಗಳಿವುವು ಬೂದಿಯಿಂದ
ಬಾಗಿ ಬರುವುವು ಧನ-ಕನಕ ಸಿರಿ ಸಂಪತ್ತಗಳೇ ಬೂದಿಯಿಂದ
ರೋಗ ಹೋಗುವವು. ಯೋಗ ಫಲಿಸುವವು
ತ್ಯಾಗ ಬಲಿಯುವುದು, ಸಕಲವು ಸಿದ್ದಗೊಂಡಿಹುದೇ ಬೂದಿಯಲಿ
ರಾಗದಿಂದೊಲಿದುಶಿನಿತ್ತಹ ಕಾಣ್ಕೆಯೀ ಬೂದಿ ಜಗದಾದ ಬೂದಿ

ಎಂದು ಮಹಿಮೆಯನ್ನು ಹಾಡಿದರು. ಆಗ ಈ ಭಕ್ತ ಅಸಾಧ್ಯವಾದುದು ತಾತಾ, ನಿನ್ನ ಬೂದಿಯಲೀಲೆ ಎಂದು ಪ್ರಣಾಮಗೈದ(ಶ್ರೀ ಬೂದಿಬಸವ ಚರಿತಾಮೃತ- ಶ್ರೀ ಮುಕ್ಕಣ್ಣ ಕರಿಗಾರ ಪು.೧೨,೧೪).

ಗಬ್ಬೂರು ಜಾತ್ರೆಗೆ ಸುತ್ತ ಹತ್ತಾರ ಕಡೆಯಿಂದ ಅಸಂಖ್ಯಾತ ಭಕ್ತರುಗಳಾಗಮಿಸಿ. ದರ್ಶನಾಶೀರ್ವಾದ ಪಡೆಯುಲಾರಂಭಿಸಿದರು. ಬೂದಿಬಸವನ ಕೀರ್ತಿ ಹೆಚ್ಚಿದಂತೆ ಶಿವನ ಮಹಿಮೆ ಹರಡತೊಡಗಿತು. ದಿಕ್ಕು ದಿಕ್ಕುಗಳಿಗೆ ಜನ ನಿರ್ಭಿತಿಯಿಂದ ಶಿವಪೂಜೆ, ಅರ್ಚನೆಗಳನ್ನು ಮಾಡತೊಡಗಿದರು, ಗುಡಿ ಗುಂಡಾರಗಳು, ಸಿಂಗಾರಗೊಂಡವು. ಬಂಗಾರವರ್ಣದ ಕಲಶಗಳಿಂದ ಪರಿಶೋಭಿತಗೊಂಡವು. ಮಂಗಳವಾದ್ಯಗಳು ಮುಳಗಲಾರಂಭಿಸಿದವು. ಶಾಸ್ತ್ರ, ತರ್ಕ, ವಿಚಾರ ಅನುಭವ ಗೋಷ್ಠಿಗಳು ನಿರಾಂತಕವಾಗಿ ನಡೆಯಲಾರಂಭಿಸಿದವು.

ಗಬ್ಬೂರಿನಲ್ಲೂ ಇನ್ನಿಲ್ಲದ ಸಡಗರ, ಶಿವರಾತ್ರಿಯ ಸಂಭ್ರಮ ಒಂದೆಡೆಯಾದರೆ ಆ ಊರ ಜಾತ್ರೆಯ ವೈಭವ ಮತ್ತೊಂದೆಡೆ. ಹತ್ತಾರು ದಿನಗಳ ಹಿಂದೆಯೇ ಅಲಂಕೃತಗೊಂಡಿತು. ಊರುಕೇರಿ, ತಳಿರು-ತೋರಣಗಳಿಂದ ಸಿಂಗಾರವಾದ ಮನೆಗಳು ಸುಣ್ಣ-ಬಣ್ಣಗಳಿಂದ ಕಂಗೊಳಿಸುವ ಗೋಡೆಗಳು ಸಾಲಂಕೃತ ದೀಪಗಳಿಂದ ಸ್ವಾಗತಿಸುವ ಬೀದಿಗಳು. ಆ ಊರಿನಲ್ಲೆಡೆ ಕಾಣುತ್ತಿದ್ದ ದೃಶ್ಯ ಮಠದಲ್ಲಿಯೂ ಅಂದು ವಿಶೇಷವಾದ ಪೂಜೆ, ತೇರನ್ನು ಎಣ್ಣೆ ಬಳಿದು ನಯಗೊಳಿಸಿ ಮಾವಿನ ತೋರಣಗಳಿಂದ ಅಲಂಕರಿಸಿ ಬಾಳೆಯ ದಿಂಡುಗಳನ್ನು ಕಟ್ಟಿ ಸಿಂಗರಿಸಲಾಗಿತ್ತು. ತುಟ್ಟ ತುದಿಗೆ ಕಳಸ ಸಾಯಂಕಾಲ ಆರುಘಂಟೆ, ರಥೋತ್ಸವದ ಸಿದ್ದತೆ ನಡೆದಿದೆ. ಹತ್ತಾರು ಸಾವಿರ ಜನ ಬಂದಿದ್ದಾರೆ. ಮಠದಸುತ್ತ ಎಲ್ಲಿ ನೋಡಿದರೂ ಜನ ಕಂಡೆಯಲ್ಲಿ ಕಾಣುವವರು. ಎತ್ತು ಬಂಡಿಗಳು ಕಾಯಿ-ಹರಕೆಗಳಿಂದ ಭಕ್ತಿ ಪರವಶರಾದ ಜನಸ್ತೋಮ ಇದ್ದಕ್ಕಿಂದಂತೆ ನಿಜಾಮನ ದಂಡಿನಾಗಮನ, ಕುದುರೆ, ಆನೆ ಒಂಟೆಗಳನೇರಿ ಬಂದರು ನಿಜಾಮ ಆಯುಧಧಾರಿ ಭಟ್ಟರು ನೋಡುತ್ತಿದ್ದ ಜನಕ್ಕೆ ಭಯ ಭೀತಿಯಾವರಿಸಿತು. ಏನೋ ಅಪತ್ತು ಕಾದಿದೆ ಎಂದು ಕೊಂಡರು. ಸಾವಿರ ಸಂಖ್ಯೆಯ ನಿಜಾಮನ ಸೈನಿಕರು ಮಠದ

ಪ್ರಾಂಗಣವಲ್ಲಿಬೀಡು ಬಿಟ್ಟರು. ನಿಜಾಮನ ಪ್ರತಿನಿಧಿ ನೇರವಾಗಿ ಮಠದೊಳಗೆ ನಡೆದ ತೇರನ್ನಳೆಯುವ ಸಿದ್ಧತೆಯಲ್ಲಿ ಕಾವಿಧರಿಸಿ ಕುಳಿತದ್ದರು. ಬೂದಿಬಸವನ ಸ್ವಾಮಿಗಳು ನಿಜಾಮನ ಪ್ರತಿನಿಧಿಯು ನೀನೇನೋ ತೇರನೆಳೆಸುವ ಜಂಗಮ. 'ತೇರನ್ನೆಳೆಯಕೂಡದು ಇದು ನಿಜಾಮರ ಆಜ್ಞೆ' ಎಂದು ಹೇಳಿದನು(ಶ್ರೀ ಬೂದಿ ಬಸವನ ಚರಿತಾಮೃತ- ಶ್ರೀ ಮುಕ್ಕಣ್ಣ ಕರಿಗಾರ. ಪು.ಸಂ.೬೭.೪೧).

ಅದಾರಿಂದಲೂ ಸಾಧ್ಯವಿಲ್ಲ. ಶಿವಶರಣನಾರಿಗೂ ಅಂಜುವುದಿಲ್ಲ. ನಿಜಾಮನಾದರೇನು, ಚಕ್ರವರ್ತಿಯಾದರೇನು, ಶಿವಶರಣರನಿಗೆ ಯಾರ ಹಂಗು ಅಳುಕುಗಳಿಲ್ಲ. ಶಿವನಿಗಲ್ಲದೆ ಮತ್ತಾರೆಗೂ ತಲೆಬಾಗದು ಶಿವಶರಣರು ತೇರಿನ ಉತ್ಸವ ಯಾವ ಕಾಲಕ್ಕೂ, ಯಾವ ಕಾರಣಕ್ಕೂ ನಿಲ್ಲದೆಂದು ಗುಡಗಿದರು ಸ್ವಾಮಿಗಳು. ಅಗ್ನಿಯನ್ನು ಉಗುಳುವಂತಿದ್ದ ಕಣ್ಣುಗಳು ಕೋಪದಿಂದ ಕುದಿಯುತ್ತಿರುವ ಸ್ವಾಮಿಯ ಮುಖವನ್ನು ಕಂಡು ನಿಜಾಮನ ಪ್ರತಿನಿಧಿಗೆ ಹೆದರಿಕೆಯಾಯಿತು. ಇಂದು ತೇರನ್ನು ಎಳಯಲೇಬೇಕು ಎಂದು ಮತ್ತೆ ಸ್ವಾಮಿಗಳು ಗುಡುಗಿದರು. ಆಗ ನಿಜಾಮನ ಪ್ರತಿನಿಧಿಗಳು ನಾವು ಎಳೆಯುತ್ತೇವೆಂದರು. ತೇರನ್ನು ಎಳೆಯ ತೊಡಗಿದರು. ಸಾವಿರ ಸಾವಿರ ಸೈನಿಕರು ಎಳೆದರು. ಜಗ್ಗಲಿಲ್ಲ, ಜುಮ್ಮೆನ್ನಲಿಲ್ಲ ತೇರು. ಸರಿ ಕುದುರೆಗಳನ್ನು ಕಟ್ಟದರು. ಆನೆ, ಒಂಟೆಗಳನ್ನು ಕಟ್ಟಿದರು. ಬಗ್ಗದೆ ನಿಶ್ಚಲವಾಗಿ ನಿಂತಿತ್ತು ತೇರು. ಬಳಿಯಿರುವ ಅಚಲ ಪರ್ವತದಂತೆ ಗಂಟೆಗಟ್ಟಲೆ ಪ್ರಯತ್ನಿಸಿ ಸೋತು ನಿರಾಶೆಗೊಂಡಿತು ನಿಜಾಮನ ಸೇನೆ, ಉಪಾಯಗಾಣದೆ ಅಪಾಯವನ್ನರಿತ ನಿಜಾಮನ ಪ್ರತಿನಿಧಿ ಸ್ವಾಮಿಗಳು ತಾವೇ ಈ ತೇರನ್ನೆಳೆಸಬಹುದು ಎಂದು ಹೇಳಿದನು.

ಭಕ್ತರಿಗೆ ಭಯಗೊಳ್ಳದಿರುವಂತೆ ಸಂದೇಶ ಕಳುಹಿಸಿದ ಸ್ವಾಮಿ ತೇರಿಗೆ ಕಟ್ಟದಮಿಣೆಯನ್ನು ಬಿಚ್ಚುವಂತೆ ಆಜ್ಞಾಪಿಸಿದನು. ಜನರಿಗೆ ಆಶ್ಚರ್ಯ ಆದರೂ ಅಜ್ಞೆಯನ್ನು ಪಾಲಿಸಬೇಕಲ್ಲ. ಶಿಷ್ಯರೊಂದಿಗೆ ಹೊರಬಂದ ಬೂದಿಬಸವಸ್ವಾಮಿ ಆವೇಶದ ಮೂರ್ತಿಯಾಗಿದ್ದರು. ನೋಡಿರಿಂದುಶಿವನಾಟ, ಶಿವಶರಣರ ಮಾಟ ಎನ್ನುತ್ತಾ ಶಿಷ್ಯ ಭೀರಪ್ಪನ ಕೈಯಲ್ಲಿಯ ಕಾಯೊಂದನ್ನು ತೆಗೆದು ತೇರಿಗೆ ಹೊಡವರು. ಬಾ ಎಂದು ಕರೆದರು. ಸಾಗಿತು ತೇರು--- ತೇರು ಸಾಗಿತು. ನಿಜಾಮನ ಸೇನೆ ಬೆರಗಾಗಿ ನೋಡಿತು ಈ ಅದ್ಭುತ ಕಂಡು ಭಕ್ತ ಜನ ಹರಸಿ ಹಾಡಿತು. ನಿಶ್ಚಲವಾಗಿದ್ದ ತೇರು ಚಲಿಸತೊಡಗಿತು. ಜಡದಲ್ಲಿ ಜಂಗಮವು ಒಡ ಮೂಡಿತ್ತು. ಮಿಣಿ ಇಲ್ಲದೆ ತೇರು ಎಳೆದಿತ್ತು ಸ್ವಾಮಿಯವರು ಮುಂದೆ ಮುಂದೆ ನಡದಂತೆ ಹಿಂದೆ ಹೋಗುತ್ತಿತ್ತು ತೇರು. ಗುರುವನ್ನು ಹಿಂಬಾಲಿಸುವ ಶಿಷ್ಯನಂತೆ, ಜಯಘೋಷ ಕೂಗುತ್ತಾ ಜನ ಹರ್ಷೋದ್ಗಾರ ಮಡುತ್ತಿದ್ದರು. ಎದುರು ಪಾದಕ್ಕೆ ಹೋಗಿ ಮರಳಿ ಬಂದಿತು. ಮಿಣಿಯಿಲ್ಲದೆ ಎಳೆದ ತೇರು ಗಣನೆಗೆಟುಕದ ಗಣನಾಯಕನ ತೇರು. ಭಕ್ತಿಯುನ್ಮಾದದಲ್ಲಿ ನಮಿಸಿ ಜನ ಜಾತ್ರೆ ಮಾಡಿ ಹೊರಟಿತು. ನಿಜಾಮಸೇನೆ ಕತ್ತಲಲ್ಲಿ ಇರುಳೆಲ್ಲಾ ಹೊರಳಾಡಿತು. ನಂತರ ಅವರು ಸ್ವಾಮಿಯುವರನ್ನು ಕಂಡು ಸಾಷ್ಟಾಂಗವೆರಗಿ ಅಪರಾಧವಾಯಿತೆನ್ನಿಂದ ಮನ್ನಿಸಿ ಎಂದು ಬೇಡಿ

ಮಿಣೆಯಿಲ್ಲದೆ ತೇರು ಎಳೆಯಿಸಿದ ಅದ್ಭುತ ಲೀಲೆಗಾಗಿನಿಜಾಮ ಸರಕಾರವು ನಿಮಗೆ ಇನಾಮು ಕೊಡುತ್ತದೆ. ಇಗೋ ಈ ಕುದುರೆ ಎಲ್ಲಿಯವರೆಗೆ ಓಡುವುದೋ ಅಲ್ಲಿಯ ವರೆಗೆನ ಭೂಮಿ ನಿಮ್ಮದು ಎಂದುಹೇಳಿ ಒಂದು ಬಿಳಿಯ ಬಣ್ಣದ ಅಶ್ವವನ್ನು ಓಡಿಸಿದರು. ನಾಗಾಲೋಟದಿಂದ ಓಡಿದ ಕುದುರೆ ೨೪ ಕೊರಗಿನಷ್ಟು ಓಡಿಯಾದ ಮೇಲೆ ನಿಂತಿತ್ತು. ಅಷ್ಟು ಭೂಮಿಯನ್ನು ನಿಜಾಮನ ಪ್ರತಿನಿಧಿ ಮಠದ ಹೆಸರಿನಲ್ಲಿ ಬರೆದು ಕೊಟ್ಟನು. ಈ ರೀತಿಯಾಗಿ ಬೂದಿಬಸವ ಸ್ವಾಮಿಗಳು ತಮ್ಮ ಪವಾಡವನ್ನು ತೋರಿಸಿದ್ದಾರೆ. ಇಂದಿಗೂ ಗಬ್ಬೂರಿನಲ್ಲಿ ನಿಜಾಮ ಸರಕಾರ ಕೊಟ್ಟ ಭೂಮಿಯನ್ನು 'ತೇರಿನ ಹೊಲ' ಎಂದೇ ಕರೆಯುತ್ತಾರೆ. ಬೂದಿಯ ಬಲದಿಂದ ಜನರ ರೋಗ, ಪಿಶಾಚಿಬಾದೆಗಳನ್ನು ಮಕ್ಕಳಿಲ್ಲದ ತಾಯಂದಿರಿಗೆ ಮಕ್ಕಳ ಭಾಗ್ಯವನ್ನು ಸರ್ವರೋಗಳಿಗೆ ಎಲ್ಲಾ ಇಷ್ಟಾರ್ಥಗಳಿಗೆ ಬೂದಿಯೇ ಕಲ್ಪವೃಕ್ಷವಾಗಿದೆ. ಇಲ್ಲಿ ಪ್ರತಿ ವರ್ಷವೂ ಮಾಘಮಾಸದ ಶುದ್ಧ ದ್ವಾದಶಿ ದಿನದಂದು ಬಹುದೊಡ್ಡ ಜಾತ್ರೆಯಾಗುತ್ತದೆ. ಜಾತ್ರೆಯ ಮೊದಲು ಸಾಮೂಹಿಕ ವಿವಾಹಗಳು, ಅಯ್ಯಚಾರ, ಹುಚ್ಚಯ್ಯ ಕಡುಬಿನ ಕಾಳಗ ಮುಂತಾದ ಅನೇಕ ಕಾರ್ಯಕ್ರಮಗಳು ಜರುಗುತ್ತವೆ. ಅಲ್ಲದೆ ಪ್ರತಿ ಅಮವಾಸ್ಯೆ ಹುಣ್ಣಿಮೆಗೆ ಶಿವಾನುಭವ ಗೋಷ್ಠಿ ಜರುಗುತ್ತವೇ ಮಠವು ಗಬ್ಬೂರಿನ ಸೂಗೋರೇಶ್ವರ ಬೆಟ್ಟದ ಕೆಳಭಾಗದಲ್ಲಿದೆ ಇಂದಿಗೂ ಈ ಮಠಕ್ಕೆ ಗಬ್ಬೂರಿನ ಸಕಲ ಸದ್ಭಕ್ತರು ನಡೆದುಕೊಳ್ಳುತ್ತಾರೆ.

೩. ಬಿಚ್ಚಾಲಿ ಮಠ : ಗಬ್ಬೂರಿನಲ್ಲಿರುವ ಮಠಗಳಲ್ಲಿ ಬೂದಿ ಬಸವೇಶ್ವರ ಮಠದಂತೆ ಬಿಚ್ಚಾಲಿ ಮಠವು ಒಂದಾಗಿದೆ. ಬಿಚ್ಚಾಲಿಯಲ್ಲಿ ಇದರ ಮೂಲ ಪೀಠ ವಿದ್ದು ಇಲ್ಲಿನ ಮಠವು ಉಪಪೀಠ ಅಥವಾ ಶಾಖಾ ಮಠವಾಗಿದೆ. ಇದು ೧೧೦೦೪ ಸಂಸ್ಥಾನವಾಗಿದೆ. ರಾಯಚೂರು ಜಿಲ್ಲೆಯ ವಿವಿಧ ಭಾಗಗಳಾದ ಮಠಾಮಾರಿ. ಕಲ್ಲೂರು, ಕುರ್ಡಿ, ರಾಯಚೂರು, ಗಬ್ಬೂರು. ಹೀಗೆ ಮುಂತಾದ ಕಡೆಗಳಲ್ಲಿ ಇದರ ಶಾಖಾ ಮಠಗಳಿವೆ. ಅದರಂತೆ ಗಬ್ಬೂರಿನಲ್ಲಿ ಕೂಡಾ ಒಂದು ಶಾಖಾ ಬಿಚ್ಚಾಲಿ ಮಠವಿದೆ. ಈ ಶಾಖಾಮಠಕ್ಕೆ ಕೂಡಾ ಸ್ವಾಮಿಗಳಿದ್ದು ಇದರ ಆಸ್ತಿ ಮತ್ತು ಕಾರ್ಯಗಳನ್ನು ನೋಡಿಕೊಂಡು ಹೋಗುವ ಕಾರ್ಯ ಇವರದಾಗಿದೆ. ಅಲ್ಲದೆ ಈ ಸ್ವಾಮಿಗಳು ಪ್ರವಚನ, ಪುರಾಣ, ಕೀರ್ತನಾ ಮುಂತಾದ ಕಾರ್ಯಕ್ರಮಗಳನ್ನು ಮಾಡುವ ಕಾರ್ಯ ಇವರದಾಗಿದೆ. ಈ ಮಠಕ್ಕೆ ಮೊದಲ ಗಬ್ಬೂರಿನ ಬಸಲಿಂಗಪ್ಪ ಎನ್ನವರು. ಚೆನ್ನವೀರ ಶಿವಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಜನಕೋಟಿಯ ಒಳತಿಗಾಗಿ ಹಲವಾರು ರಚನಾತ್ಮಕ ಕಾರ್ಯಗಳನ್ನು ಅಳವಡಿಸಿಕೊಂಡು ಸಮಸ್ತ ಮಾನವ ಜನಾಂಗದ ನೈತಿಕ ಮಟ್ಟವನ್ನು ಮೇಲೆತ್ತಲು ತಮ್ಮ ಜೀವನವನ್ನೇ ಸೆವಸಿರುವ ಮಠದ ಸ್ವಾಮಿಗಳು, ತಮ್ಮ ತಮ್ಮ ಮಠ ಮಾನ್ಯಗಳ ಮೂಲಕ ಅಭೂತ ಪೂರ್ಣವಾದ ನಾಡ ಸೇವೆಯನ್ನು ಗೈಯುತ್ತಿಲಿರುವರು. ಮಾಡಿದೆನೆಂಬುದು ಅವರ ಮನದಲ್ಲಿ ಹೊಳೆಯದೆ ವಿಶಿಷ್ಟವಾದ ವ್ಯಕ್ತಿತ್ವವನ್ನು ರೂಢಿಸಿಕೊಂಡು ಸಮಾಜ ಜೀವಿಗಳನ್ನು ಸನ್ಮಾರ್ಗದಲ್ಲಿ ತರಲು ಅವರಿಗೆ ಉಪದೇಶ ಮಾಡುತ್ತಾ

ಅವರು ತನು-ಮನ-ಧನಗಳನ್ನು ಸಮಾಜದ ಹಿತಕ್ಕಾಗಿ ನೀಡಲು ಪ್ರೇರೇಪಿಸುತ್ತಾ ಎಲ್ಲಾ ಕಾರ್ಯಗಳಿಗೆ ಚಾಲನೆ ನೀಡಿದ್ದಾರೆ. ಈ ಮಠವು ಮಹಾನಂದೀಶ್ವರ ದೇವಾಲಯದ ಮುಂದಿನ ಭಾಗದಲ್ಲಿದೆ. ಇದಕ್ಕೆ ಗಬ್ಬೂರಿನ ಸಮಸ್ತ ಜನಾಂಗವು ನಡೆದುಕೊಳ್ಳುತ್ತಾರೆ.

೩.೩. ಮಸೀದಿಗಳು

ಇಸ್ಲಾಂ ಧರ್ಮದ ಕುರುಹು ಆಗಿ ಗಬ್ಬೂರಿನಲ್ಲಿ ಅನೇಕ ಮಸೀದಿಗಳನ್ನು ಕಾಣಬಹುದು. ಈ ಎಲ್ಲಾ ಮಸಿದಿಗಳಲ್ಲಿ ಮೊಹರಂ ದಿನಗಳಲ್ಲಿ ದೇವರನ್ನು ಸ್ಥಾಪಿಸಿ ಅನೇಕ ದಿನಗಳವರೆಗೆ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ. ಮೊಹರಂ ಆಚರಣೆಯ ಅಂಗವಾಗಿ ಮಸಿದಿಗಳಲ್ಲಿ ಮೊಹರಂ ತುಂಬಾ ಸೊಗಸಾಗಿ ನಡೆಯುತ್ತದೆ. ಈ ದಿನಗಳಲ್ಲಿ ಮುಸ್ಲಿಂ ಭಾಂದವರು ಮೊಹರಂ ಪದಗಳನ್ನು ಆಡುತ್ತಾರೆ. ಈ ಹಾಡುಗಳನ್ನು ಕೇಳಿದಾಗ ಜನರಲ್ಲಿ ಪ್ರೀತಿ, ಪ್ರೇಮ, ಸಂತೋಷ ಸಂಭಮದ ಜೊತೆಗೆ ಹಿಂದೂ-ಮುಸ್ಲಿಂ ಎಂಬ ಬೇಧವಿಲ್ಲದೆ ನಾವೆಲ್ಲರೂ ಒಂದೇ ಎಂಬ ಐಕ್ಯತೆ ಮನೋಭಾವನೆಯುಂಟು ಮಾಡುತ್ತವೆ. ಈ ಹಾಡುಗಳು ಅಷ್ಟೆ ಅಲ್ಲದೆ, ಈ ಎಲ್ಲಾ ಮಸಿದಿಗಳಲ್ಲಿ ಗಂಧರಾತ್ರಿ ಮರುದಿನ 'ದಪನ್' ಎಂಬ ಸಣ್ಣ ಉತ್ಸವ ಆಚರಿಸುತ್ತಾರೆ. ಇಲ್ಲಿ ಅನೇಕ ವಿವಿಧ ವೇಷಗಳಿಂದ ಕುಣಿಯುವುದು. ಹಾಡುವುದು ಅಲ್ಲದೆ ವಿವಿಧ ಮನೋರಂಜನೆ ಜೊತೆಗೆ ಸಣ್ಣ ಜಾತ್ರೆಯ ತರಹ ಮಾಡುತ್ತಾರೆ. ಗಬ್ಬೂರಿನಲ್ಲಿ ಪ್ರಮುಖ ಮಸಿದಿಯೊಂದು ಇದ್ದು ಅದು ಅಂಕ್ರೆಮ ಪಾಷೆ ಮಸದಿಯಾಗಿದೆ.

ಅಂಕ್ರಮ ಪಾಷೆ ಮಸಿದಿ : ಈ ಅಂಕ್ರಮ ಪಾಷೆ ಮಸಿದಿಯಲ್ಲಿ ಅಂಕ್ರಮ ಸಾಬ್ ಎಂಬ ಪವಾಡ ಪವಾಡ ಪುರುಷನಿದ್ದು. ಈತನು ಜಲಸ್ತಂಭ ಮಾಡುತ್ತಿದ್ದನು. ಅಂದರೆ ಕೆರೆ, ಬಾವಿ, ನೀರನಲ್ಲಿ ಉದ್ದವಾಗಿ ಮಲಗಿ ಜಪ ಮಾಡುವುದು ಈತನ ದೈನಂದಿನ ಕಾರ್ಯವಾಗಿತ್ತು. ಅಲ್ಲದೆ ಮಸಿದಿಯಲ್ಲಿ ಈತ ಸಣ್ಣ ಹುಡುಗರಿಗೆ ಹಾವು ಕಡಿದರೆ ಮುಖ ಮಂತ್ರಿಸುವುದು, ಅಂತ್ರ ಮಂತ್ರ ಮುಂತಾದವುಗಳನ್ನು ಜಾತಿ ಭೇದವಿಲ್ಲದೆ ತನ್ನ ಕಾರ್ಯಗಳನ್ನು ಮಾಡುತ್ತಿದ್ದನು. ಊರೆಲ್ಲಿ ಒಮ್ಮೆ ಕೆಲವು ಜನರು ಪವಾಡವನ್ನು ಪರೀಕ್ಷಿಸಲು ಒಂದು ಕೋಣೆಯಲ್ಲಿ ಆತನನ್ನು ಇರಿಸಿ ಆ ಕೋಣೆಗೆ ಬಿಗ ಹಾಕಿದರಂತೆ. ಬಿಗ ಇದ್ದ ಹಾಗೆ ಇದ್ದು ಆ ಪವಾಡ ಪುರುಷ ಅಂಕ್ರಮ ಪಾಷ ಮಾತ್ರ ಹೊರಗಡೆ ಬಂದಿದ್ದನಂತೆ. ಇಂತಹ ಪವಾಡ ಪುರುಷ ಅಂಕ್ರೆಮ ಪಾಷನನ್ನು ಕುರಿತು ಹಂಪಣ್ಣಪ್ಪ ತನ್ನ ತತ್ವ ಪದಗಳಲ್ಲಿ ಈ ರೀತಿಯಾಗಿ ಹೇಳಿದ್ದಾನೆ.

"ದೇವರು ಹಾನೆ ಅಕರಾಮ ಸಾಹೇಬ ದೊಡ್ಡ ಪೀರ|
ಭಾವದಲ್ಲಿ ಭಜಸೂ ನೀ ಪೂರ ಎಂದು ಆಡಿದ್ದಾನೆ". (ಗಬ್ಬೂರು ಹಂಪಣ್ಣ)

ಈ ಅಂಕ್ರಮ ಪಾಷ ಮಸಿದಿಯಲ್ಲಿ ಅನೇಕ ಅವರ ಸಮಾಧಿಗಳಿದ್ದು ಈ ಮಸೀದಿಯಲ್ಲಿ ಹಂಪಿ ಹುಣ್ಣಿಮೆ ಆದ ೫ನೇ ದಿವಸಕ್ಕೆ ಉರಸು ಮಾಡಲಾಗುತ್ತದೆ. ಈ ಉರಸು ಅತಿ ವಿಜ್ರಂಭಣೆಯಿಂದ

ನೇರವೇರಿಸಲಾಗುತ್ತದೆ. ಈ ದಿನದೆಂದು ಊರಿನ ಎಲ್ಲಾ ಹಿಂದೂ-ಮುಸ್ಲಿಂ ಭಾಂವವರು ಕಾಯಿ ಸಕ್ರಿ ನೈವದ್ಯವನ್ನು ಕೊಡುವ ಸಂಪ್ರದಾಯ ಇಂದಿಗೂ ನಡೆದುಕೊಂಡು ಬಂದಿದೆ. ಇದು ಭೋಗೇಶ್ವರ ದೇವಾಲಯ ಪೂರ್ವ ಭಾಗದಲ್ಲಿದೆ. ಗಬ್ಬೂರಿನಲ್ಲಿ ಈ ಮಸೀದಿಯಲ್ಲದೆ ಇನ್ನೂ ಆರು ಮಸಿದಿಗಳು ಉಂಟು.

೩.೪. ಶಿಲ್ಪಕಲೆ

ಕರ್ನಾಟಕದ ಜನ ಹಲವು ಶತಮಾನಗಳಿಂದ ವಾಸ್ತುಶಿಲ್ಪ, ಚಿತ್ರ, ಸಂಗೀತ, ರಂಗಭೂಮಿ ಹಾಗೂ ಸಿನಿಮಾ ಮುಂತಾದ ಕಲೆಗಳಲ್ಲಿ ಮಾಡಿರುವ ಪ್ರಯೋಗ, ಸಾಧಿಸಿದ ಸಾಧನೆಗಳ ಚರಿತ್ರೆ ಸ್ವಾರಸ್ಯಕರವಾಗಿದೆ. ಈ ಕಲೆಗಳು ದುಡಿಯುವ ಜನರ ಬದುಕಿನೊಂದಿಗೆ ಅವಿನಾ ಸಂಬಂದ ಹೊಂದಿರುವುದು. ಒಂದು ಹಂತ ರಾಜಾಶ್ರಯಗಳಲ್ಲಿ ಸರ್ಕಾರದ ಪೋಷಣೆಗಳಲ್ಲಿ ಬೆಳೆಯುವುದು ಹಾಗೂ ಕರ್ನಾಟಕ ಸಂಸ್ಕೃತಿಯನ್ನು ರೂಪಿಸುವಲ್ಲಿ ವಹಿಸಿರುವ ಪಾತ್ರ ಗಮನಾರ್ಹವಾಗಿದೆ.

ಕರ್ನಾಟಕ ಇತಿಹಾಸದಲ್ಲಿ ರಾಯಚೂರು ಜಿಲ್ಲೆಗೆ ವಿಶಿಷ್ಟವಾದ ಸ್ಥಾನವಿದೆ. ಮೊದಲ ದಾಖಲೆಗಳಾದ ಅಶೋಕನ ಶಾಸನಗಳು ಮತ್ತು ಅದಕ್ಕೂ ಪೂರ್ವದ ಪ್ರಾಗೈತಿಹಾಸಿಕ ಅವಶೇಷಗಳು ಇಲ್ಲಿ ದೊರೆತಿವೆ. ಗಬ್ಬೂರು ಬೆಟ್ಟದಲ್ಲ ಕೊರೆದ ರೇಖಾಚಿತ್ರಗಳಾದ ಗೂಳಿ, ಚಿಂಕೆ, ಕೋಣಾ-ಕುಮರೆಯ ಹೆಜ್ಜೆಗಳು, ಗವಿಗಳು ಮುಂತಾದ ಚಿತ್ರಗಳು ಇಲ್ಲಿ ದೊರೆತಿವೆ. ಇವು ಗಬ್ಬೂರು ಕಲೆಗಳ ಬಹು ಪ್ರಾಚೀನ ನಿರ್ದೇಶನಗಳಾಗಿವೆ. ಮುಂದೆ ಅರಸು ಮನೆತನಗಳು ಅಧಿಕಾರವಧಿಯಲ್ಲಿ ಅನೇಕ ದೇವಾಲಯಗಳು, ನಿರ್ಮಾಣಗೊಂಡವು. ಕಲೆ, ನೃತ್ಯ, ಸಂಗೀತ ಮುಂತಾದ ಲಲಿತ ಕಲೆಗಳ ಬೆಳವಣಿಗೆಯಲ್ಲಿ ಪೋಷಕರ ಆಶ್ರಯದಾತರ ಪಾತ್ರ ಹಿರಿದು. ದೇವಾಲಯಗಳ ನಿರ್ಮಾಣಕ್ಕೆ ರಾಜರು ಕೊಟ್ಟಿರುವ ದಾನ ದತ್ತಿಗೆ ಇಲ್ಲಿಯ ಶಾಸನಗಳೇ ಸಾಕ್ಷಿ.

ಮೂರ್ತಿಶಿಲ್ಪ : ಗಬ್ಬೂರಿನ ದೇವಾಲಯಗಳಲ್ಲಿ ಹಾಗೂ ದೇವಾಲಯದ ಹೊರವಲಯಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಈ ಮೂರ್ತಿ ಶಿಲ್ಪವನ್ನು ಕಾಣಬಹುದು.

೧. ಮೇಲಶಂಕರ ದೇವಾಲಯದ ಮುಖಮಂಟಪ ಎರುಡ ಪಾರ್ಶ್ವಗಳಲ್ಲಿ ದ್ವಾರಪಾಲಕರಿದ್ದಾರೆ. ೬೦" ಎತ್ತರ ಮತ್ತು ೩೯" ಅಗಲವಿರುವ ಈ ಬೃಹದಾಕಾರದ ಉಬ್ಬು ಮೂರ್ತಿಶಿಲ್ಪಗಳು ಆಕರ್ಷಕವಾಗಿವೆ. ಈ ಮೂರ್ತಿಗಳು ಒಟ್ಟು ನಾಲ್ಕು ಕೈಗಳನ್ನು ಹೊಂದಿದ್ದು ಬಲ ಕೈಯಲ್ಲಿ ಗದೆ ಮತ್ತು ಡಮರು. ಎಡಗೈಯಲ್ಲಿ ಹಾವು ಮತ್ತು ಒಂದು ಕೈ ಮಂಗಲ ಹಸ್ತವಾಗಿದೆ. ಬಲಭಾಗದ ಮೂರ್ತಿಯಲ್ಲಿ ಎಡಕೈಗಳಲ್ಲಿ ಡಮರು ಮತ್ತು ಗದೆ ಬಲ ಕೈಗಳಲ್ಲಿ ಹಾವು ಹಾಗೂ

ಒಂದು ಕೈ ಮಂಗಲ ಹಸ್ತವಾಗಿದೆ. ಈ ಎರಡು ಮೂರ್ತಿಗಳು ಕಂಠಾಭರಣ, ಕಾಲ್ಗಡಗ, ಮುಂಗೈಯಲ್ಲಿ ರುದ್ರಾಕ್ಷಿ ಸರವನ್ನೂ ಧರಿಸಿವೆ.

ಮೇಲಶಂಕರ ದೇವಾಲಯದಗ ಒಳಗೆ ಬಲಗಡೆಯ ಕೊಷ್ಟದ ಕೆಳಗೆ ಬಳಪದಕಲ್ಲಿನ ಜಾತಿಗೆ ಸೇರಿದ ಗಣೇಶ ವಿಗ್ರಹವಿದೆ. ಅದು ೫೩" ಎತ್ತರ ಮತ್ತು ೪೨" ಅಗಲವಾಗಿದೆ. ಕೆಳಗೆ ಇಲಿಯ ಚಿಕ್ಕ ಶಿಲ್ಪವಿದೆ. ಇದರ ಪಕ್ಕದಲ್ಲಿ ಆಂಜನೇಯ ಮೂರ್ತಿಯಿದೆ. ಈ ಗುಡಿಯ ಮುಂದೆ ೨ ನಾಗ ಮೂರ್ತಿಗಳು ಹಾಗೂ ಒಂದು ಮನುಷ್ಯ ರೂಪದಲ್ಲಿರುವ ನಾಗದೇವತೆಯ ಮೂರ್ತಿ ಇದೆ. ಮತ್ತು ಗೋಪುರ ಮಂಟಪದಲ್ಲಿ ಶಿವಾ-ಪಾರ್ವತಿ ಹಾಗೆ ಋಷಿ ಮುನಿಗಳ ಮೂರ್ತಿಗಳು, ನಂದಿ ಮೂರ್ತಿಗಳು, ಇತರ ಸ್ತ್ರೀ ಮೂರ್ತಿಗಳು ಈ ದೇವಾಲಯದ ಪ್ರಮುಖ ಮೂರ್ತಿಶಿಲ್ಪಗಳಾಗಿವೆ.

೨. ಏಳು ಬಾವಿ ಬಸವಣ್ಣನ ಗುಡಿಯಲ್ಲಿರುವ ಮೂರ್ತಿಗಳು ಪಾಶ್ಚಿಮ ಅಭಿಮುಖವಾಗಿರುವ ಗರ್ಭಗುಡಿಯಲ್ಲಿ ದೊಡ್ಡ ನಂದಿ ಇದ್ದು. ಅದು ೬೧" ಎತ್ತರ, ೮೭" ಉದ್ದ ಮತ್ತು ೩೪" ಅಗಲವಾಗಿದೆ. ದೊಡ್ಡ ಗಂಟೆಗಳ ಸರವನ್ನು ಕೊರಳಲ್ಲಿ ಧರಿಸಿರುವ ಅದರ ಹಣೆಪಟ್ಟಿಯ ಬಹು ಸುಂದರವಾಗಿದೆ. ಎದುರಿಗಿರುವ ಗರ್ಭಗುಡಿಯಲ್ಲಿ ಶಿವನಿಂತ ಭಂಗಿಯ ಸುಂದರ ಶಿಲ್ಪವಿದೆ. ೫೩" ಅಗಲ, ೧೫" ಎತ್ತರ, ೨೩" ಉದ್ದದ ಪೀಠದ ಮೇಲೆ ನಿಂತಿರುವ ಈ ಶಿಲ್ಪವು ೪೮" ಎತ್ತರ ೨೫" ಅಗಲವಾಗಿದೆ. ಕರಿಶಿಲೆಯಲ್ಲಿರುವ ಈ ವಿಗ್ರಹಕ್ಕೆ ನಾಲ್ಕು ಕೈಗಳಿದ್ದು, ಅವೆಲ್ಲವೂ ಮುರಿದಿವೆ. ಶಿವನ ಬಲಕ್ಕೆ ನಂದಿ ಇದ್ದು ೩ ೧/೨ ಎತ್ತರ, ೬ ೧/೨ ಅಗಲವಾಗಿದೆ. ಶಿವನ ಎಡಕ್ಕೆ ಭೃಂಗಿ ಇದ್ದಾನೆ. ಶಿವನು ಕಂಠಾಭರಣ ಕಾಲ್ಗಡಗ ಸೊಂಟ ಪಟ್ಟಿಗಳನ್ನು ಧರಿಸಿದ್ದಾನೆ. ಅಂತರಾಳದ ದ್ವಾರದಲ್ಲಿ ಗಜಲಕ್ಷ್ಮಿ ಶಿಲ್ಪ ಕೆಳಗಡೆ ದ್ವಾರಪಾಲಕರ ಮೂರ್ತಿಗಳೆಲ್ಲದೆ ಲಲಾಟ ಬಿಂಬದಲ್ಲಿ ತೋರಣ ಶಿಲ್ಪವು ತುಂಬಾ ಆಕರ್ಷಕವಾಗಿದ್ದು, ಇದರಲ್ಲಿ ಚಿಕ್ಕಮಂಟಪ್ಪವಿದೆ. ಅದರಲ್ಲಿ ಶಿವ-ಪಾರ್ವತಿಯರು ಕುಳಿತ್ತಿದ್ದಾರೆ. ಅವರ ಎಡ ಬಲಕ್ಕಿರುವ ಮಕರಗಳ ಬಾಗಿಲವಾಡವು ಕಲಾತ್ಮಕತೆಯಿಂದ ಕೂಡಿದೆ. ಶಿವನ ಪಕ್ಕದಲ್ಲಿ ನಂದಿ ಇದೆ. ಬಲ ತುದಿಯಲ್ಲಿ ಬ್ರಹ್ಮ ಸರಸ್ವತಿಯರಿದ್ದಾರೆ. ಎಡ ತುದಿಯಲ್ಲಿ ಅರೆನಗ್ನ ಸ್ಥಿತಿಯಲ್ಲಿರುವ ಸ್ತ್ರೀಯ ಓಲೆಯನ್ನು ಬರೆಯುತ್ತಾದ್ದಾಳೆ. ಅವಳ ಬಲಕ್ಕೆ ವಿಷ್ಣು ಲಕ್ಷ್ಮೀಯರಿದ್ದಾರೆ. ಈ ಮೂರ್ತಿಶಿಲ್ಪಗಳ ಮೇಲ್ಭಾವಣೆಯಲ್ಲಿ ನಾಲ್ಕು ಜನ ದಂಪತಿಗಳು ತಮ್ಮ ವಾಹನಗಳ ಮೇಲೆ ಕುಳಿತು ಸಂಗೀತ ಮೇಳಾದೊಂದಿಗೆ ಹೋಗುವ ಶಿಲ್ಪಗಳಿವೆ. ಅದರಲ್ಲಿ ಜಿಂಕೆ, ಕುದುರೆ ಮತ್ತು ನಂದಿಗಳಾಗಿವೆ. ಈ ಎಲ್ಲ ಮೂರ್ತಿಗಳಿಗೆ ಬಣ್ಣ ಹೆಚ್ಚಿರುವುದರಿಂದ ನಿಜ ಸ್ವರೂಪ ಸ್ವಲ್ಪ ಮಟ್ಟಿಗೆ ಕಳೆದು ಕೊಂಡಿವೆ.

೩. ವೆಂಕಟೇಶ್ವರ ಗುಡಿಯಲ್ಲಿರುವ ಮೂರ್ತಿಶಿಲ್ಪಗಳಲ್ಲಿ ಮುಖ್ಯವಾಗಿ ಗರ್ಭಗುಡಿಯಲ್ಲಿ ವೆಂಕಟೇಶ್ವರನ ಸುಂದರ ಶಿಲ್ಪವಿದೆ. ಇದರ ಕೆಳಗಡೆ ಪದ್ಮಾವತಿ-ಲಕ್ಷ್ಮಿಯರಿದ್ದಾರೆ. ಇದು ನಿಂತ ಭಂಗಿಯಲ್ಲಿದ್ದು, ಇದಕ್ಕೆ ನಾಲ್ಕು ಕೈಗಳಿವೆ. ಈ ಬಲಗೈಯಲ್ಲಿ ಚಕ್ರ, ಮುದ್ರೆ ಎಡಗೈಯಲ್ಲಿ ಶಂಕ, ಅಭಯ ಮುದ್ರದ ಕೈಗಳಿವೆ. ತಲೆಯ ಮೇಲೆ ಕಿರೀಟವಿದೆ.

ವೆಂಕಟೇಶ್ವರ ಸುಖನಾಸಿಯ ದೇವರ ಕೊಷ್ಟದಲ್ಲಿ ವಿಷ್ಣು ಲಕ್ಷ್ಮಿಯರಿದ್ದು, ಇದರ ಕೆಳಗೆ ಹಾರುತ್ತಿರುವ ಗರುಡ ಶಿಲ್ಪವು ಇದೆ. ಆದರೆ ಇಲ್ಲಿನ ಸ್ಥಳೀಯರು ಶ್ರೀ ಕೃಷ್ಣ-ರುಕ್ಮಿಣಿಯರ ಶಿಲ್ಪವೆಂದು ಹೇಳುತ್ತಾರೆ. ಸಭಾ ಮಂಟಪದ ಪಶ್ಚಿಮ ಭಾಗದಲ್ಲಿ ಕೇಶವನ ಶಿಲ್ಪವಿದೆ. ಕರಿಶಿಲೆಯಲ್ಲಿರುವ ಅದು ೫೨" ಎತ್ತರ, ೧೬" ಅಗಲವಿದೆ. ಎಡಬಲಕ್ಕೆ ಇಬ್ಬಿಬ್ಬರು ಸ್ತ್ರೀಯರಿದ್ದಾರೆ. ಅವರಲ್ಲಿ ಒಬ್ಬಳು ನಾಟ್ಯ ಭಂಗಿಯಲ್ಲಿದ್ದರೆ, ಮತ್ತೊಬ್ಬಳು ತಟಸ್ಥವಾಗಿದ್ದಾಳೆ ಮತ್ತು ಅರಳಿದ ಕಮಲದ ಆಕಾರದಲ್ಲಿರುವ ಮೇಲ್ಛಾವಣೆ ಇದ್ದು, ೬೪ ಮೂರ್ತಿಗಳಿಂದ ಕೂಡಿದೆ. ಸ್ತಂಭಗಳಲ್ಲಿ ಸರಸ್ವತಿ, ಸೂರ್ಯ, ವೇಣುಗೋಪಾಲ, ಉಗ್ರ ನರಸಿಂಹನು ಹಿರಣ್ಯಕಸಿಪು ಕೊಲ್ಲುತ್ತಿರುವುದು ಕಾಣುತ್ತೇವೆ. (ತಿರುಳ್ಗನ್ನಡ ಪು.ಸಂ.೧೭-೧೮)

೪. ದೇವದುರ್ಗ ಅಗಸಿ ಪಕ್ಕದಲ್ಲಿರುವ ವೀರಭದ್ರೇಶ್ವರ ದೇವಾಲಯದ ವೀರಭದ್ರ ಮೂರ್ತಿಯು ನಾಲ್ಕು ಕೈಗಳಿಂದ ಕೂಡಿದೆ. ಒಂದರಲ್ಲಿ ಖಡ್ಗ, ಅಭಯಸ್ತ ಕೈ ಮತ್ತೊಂದು ಕೈಯಲ್ಲಿ ಬಿಲ್ಲು, ಇನ್ನೊಂದರಲ್ಲಿ ಗದೆ ಹಿಡಿದುಕೊಂಡಿದ್ದಾನೆ. ಸರ ಹಾಗೂ ಉಡುಪುಗಳಿಂದ ಕೂಡಿದೆ ಈ ಮೂರ್ತಿ ಪಾಣಿವಾಠದ್ಮಲೆರಿಸಲಾಗಿದೆ.

೫. ಕಛೇರಿ ಅಗಸಿಯಲ್ಲಿರುವ ಉತ್ತರಾಭಿಮುಖವಾಗಿರುವ ಕೇಶವ ಗುಡಿಯಲ್ಲಿರುವ ಕೇಶವನ ಮೂರ್ತಿ ಬಹು ಸುಂದರವಾಗಿದೆ. ಈ ಕೇಶವ ಮೂರ್ತಿಯು ನಾಲ್ಕು ಕೈಗಳಿಂದ ಕೂಡಿದ್ದು, ಬಲಗೈಯಲ್ಲಿ ಒಂದರಲ್ಲಿ ಶಂಕು ಮತ್ತೊಂದರಲ್ಲಿ ಗದೆ ಎಡಗೈಯಲ್ಲಿ ಶಂಕ ಹಿಡಿದಿರುವ ಕೇಶವ ಮೂರ್ತಿ ಅತ್ಯಂತ ಸುಂದರವಾಗಿದೆ.

೬. ನೀಲಕಂಠೇಶ್ವರ ದೇವಾಲಯದ ಎದುರಿನಲ್ಲಿರುವ ದಕ್ಷಿಣಾಭಿಮುಖವಾಗಿರುವ ಆಂಜನೇಯ ದೇವಾಲಯದಲ್ಲಿ ನವರಂಗದ ಪಶ್ಚಿಮ ಭಾಗದ ದೇವಕೊಷ್ಟದಲ್ಲಿ ಗಣೇಶ ಮೂರ್ತಿ, ಅದರ ಮೇಲೆ ನಂದಿಯ ಮೇಲೆ ಈಶ್ವರ ಮೂರ್ತಿ ಇದ್ದು. ಅಕ್ಕಪಕ್ಕದಲ್ಲಿ ಕೈ ಮುಗಿತ್ತಿರುವ ಸ್ತ್ರೀಯ ಮೂರ್ತಿಗಳಿವೆ. ಪೂರ್ವದ ಗೋಡೆಯಲ್ಲಿ ಕುಳಿತಿರುವ ಕೇಶವ ಪಂಡಿತರ ಮೂರ್ತಿ ಇದೆ. ಬಜಾರ ವೀರಭದ್ರೇಶ್ವರ ಮೂರ್ತಿ ಸ್ವಲ್ಪ ಸಣ್ಣದಾಗಿದ್ದು, ನಾಲ್ಕು ಕೈಗಳಿಂದ ಕೂಡಿದೆ. ಎಡಗೈಯಲ್ಲಿ ಜಂಬೆ ಅಭಯಸ್ತ ಇದ್ದರೆ, ಬಲಗೈಯಲ್ಲಿ ಗದೆ ಖಡ್ಗದಿಂದ ಕೂಡಿದ ಸುಂದರ ಮೂರ್ತಿಶಿಲ್ಪವಾಗಿದೆ.

೭. ಹಂಪಣ್ಣ ಗುಡಿಯ ಮುಂದಿಟ್ಟಿರುವ ಮೂರ್ತಿಗಳಲ್ಲಿ ಮೊದಲ ನಾಗಮೂರ್ತಿಗಳು ವೀರಗಲ್ಲುಗಳಿದ್ದರೆ ಮಧ್ಯದ ಭಾಗದಲ್ಲಿ ನಾಗ-ನಾಗಿಣಿಯರ ಮೂರ್ತಿಯು ಅತ್ಯಂತ ಸುಂದರವಾಗಿದೆ.

ಸರಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿರುವ ವಿಷ್ಣುವಿನ (ಅನಂತಶಯನ) ಮೂರ್ತಿ ಬಹು ಸುಂದರವಾಗಿದೆ.

ವೀರಗಲ್ಲು ಶಿಲ್ಪ : ವೀರಗಲ್ಲುಗಳು ಕನ್ನಡನಾಡಿನ ಶಾಸನಗಳ ಒಂದು ವೈಶಿಷ್ಟ್ಯ. ಇವುಗಳ ಜೊತೆಗೆ ಮಾಸ್ತಿ ಕಲ್ಲುಗಳನ್ನು ಸೇರಿಸಬಹುದು. ಊರಿನ ಹಿತಕ್ಕಾಗಿಯೂ ದುಷ್ಟ ಶಿಕ್ಷಣಕ್ಕಾಗಿಯೂ ಸ್ವಾಮಿ ನಿಷ್ಠೆಯಿಂದಲೂ ಹೋರಾಡಿ ಮಡಿದ ವೀರ ಪುರುಷರ ಸ್ಮಾರಕಕ್ಕಾಗಿ ರಚಿತವಾದ ಈ ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು ಒಂದು ವಿಶಿಷ್ಟ ಬಗೆಯ ಸ್ಮಾರಕಗಳು.

ಕನ್ನಡ ನಾಡಿನ ಜನ ಸಾಮಾನ್ಯವಾಗಿ ಮೊದಲಿನಿಂದಲೂ ಶೂರರಾಗಿದ್ದಾರೆಂಬುದಕ್ಕೆ ನಾಡಿನ ಇತಿಹಾಸವೇ ಸ್ಪಷ್ಟವಾದ ಸಾಕ್ಷಿಯಾಗಿದೆ. ಈ ಸ್ಮಾರಕಗಳು ನಿಸ್ವಾರ್ಥ ಸಾಧನೆಯ ಪರಾಕ್ರಮಕ್ಕೆ ಕೊಟ್ಟ ಪುರಸ್ಕಾರ ಇವು ತೋರಿಸುತ್ತವೆ. ವೀರನೊಬ್ಬ ಮಡಿದ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯೇ ವೀರಶಾಸನ ಅಥವಾ ವೀರಗಲ್ಲು. ವೀರಗಲ್ಲುಗಳು ಗುರ್ತಿಸುವುದು ಸಾಮಾನ್ಯ ಮತ್ತು ಸುಲಭ. ವೀರ ಶತ್ರುಗಳೊಡನೆ ಹೋರಾಡುವ ದೃಶ್ಯ, ಮಧ್ಯದಲ್ಲಿ ಸತ್ತ ನಂತರ ಅಪ್ಸರೆಯರು ದೇವಾಲೋಕಕ್ಕೆ ಕರೆದೊಯ್ಯುವ ಚಿತ್ರ ಮೂರನೇ ಹಂತದಲ್ಲಿ ಅವನನ್ನು ದೇವನ ಸಾನಿಧ್ಯದಲ್ಲಿ ಇರುವಂತೆ ಕೆತ್ತಲಾಗಿರುತ್ತದೆ. ಇದರ ಅರ್ಥ ವೀರರು ಸತ್ತು ಸ್ವರ್ಗ ಸೇರಿರುವರು ಎಂಬ ಸಂಕೇತವಾಗಿದೆ. ವೀರಗಲ್ಲಿನ ಮೇಲೆ ಬರಹವಿರಬಹುದು. ಇಲ್ಲದಿರಬಹುದು. ಅದನ್ನು ಚಿತ್ರಗಳ ಮೇಲೆ ಗುರ್ತಿಸುವುದು. ಮಡಿದ ವೀರನ ಶಾಶ್ವತ ನೆನಪಿಗಾಗಿ ಈ ಶಾಸನಗಳನ್ನು ಕೆತ್ತಿಸಲು ಪ್ರಾರಂಭಿಸಿದರು. (ಶಾಸನಾಧ್ಯಯನ ಡಾ.ಎನ್.ಎಂ. ಹಿರೇಮಠ)

ವೀರನು ಯುದ್ಧದಲ್ಲಿ ಹೋರಾಡಿ ರಣರಂಗದಲ್ಲಿ ಮಡಿಯುತ್ತಾನೆ. ಆಗ ಸ್ತ್ರೀ ತನ್ನ ವೀರ ಪತಿಗಾಗಿ ಚಿತೆಯ ಮೇಲೆ ಮಡಿಯುತ್ತಾಳೆ. ಅಂತಹ ವೀರರ ಬಗ್ಗೆ ಜನರು ಮೆಚ್ಚಿ ಅವರ ಚಿತ್ರಗಳನ್ನು ಕಲ್ಲಿನಲ್ಲಿ ಕೆತ್ತಿಸಿ ವಿಷಯಗಳನ್ನು ಕಲ್ಲಿನ ಮೆಲೆ ಬರೆಯಿಸಿದರು. ಯಾವುದೇ ಕಾಲದಲ್ಲಿ ಯಾರೋ ನಿಲ್ಲಿಸಿದ ವೀರಗಲ್ಲುಗಳು ಇಂದಿಗೂ ಕರ್ನಾಟಕದ ಎಲ್ಲೆಡೆಯಲ್ಲಿ ಜನ ಪೂಜಿಸುತ್ತಾರೆ. ಅದರಂತೆ ಗಬ್ಬೂರಿನಲ್ಲಿ ರುವ ವೀರಗಲ್ಲುಗಳಿಗೆ ಬೇರೆ ಬೇರೆ ಹೆಸರುಗಳನಿಟ್ಟು, ಇಂದಿಗೂ ಪೂಜಿಸುತ್ತಾರೆ

ಹಂಪಣ್ಣ ಗುಡಿಯ ಮುಂದೆ ಒಟ್ಟು ಐದು ವೀರಗಲ್ಲುಗಳಿವೆ. ಒಂದನೇ ವೀರಗಲ್ಲಿನಲ್ಲಿ ನಿಂತಿರುವ ವೀರನಚಿತ್ರ, ಒಂದು ಕೈಯಲ್ಲಿ ಖಡ್ಗ, ಎಡಗೈಯಲ್ಲಿ ರಕ್ಷಕವಚ, ಕೆಳಗಡೆ ನಾಯಿಯ ಚಿತ್ರವಿದೆ. ಮೇಲೆಗಡೆ ಸೂರ್ಯ-ಚಂದ್ರರ ಚಿತ್ರವಿದೆ. ಇದರ ಅರ್ಥ ಸೂರ್ಯ-ಚಂದ್ರ ಇರುವರಿಗೂ ಇವರು ಹೆಸರು ಅಮರವಾಗಿರಲೆಂದು ತಿಳಿಸುತ್ತದೆ.

೨. ಎರಡನೇಯ ವೀರಗಲ್ಲು ಕುದುರೆಯ ಮೇಲೆರುವ ವೀರ ಹಾಗೂ ಆ ವೀರನ ಕೈಯಲ್ಲಿ ಖಡ್ಗ, ಎಡಗೈಯಲ್ಲಿ ಕುದುರೆ ಲಾಗಮು ಹಿಡಿದಿದ್ದಾನೆ. ಮೂರನೆಯ ವೀರಗಲ್ಲುನಲ್ಲಿ ಕೈಯಲ್ಲಿ ಖಡ್ಗ ಮತ್ತೊಂದು ಕೈಯಲ್ಲಿ ರಕ್ಷಕವಚ. ಅಲ್ಲದೆ ಟೊಂಕಪಟ್ಟಿಯಲ್ಲಿ ಕತ್ತಿ ಹಾಗೂ ಬರ್ಚಿ ಇವೆ. ಈ ವೀರಗಲ್ಲುನಲ್ಲಿ ಮೇಲೆಗಡೆ ಸೂರ್ಯ-ಚಂದ್ರ ಚಿತ್ರವಿದೆ. ಇನ್ನೂ ಎರಡು ವೀರಗಲ್ಲುಗಳ ಇದರಂತೆ ಇವೆ.

ಮೇಲಶಂಕರ ದೇವಸ್ಥಾನದ ಮುಂದಿನ ಬಾಗದಲ್ಲಿ ಸಕ್ರಿ ಬಾವಿಯ ದಡದಲ್ಲಿ ನಾಲ್ಕು ವೀರಗಲ್ಲುಗಳಿವೆ. ಒಂದನೇಯ ವೀರಗಲ್ಲಿನಲ್ಲಿ ಉದ್ದದ ಬರ್ಚಿಯನ್ನು ಹಿಡಿಮ ಕೊಲ್ಲುವ ವೀರನ ವೀರಗಲ್ಲು.

ಎರಡನೇಯ ವೀರಗಲ್ಲುನಲ್ಲಿ ಕತ್ತಿಯಿಂದ ಸಿಂಹ ಕೊಲ್ಲುತ್ತಿರುವ ವೀರಕಗಲ್ಲು. ಮೂರನೇಯ ವೀರಗಲ್ಲುನಲ್ಲಿ ೩ ಭಾಗಗಳಿದ್ದು, ಮೊದಲ ಭಾಗದಲ್ಲಿ ಈಶ್ವರ ಲಿಂಗ, ಎರಡನೇಯದರಲ್ಲಿ ಮೂರು ಜನ ಅಪ್ಸರೆಯರು ನಿಂತಿರುವ ಚಿತ್ರ, ಮೂರನೇಯ ಭಾಗದಲ್ಲಿ ಪ್ರಾಣಿ ಜೊತೆ ಹೋರಾಟ ಮಾಡುವ ವೀರನ ಚಿತ್ರವಿದೆ.

ಮತ್ತೊಂದು ವೀರಗಲ್ಲಿನಲ್ಲಿ ವೀರನೂ, ಬಿಲ್ಲುನಿಂದ ಹೋರಾಟ ಮಾಡುವ ದೃಶ್ಯ ಹಾಗೂ ಮೂಲೆಯಲ್ಲಿ ಕಾಲಿನಿಂದ ತುಳಿಯುತ್ತಿರುವ ವೀರನ ದೃಶ್ಯ. ಬೂದಿ ಬಸವೇಶ್ವರ ಮಠದ ಆವರಣದಲ್ಲಿ ಹುಣಿಸಿ ಮರದ ಮುಂದಿನ ಪೂರ್ವದ ಕಡೆಗೆ ವೀರಗಲ್ಲು ಇದ್ದು, ಇದರಲ್ಲಿ ವೀರನೂ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಉದ್ದನೆಯ ಬಂದೂಕನ್ನು ಇಡಿದುಕೊಂಡಿದ್ದಾನೆ. ಮತ್ತು ಟೊಂಕ ಪಟ್ಟಿಯಲ್ಲಿ ಮತ್ತೊಂದು ಖಡ್ಗ, ಕೊರಳಿನಲ್ಲಿ ಗಂಟಿ ಸರವನ್ನು ಹಾಕಿಕೊಂಡಿದ್ದಾನೆ. ಈ ವೀರಗಲ್ಲುಗೆ ಈರಣ್ಣ ದೇವರ ಎಂದು ಭಾವಿಸಿ ದಿನಾಲು ಪೂಜೆ ಮಾಡುತ್ತಾರೆ. ಈ ವೀರಗಲ್ಲಿನ ಮೇಲೆ ಲಿಪಿ ಇದ್ದು, ಇಂದು ನಶಿಸಿ ಹೋಗಿದೆ. ಆಂಜನೇಯ ದೇವಾಲಯದ ಗೋಡೆಗೆ ಸೇರಿಸಿರುವ ವೀರಗಲ್ಲು. ಈ ವೀರಗಲ್ಲು ಮೂರು ಭಾಗಗಳಿದ್ದು, ಮೊದಲನೇಯ ಭಾಗದಲ್ಲಿ ಈಶ್ವರ ಲಿಂಗವಿದ್ದು, ಎರಡನೇಯ ಭಾಗದಲ್ಲಿ ಅಪ್ಸರೆಯಿದ್ದಾರೆ. ಕೊನೆಯ ಭಾಗದಲ್ಲಿ ವೀರನೂ ಕುದುರೆಯ ಮೇಲೆ ಕುಳಿತು ಎಡಗೈಯಲ್ಲಿ ಕುದುರೆ ಲಾಗಮು ಹಿಡಿದು ಬಲಗೈಯಲ್ಲಿ ಖಡ್ಗವನ್ನು ಹಿಡಿದು ಯುದ್ಧ ಮಾಡುವ ಚಿತ್ರ. ಇವನ ಜೊತೆ ಇಬ್ಬರೂ ಸೈನಿಕರು ಯುದ್ಧ ಮಾಡುವ ದೃಶ್ಯ ಇದೆ. ಇದು ಅತ್ಯಂತ ಸುಂದರವಾದ ವೀರಗಲ್ಲು ಆಗಿದೆ. ಪಿಡಮ್ಮ ಗುಡಿಯ ಮುಂದಿರುವ ವೀರಗಲ್ಲುಗಳು ಒಟ್ಟು ಮೂರು. ಒಂದು ವೀರಗಲ್ಲಿನಲ್ಲಿ ಇಬ್ಬರು ಯುದ್ಧ ಮಾಡುವ ದೃಶ್ಯವಿದೆ. ಇನ್ನೊಂದು ವೀರಗಲ್ಲಿನಲ್ಲಿ ಮೂರು ಭಾಗಗಳನ್ನು ಹೊಂದಿದ್ದು, ಆ ವೀರನು ಸ್ವರ್ಗವನ್ನಪ್ಪಿದ ಸಂಕೇತವಾಗಿ ಈಶ್ವರ ಮೂರ್ತಿ ಪಕ್ಕದಲ್ಲಿ ವೀರನ ಚಿತ್ರವಿದೆ. ಎರಡನೇಯ ಭಾಗದಲ್ಲಿ ಮೂವರ ವೀರರು ಇದ್ದಾರೆ. ಮತ್ತು ಕುದುರೆಯ ಮೇಲೆ ಹೋರಾಟ ಮಾಡುವ ಚಿತ್ರವಿದೆ.

ಮಾಸ್ತಿಕಲ್ಲು : ಮಡಿದ ಗಂಡನೊಂದಿಗೆ ಚಿತೆಯನ್ನು ಪ್ರವೇಶ ಮಾಡುವುದರ ಮೂಲಕ ಸಾಯುವ ವಿಧಿಯನ್ನು ಸಹಗಮನ ಎಂಬುದಾಗಿ ಕರೆಯುತ್ತಾರೆ. ಸತಿ ಹೋಗುವುದು ಎಂಬುದಾಗಿಯೂ ಕೆಲವೊಮ್ಮೆ ಕರೆಯುತ್ತಾರೆ. ಈ ರೀತಿ ಅಗ್ನಿ ಪ್ರವೇಶವನ್ನು ಮಾಡಿದ ಮಹಿಳೆಯರ ಸ್ಮಾರಕಗಳೆ ಈ ಮಹಾ ಸತಿ ಗಲ್ಲುಗಳು. ಇವುಗಳು ಮಾಸ್ತಿಗಲ್ಲು. ಮಾಸ್ತಮ್ಮ, ವ್ಯಾಸನತೊಳು ಎಂಬುದಾಗಿ ಜನ ಹಲವಾರು ಕಡೆ ಇಂದಿಗೂ ಕರೆಯುತ್ತಾರೆ. ಕೆಲವು ಕಡೆಗಳಲ್ಲಿ ಇಂದಿಗೂ ಇವುಗಳನ್ನು ಆರಾಧಿಸುತ್ತಾರೆ.

ಮಾಸ್ತಿ ಎನ್ನುವುದು ಸಂಸ್ಕೃತದ ಮಹಾಸತಿ ಎಂಬುದರ ತದ್ಭವೀಕರಣ. ಮಹಾಸತಿಯಾಗುವುದು, ಮಹಾಪುಣ್ಯದ ಕಾರ್ಯವೆಂದು ಒಂದು ಕಾಲದಲ್ಲಿ ಸಮಾಜ ಬಲವಾಗಿ ನಂಬಿತ್ತು. ಗಂಡನ ಸಾವಿನ ನಂತರದಲ್ಲಿ ಹೆಂಡತಿಯು ಅವನೊಡನೆ ಸಹಗಮನ ಮಾಡಿದರೆ ಅವಳೂ, ಅವಳ ಗಂಡನೂ ಪಾಪಗಳಿಂದ ಮುಕ್ತರಾಗುವುದಲ್ಲದೆ, ಮೂರುವರೆ ಕೋಟಿ ವರ್ಷ ಸ್ವರ್ಗದಲ್ಲಿ ಸುಖವಾಗಿರುತ್ತಾರೆಂಬ ಭಾವನೆಯ ಹಿನ್ನೆಲೆಯಲ್ಲಿ ಮಡಿದ ಸತಿಯರ ಸ್ಮರಣೆಗಾಗಿ ನಿಲ್ಲಿಸಿದ ಮಾಸ್ತಿ ಕಲ್ಲುಗಳು ಕರ್ನಾಟಕದ ಉದ್ದಕ್ಕೂ ಸಿಕ್ಕುತ್ತವೆ. ಕೆಲವು ಸ್ಥಳಗಳಲ್ಲಿ ಮಾಸ್ತಿ ಗುಡಿಗಳನ್ನು ಕಟ್ಟಿಸಿ, ಅಲ್ಲಿ ಜಾತ್ರೆ ನಡೆಸುತ್ತಿರುವುದುಂಟು. ವೀರಗಲ್ಲುಗಳಂತೆಯೇ ಮಾಸ್ತಿಕಲ್ಲುಗಳನ್ನು ಗುರುತಿಸುವುದು ಬಹು ಸುಲಭ.

೧. ಶಸ್ತ್ರಧಾರಿಯಾದ ಪುರುಷ ಮತ್ತು ಅವನ ಜೊತೆ ಇನ್ನೊಬ್ಬ ಸ್ತ್ರೀಯ ಚಿತ್ರವಿದ್ದರೆ, ಅವನೇ ಹೋರಾಡಿ ಸತ್ತ ವೀರನೆಂದು ಅವಳು ಸಹಗಮನ ಮಾಡಿದ ಅವನ ಹೆಂಡತಿಯೆಂದು ತಿಳಿಯಬೇಕು. ಕೆಲವೊಮ್ಮೆ ಮೂವರು, ನಾಲ್ವರು ಸ್ತ್ರೀಯರು ಚಿತ್ರವಿದ್ದು, ಅವರೆಲ್ಲರೂ ತಮ್ಮ ಗಂಡನ ಸಮೇತ ಸಹಗಮನ ಮಾಡಿರುತ್ತಾರೆ.

೨. ಕೆಲವು ಮಾಸ್ತಿಕಲ್ಲುಗಳ ಮೇಲೆ ಕಂಬ, ಅದರ ಬಲ ಭಾಗದಿಂದ ಹೊರಟಿರುವಂತೆ ಒಂದು ಕೈ ಇರುತ್ತದೆ. ಆ ಕೈಯ ತುಂಬ ಬಳೆ. ಇದನ್ನು ಒಂಟಿ ಕೈ ಮಾಸ್ತಿಕಲ್ಲು ವ್ಯಾಸನ ತೋಳು ಎಂದು ಕರೆಯುವುದುಂಟು. ಕೆಲವು ಕಡೆ ಕಂಬದಿಂದ ಎರಡು ಕೈಗಳು ಹೊರಟಿರುವಂತೆ ಚಿತ್ರಿಸಿದ್ದಾರೆ. ಅದನ್ನು ಇಕ್ಕೈ ಮಾಸ್ತಿಕಲ್ಲು ಎಂದು ಕರೆಯುತ್ತಾರೆ.

ಗಬ್ಬೂರಿನಲ್ಲಿ ಪಿಡ್ಡಮ್ಮ ಗುಡಿಯಲ್ಲಿ ಮಾಸ್ತಿಕಲ್ಲು ಇದ್ದು. ಇದಕ್ಕೆ ಒಂದು ಗುಡಿ ನಿರ್ಮಾಣ ಮಾಡಿ, ಪಿಡ್ಡಮ್ಮ ಎಂಬ ಹೆಸರು ಇಟ್ಟಿರುವರು. ಇದು ಉತ್ತಾರಭಿಮುಖವಾಗಿದೆ. ಸಣ್ಣ ಮಕ್ಕಳಿಗೆ, ದನಗಳಿಗೆ ಕಾಯಿಲೆ ಬಂದರೆ ಮಳೆ ಬರೆದಿದ್ದರೆ ಈ ಗುಡಿಗೆ ಮಂಗಳವಾರ ಮತ್ತು ಶುಕ್ರವಾರದೆಂದು ವಿಶೇಷ ಪೂಜೆ ಮಾಡಲಾಗುತ್ತದೆ. ಈ ದೇವಾಲಯಕ್ಕೆ ಕುರುಬ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ನಡೆದುಕೊಳ್ಳುತ್ತಾರೆ.

ಅಧ್ಯಾಯ ೪

ಗಬ್ಬೂರಿನ ಬಾವಿಗಳು ಮತ್ತು ಕೋಟೆಗಳು

೪.೧. ಬಾವಿಗಳು

೪.೨. ಕೋಟೆಗಳು

೪.೧. ಬಾವಿಗಳು

ಬಾವಿಗಳು ಧರ್ಮದ ಸಂಕೇತವಾಗಿದ್ದು, ಪ್ರತಿಯೊಂದು ದೇವಾಲಯದಲ್ಲಿ ಅಥವಾ ಹೊರಗಡೆ ಯಾದರೂ ಒಂದು ಬಾವಿ ಇದ್ದೇ ಇರುತ್ತದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಕರ್ನಾಟಕದಲ್ಲಿ ಅನೇಕ ಶರಣರು, ಸಂತರು ಬಾಳಿ ಬೆಳಗಿದವರಾಗಿದ್ದಾರೆ. ಈ ಶರಣರು ಸಂತರು ತಮ್ಮ ಆರಾಧ್ಯ ದೇವರ ಪೂಜೆಗಾಗಿ (ಪುಷ್ಕರಣಿ) ಬಾವಿಯ ನೀರನ್ನು ಬಳಸುವ ಪರಿಪಾಠವಾಗಿ ಅನೇಕ ಗ್ರಾಮಗಳಲ್ಲಿ ಬಾವಿಗಳು ಹುಟ್ಟಿಕೊಂಡವು. ಬಾವಿಗಳು ಕೇವಲ ದೇವರಿಗಾಗಿ ಮಾತ್ರವೇ ಅಲ್ಲ. ಸಮಾಜದ ಜನರ ಜೀವನಕ್ಕಾಗಿ ಊರ ಹೊರಗೆ ಮತ್ತು ಊರ ಮಧ್ಯದಲ್ಲಿ ಅನೇಕ ಬಾವಿಗಳು ನಿರ್ಮಾಣವಾದವು.

ಬಾವಿಗಳು ವಿಶಾಲವಾದ ತೆರೆದ ಬಾವಿಗಳಾಗಿದ್ದು ಹೊಕ್ಕು ತುಂಬಲು ಬರವಂತಿದ್ದವು. ಅವುಗಳಿಗೆ ಬಾವಿಯ ತಳಭಾಗದಿಂದ ಹಿಡಿದು ಮೇಲಿನ ಭಾಗದವರಿಗೆ ಮೆಟ್ಟಿಲುಗಳನ್ನು ಅಳವಡಿಸಲಾಗಿತ್ತು. ಸುಮಾರು ೨೦ ರಿಂದ ೮೦ ಅಡಿಗಳವರಿಗೆ ಆಳವಾಗಿವೆ. ಬಾವಿಗಳಲ್ಲಿ ಸಾಧಾರಣವಾಗಿ ಬುಗ್ಗಿಯಿಂದ ನೀರು ಬಂದು ತುಂಬಿರುತ್ತಿದ್ದವು. ಸಾರ್ವಜನಿಕರು ಅವುಗಳನ್ನು ಕುಡಿಯಲು, ಬಳಸಲು ಉಪಯೋಗಿಸುತ್ತಿದ್ದರು. ನೀರಿನ ಪಾವಿತ್ರ್ಯವನ್ನು ಸಾರ್ವಜನಿಕರು ಕಾಪಾಡಿಕೊಂಡು ಬರುತ್ತಿದ್ದರು.

ನೀರನ್ನು ಕಲುಷಿತಗೊಳಿಸಲು ಅವಕಾಶವಿರುತ್ತಿರಲಿಲ್ಲ. ಇಂಥ ಬಾವಿಗಳು ಗಬ್ಬೂರಿನಲ್ಲಿ ಅನೇಕ ಇದ್ದು, ಇಂದಿಗೂ ನೋಡಬಹುದಾಗಿದೆ.

೧. ಸಕ್ರಿಬಾವಿ : ಗಬ್ಬೂರು ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಈ ಸಕ್ರಿಬಾವಿಯು ಮೇಲೆ ಶಂಕರ ದೇವಸ್ಥಾನದ ಮುಂದೆ ಇದೆ. ಇದು ಮೇಲೆ ಶಂಕರ ದೇವಾಲಯದ ಮುಂದೆ ಇರುವುದರಿಂದ ಇದಕ್ಕೆ ಮೊದಲು ಶಂಕರಬಾವಿ ಎಂದು ಇತ್ತು. ಅನಂತರ ಜನರ ವಾಡಿಕೆಯಲ್ಲಿ ಶಂಕರ, ಶಂಕರಬಾವಿ ಬದಲಾಗಿ ಸಕ್ರಿಬಾವಿಯಾಗಿ ಮಾರ್ಪಟ್ಟಿತೆಂದು ಹೇಳುತ್ತಾರೆ.

ಈ ದೊಡ್ಡದಾದ ಪುಷ್ಕರಣಿ ಮೇಲಶಂಕರ ದೇವಾಲಯದ ಉತ್ತರ ದಿಕ್ಕಿನಲ್ಲಿದ್ದು. ಇದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮೇಲಶಂಕರ ದೇವರ ಪೂಜೆಗೆ ಮತ್ತು ಜನರು ಬಳಸಲು ಈ ಬಾವಿಯ ನೀರನ್ನು ಉಪಯೋಗಿಸುತ್ತಿದ್ದರು. ಇದರ ಪಶ್ಚಿಮ ಮತ್ತು ಪೂರ್ವದ ಮೆಟ್ಟಿಲುಗಳ ಬಳಿ ನೀರಿನ ಎರಡು ಬುಗ್ಗಿಗಳಿದ್ದು, ಶುದ್ಧವಾದ ನೀರಿನಿಂದ ತುಂಬಿರುತ್ತಿತ್ತು. ಆದರೆ ಈ ನೀರಿನ ಬುಗ್ಗಿ ಇಲ್ಲವಾಗಿದೆ. ಅದರ ಬದಲಾಗಿ ಮಳೆಯ ನೀರಿನಿಂದ ತುಂಬಿರುತ್ತದೆ. ಈಗ ಇಲ್ಲಿಯ ಜನರು ಬಟ್ಟೆ ದನಕರುಗಳಿಗೆ ಮಾತ್ರ ಈ ನೀರನ್ನು ಉಪಯೋಗಿಸುತ್ತಾರೆ. ಈ ಪುಷ್ಕರಣಿಗೆ ನಾಲ್ಕು ದಿಕ್ಕಿನ ಕಡೆಗೆ ಕಲ್ಲಿನಿಂದ ಮೆಟ್ಟಿಲುಗಳನ್ನು ನಿರ್ಮಾಣ ಮಾಡಿದ್ದು, ಒಳಗೆ ಹೋಗಿ ನೀರು ತುಂಬಿ ತರಲು ಅನುಕೂಲವಾಗಿದೆ. ಈ ಪುಷ್ಕರಣಿ ವಿಶಾಲವಾಗಿದ್ದು ಈಗ ಪಶ್ಚಿಮ ಮತ್ತು ಪೂರ್ವದ ಕಡೆಗಿನ ಮೆಟ್ಟಿಲುಗಳು ಸ್ವಲ್ಪ ಕುಸಿದಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ಗಬ್ಬೂರಿನಲ್ಲಿರುವ ಬೃಹತ್ ಪುಷ್ಕರಣಿಯಾಗಿದೆ(ದೇವದುರ್ಗ ತಾಲೂಕಿನ ಒಂದು ಸಾಂಸ್ಕೃತಿಕ ಅಧ್ಯಯನ, ಚನ್ನಬಸಪ್ಪ ಬಿ.).

೨. ಏಳುಬಾವಿ : ಹೆಸರೇ ಸೂಚಿಸುವಂತೆ ಈ ಬಾವಿಯಲ್ಲಿ ಏಳು ಪುಷ್ಕರಣಿಗಳಿರುವುದರಿಂದಲೆ ಇದಕ್ಕೆ ಏಳು ಬಾವಿ ಎಂದು ಕರೆಯುತ್ತಾರೆ. ಅಂದರೆ ಒಂದೇ ಗುಂಡಾದಲ್ಲಿ (ತೆಗ್ಗು) ಏಳು ಪುಷ್ಕರಣಿಗಳಿದ್ದು ಒಂದೊಂದು ಪುಷ್ಕರಣಿಯು ಒಂದೊಂದು ದೇವಾಲಯದ ತೀರ್ಥಗಳಾಗಿದ್ದವೆಂದು ತಿಳಿದುಬರುತ್ತದೆ. ಬಾವಿಯ ದಡದ್ಮೇಲೆ ಏಳು ಬಾವಿ ಬಸವಣ್ಣ, ಹರಿಹರ, ವೆಂಕಟೇಶ್ವರ ಈಶ್ವರ ಹೀಗೆ ಏಳು ದೇವಾಲಯದ ತೀರ್ಥಗಳೇ ಈ ಏಳು ಭಾವಿಯಾಗಿವೆ. ಏಳು ಬಾವಿ ಬಸವಣ್ಣ ದೇವರ ಮುಂದೇ ಇರುವ ಶಾಸನದಲ್ಲಿ ಈ ಏಳು ಬಾವಿಗೆ ನೀರಕೋಟೆಯೆಂದು ಕರೆಯಲಾಗಿದೆ. ಅಂದರೆ ಬಾವಿಯ ಪಕ್ಕದಲ್ಲಿ ದಕ್ಷಿಣ, ಪಶ್ಚಿಮಕ್ಕೆ ಕೋಟೆ ಇದೆ. ಆದ್ದರಿಂದ ಇದಕ್ಕೆ ನೀರಕೋಟೆಯೆಂದು ಹೆಸರು ಬಂದಿದೆ. ಈ ಪುಷ್ಕರಣಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ. ಏಕೆಂದರೆ ಈ ಬಾವಿಯ ಉತ್ತರ ದಡದಲ್ಲಿರುವ ದೇವಾಲಯದ ಶಾಸನಗಳಲ್ಲಿ ಉಲ್ಲೇಖಿತವಾಗಿದೆಂದು ತಿಳಿದುಬರುತ್ತದೆ.

ಈ ಏಳು ಬಾವಿಗಳು ಬಹಳ ವಿಶಾಲವಾಗಿದ್ದು ಈಗ ಸದ್ಯ ನೋಡುವುದಕ್ಕೆ ಒಂದೇ ಬಾವಿ ಇದ್ದು ಉಳಿದ ೬ ಬಾವಿಗಳ ಅವಶೇಷಗಳು ಕಾಣದಾಗಿವೆ. ಅಂದರೆ ಇವೆಲ್ಲಾ ಬಾವಿಗಳು ಒಂದೇ ಬಾವಿಯಲ್ಲಿ ನಿರ್ಮಾಣವಾದಂತೆ ಕಾಣುತ್ತವೆ. ಬಾವಿಯ ಗೋಡೆಗಳನ್ನು ಬೇರೆ ಬೇರೆ ಕಲ್ಲುಗಳಿಂದ ನಿರ್ಮಿಸಿದ್ದರು. ಇವೆಲ್ಲವುಗಳು ಈಗ ನಾಶವಾಗುತ್ತಲ್ಲಿವೆ. ಸದ್ಯಕ್ಕೆ ಈ ಬಾವಿಗೆ ಪೂರ್ವದಲ್ಲಿ ಒಂದು ತೋಬು, ಪಶ್ಚಿಮದಲ್ಲಿ ಒಂದು ತೂಬು ಇದ್ದು ಮಳೆಗಾಲದಲ್ಲಿ ಈ ತೂಬುಗಳ ಮೂಲಕ ನೀರು ಬಾವಿಯ ಒಳಕೆ ಬರುತ್ತವೆ.

೩. **ಸಿಡಿಲು ಬಾವಿ :** ಹೆಸರೇ ಸೂಚಿಸುವಂತೆ ಇದು ಮಾನವರ ನಿರ್ಮಾಣವಲ್ಲ. ಇದು ನೈಸರ್ಗಿಕ ಕೊಡುಗೆಯಾಗಿದೆ. ಅಂದರೆ ಸಿಡಿಲು ಬಿದ್ದು ಮೂಡಿರುವ ಬಾವಿ. ಈ ಸಿಡಿಲು ಬಾವಿಯು ಸೂಗೂರೇಶ್ವರ ಬೆಟ್ಟದಲ್ಲಿದೆ. ಈ ಬಾವಿಯು ಒಂದು ಹಣ್ಣಿನ ಹೋಳಿನಾಕಾರದಂತಿದ್ದು. ನೋಡಲು ಬಹು ಸುಂದರವಾಗಿದೆ. ಈ ಬಾವಿಯ ನೀರನ್ನು ಚನ್ನವೀರ ಸ್ವಾಮಿಗಳು ಮತ್ತು ಬೂದಿಬಸವೇಶ್ವರ ಸ್ವಾಮಿಗಳು ದಿನನಿತ್ಯದ ಪೂಜೆ ಪುನಸ್ಕಾರಕ್ಕೆ ಬಳಸುತ್ತಿದ್ದರು. ಈ ಬಾವಿಯಲ್ಲಿ ಇಂದಿಗೂ ನೀರಿನ ಬುಗ್ಗಿಯಿದ್ದು ಮೂರು ಕಾಲದಲ್ಲಿಯೂ ಈ ಬಾವಿಯಲ್ಲಿ ನೀರು ಇರುತ್ತವೆ. ಈ ಬಾವಿಯ ನೀರು ಕುಡಿದರೆ ನಿಜವಾಗಿಯೂ ದೇವರ ತೀರ್ಥವನ್ನೇ ಕುಡಿದಂತಾಗುತ್ತದೆ. ಪೂರ್ವದಿಕ್ಕಿನಲ್ಲಿ ಈ ಬಾವಿಗೆ ಇತ್ತೀಚೆಗೆ ಸಣ್ಣ ಮೆಟ್ಟಿಲುಗಳನ್ನು ಮಾಡಿದ್ದಾರೆ. ಈ ಸದ್ಯದಲ್ಲಿ ಈ ಬಾವಿಯ ನೀರನ್ನು ಬೂದಿಬಸವ ಮಠದವರು ಬಳಸುತ್ತಾರೆ.

೪. **ಸುಬ್ಬಣ್ಣ ಬಾವಿ :** ಸಿರವಾರ ಅಗಸಿಯ ಸು.೧ ಕಿ.ಮೀ. ದೂರದಲ್ಲಿ ಅಂದರೆ ದಕ್ಷಿಣದಲ್ಲಿ ಈ ಪುಷ್ಕರಣಿ ಇದೆ. ಈ ಪುಷ್ಕರಣಿಯು ಅತ್ಯಂತ ಪ್ರಾಚೀನ ಕಾಲದಲ್ಲಿ ನಿರ್ಮಾಣವಾಗಿದ್ದು ಉತ್ತರ ಮತ್ತು ಪೂರ್ವ ಭಾಗದಲ್ಲಿ ಈ ಬಾವಿ ಒಳಗೆ ಇಳಿದು ಹೋಗಲು ಮೆಟ್ಟಿಲುಗಳಿವೆ. ಉತ್ತರದ ಭಾಗದಲ್ಲಿ ಎತ್ತರದ ಜಗತಿಯ ಮೇಲೆ ೧೨ ಕಂಬಗಳಿಂದ ಕೂಡಿದ ಒಂದು ಉದ್ದನೆಯ ಮಂಟಪವಿದೆ. ಈ ಮಂಟಪವನ್ನು ರಾಜರ ಕಾಲದಲ್ಲಿ ಅವರು ಸ್ನಾನ ಮಾಡುವಾಗ ವಸ್ತ್ರಾಭರಣಗಳನ್ನಿಡಲು ಹಾಗೂ ಕುಳಿತು ವಿಶ್ರಾಂತಿ ತೆಗೆದುಕೊಳ್ಳಲು ಈ ಮಂಟಪ ಮಾಡಲಾಗಿದೆಯೆಂದು ಸ್ಥಳೀಯರು ಹೇಳುತ್ತಾರೆ. ಈ ಮಂಟಪದ ಬಾಗಿಲವಾಡದ ರೀತಿಯಲ್ಲಿ ಅಲಂಕಾರಗೊಂಡಿದೆ.

ಪೂರ್ವದ ಮೆಟ್ಟಿಲುಗಳಲ್ಲಿ ಸಣ್ಣಮಂಟಪವಿದೆ. ಇದು ಬಹುಶಃ ರಾಣಿಯರ ಕೋಣೆಯಾಗಿರಬೇಕು ಎಂದು ಬಾವಿಸಲಾಗಿದೆ. ಈಗ ಇದಕ್ಕೆ ಯಾವ ದ್ವಾರವು ಇರುವುದಿಲ್ಲ. ಇದಲ್ಲದೆ ದಕ್ಷಿಣದ ಭಿತ್ತಿಗೆ ದಿಗ್ಗಜರ ಮೂರ್ತಿಯುಳ್ಳ ಅನೇಕ ಕಲ್ಲುಗಳನ್ನು ಇತ್ತೀಚೆಗೆ ಈ ಪುಷ್ಕರಣಿಗೆ ಸೇರಿಸಲಾಗಿದೆ. ಇದಕ್ಕೆ ನೀರಿನ ಬುಗ್ಗಿಯಿದ್ದು. ಈ ಸದ್ಯದಲ್ಲಿ ಅದು ಪ್ರಕೃತಿ ವಿಕೋಪಗಳಿಂದ ಇಲ್ಲವಾಗಿದೆ. ಸದ್ಯದಲ್ಲಿ

ಈ ಬಾವಿಯಲ್ಲಿ ಬೃಹತ್ತದ್ದಾದ ಹುಣಿಸಿಮರ, ಬೇವಿನಮರ ಇತ್ಯಾದಿ ಮರಗಳು ಬೆಳದಿದ್ದು ಕಂಡುಬರುತ್ತದೆ.

೫. **ನಾಗರಬಾವಿ :** ನಾಗರ ಬೆಟ್ಟದ ಮುಂದೆ ಬರುವ ಈ ನಾಗರಬಾವಿಯು ಪ್ರಾಚೀನ ಕಾಲದ ಬಾವಿಯಾಗಿದ್ದು ಬಾವಿಯನ್ನು ದೊಡ್ಡ ದೊಡ್ಡ ಗುಂಡು ಕಲ್ಲುಗಳಿಂದ ನಿರ್ಮಿಸಲಾಗಿದೆ. ಇಂದಿಗೂ ಬಾವಿಯ ನೀರು ಬೃಹತ ಬುಗ್ಗಿಯ ಮೂಲಕವೇ ಬರುತ್ತದೆ. ಈ ಬಾವಿಯ ಪೂರ್ವದ ಭಾಗದಲ್ಲಿ ನಾಗಭೂಷಣರ ದೇವಾಲಯವಿದೆ. ಮೊದಲು ಈ ನೀರು ನಾಗಭೂಷಣ ದೇವರ ಪೂಜೆಗೆ ಮೀಸಲು ಇದ್ದರೆ ಇಂದು ಈ ನೀರನ್ನು ತೋಟಗಾರಿಕೆಗೆ ಬಳುಸುತ್ತಿದ್ದಾರೆ.

೬.. **ಕೂರವರ ಬಾವಿ :** ಜೇಡರ ದಾಸಿಮಯ್ಯನನ್ನು ಉಲ್ಲೇಖಿಸುವ ಕ್ರಿ.ಶ.೧೧೪೪ರ ಶಾಸನವು ಗಬ್ಬೂರು ಗ್ರಾಮದ ಕೂರವರ ಬಾವಿಯ ಅಡಿಪಾಯಕ್ಕೆ ಹಾಕಿದ ಕಲ್ಲುಗಳಲ್ಲಿ ದೊರೆತಿದೆ. ಈ ಕೂರವರ ಬಾವಿಗೆ ಪ್ರಾಚೀನ ಕಾಲದ ಬಾವಿಯಾಗಿದ್ದು. ಮೊದಲು ನೀರಿನ ಬುಗ್ಗಿಯಿದ್ದು, ಈಗ ಮಳೆಗಾಲದ ನೀರು ಬಂದು ತುಂಬುತ್ತದೆ. ಈ ಬಾವಿಗೆ ಪೂರ್ವದಲ್ಲಿ ಮೆಟ್ಟಿಲುಗಳಿವೆ.

೭. **ದಾಸರಬಾವಿ :** ಈ ಬಾವಿಯು ಊರಿನ ಹೊರವಲಯದಲ್ಲಿದ್ದು. ಈ ಬಾವಿಯ ದಡದಲ್ಲಿ ಅಂಜನೇಯ ದೇವಾಲಯ, ಈಶ್ವರ ದೇವಾಲಯ ಮತ್ತು ಮಾರ್ತಂಡಪ್ಪನಗುಡಿಗಳಿವೆ. ಬಾವಿಯು ವೃತ್ತಾಕಾರದಲ್ಲಿದ್ದು. ಈ ನೀರನ್ನು ದಾಸರು ಬಳಸುವುದರಿಂದಲು ಇದಕ್ಕೆ ದಾಸರ ಬಾವಿ ಎಂದ ಹೆಸರು ಬಂದಿದೆ.

೮. **ಮಹಾನಂದೀಶ್ವರ :** ಈ ಬಾವಿಯ ಊರಿನ ಪಶ್ಚಿಮ ಭಾಗದಲ್ಲಿರುವ ಮಹಾನಂದೀಶ್ವರ ದೇವಾಲಯದ ಎಡಭಾಗದಲ್ಲಿದೆ. ಈ ಬಾವಿಯು ಗಬ್ಬೂರು ಹಂಪಣ್ಣಪ್ಪ ಕವಿಯ ಕಾಲಕ್ಕೆ ಸೇರಿದ್ದಾಗಿದೆ. ಈ ಬಾವಿಯ ನೀರನ್ನು ಹಂಪಣ್ಣ ಕವಿಯು ದಿನಾಲು ಈಶ್ವರ ದೇವರ ಪೂಜೆಗಾಗಿ ಬಳಸುತ್ತಿದ್ದನೆಂದು ತಿಳಿದುಬರುತ್ತದೆ. ಈ ಪುಷ್ಕರಣಿ ಸಣ್ಣ ಸಣ್ಣ ಗಟ್ಟಿಕಲ್ಲುಗಳಿಂದ ಇದರ ಭಿತ್ತಿಯನ್ನು ನಿರ್ಮಿಸಿದ್ದು. ದಕ್ಷಿಣದಿಂದ ಪಶ್ಚಿಮದಲ್ಲಿ ಹೋಗಿ ನೀರ ತರಲು ಸೋಪಾನಗಳನ್ನು ಮಾಡಲಾಗಿದೆ. ಇಂದಿಗೂ ಈ ಪುಷ್ಕರಣಿಗೆ ನೀರಿನ ಬುಗ್ಗಿಯಿದ್ದು, ಜೊತೆಗೆ ಬೆಟ್ಟದಿಂದ ಇಳಿದು ಬರುವ ನೀರನ್ನು ಈ ಪುಷ್ಕರಣಿಗೆ ಹೋಗಲು ವ್ಯವಸ್ಥೆ ಮಾಡಲಾಗಿದೆ.

೯. **ಹಂಪಣ್ಣ ಬಾವಿ :** ಹಂಪಣ್ಣಗುಡಿಯ ಎಡಭಾಗದಲ್ಲಿ ಈ ಬಾವಿ ಇದ್ದು ಬಲಭಾಗದಲ್ಲಿ ತ್ರಿಭುವನ ಮಲ್ಲನ ಆಳ್ವಿಕೆಯ ಕ್ರಿ.ಶ.೧೦೮೫ರ ಶಾಸನವಿದೆ. ಇದರ ಮುಂದೆ ಐದು ವೀರಗಲ್ಲಿಗಳಿವೆ. ಹಾಗೂ ನಾಗನಾಗಣಿಯರ ಮೂರ್ತಿಯಿದೆ. ಈ ಬಾವಿಗೆ ಪೂರ್ವಭಾಗದಲ್ಲಿ ಒಳಗೆ ಹೋಗಿ ನೀರು ತರಲು

ಮೆಟ್ಟಿಲುಗಳಿವೆ. ಈ ಸದ್ಯದಲ್ಲಿ ಮೆಟ್ಟಿಲುಗಳು ಕುಸಿದಿದ್ದು ಸುತ್ತಲೂ ಜಾಲಿಯ ಮರಗಳು ಬೆಳೆದುಬಿಟ್ಟಿವೆ.

ಈ ಬಾವಿಗಳಲ್ಲದೆ ಪ್ರಾಚೀನ ಕಾಲದಲ್ಲಿ ಹಾಗೂ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಸಿದ್ದರಬಾವಿ, ಬುಸ್ಸಣ್ಣಬಾವಿ ಅಂದನಾಬಾವಿ ಮುಂತಾದ ಬಾವಿಗಳ ಜೊತೆಗೆ ಹೈದರಾಬಾದಿನ ನಿಜಾಮರ ಕಾಲದಲ್ಲಿ ನಿರ್ಮಾಣವಾದ ಅನೇಕ ಸೇದುವ ಬಾವಿಗಳಿವೆ. ಈ ಎಲ್ಲಾ ಬಾವಿಗಳು ಚೌಕಾಕಾರ ಗೋಲಾಕಾರ ಹಾಗೂ ಇತರ ಆಕಾರಗಳಲ್ಲಿ ಈ ಬಾವಿಗಳನ್ನು ನೋಡಬಹುದು.

೪.೨. ಗಬ್ಬೂರಿನ ಕೋಟೆ

ಪ್ರಾಚೀನ ಕಾಲದಲ್ಲಿ ಆಳ್ವಿಕೆ ಮಾಡಿದ ಅರಸರು ತಮ್ಮ ರಕ್ಷಣೆಗಾಗಿ ಮತ್ತು ತಮ್ಮ ಮೇಲೆ ಯಾವ ಶತ್ರು ಸೈನ್ಯವು ನುಗ್ಗಬಾರದೆಂದು ತಾವು ಇರುವ ಪ್ರದೇಶದ ಸುತ್ತಲು ಕೋಟೆಯನ್ನು ಕಟ್ಟಿಕೊಳ್ಳುವ ಪರಿಪಾಠ ಬೆಳೆದುಬಂದಿತ್ತು. ಆದ್ದರಿಂದಲೆ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ಅನೇಕ ಅರಸು ಮನೆತನಗಳ ಕಾಲಾವಧಿಯಲ್ಲಿ ಈ ರೀತಿಯ ಕೋಟೆಯನ್ನು ನಿರ್ಮಾಣ ಮಾಡಿದ್ದು, ನಾವು ಇಂದಿಗೂ ನೋಡಬಹುದಾಗಿದೆ. ಅದರಂತೆ ಗಬ್ಬೂರಿನಲ್ಲಿ ಕೂಡ ಹನ್ನೊಂದು ಮತ್ತು ಹದಿಮೂರನೆ ಶತಮಾನದ ಅವಧಿಯಲ್ಲಿ ನಿರ್ಮಾಣವಾದ ಕೋಟೆಯಿದ್ದು ಇದು ಅನೇಕ ತರಹ ಗಟ್ಟಿಕಲ್ಲು ಹಾಗೂ ಬಿಳಿ ಮತ್ತು ಕಪ್ಪು ಬೂದಬಣ್ಣದ ಗುಂಡುಗಳಿಂದ ನಿರ್ಮಾಣವಾದ ಕೋಟೆಯಿದೆ.

ಗಬ್ಬೂರಿನಲ್ಲಿ ಆಯಾತಾಕಾರದ ಶಿಥಿಲಾವಸ್ಥೆಯಲ್ಲಿರುವ ಕೋಟೆಯಿದೆ. ಇದು ನೆಲಮಟ್ಟದಲ್ಲಿದೆ. ದಕ್ಷಿಣ ಭಾಗದ ಗೋಡೆಯು ನೇರವಾಗಿಲ್ಲ. ಪೂರ್ವದಿಂದ ಪಶ್ಚಿಮಕ್ಕೆ ಸ್ವಲ್ಪ ದೂರ ಹೋಗಿ ಲಂಬಕೋನದಲ್ಲಿ ಉತ್ತರಕ್ಕೆ ತಿರುಗಿ ಸ್ವಲ್ಪ ಮುಂದೆ ಹೋಗಿ ಪುನಃ ಲಂಬಕೋನದಲ್ಲಿ ಪಶ್ಚಿಮಕ್ಕೆ ತಿರುಗಿ ಮುಂದೆ ಹೋಗುತ್ತದೆ. ದಕ್ಷಿಣ ಗೋಡೆಯಲ್ಲಿ ಮಾತ್ರ ಆಯತಾಕಾರವ ಕೊತ್ತಲಗಳಿವೆ. ಉಳಿದ ಗೋಡೆಗಳಲ್ಲಿ ಕೊತ್ತಳಗಳಿಲ್ಲ. ದಕ್ಷಿಣ ಗೋಡೆಯ ನಿರ್ಮಾಣ ವಿಶಿಷ್ಟವಾಗಿದೆ. ಗಟ್ಟಿಯಾದ ಕಪ್ಪುಗುಂಡು ಕಲ್ಲುಗಳನ್ನು ಬಿಳಿಯ ಕಲ್ಲುಗಳನ್ನು ವಿವಿಧ ರೀತಿಯಲ್ಲಿ ಇಲ್ಲಿ ಬಳಸಲಾಗಿದೆ. ಕೆಲವು ಗುಂಡುಕಲ್ಲುಗಳನ್ನು ಹಾಗೆಯೇ ಬಳಸಿದರೆ ಕೆಲವು ಕಲ್ಲುಗಳ ಒಂದು, ಎರಡು. ಮೂರು ಅಥವಾ ನಾಲ್ಕು ಬದಿಗಳನ್ನು ಅವಶ್ಯಕತೆಗನುಗುಣವಾಗಿ ಸಪಾಟಾಗಿ ಕೆತ್ತಿ ಬಳಸಿವೆ. ಕಲ್ಲುಗಳು ಅನಿಯಮಿತಾಕಾರ ದಲ್ಲಿರುವುದರಿಂದ ಕಲ್ಲುಗಳ ಮಧ್ಯದಲ್ಲಿ ದೊಡ್ಡ ಸಂದಿಗಳುಂಟಾಗಿವೆ. ಸಂಧಿಗಳಲ್ಲಿ ಅವಶ್ಯಕತೆಗೆ ತಕ್ಕಂತಹ ದೊಡ್ಡ ಮತ್ತು ಚಿಕ್ಕ ಕಲ್ಲು ಹಾಗೂ ಚೆಕ್ಕೆಗಳನ್ನು ಬಳಸಿದೆ. ಇಲ್ಲಿ ಗಾರೆಯನ್ನು ಉಪಯೋಗಿಸಿಲ್ಲ. ಇಂತಹ ರಚನೆಯ ಕೋಟೆಯನ್ನು ಹೊಯ್ಸಳರ ರಾಜಧಾನಿಯಾಗಿದ್ದ ಹಳೇಬಿಡಿನಲ್ಲಿ

ನೋಡಬಹುದು. ಅದುದರಿಂದ ಇದರ ಕಾಲವನ್ನು ಹನ್ನೆರಡು ಹದಿಮೂರನೇ ಶತಮಾನಗಳೆಂದು ನಿರ್ಧರಿಸಲಾಗಿದೆ. ಎರಡನೆಯ ಕೊತ್ತಳದ ಒಂದು ಕಲ್ಲಿನ ಮೇಲೆ ಉಬ್ಬು ಶಿಲ್ಪವಿದೆ. ಶಿಲ್ಪದಲ್ಲಿ ಒಬ್ಬ ಮನುಷ್ಯನು ಆನೆಯೊಂದಿಗೆ ಹೋರಾಡುತ್ತ ಆನೆಯನ್ನು ಸದೆ ಬಡಿದು ಅವರ ಎರಡು ಕಾಲುಗಳನ್ನು ಹಿಡಿದು ಮೇಲೆತ್ತಿದ್ದಾನೆ. ಉಳಿದ ಮೂರು ದಿಕ್ಕಿನ ಕೋಟೆ ಗೋಡೆಯನ್ನು ಚೌಕಾಕಾರದ ಕಲ್ಲುಗಳಿಂದ ಕಟ್ಟಿದೆ. ಕಲ್ಲುಗಳನ್ನು ಸರಿಯಾಗಿ ಕೆತ್ತದೆ ಇರುವುದರಿಂದ ಮಧ್ಯದಲ್ಲಿ ದೊಡ್ಡ ಸಂದಿಗಳಾಗಿವೆ. ಇಲ್ಲಿ ಬೆಣಚುಕಲ್ಲನ್ನು(Granite)ಉಪಯೋಗಿಸಿದೆ. ಇದನ್ನು ಹದಿನಾರು ಹದಿನೇಳನೆಯ ಶತಮಾನದಲ್ಲಿ ಕಟ್ಟಿದೆ. ಕೋಟೆಯನ್ನು ಪ್ರವೇಶಿಸಲು ಐದು ಬಾಗಿಲುಗಳಿವೆ. ಪೂರ್ವದಿಕ್ಕಿನಲ್ಲಿರುವ ಮೂರು ಬಾಗಿಲುಗಳನ್ನು ತಿಮ್ಮಾಪುರ ಅಗಸಿ, ರಾಯಚೂರು ಅಗಸಿ, ಸಿರವಾರ ಅಗಸಿ, ಪಶ್ಚಿಮ ದಿಕ್ಕಿಲ್ಲಿರುವ ಬಾಗಿಲನ್ನು ದೇವದುರ್ಗ ಅಗಸಿ ಮತ್ತು ಉತ್ತರ ದಿಕ್ಕಿನಲ್ಲಿರುವುದನ್ನು ಖಾನಪುರ ಆಗಸಿ ಎಂದು ಕರೆಯುವರು. ರಾಯಚೂರು ಅಗಸಿಗೆ ಬಾಗಿಲು ಚೌಕಟ್ಟಿಲ್ಲ ಗೋಡೆಯ ಸಾಧಾರಣ ಕಲ್ಲುಗಳು ಮುಂದೆ ಚಾಚಿ ಬೋದಿಗೆಗಳಾಗಿವೆ. ಮೇಲೆ ಸರಳವಾದ ಉತ್ತರಂಗ ಇದೆ. ಉಳಿದ ಬಾಗಿಲುಗಳು ಶಿಥಿಲವಾಗಿವೆ. ಗ್ರಾಮದ ಒಳಗೆ ಎರಡು ಬಾಗಿಲುಗಳಿವೆ. ಇವುಗಳ ಪಕ್ಕದಲ್ಲಿ ಈಗ ಮನೆಗಳಿರುವುದರಿಂದ ಕೋಟೆಗೋಡೆ ಉಳಿದಿಲ್ಲ. ಒಂದು ಬಾಗಿಲು ದಕ್ಷಿಣ ಭಾಗದಲ್ಲಿ ಮತ್ತೊಂದು ಮಧ್ಯಭಾಗದಲ್ಲಿ ಇದೆ. ದಕ್ಷಿಣ ಭಾಗದ ವೀರಭದ್ರ ಅಗಸಿಯನ್ನು ದೇವಾಲಯದಿಂದ ತಂದ ಕಲ್ಲುಗಳಿಂದ ಕಟ್ಟಿದೆ. ಕಂಬಗಳನ್ನು ತೋಳುಗಳನ್ನಾಗಿಟ್ಟು ಅವುಗಳ ಮೇಲೆ ಒಂದು ತೊಲೆಯನ್ನಿಟ್ಟು ಕಟ್ಟಿದೆ. ತೊಲೆಯ ಮೇಲೆ ಚೌಕಾಕಾರದ ಹೂಗಳಿರುವ ಪಟ್ಟಿಕೆಯಿದೆ. ಇದನ್ನು ಸಾಮಾನ್ಯವಾಗಿ ಅಧಿಷ್ಠಾನದಲ್ಲಿ ಕಾಣಬಹುದು. ಆದರೆ ಅದಕ್ಕಿಂತ ದೊಡ್ಡ ಕೀರ್ತಿಮುಖವಿದೆ. ತೋಳುಗಳ ಪಕ್ಕದಲ್ಲಿ ನಾಗರ ದೇವಾಲಯದ ಮಾದರಿಯನ್ನು ಹೊತ್ತ ಕಂಬವಿರುವ ಗೋಡೆಯ ಕಲ್ಲನ್ನು ಅಲಂಕಾರಕ್ಕಾಗಿ ಜೋಡಿಸಿದೆ. ಹನ್ನೊಂದನೇ ಶತಮಾನದ ದೇವಾಲಯದ ಕಲ್ಲುಗಳನ್ನು ಇಲ್ಲಿ ಪುನಃ ಬಳಸಲಾಗಿದೆ. ಊರ ಮಧ್ಯದಲ್ಲಿರುವ ಕಚೇರಿ ಅಗಸಿ ಕಮಾನಿನಾಕಾರದಲ್ಲಿದೆ. ಇಲ್ಲಿ ಗಾರೆಯನ್ನು ಬಳಸಲಾಗಿದೆ. ಚೆನ್ನಾಗಿ ನಯಗೊಳಿಸಿದ ಕಲ್ಲುಗಳಿಂದ ಕಟ್ಟಿದ ಈ ಬಾಗಿಲು ಹದಿನೇಳು ಹದಿನೆಂಟನೇ ಶತಮಾನದ್ದು(ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳು ಒಂದು ಅಧ್ಯಯನ, ಸುಜಾತ ಮಲ್ಲನಗೌಡ). ಅಗಸಿಯ ಪೂರ್ವದ ಗೋಡೆಯಲ್ಲಿ ಜಗದೇಕಮಲ್ಲನು ಕ್ರಿ.ಶ.೧೧೪೫ರ ಶಾಸನದ ಕಲ್ಲನ್ನು ಜೋಡಿಸಲಾಗಿದೆ. ಈ ಅಗಸಿಯ ಅಕ್ಕಪಕ್ಕದಲ್ಲಿ ಕೇಶವ ದೇವಾಲಯ ಹಾಗೂ ನೀಲಕಂಠೇಶ್ವರ ದೇವಾಲಯಗಳಿವೆ.

ಅಧ್ಯಾಯ ೫

ಗಬ್ಬೂರಿನ ಸಾಹಿತ್ಯ

ಕನ್ನಡ ಸಾಹಿತ್ಯವು ಕಾಲ ಕಾಲಕ್ಕೆ ಪಡೆದುಕೊಂಡ ತಿರುವುಗಳನ್ನು ಅದರ ಚರಿತ್ರೆಯೊಂದಿಗೆ ನೋಡಲಾಗಿದೆ. ೨೦೦ ವರ್ಷಗಳ ಚರಿತ್ರೆಯಲ್ಲಿ ಕನ್ನಡ ಸಾಹಿತ್ಯವು ಚಂಪು, ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮುಂತಾದ ರೂಪಗಳಲ್ಲಿ ಅರಳಿತು. ಹೊಸಗನ್ನಡ ಕಾಲದಲ್ಲಿ ಆಧುನಿಕ ಪ್ರಕಾರಗಳಾದ ಕಾವ್ಯ, ಕಾದಂಬರಿ, ಕತೆ, ನಾಟಕ, ಲಲಿತಪ್ರಬಂಧ, ವಿಮರ್ಶೆ ಮುಂತಾದವುಗಳಲ್ಲಿ ವೈವಿಧ್ಯಮಯವಾಗಿ ಬೆಳೆಯಿತು. ಇದರ ಜತೆಗೆ ಸಮುದಾಯಗಳ ಸೃಷ್ಟಿಯಾದ ಜಾನಪದ ಸಾಹಿತ್ಯವೂ ಸಮೃದ್ಧವಾಗಿದೆ.

೧. ಗಬ್ಬೂರು ಬಿಬ್ಬಿ ಬಾಚಯ್ಯ

ಹನ್ನೆರಡನೆಯ ಶತಮಾನದ ಪ್ರಮುಖ ಶರಣರಲ್ಲಿ ಗಬ್ಬೂರಿನ ಬಿಬ್ಬಿ ಬಾಚಯ್ಯನು ಒಬ್ಬ. ಬಿಬ್ಬ ಇಲ್ಲವೆ ಬಿಬ್ಬಿ ಬಾಚಯ್ಯನು ಬಾಚರಸ ಎಂದು ಶರಣರಿಂದ (ಸಿದ್ಧರಾಮ) ಕರೆಸಿಕೊಂಡಿದ್ದಾನೆ. "ಏಣಾಂಕಧರ ಸೋಮೇಶ್ವರ" ಎಂಬ ವಚನಾಂಕಿತವನ್ನು ಇಟ್ಟುಕೊಂಡು ಅನೇಕ ವಚನಗಳನ್ನು ರಚಿಸಿದ್ದಾನೆ. ಈತನ 'ಪ್ರಸಾದ ಮಹಾತ್ಮೆ' ಪ್ರಸಿದ್ಧವಾದುದು. ಪ್ರಸಾದವನ್ನು ಎಂಜಲೆಂದು ನಿಂದಿಸಿದ ಗಬ್ಬೂರಿನ ವಿಪ್ರರಿಗೆ ಶರಣರ ಪ್ರಸಾದ ಮಹಿಮೆಯನ್ನು ಮನಗಾಣಿಸಿದ ಪವಾಡವೊಂದು ಈತನ ಹೆಸರಿನಲ್ಲಿದೆ. ಅದು ಈ ಕೆಳಗಿನಂತೆಯಿದೆ.

ಗಬ್ಬೂರು ಒಂದು ಅಗ್ರಹಾರ. ಇಲ್ಲಿ ಆದಿತ್ಯದೇವ ಎಂಬ ವಿಪ್ರನ ಮಗ ಬಾಚಯ್ಯ ಕುಲದಿಂದ ವಿಪ್ರನಾದರೂ ಶರಣ ಮಾರ್ಗದ ಆಕರ್ಷಣೆಗೆ ಒಳಗಾಗಿ ತನ್ನ ಕುಲ ತೊರೆದು ಶರಣನಾದ. ಶರಣರ ಒಕ್ಕು ಮಿಕ್ಕ ಪ್ರಸಾದ ಜೀವಿಯಾದ. ಒಂದು ದಿನ ಪಕ್ಕದ ಹಳ್ಳಿಯಲ್ಲಿ (ಪೆದ್ದವಾಡ ಎಂದು ಭೈ.ಕಾ.ರತ್ನಕರ) ಜಂಗಮಾರಾಧನೆ ಮುಗಿಸಿ ಪ್ರಸಾದವನ್ನು ಬಂಡಿಯಲ್ಲಿ ತುಂಬಿಕೊಂಡು ಗಬ್ಬೂರಿಗೆ ಮರಳುವಾಗ, ಊರೊಳಗಿನ ವಿಪ್ರರು ಪ್ರಸಾದವನ್ನು ಎಂಜಲೆಂದು ನಿಂದಿಸುತ್ತಾರೆ. ಕೋಪಾವಿಷ್ಟನಾದ ಬಾಚಯ್ಯನು ಅವರ ಕುಹಕ ನುಡಿಗಳಿಗೆ ಪ್ರತಿಯಾಗಿ ಪ್ರಸಾದವೆತ್ತಿ ಅವರ ಮನೆಗಳ ಮೇಲೆ ತೂರುತ್ತಾನೆ. ಮನೆಗೆ ಉರಿಬಿದ್ದು ಧಗಧಗಿಸ ತೊಡಗುತ್ತವೆ. ತಪ್ಪಾಯಿತೆಂದು ವಿಪ್ರರು ಬಾಚಯ್ಯನಿಗೆ ಶರಣ ಬರುತ್ತಾರೆ. ಬಾಚಯ್ಯ ಪ್ರಸಾದದ ಉರಿಯನ್ನು ಹಿಂತೆಗೆದುಕೊಳ್ಳಲಾಗಿ ಅವರ ಮನೆ ಮೊದಲಿನಂತಾಗುತ್ತದೆ. ಹೀಗೆ ಚಾರಿತ್ರಿಕ ಎನ್ನಬಹುದಾದ ಬಾಚಯ್ಯನ ಪ್ರಸಾದದ ಪವಾಡ ಮುಂದೆ ಕಾವ್ಯ ಪುರಾಣಗಳಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲದೆ ನಿರೂಪಿತವಾಗಿರುವುದು ಅರಿವಿಗೆ ಬರುತ್ತದೆ.

ಕ್ರಿ.ಶ.೧೧೯೫ರಲ್ಲಿ ರಚಿತವಾದ ಪಾಲ್ಕುರಿಕೆ ಸೋಮನಾಥ ಕವಿಯ ತೆಲುಗು 'ಬಸವ ಪುರಾಣ'ದಲ್ಲಿ ಎರಡು ಕಡೆ ಬಿಬ್ಬಿ ಬಾಚಯ್ಯನ ಪ್ರಸ್ತಾಪ ಬರುತ್ತದೆ. ಸಂಗಮೇಶ್ವರುಡು ಬಸವಣಿ ಮಾಡುವ ಕನ್ನಡುಗು ಕಥೆ ಹೇಳುವಲ್ಲಿ 'ಪ್ರಸಾದುಲು ಬಿಬ್ಬಿಬಾಚ್ಚಯ್ಯಗಾರು' (ಪ್ರಸಾದಿ ಬಿಬ್ಬಿಬಾಚಯ್ಯ) ವರ್ಣನೆ ಬರುತ್ತದೆ. ಮತ್ತೆ ಸಪ್ತಮಾಶ್ವಾಸನದಲ್ಲಿ 'ಬಿಬ್ಬಿ ಬಾಚಯ್ಯಗಾರ ಕಥೆ' ಎಂಬಲ್ಲಿ ಬಿಬ್ಬಿಬಾಚಯ್ಯನ ಕಥೆ ಬರುತ್ತದೆ.

ಕ್ರಿ.ಶ.೧೪೭೦ರಲ್ಲಿದ್ದ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ

ಗೊಬ್ಬೂರಿನೊಳು ಬಿಬ್ಬಿಬಾಚಯ್ಯನುಂ
ಭಕ್ತ ಪ್ರಸಾದಮಂ ಕೈ ಕೊಳಲು ಮತ್ತೊರ್ವ
ಭಕ್ತ ಗೃಹದಿಂ ಪ್ರಸಾದದ ಭಂಡಿ ತುಂಬಿ ಬರೆ
ದ್ವಿಜರದಂ ಜರಿಯ ಕೇಳಿ
ಸುತ್ತ ಮನೆಗಳ ಮೇಲೆ ತಳೆಯ ಭಸ್ಮಗಳಾಗಿ
ಭಕ್ತಿಯಂ ವಿಪ್ರರುಂ ಬೇಡಿಕೊಳ್ಳಲಾಕ್ಷಣಂ
ಉತ್ಸವದ ಭವನಗಳ ಮಾಡಿ ತೋದವನವರ ಚರಣಾಂಬುಜಕ್ಕೆ ಶರಣು

ಎಂದಿದ್ದಾನೆ.

ಕ್ರಿ.ಶ.೧೫೩೦ರಲ್ಲಿ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ

ಶಿವಚಿತ್ತರಾವಿಪ್ರರೊಂದೆಸೆ ಹಿರಿಯ ಭಕ್ತ
ರವರ ಕೆರೆಹಿನ ಕುಣಿಕೆಯೊಂದೆಸೆಯೊಳಿಟ್ಟು ತೂ
ಗುವ ಕಾಲದಲ್ಲಿ ಕೀಳಾಗದೇ ಪಾರ್ವರಾ ಬಿಬ್ಬಿ ಬಾಚರ ಬಂಡಿಯಾ
ನವ ಸುಪ್ರಸಾದಮಂಜರೆದು ಒಂದೆರಗರೇ

ಕ್ರಿ.ಶ.೧೫೫೦ರಲ್ಲಿದ್ದ ನಂಜುಂಡನ ಭೈರವೇಶ್ವರ ಕಾವ್ಯದಲ್ಲಿ

ಸವಿದುಳುಹಿದ ಪ್ರಸಾ
ದವೆ ಭವರೋಗಕ್ಕೆ ಮದ್ದು
ಅವಿರತ ಮುಕ್ತಿಗೆ
ತವರೆಂದು ನಂಬಿರ್ದ
ಭುವಿಯೊಳು ಬಿಬ್ಬಿಬಾಚಯ್ಯ

ಎಂಬುದಾಗಿ ಮೊದಲನೆಯ ಸಂಧಿಯಲ್ಲಿ ಬಂದರೆ

ಪರಮ ಪ್ರಸಾದವ
ತೆರುತಿರೆ ಕಂಡು ಭೂ
ಸುರರೆಲ್ಲ ನಿಂದಿಸಲವರ
ಪುರವ ಸುಡಲು ಬಂದು
ಶರಣ ಪೊಕ್ಕರಿಗೆಲ್ಲಿ
ಮರಳಿತ್ತ ಬಿಬ್ಬಿ ಬಾಚಯ್ಯ

ಎಂಬುದಾಗಿ ಐದನೆಯ ಸಂಧಿಯಲ್ಲಿ ಬರುತ್ತದೆ.

ಕ್ರಿ.ಶ.೧೬೫೦ರಲ್ಲಿದ್ದ ಪಂಚಯ್ಯನ ಭಕ್ತಿರಸದ ಸೋನೆಯಲ್ಲಿ

ಗಬ್ಬೂರೊಳಗೆ ಒಬ್ಬ ಬಿಬ್ಬಿಬಾಚಯ್ಯನು
ಉಬ್ಬಿ ಶೇಷವನೊಯಿವಾಗಾ
ಗಬ್ಬಿ ಪಾರುವರೆಲ್ಲಾ ಕೊಬ್ಬಿಂದ ಜರೆಯಲು
ಅಬ್ಬರದಲಿ ಸುಟ್ಟ ಪುರವ

ಹೀಗೆ ಬಿಬ್ಬಿ ಬಾಚಯ್ಯನ ಕಥೆ ವಿವಿಧ ಕಾವ್ಯಗಳಲ್ಲಿ, ಕಥೆಗಳಲ್ಲಿ ಬರುತ್ತಿದ್ದು ಎಲ್ಲೆಡೆಯೂ ನಾವೂ ನೋಡುವುದು ಬಿಬ್ಬಿ ಬಾಚಯ್ಯನ ಪ್ರಸಾದದ ಬಗ್ಗೆ ಇಟ್ಟಿದ್ದ ನಂಬುಗೆ. ರಾಯಚೂರು ಜಿಲ್ಲೆಯ ಈ ಗಬ್ಬೂರಿನ ಪೂರ್ವ ದಿಕ್ಕಿಗೆ ೨ ಕಿ.ಮೀ. ಅಂತರದಲ್ಲಿ ಬಿಬ್ಬಿ ಬಾಚಯ್ಯನ ಹೊಲವಿದೆ. ಈ ಹೊಲದಲ್ಲಿ ಬಾಚಯ್ಯ ಜಂಗಮರಿಗೆ ನಿತ್ಯ ಪ್ರಸಾದ ಅರ್ಪಿಸುತ್ತಿದ್ದ ಎಂದು ಹೇಳಲಾಗುವ 'ಅರ್ಪಣಕಟ್ಟೆ' ಇದೆ. ಈ ಕಟ್ಟೆಯ ಮೇಲೆ ಸೊಂಪಾಗಿ ಬೆಳೆದು ವಿಶಾಲವಾಗಿ ಹರಡಿಕೊಂಡು ನೆಲದವರೆಗೂ ಬಾಗಿ ಮೇಲೆದ್ದಿರುವ ವಿಲಕ್ಷಣ ಆಕರ್ಷಕವಾಗಿರುವ ಬನ್ನಿಯ ಮರ ಇದೆ. ಈ ಅರ್ಪಣಕಟ್ಟೆಯನ್ನು ಬಾಚಯ್ಯನವರ 'ಪ್ರಸಾದ ಅರ್ಪಣದ ಕಟ್ಟೆ' ಎಂದು ಹೇಳುವುದರ ಜೊತೆಗೆ ಬಾಚಯ್ಯನವರ ಸಮಾಧಿ ಗದ್ದುಗೆ ಇದೆ. ಅರ್ಪಣ ಎಂದಾಗ ಪ್ರಸಾದದ ನೆನಪಾಗುತ್ತದೆ (ವೀರಶೈವ ಪಾರಿಭಾಷಿಕ ಪದ ಅರ್ಪಣ) ಬಿಬ್ಬಿ ಬಾಚಯ್ಯ ಪ್ರಸಾದಿಕನಂದೇ ಪ್ರಸಿದ್ಧ. ಈ ಹಿನ್ನೆಲೆಯಲ್ಲಿ ಈ 'ಅರ್ಪಣ ಕಟ್ಟೆ' ಜಂಗಮ ದಾಸೋಹದ ಕಟ್ಟೆಯಾಗಿದ್ದಿರಬಹುದು ಎನಿಸುತ್ತದೆ. ಈ 'ಅರ್ಪಣ ಕಟ್ಟೆ'ಗೆ ನಿತ್ಯ ಪೂಜೆ ಸಲ್ಲುತ್ತಿದ್ದು, ಇವರ ಪೂಜಾರಿಗಳು ಗಾಂಜಿಗುಂಪಿ ಮಠ ಎಂಬ ವೀರಶೈವ

ಜಂಗಮರಾಗಿದ್ದು ಅವರೇ ಈ ಹೊಲದ ಉಸ್ತುವಾರಿಯನ್ನು ನೋಡಿಕೊಳ್ಳುತ್ತ ಬಂದಿದ್ದಾರೆ. ಈ ಹೊಲಕ್ಕೆ ಸಂಬಂಧಿಸಿದ ವಿಶೇಷ ಆಚರಣೆ ಎಂದರೆ ಗಬ್ಬೂರು ಹಾಗೂ ಸುತ್ತಮುತ್ತಲಿನ ಜನ ಯಾರೂ ಹೊಲದಲ್ಲಿ ದನಗಳನ್ನು ಬಿಡುವುದಿಲ್ಲ, ಸುಗ್ಗಿಯಲ್ಲಿ ಕದಿಯುವುದಿಲ್ಲ, ಚಪ್ಪಲಿಯನ್ನು ಮೆಟ್ಟಿಕೊಂಡು ಯಾರು ಹೊಲದೊಳಗೆ ಪ್ರವೇಶಿಸುವುದಿಲ್ಲ. ಕಾರಣ ಕೇಳಿದರೆ ಬಿಬ್ಬಿ ಬಾಚಯ್ಯನವರು ಶರಣರು ಎಂದು ಹೇಳುತ್ತಾರೆ. ಬಾಚಯ್ಯನವರ ಬಗ್ಗೆ ಈ ಜನತೆ ಹೊಂದಿದ ಭಯ ಭಕ್ತಿ ಗಮನಾರ್ಹವಾದುದು.

ರಾಯಚೂರು ಜಿಲ್ಲೆ ಗಬ್ಬೂರಿನಲ್ಲಿ ಬಾಚಯ್ಯ, ಬಿಬ್ಬಣಯ್ಯ, ಬಿಬ್ಬಣ್ಣ, ಬಿಬಿಬಾಚರಸ ಎಂಬ ಹೆಸರಿಡುವುದು ತಲೆ ತಲೆಮಾರಿನಿಂದ ಪರಂಪರೆ ಬೆಳೆದು ಬಂದಿದೆ. ಈ ಊರಿನಲ್ಲಿ ಪ್ರತ್ಯೇಕವಾಗಿ ಬ್ರಾಹ್ಮಣರ ಓಣಿ ಇದ್ದು. ಈ ಬ್ರಾಹ್ಮಣ ಮನೆತನದವರು ಮೇಲೆ ಹೇಳಿದ ಬಿಬ್ಬಿ ಬಾಚಯ್ಯನ ಅರ್ಪಣಕಟ್ಟೆಗೆ ನಡೆದುಕೊಳ್ಳುವುದು ಈಗಲು ಇದೆ. ಇದರ ಬಗ್ಗೆ ತಾವು ಹಿಂದೆ ಬಾಚಯ್ಯನವರ ಪ್ರಸಾದವನ್ನು ನಿಂದಿಸಿ ತಪ್ಪ ಮಾಡಿದ್ದಾಗಿ ಹೇಳುತ್ತಾರೆ. ಅವರ ಅನುಗ್ರಹಕ್ಕೆ ಈ ಪೂಜೆ ಎನ್ನುತ್ತಾರೆ.

ಬಿಬ್ಬಿಬಾಚಯ್ಯನವರ ೧೦೨ ವಚನಗಳಿವೆ. ಇವುಗಳಲ್ಲಿ ಅವರ ಅಂಕಿತನಾಮ 'ಏಣಾಂಕದರ ಸೋಮೇಶ್ವರಲಿಂಗ' ಅಗಿದೆ. ಗಬ್ಬೂರಿನಿಂದ ೩ ಕಿ.ಮೀ.ದೂರದಲ್ಲಿ ಸೋಮೇಶ್ವರ (ಜಂಬುಲಿಂಗ)ದೇವಾಲಯವಿದ್ದು, ಈ ದೇವಾಲಯದ ಲಿಂಗದಲ್ಲಿ ಏಳು ಬಣ್ಣಗಳು ಕಾಣಿಸುತ್ತವೆ. ಇದೇ ದೇವಾಲಯಕ್ಕೆ ಹನ್ನೆರಡನೆಯ ಶತಮಾನದಲ್ಲಿ ಬಿಬ್ಬಿ ಬಾಚಯ್ಯ ಶಿವಶರಣರು ನಡೆದುಕಂಡು, ಈ ದೇವರ ಹೆಸರಿನಲ್ಲಿ ತಮ್ಮ ವಚನಗಳಿಗೆ ಅಂಕಿತವಿಟ್ಟುಕೊಂಡಿರಬಹುದೆಂದು ಊಹಿಸಲಾಗಿದೆ. ಬಿಬ್ಬಿ ಬಾಚಯ್ಯನವರ ವಚನ ಶೈಲಿ ದೀರ್ಘವಲ್ಲದ ಅವರ ಅನೇಕ ವಚನಗಳು ಸೂತ್ರಪ್ರಾಯವಾಗಿದ್ದು ವ್ಯಾಖ್ಯಾನದ ಅಗತ್ಯವಿರದಷ್ಟು ಸರಳವಾಗಿವೆ ಮತ್ತು ಅರ್ಥಪೂರ್ಣವಾಗಿವೆ. ಮಾದರಿಗೆ ಕೆಳಗಿನ ಈ ವಚನವನ್ನು ಗಮನಿಸಬಹುದು.

> ಭ್ರಾಂತಳಿದು ನಿಂದಲ್ಲಿ ಅರ್ಚನೆ
> ವಿಕಾರವಳಿದಲ್ಲಿ ಪೂಜೆ
> ಸಮತೆ ನಿಂದಲ್ಲಿ ನೈವೇದ್ಯ
> ಸಕಲವನರಿದು ಮರೆದಲ್ಲಿ ಪರಿಪೂರ್ಣ
> ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ ||೮೪||

> ಅಂಗಕ್ಕೆ ಲಿಂಗ ಸಂಬಂಧ
> ಆತ್ಮಂಗೆ ಅರಿವು ಸಂಬಂಧ
> ಅರಿವಿಂಗೆ ನಿಶ್ಚಯ ಸಂಬಂಧ
> ನಿಶ್ಚಯ ನಿಜದಲ್ಲಿ ನಿಂದಲ್ಲಿ
> ಇಷ್ಟಲಿಂಗದ ತೃಷ್ಣೆ ಅಡಿಗಿತ್ತು
> ಏಣಾಂಕಧರ ಸೋಮೇಶ್ವರ ಲಿಂಗವರಿಯಲಾಗಿ ||೪||

ಸ್ವಪ್ನದಲ್ಲಿ ಸಕಲಭೋಗಂಗಳ ಕಂಡು
ಎಚ್ಚೆತ್ತು ನೋಡಿದಡೆ ಮತ್ತಲ್ಲಿಯೆ ಬಚ್ಚಬಯಲಾಯಿತ್ತು
ಅದು ತನುವಿನ ಇರುವು, ಮನದ ಭ್ರಾಂತು
ತೋರಿ ಅಡಗುವ ಭೇದ
ಏಣಾಂಕಧರ ಸೋಮೇಶ್ವರಲಿಂಗದಲ್ಲಿಯೇ ಐಕ್ಯ ||೨೨||

ಎಲೆಯಿಲ್ಲದ ವೃಕ್ಷದಲ್ಲಿ ಹೂವಿಲ್ಲದ ಕಾಯಾಗಿತ್ತು
ಕಾಯಿ ಉದ್ದುರಿ ಹಣ್ಣು ಬಲಿಯತ್ತು
ಕಣ್ಣಿಗೆ ಹಣಲ್ಲದೆ ಮೆಲುವುದಕಲ್ಲ
ಏಣಾಂಕಧರ ಸೋಮೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ||೩೫||

ಯೋನಿಯಿಲ್ಲದ ಆಕಳಿನಲ್ಲಿ, ಬಾಯಿಯಿಲ್ಲದ ಕರು ಹುಟ್ಟಿತ್ತು
ಮೊಲೆಯಿಲ್ಲದ ಹಾಲಕುಡಿದು, ಒಡಲಿಲ್ಲದೆ ತಿರುಗಾಡುತ್ತದೆ
ಏಣಾಂಕಧರ ಸೋಮೇಶ್ವರಲಿಂಗ ಇದೇನು ಸೋಜಿಗವೆಂದರಿಯೆ ||೩೮||

ಸ್ವಾದವಿಲ್ಲದ ಹಣ್ಣ, ಸೌರಭವಿಲ್ಲದ ಕುಸುಮ
ಸಾರವಿಲ್ಲದ ದ್ರವ್ಯ, ಅದಾರಿಗೆ ಯೋಗ್ಯ
ಅರಿವಿಲ್ಲದವನ ಇಷ್ಟದ ಬರಿಯೇ ಡಂಬಕದ ಪೂಜೆ
ಅಡಿಯಿಡಲಿಲ್ಲ, ಏಣಾಂಕಧರ ಸೋಮೇಶ್ವರ ಲಿಂಗಕ್ಕೆ ||೮೪||

೨. ಗಬ್ಬೂರು ಹಂಪಣ್ಣ

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಅರಕೇರಿಯ ಗ್ರಾಮದ ಬಣಜಿಗರ ಮನೆತನದಲ್ಲಿ ಹುಟ್ಟಿದ ಹಂಪಣ್ಣ ವ್ಯಾಪಾರದ ಲೆಕ್ಕಾಚಾರ ಕಲಿಯುವುದರ ಬದಲು ಅಧ್ಯಾತ್ಮದೆತ್ತರಕ್ಕೇರಿದ ದೊಡ್ಡ ಅನುಬಾವಿ ಕವಿಯಾಗಿ ಬೆಳೆದು ಬದುಕಿನ ವ್ಯಾಪಾರದ ಏರಿಳಿತಗಳನ್ನು ತಿಳಿಸಿದ.

ಶಾಲೆಯಲ್ಲಿ ಏನೂ ಕಲಿಯದ ಹಂಪಣ್ಣ ಯೌವ್ವನಕ್ಕೆ ಬರುವಷ್ಟರಲ್ಲಿ ಆತನ ತಂದೆ ತಾಯಿ ನಿಧನರಾದರು. ಅಣ್ಣ ತಮ್ಮಂದಿರರು ಈತನನ್ನು ಸೇರದೆ ಮನೆಯಿಂದ ಹೊರ ಹಾಕಿದರು. ಮನೆ ಊರು ಬಿಟ್ಟು ಹಂಪಣ್ಣ ಅಲ್ಲಿ ಇಲ್ಲಿ ಅಲೆದಾಡಿ ಅರಿವು ಬೆಳೆಸಿಕೊಂಡು ಗಬ್ಬೂರಿಗೆ ಬಂದು ನೆಲಸಿ ಗಬ್ಬೂರು ಹಂಪಣ್ಣನಾದ.

ಈ ಊರಿನ ಅರ್ಪಣಿಗೆ ಎಂಬುವರ ಮನೆಯಲ್ಲಿ ವಾಸ ಮಾಡಿದ ಹಂಪಣ್ಣ ವ್ಯಾಪಾರ ಮಾಡಲು ಪ್ರಾರಂಭಿಸಿದನು. ಅರಿಪಣ, ಬೆಳ್ಳೊಳ್ಳಿಗಳನ್ನು ಪುಟ್ಟಿಯಲ್ಲಿ ಹೊತ್ತು ಮಾರುವ ವ್ಯಾಪರ ಕೈಗೊಂಡ ಹಂಪಣ್ಣನಿಗೆ ಸಂಸಾರದಲ್ಲಿ ಆಸಕ್ತಿ ಇರಲಿಲ್ಲ. ಆದರೂ ಊರಿನ ಪ್ರಮುಖರ ಒತ್ತಾಯದ ಮೇರೆಗೆ ಅದೇ ಊರಿನ ಸಿದ್ದಮ್ಮನೆಂಬ ಕನ್ಯೆಯೊಂದಿಗೆ ಮದುವೆಯಾದನು. ಆದರೆ ಅವರ ಸಂಸಾರ ಇತರ ಲೌಕಿಕ ಜನರಂತಿರದೆ, ಅದು ಆಧ್ಯಾತ್ಮ ಜ್ಞಾನಿಗಳ ಸಂಗಮವಾಗಿತ್ತು. ಮದುವೆಯಾದ ಮೂರು ನಾಲ್ಕು

ವರ್ಷಗಳಲ್ಲಿ ಮಡದಿ ಸಿದ್ಧಮ್ಮ ಮರಣ ಹೊಂದಿದಳು. ನಂತರ ಹಂಪಣ್ಣನ ಜೀವನದಲ್ಲಿ ಪ್ರಮುಖ ಬದಲಾವಣೆಯಾಯಿತು. ಪೂಜೆ ತಪಸ್ಸಾಚರಣೆ ಮಾಡಿದ ಹಂಪಣ್ಣ ಗಬ್ಬೂರಿನ ಸಾಲಿ ದೊಡ್ಡಬಸಪ್ಪನವರಿಂದ ಅನುಗ್ರಹ ಪಡೆದುಕೊಂಡು, ಗಬ್ಬೂರಿನ ಮಹಾನಂದೀಶ್ವರ ಬೆಟ್ಟದಲ್ಲಿ ತಪಸ್ಸಿಗೆ ಕುಳಿತು ಮುಂದೆ ಅನುಭಾವಿಯಾಗಿ ಬೆಳೆದು ನಿಂತ.

ಹಂಪಣ್ಣನ ಹಾಡುಗಳಲ್ಲಿ ಅನುಭಾವದೆತ್ತರವಿದೆ. ಮಣಿಪುರಪತಿ ಘನವೃಷಬೇಂದ್ರ ಎಂಬುದು ಈತನ ಹಾಡುಗಳ ಅಂಕಿತವಾಗಿದೆ. ನೀನಿನ್ನ ಇಂಗಿತವರಿತು ಶಿವಲಿಂಗನಾಗೊ 'ಜೀವನದಲ್ಲಿ ಮನುಜ ನೀನೇ ಶಿವಸಹಜ' 'ಎಲೋ ಹುಚ್ಚು ಮಂಗ ನೀ ಮಾಡೋ ಸಜ್ಜನರ ಸಂಗ', 'ತಿಳಿದು ನೋಡೋ ಗಾಥ ತಿಳಿಯದೆ ಕೆಡುವೆ ಎಲೋ ಮೂಢ' ಎಂಬಂತಹ ತತ್ವಪದಗಳಲ್ಲಿ ಅರಿವು, ತಿಳಿವು, ಜ್ಞಾನ, ಭಕ್ತಿ, ಅನುಭಾವದ ಮಹತ್ವಗಳನ್ನು ತಿಳಿಸಿದ್ದಾನೆ.

ಹೆಂಗಸರ ಮತ್ತು ಗ್ರಾಮಗಳ ಹೆಸರುಗಳನ್ನು ತತ್ವಕ್ಕೆ ಹೊಂದಿಸಿ ಹಾಡಿದ ಪದ್ಯ, ಶ್ಲೇಷಯಷ್ಟೇ ಅಲ್ಲ, ಧ್ವನಿಪೂರ್ಣವೂ ಆಗಿದೆ.

"ತಿಳಿಯೆ ಬ್ರಹ್ಮಾನಂದ ಸವಿಯೆ ಸಕ್ಕರೆವ್ವ
ಘಳಿಲಳಿ ಹಮ್ಮವ್ವಾ"

ಅನುಭಾವಿಗಳಿಗೆ ಜಾತಿ-ಮತಗಳಿಲ್ಲವೆಂಬುದಕ್ಕೆ ಇವರ ಬದುಕ ಹಾಗೂ ಇವರ ರಚನೆಗಳೇ ಸಾಕ್ಷಿಯಾಗಿವೆ. ಹಂಪಣ ಈ ಭಾಗದಲ್ಲಿ ತಿರುಗಾಡಿ ಶಿವತತ್ವವನ್ನು ಪ್ರಸಾರ ಮಾಡಿದ ಅನುಭಾವಿ. ಜನತೆಯಲ್ಲಿ ಜಾಗೃತೆಯನ್ನುಂಟು ಮಾಡಿದ ಈ ಕವಿ ಕಲ್ಯಾಣದ ಶರಣ ಸಂಸ್ಕೃತಿಯನ್ನು ವಿವರಿಸಿದ. ಅಂತಹ ಸಂಸ್ಕೃತಿಯ ಪರಂಪರೆಯ ಬಾಗವಾಗಿ ತಾನೂ ಬೆಳೆದು ನಿಂತ. ಆಧ್ಯಾತಿಕ ಹಸಿವಿನ ಜೀವಿ ಬಾಗಲವಾಡ ಮುದಕಪ್ಪ. ಮುಗ್ದನಾದ ಈತನಿಗೆ ಸಂಸಾರ ಸರಿಹೋಗಲಿಲ್ಲ. ಗುರುವನ್ನು ಆರಿಸಿಕೊಂಡು ಗಬ್ಬೂರಿಗೆ ಬಂದ. ಹಂಪಣ್ಣನಿಂದ ಅನುಗ್ರಹ ಪಡೆದ ಜ್ಯೋತಿ ಮುಟ್ಟಿ ಜ್ಯೋತಿಯಾದಂತೆ ಗುರು ಮುಟ್ಟಿ ಗುರುವಾದ ಮುದಕಪ್ಪ. ಹಂಪಣ್ಣನವರ ತರುವಾಯ ಅವರ ಸಂಪ್ರದಾಯವನ್ನು ಮುಂದುವರಿಸಿದ ನಂತರ ಎಲೆ ಬೂದಣ್ಣ ಹಾಗೂ ಅರಿಷ್ಣಿಗಿ ಬೂದಣ್ಣ ಇವರ ತರುವಾಯ ಬಳೆ ಮುದುಕಪ್ಪ, ಉಪ್ಪಾರ ಬಸಣ್ಣ ಹೀಗೆ ಈ ವೇದಾಂತ ಪರಂಪರೆಯನ್ನು ಹಂಪಣ್ಣನ ಶಿಷ್ಯರಾಗಿ ಮುಂದುವರಿಸಿಕೊಂಡು ಇಂದಿಗೂ ಬೆಳೆದು ಬಂದಿದೆ. ಹಂಪಣ್ಣನ ಪದ್ಯಗಳಲ್ಲಿ ಬರುವ ಅಂಕಿತನಾಮು 'ಘನ ವೃಷಬೇಶ' ಎಂದು ಇದ್ದು. ಇದು ಗುರುವಿನ ಹೆಸರು ದೊಡ್ಡಬಸಪ್ಪ ಮತ್ತು ಇಷ್ಟ ದೇವರ ಹೆಸರು ಈಶ್ವರ. ಈ ಎರಡು ಹೆಸರುಗಳ ಸಮ್ಮಿಳನವೇ 'ಘನವೃಷಬೇಶ' ಎಂಬ ಅಂಕಿತನಾಮದೊಂದಿಗೆ ಹಂಪಣ್ಣನವರು ಅನೇಕ ಪದಗಳನ್ನು ರಚಿಸಿದ್ದಾರೆ. ಇವರ ಪದ್ಯಗಳಲ್ಲಿ ಮುಖ್ಯವಾಗಿ ಗುರುವಿನ ಸ್ತುತಿ, ಇಷ್ಟದೈವ

ಸ್ತುತಿ, ಮಾಯಾ ಪ್ರಪಂಚದ ನಿರೂಪಣೆ, ನೀತಿ ಬೋಧನೆ, ಷಟ್‌ಚಕ್ರದ ವಿವರಣೆಗಳಲ್ಲದೆ. ಜೀವನಕ್ಕೆ ಬೇಕಾದ ತತ್ವಗಳು ಒಳಗೊಂಡಿವೆ.

"ಎಲೋ ಎಲೋ ಹುಚ್ಚಮಂಗ"

ರಾಗ-ಭೈರವ: ಅದಿತಾಳ

ಎಲೋ ಎಲೋ ಹುಚ್ಚಮಂಗ ನೀ ಮಾಡೋ ಸಜ್ಜನರ ಸಂಗ!
ಸುಳ್ಳೆ ಬೀಳ ಬ್ಯಾಡ ಭವ ಭಂಗ ನಿನ್ನ ತಿಳಿಯೋ ನೀನೇ ಶಿವಲಿಂಗ ||ಪ||

ಅಂಗಾಪ್ತಸ್ಥಾನ ಸದ್ಭಾವ ಹಿಂಗದತಿ ಮಾಡೋ ಗುರು ಸೇವ!
ಅಂಗ ಲಿಂಗದ ಕೀಲನೊರೆವೆ ನೀ ಹಿಂಗಿಕೋ ನಿನ್ನ ಪರಿಭವವ ||೧||

ಸಾಸಿರದಳ ಪದ್ಮದಲಿ ಶಿವವಾಸವಾಗಿಹನಲ್ಲಿ!
ನಾಸಾಗ್ರದ ಬಲದಲ್ಲಿ ನೀ ಗುರು ಧ್ಯಾನ ಮಾಡಿ ತಿಳಿವಲ್ಲಿ ||೨||

ಧರೆಗಧಿಕ ಮಣಿಪುರ ವರ ಕುಂಡಲಿಗೆ ಪ್ರೇರಕನಿರುವ!
ಗುರು ಘನ ವೃಕ್ಷಭದೇವನಿರುತದಿ ಮೆರೆ ಹುಕ್ಕವರನು ಪೊರೆವೆ ||೩||

೩. ಗಬ್ಬೂರು ಮಾರ್ತಂಡಪ್ಪ

ಮಾರ್ತಂಡಪ್ಪ ದೇವದುರ್ಗ ತಾಲೂಕಿನ ಗಬ್ಬೂರಲ್ಲಿ ಕ್ರಿ.ಶ.೧೮೮೦ರಲ್ಲಿ ಜನಿಸಿದ. ಈತನ ತಂದೆಯ ಹೆಸರು ಲಚುಮಣ್ಣ ಕಬ್ಬೇರ ವಂಶದಲ್ಲಿ ಹುಟ್ಟಿದ ಮಾರ್ತಂಡಪ್ಪನಿಗೆ ಮೂವರು ಪತ್ನಿಯರಿದ್ದರು. ಬಸಮ್ಮ, ರಾಚಮ್ಮ, ಅಕ್ಕಮ ಎಂಬ ಹೆಸರಿನ ಮೂವರು ಪತ್ನಿಯರಿಗೆ ಪ್ರಭು, ಬಂಡೆಪ್ಪ, ಹನುಮವ್ವ ಎಂಬ ಮೂವರು ಮಕ್ಕಳಿದ್ದರು. ಮಾತಂಡಪ್ಪನಿಗೆ ಮೂವರು ಸಹೋದರರು ಅವರಲ್ಲಿ ಮಾರ್ತಡಪ್ಪನ ತಮ್ಮನ ಹೆಂಡತಿ ಹನುಮವ್ವ ಹಾಗೂ ಆಕೆಯ ಮಗ ನಾಗಪ್ಪ ಈಗ ಗಬ್ಬೂರಿನಲ್ಲಿದ್ದಾರೆ.

ಮಾರ್ತಂಡಪ್ಪನು ಗುರು ಖೇಮಣ್ಣನ ಪ್ರಭಾವಕ್ಕೊಳಗಾಗಿ ಆಧ್ಯಾತ್ಮದ ಹಾದಿ ಹಿಡಿದ. ಖೇಮಣ್ಣನಂತೆ ಅನುಭಾವದೆತ್ತರವನ್ನೇರಿದ ವೆಂಕಟಾಪುರ, ಯಾದಗಿರಿ,ಖಾನಾಪುರ, ರಾಯಚೂರು, ಗಂಜಳ್ಳಿ, ಜಿನ್ನಾಪುರ, ರಂಗಾಪುರ, ಯದ್ಲಾಪುರ, ಶೋಲಾಪುರ, ಕೊರವಳ್ಳಿ, ಕೊರ್ತಕುಂದ, ಮುಂಬಾಯಿ, ಪೂನಾ, ಪೂಲಚಂತಿ, ಆದೋನಿ ಈ ಮುಂತಾದ ಊರುಗಳನ್ನು ಅಲೆದಾಡಿ ಅಪಾರ ಅನುಭವ ಹೊಂದಿದ ಮಾರ್ತಂಡಪ್ಪ ಲೌಕಿಕದ ಮೂಲಕ ಆ ಲೌಕಿಕ ವಿಚಾರಗಳನ್ನು ಹೇಳಿದ್ದಾನೆ.

ಮಾರ್ತಂಡಪ್ಪ ತನ್ನ ಗುರುವಿನ ಹೆಸರಿನಲ್ಲಿ ಅಂಕಿತವನ್ನಿಟ್ಟುಕೊಂಡಿದ್ದಾನೆ. 'ಖೇಮಾರ್ಯ' ಎಂಬ ಅಂಕಿತದಲ್ಲಿ ಮಹತ್ವದ ವಿಷಯಗಳ ಕುರಿತು ತತ್ವಪದ ರಚಿಸಿದ ಮಾರ್ತಂಡಪ್ಪ ಮಾಂಸವನ್ನು ಮಲ್ಲಿಗೆಯ ಹೂವನ್ನಾಗಿ ಮಾಡಿದನೆಂದು, ಹೆಂಡವನ್ನು ಹಾಲು ಮಾಡಿದನೆಂದು ಆತನ ಸುತ್ತ ಕೆಲವು

ಪವಾಡ ಕಥೆಗಳನ್ನು ಹೆಣೆಯಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಮಾರ್ತಂಡಪ್ಪನ ಅನುಯಾಯಿಗಳಿದ್ದಾರೆ. ಮಾರ್ತಂಡಪ್ಪನ ತತ್ವ ಪದಗಳಲ್ಲಿ ಸತಿ-ಪತಿ ಭಾವ ಪ್ರಧಾನವಾಗಿರುವಂತೆ, ಅನುಭಾವದೆತ್ತರವನ್ನು ಕಾಣಬಹುದಾಗಿದೆ.

"ಗಂಡಗಂಜಿ ಬದುಕು ಮಾಡಮ್ಮ
ಮುತ್ತೈದಿತನ ಕಳಕಬೇಡ ತಿಳಿಕ ತಂಗಮ್ಮ"

ಎಂಬ ಈ ಪದದ ಪಲ್ಲವಿ ಸತಿ ಪತಿ ಭಾವದ ಮಹತ್ವವನ್ನು ಹೇಳುತ್ತದೆ. ಲೌಕಿಕ ಉದಾಹಣೆಗಳ ಮೂಲಕ ಈ ಕವಿ ಅನೇಕ ಆಧ್ಯಾತ್ಮಕ ತತ್ವ ವಿಚಾರಗಳನ್ನು ಪ್ರತಿಪಾದಿಸಿದ್ದಾನೆ.

"ಊರು ದಣಿಯರು ಮೂವರಾರಮ್ಮ
ಆರು ಬಾಗಿಲು ಕದವ ಮುಚ್ಚಮ್ಮ"

ಇಂತಹ ನುಡಿಗಳಲ್ಲಿ ದಿನ ನಿತ್ಯದ ಆಡು ಮಾತಿನ ಮೂಲಕ ಅಧ್ಯಾತ್ಮವನ್ನು ತಿಳಿದುಕೊಳ್ಳುವ ಮಹತ್ವಾಕಾಂಕ್ಷೆಯಿದೆ. ಆರುಬಣ್ಣದ ಸೀರೆ, ಮೂರುಬಣ್ಣದ ಕುಪ್ಪಸ ಈ ಪದಗಳಲ್ಲಿ ಅಡಕವಾಗಿರುವ ಆಧ್ಯಾತ್ಮಕ ಪರಿಭಾವೆಯನ್ನು ಗಮನಿಸಬಹುದಾಗಿದೆ. ಮಲತ್ರಯಗಳ ಷಡ್‌ವೈರಿಗಳು ಈತನ ತತ್ವಪದಗಳಲ್ಲಿ ಪ್ರಸ್ತಾಪವಾಗಿವೆ.

"ಓಡಿ ಹೋಗಣು ಬಾ ಸುಂದರಿ|| ಕಡೆ ನೋಟಗಣ್ಣಿನ ವೈಯ್ಯಾರಿ|
ತಡ ಮಾಡದೆಲೆ ನಡೆಗಡೆ ದಾರಿ ಉಡಲಿಕ್ಕೆ ಕೊಡುವನು ಸೀರೆ ಜರ್‍ತಾರಿ!"

ಎಂಬ ತತ್ವಪದಗಳಲ್ಲಿ 'ಸತಿ-ಪತಿ'ಭಾವದ ಭಕ್ತಿಯ ಮೂಲಕ ಅನುಬಾವದ ವಿಚಾರಗಳನ್ನು ಹೇಳಲಾಗಿದೆ.

"ಊರು ಒಳಗೆ ಆರು ಮಂದಿ| ಪಾರು ತಿರುಗುತಾರೆ ಸಂಧಿ!" ಎಂಬ ನುಡಿಯಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಂತಹ ಅರಿಷಡ್‌ವರ್ಗಗಳ ಪ್ರಸ್ತಾಪದ ಮೂಲಕ ಎಚ್ಚರಿಕೆಯನ್ನುಂಟು ಮಾಡಲಾಗಿದೆ. ಈತನ ತತ್ವಪದಗಳಲ್ಲಿ ಪ್ರಾಸಬದ್ದ ಲಯವನ್ನು ಕಾಣಬಹುದಾಗಿದೆ. ಜಿಲ್ಲೆಯ ಭಜನೆ ಮೇಳಗಳಲ್ಲಿ ಮಾರ್ತಂಡಪ್ಪನ ಪದಗಳನ್ನು ಸೊಗಸಾಗಿ ಹಾಡುತ್ತಾರೆ. ಈತನು ಕ್ರಿ.ಶ. ೧೯೬೦ರಲ್ಲಿ ನಿಧನ ಹೊಂದಿದ್ದಾನೆ. ರಾಯಚೂರು ತಾಲೂಕಿನ ಕೊರ್ವಿಹಾಳಗ್ರಾಮದಲ್ಲಿ ಈತನ ಸಮಾಧಿಯಿದೆ. ಗಬ್ಬೂರಿನ ಉತ್ತರ ದಿಕ್ಕಿನಲ್ಲಿ ಮಾರ್ತಂಡಪ್ಪನ ಗುಡಿ ಹಾಗೂ ಅದರಲ್ಲಿ ಆತನ ಮೂರ್ತಿಯಿದೆ (ರಾ.ಜಿ.ಶರಣರು, ಪು.೮೩).

ಅಧ್ಯಾಯ ೬

ಸಮಾರೋಪ

ಕರ್ನಾಟಕವು ಪುರಾತನ ಸಂಸ್ಕೃತಿ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದದ್ದು, ಪ್ರಾಚೀನ ನಾಡಾಗಿದೆ. ಇಲ್ಲಿರುವ ಅನೇಕ ಪ್ರದೇಶಗಳು ಹಲವಾರು ರಾಜಮನೆತನಗಳ ಆಳ್ವಿಕೆಗೊಳಪಟ್ಟು ಸರ್ವಧರ್ಮಗಳ ಸಮನ್ವಯ ಸಾಧಿಸಿದ ಭೂಮಿಯಾಗಿದೆ. ಇಂತಹ ಹಿನ್ನೆಲೆಯನ್ನು ಪಡೆದ ಒಂದು ಊರು ದೇವದುರ್ಗ ತಾಲೂಕಿನ ಗಬ್ಬೂರು.

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿರುವ ಗೊಬ್ಬೂರು ಆ ತಾಲೂಕಿನಲ್ಲೇ ದೊಡ್ಡ ಊರಾಗಿದೆ. ಇದನ್ನು ಊರೆಂದು ಕರೆಯುವುದಕ್ಕಿಂತ ದೇವಸ್ಥಾನಗಳ ಸಂಕೀರ್ಣವೆಂದರೆ ತಪ್ಪಾಗದು. ದೇವಸ್ಥಾನಗಳು ಹೆಜ್ಜೆ ಹೆಜ್ಜೆಗೆ ಗೋಚರಿಸುತ್ತವೆ. ಇತಿಹಾಸದ ಗತವೈಭವವನ್ನು ಮೆಲಕು ಹಾಕುತ್ತ ನಿಂತ ಸುಸ್ಥಿತಿಯಲ್ಲಿರುವ ಭವ್ಯ ದೇವಾಲಯಗಳು, ಅದ್ಭುತ ಶಿಲ್ಪಗಳಿಂದ ತುಂಬಿದ ದೇಗುಲದ ಗೋಡೆಗಳು, ಹೆಸರಿಲ್ಲದ ಪಾಳು ದೇಗುಲಗಳು ಇಲ್ಲಿ ಅಸಂಖ್ಯಾತವಾಗಿವೆ.

ಗಬ್ಬೂರಿನ ಗತ ಇತಿಹಾಸ ಮತ್ತು ವೈಭವದ ಸಂಸ್ಕೃತಿಯನ್ನು ತಿಳಿಯುವಲ್ಲಿ ಶಾಸನಗಳು ಮತ್ತು ದೇವಾಲಯಗಳು ಪ್ರಮುಖವಾದ ಆಕರಗಳಾಗಿವೆ. ಇವುಗಳು ಕಲೆಗೆ ದೊರೆತ ಪ್ರೋತ್ಸಾಹವನ್ನು, ಕಲಾಶೈಲಿಯನ್ನು ಹಾಗೂ ಧಾರ್ಮಿಕ ಸ್ಥಿತಿಯನ್ನು ತಿಳಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಇದಲ್ಲದೆ ಧಾರ್ಮಿಕವಾಗಿ ಇತರೆ ಸಾಮಾಜಿಕ ಕಾರ್ಯಗಳಿಗೆ ಅಂದಿನ ರಾಜರು, ಸಾಮಂತರು, ದಂಡನಾಯಕರು

ಹಾಗೂ ಇತರೆ ವ್ಯಕ್ತಿಗಳು ನೀಡಿದ ದಾನದ ಮಹತ್ವವನ್ನು ನಾವು ಶಾಸನಗಳ ಮುಖಾಂತರ ತಿಳಿಯಬಹುದಾಗಿದೆ. ಗಬ್ಬೂರಿನ ಕ್ಷೇತ್ರಕಾರ್ಯವನ್ನು ಕೈಗೊಂಡು ಪ್ರಮುಖ ದೇವಾಲಯಗಳನ್ನು ಹಾಗೂ ಶಾಸನಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಮೊದಲ ಬಾರಿಗೆ ವಿವರವಾಗಿ ವಿವರಿಸಲಾಗಿದೆ.

ದೇವಾಲಯಗಳು ಹಾಗೂ ಶಾಸನಗಳಂತೆ ಇಲ್ಲಿ ವೀರಗಲ್ಲುಗಳು, ಮಾಸ್ತಿಗಲ್ಲುಗಳೂ ಲಭ್ಯವಾಗಿವೆ. ಇವು ಇಲ್ಲಿನ ವೀರ ಪರಂಪರೆಯ ದ್ಯೋತಕಗಳಾಗಿವೆ. ಇದಲ್ಲದೆ ಅಪರೂಪವಾದ ರಣರಂಗದ ಚಿತ್ರವನ್ನು ಅದಕ್ಕೆ ಪೂರಕವಾದ ಸಾಧನ ಸಾಮಗ್ರಿಗಳ ವಿವರವನ್ನು ಒದಗಿಸುತ್ತವೆ. ಈ ವೀರಗಲ್ಲುಗಳ ಜೊತೆಗೆ ಮೂರ್ತಿಶಿಲ್ಪವನ್ನು ಕಾಣಬಹುದು. ಮತ್ತು ಕಲೆಯ ತವರೂರೆನಿಸಿದ ಗಬ್ಬೂರು ನಾಟಕ, ಬಯಲಾಟ, ಜಾನಪದ, ಬಿದಿನಾಟಕ, ಸಾಹಿತ್ಯ ಮುಂತಾದವುಗಳಿಗೆ ಪ್ರಮುಖ ಸ್ಥಳವಾಗಿದೆ. ಹಾಗೆಯೇ ಈ ಊರಿನಲ್ಲಿ ಪುರಾತನ ಕಾಲದ ಅತ್ಯಂತ ಸುಂದರವಾದ ಅನೇಕ ಪುಷ್ಕರಣಿಗಳು ಮತ್ತು ಬೃಹತ್ ದುಂಡುಕಲ್ಲುಗಳಿಂದ ಕಟ್ಟಿದ ಕೋಟೆ ಹಾಗೂ ಅಗಸಿಗಳನ್ನು ಕಾಣಬಹುದಾಗಿದೆ. ಪ್ರಾಗೈತಿಹಾಸಕ್ಕೆ ಸಂಬಂಧಿಸಿದ ಭೌಗೋಳಿಕ ಲಕ್ಷಣಗಳು ಹಾಗೂ ಅನೇಕ ಪ್ರಾಗೈತಿಹಾಸಿಕ ಮಾನವ ಕೊರೆದ ರೇಖಾ ಚಿತ್ರಗಳು ಹಾಗೂ ಅವನು ಬಳಸಿದ ಸಾಮಗ್ರಿಗಳನ್ನು ಈ ಊರಿನ ಗುಡ್ಡ ಹಾಗೂ ಇತರೆ ಸ್ಥಳಗಳಲ್ಲಿ ಕಾಣುತ್ತೇವೆ.

ಆಯಾ ಕಾಲಗಳಲ್ಲಿ ಆಳ್ವಿಕೆ ಮಾಡಿದ ಅರಸರು ದಾನದತ್ತಿಗಳನ್ನು ಕೊಡುವುದರ ಮೂಲಕ ಗುಡಿ ಗುಂಡಾರಗಳನ್ನು ನಿರ್ಮಿಸುವುದರ ಮೂಲಕ ಗಬ್ಬೂರಿನ ಸಾಂಸ್ಕೃತಿಕ ವೈಭವವನ್ನು ಹೇಗೆ ಹೆಚ್ಚಿಸಿದರೆಂಬುದನ್ನು ಇಲ್ಲಿ ನಿರೂಪಿಸಿದೆ.

ಪ್ರಬಂಧದ ಪ್ರಮುಖ ಸಾರವೆಂದರೆ ಗಬ್ಬೂರಿನ ಪ್ರಾಚೀನ ಗತವೈಭವದ ಬದುಕಿನ ಮೇಲೆ ಬೆಳಕು ಚೆಲ್ಲುವುದಾಗಿದೆ. ಪ್ರಸ್ತುತ ಅಧ್ಯಯನದ ಇತಿಮಿತಿಗಳಲ್ಲಿ ಆಕರಗಳನ್ನು ಸಂಗ್ರಹಿಸಿ ವಿಷಯವನ್ನು ವಿಶ್ಲೇಷಿಸಿ, ಸಂಯೋಜಿಸಲಾಗಿದೆ. ಇತಿಹಾಸಕ್ಕೆ ಪೂರಕವಾದ ಇನ್ನೂ ಕೆಲವು ವಿವರಣೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಗಬ್ಬೂರಿನಲ್ಲಿರುವ ದೇವಾಲಯಗಳು ಮತ್ತು ಶಾಸನಗಳನ್ನು ರಕ್ಷಿಸುವ ಹೊಣೆ ಗ್ರಾಮಸ್ಥರದ್ದಾಗಿದೆ. ಅಲ್ಲಿ ಹಾಳುಬಿದ್ದಿರುವ ಸ್ಮಾರಕಗಳನ್ನು ಮತ್ತೆ ಪುನಾರಚಿಸಿ ಸಾಂಸ್ಕೃತಿಕ ಕಾರ್ಯಗಳಿಗೆ ಮತ್ತೆ ಚಾಲನೆ ನೀಡಬಹುದು. ನಶಿಸುತ್ತಿರುವ ಅವುಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಉಳಿಸಬಹುದಾಗಿದೆ.

ಅನುಬಂಧ

೧. ಶಾಸನಗಳ ಪಾಠ
೨. ಇತರೆ ಕಲೆ
೩. ಗ್ರಂಥ ಋಣ
೪. ನಕ್ಷೆಗಳು
೫. ಛಾಯಾಚಿತ್ರಗಳು

ಶಾಸನಗಳ ಪಾಠ

ಅರ್ಥ : ಬಹುಕಾಲ ಉಳಿಯುವ ಯಾವುದೇ ಗಟ್ಟಿಯಾದ ಸಾಮಗ್ರಿಯ ಮೇಲೆ ಕೊರೆದ ಹಳೆಯ ಕಾಲದ ಬರಹವನ್ನು ಶಾಸನವೆಂದು ಸ್ಥೂಲವಾಗಿ ಕರೆಯಬಹುದು. ಶಾಸನ ಎಂಬ ಪದದ ಮೂಲಾರ್ಥ ಆಜ್ಞೆ. ಮುಖ್ಯವಾಗಿ ರಾಜರು, ರಾಜ್ಯಪಾಲರು ಅಥವಾ ಇನ್ನಿತರ ಅಧಿಕಾರಿಗಳು ತಮ್ಮ ಅಧಿಕಾರ ಮುದ್ರೆಯಿಂದ ಇಂತಹ ಬರಹಗಳನ್ನು ಬರೆಯಸುತ್ತಿದ್ದರಿಂದ ಅವುಗಳಿಗೆ ಶಾಸನ ಎಂಬ ಅರ್ಥ ಬಂದಿದೆ.

ಹೀಗೆ ಮೊದಲು ಶಾಸನಗಳು ರಾಜಾಜ್ಞೆಗಳಾಗಿದ್ದವು. ಈ ರಾಜಾಜ್ಞೆ ಅಥವಾ ಕಾನೂನುಗಳನ್ನು ಜನರಿಗೆ ಪ್ರಕಟಪಡಿಸುವ ಬರಹಗಳೇ ಶಾಸನಗಳು ಬರಬರುತ್ತಾ ಈ ಪದದ ಅರ್ಥ ವಿಸ್ತಾರಗೊಂಡು ರಾಜರ ಪ್ರಶಸ್ತಿಯನ್ನು ಹೇಳುವ, ವೀರರ ಮತ್ತು ಸನ್ಯಾಸಿಗಳ ಮರಣವನ್ನು ಅಥವಾ ಶಿಲ್ಪದ ಹಾಗೂ ಶಿಲ್ಪಿಯ ಹೆಸರನ್ನು ತಿಳಿಸುವ ಬರಹಗಳಿಗೂ ಶಾಸನ ಎಂಬ ಹೆಸರು ಅನ್ವಯವಾಯಿತು.

ಶಿಲೆಗಳ ಮೇಲೆ, ತಾಮ್ರ ಪಟಗಳ ಮೇಲೆ ವಿಗ್ರಹ ಪೀಠಗಳ ಮೇಲೆ ಗಂಟೆಗಳ ಮೇಲೆ ಇರುವ ಬರಹಗಳೆಲ್ಲವೂ ಶಾಸನಗಳಾದರೂ ಮುಖ್ಯವಾಗಿ ಎರಡು ವಿಧಗಳಾಗಿ ವರ್ಗೀಕರಿಸಲಾಗಿದೆ.

೧. ಶಾಸನಗಳ ಸಾಮಗ್ರಿಗಳ ಹಿನ್ನೆಲೆ ದೃಷ್ಟಿಯಿಂದ

೨. ಶಾಸನಗಳ ವಿಷಯಾನುಕ್ರಮಣಿಕೆಯ ದೃಷ್ಟಿಯಿಂದ

೧. ಶಾಸನಗಳ ಸಾಮಗ್ರಿಗಳ ದೃಷ್ಟಿಯಿಂದ ಗಮನಿಸಿದಾಗ ೧. ಶಿಲಾ ಶಾಸನಗಳಲ್ಲಿ ಬಂಡೆಗಲ್ಲು ಶಾಸನಗಳು ಮತ್ತು ಸ್ತಂಬಶಾಸನಗಳಾದರೆ, ೨. ಲೋಹ ಶಾಸನಗಳಲ್ಲಿ ಮುಖ್ಯವಾಗಿ ಚಿನ್ನ, ಬೆಳ್ಳಿ, ಹಿತ್ತಾಳೆ, ಕಂಚು, ತಾಮ್ರ, ಕಬ್ಬಿಣ ಇತ್ಯಾದಿಗಳಾಗಿವೆ.

೨. ಶಾಸನಗಳ ವಿಷಯಾನುಕ್ರಮಣಿಕೆಯ ದೃಷ್ಟಿಯಿಂದ ಗಮನಿಸಿದಾಗ ೧. ಘಟನಾವಳಿಗಳನ್ನು ತಿಳಿಸುವ ಶಾಸನಗಳು, ೨. ಸ್ಮಾರಕ ಶಾಸನಗಳು.ಇದರಲ್ಲಿ ವೀರಗಲ್ಲು ಮಾಸ್ತಿಗಲ್ಲುಗಳು. ೩. ಧಾರ್ಮಿಕ ಉದ್ದೇಶವುಳ್ಳ ಶಾಸನಗಳಲ್ಲಿ ನಿಸಿದಿಕಲ್ಲು ಮತ್ತು ದಾನ ಶಾಸನಗಳಾಗಿವೆ.

ದಾನಶಾಸನಗಳು

ಕನ್ನಡ ಶಾಸನಗಳಲ್ಲಿ ಒಂದಲ್ಲ ಒಂದು ಬಗೆಯ ದಾನ ಶಾಸನಗಳ ಸಂಖ್ಯೆಯೇ ಅತ್ಯಾಧಿಕ. ನೂರಕ್ಕೆ ೯೫ ರಷ್ಟು ದಾನ ಶಾಸನಗಳೇ ಇವೆಯೆನ್ನಬಹುದು. ಇವು ಕರ್ನಾಟಕ ಸಂಸ್ಕೃತಿಯ ಒಂದು ಪ್ರಧಾನವಾದ ಅಂಶವನ್ನು ಎತ್ತಿ ತೋರಿಸುತ್ತವೆ. ಜೀವನದ ಮೌಲ್ಯಗಳಲ್ಲಿ ಧರ್ಮಕ್ಕೆ ಪ್ರಪ್ರಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪ ಈ ಶಾಸನಗಳಲ್ಲಿ ಪ್ರತಿಬಿಂಬಿತವಾಗಿದೆ. ಶಾಸನಗಳ ಉಗಮಕ್ಕೆ ಈ ಮನೋಧರ್ಮವೇ ಪ್ರೇರಕ ಶಕ್ತಿಯನ್ನೆಬಹುದು. ದೇವಾಲಯಗಳನ್ನು ಕಟ್ಟಿಸುವುದು. ಅವುಗಳ ವ್ಯವಸ್ಥೆಗಾಗಿ ಮತ್ತು ಮಠಗಳಿಗಾಗಿ ಮಹಾವ್ಯಕ್ತಿಗಳಿಗಾಗಿ ಇಲ್ಲವೇ ಅನ್ನ ಸತ್ರಾದಿ ಧರ್ಮ ಕಾರ್ಯಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ದಾನದತ್ತಿಗಳನ್ನು ಕೊಡುವುದು ಲೌಕಿಕ ಸಂಪತ್ತಿನ ಗಳಿಕೆಯ ಸಾರ್ಥಕತೆ ಎಂದು ಜನ ಭಾವಿಸಿದ್ದರು. ರಾಜಾಧಿರಾಜರಿಂದ ಹಿಡಿದು ಜನಸಾಮಾನ್ಯರವರೆಗೂ ಈ ಧಾರ್ಮಿಕ ಭಾವನೆ ಜೀವನದ ಸಹಗುಣವಾಗಿ ಪರಿಣಮಿಸಿತ್ತು. ಅದರ ಫಲವಾಗಿ ಊರೂರಿಗೂ ದೇವಾಲಯಗಳು ತಲೆಯೆತ್ತಿದ್ದವು. ದಾನ ಧರ್ಮಗಳು ಜೀವನದ ತಳಹದಿಯಾದವು. ಇದನ್ನು ದಾನಶಾಸನಗಳಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳುತ್ತವೆ.

ಪ್ರಾಚೀನ ಶಾಸನಗಳ ಶಿಲಾಫಲಕಗಳ ಮೇಲೆ ನಿರ್ದಿಷ್ಟವಾದ ಯಾವ ಶಿಲ್ಪಾಕೃತಿಯು ಕಂಡು ಬರುವುದಿಲ್ಲ. ಅನಂತರದ ಲಿಪಿಗಳಲ್ಲಿ ಅಥವಾ ಲಿಪಿಕಲ್ಲುಗಳ ಮೇಲೆ ಶಿವ, ನಂದಿ, ಗರುಡ, ವಿಷ್ಣು ಈ ಮೊದಲಾದ ಶಿಲ್ಪಗಳು ಕಾಣಿಸಿಕೊಳ್ಳುತ್ತವೆ. ಲಿಪಿ ಕಲ್ಲಿನ ಮೇಲಿರುವ ಶಿಲ್ಪವನ್ನು ನೋಡಿದೊಡನೆಯೇ ಇದು ಶೈವ ಶಾಸನವೋ ವೈಷ್ಣವ ಶಾಸನವೋ ಎಂಬುದನ್ನು ಹೇಳಬಹುದು. ಅನಂತರ ಪ್ರಾರಂಭದ ಶ್ಲೋಕವನ್ನು ಓದುತ್ತಿದ್ದಂತೆಯೇ ಆ ಅಂಶ ಇನ್ನೂ ಸ್ಪಷ್ಟವಾಗುತ್ತದೆ. ಶೈವ ಶಾಸನಗಳಲೆಲ್ಲಾ ಕಾಣುವ ಶ್ಲೋಕ ಇದು,

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ|
ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ||

-ಚಾಮರದಂತಹ ಬಾಲ ಚಂದ್ರನಿಂದ ಚುಂಚಿತವಾದ ಉತ್ತುಂಗ ಜಟಾಜೂಟವನ್ನುಳ್ಳವನೂ ಮೂರು ಲೋಕಗಳ ರಚನೆಗೆ ಮೂಲ ಸ್ತಂಭರೂಪನೂ ಆದ ಶಂಭುವಿಗೆ ನಮಸ್ಕಾರ. ವೈಷ್ಣವ ಶಾಸವಾಗಿದ್ದರೆ

ಜಯತಿ ಅವಿಷ್ಕೃಂತ ವಿಷ್ಣೋರ್ವರಾಹಂ. ಕ್ಷೋಭಿತಾರ್ಣವಂ|
ದಕ್ಷಿಣೋನ್ನತ ದಂಷ್ಟಾಗ್ರ ವಿಶ್ರಾಂತ ಭುವನಂವಪ್ಪು||

ಸಮುದ್ರವನ್ನು ಹೊಕ್ಕು ಕ್ಷೋಭೆಗೊಳಿಸಿ ಅಲ್ಲಿಂದ ಪ್ರಶಾಂತವಾದ ಭೂಮಿಯನ್ನು ತನ್ನ ಬಲ ದಾಡೆಯ ಮೇಲೆ ಹೊತ್ತು ತಂದ ವರಾಹರೂಪದ ವಿಷ್ಣುವಿಗೆ ಜಯವಾಗಲಿ. ಜೈನಶಾಸನಗಳಲ್ಲಿ ಜನಸ್ತುತಿಯಿಂದ ಶಾಸನ ಪ್ರಾರಂಭವಾಗುತ್ತದೆ

ಶ್ರೀಮತ್ ಪರಮಗಂಭೀರ ಸ್ಯಾದ್ವಾದಾಮೋಘ ಲಚ್ಛಣಮ್|
ಜಯಾತ್ ತ್ರೈಲೋಕ್ಯ ನಾಥೈಸ್ಸ ಶಾಸನಂ ಜಿನಶಾಸನಂ||

ಹೀಗೆ ಇಷ್ಟದೇವತಾ ಸ್ತುತಿರೂಪವಾದ ಮಂಗಳ ಶ್ಲೋಕಗಳೊಡನೆ ಪ್ರಾರಂಭವಾಗುತ್ತದೆ. ಮಂಗಳ ಶ್ಲೋಕವಾದ ಮೇಲೆ ರಾಜ್ಯವನ್ನಾಳುವ ಚಕ್ರವರ್ತಿ, ಸಾಮಂತ ರಾಜ, ದಂಡನಾಯಕ ಮತ್ತು ದಾನವನ್ನು ನಿರ್ದೇಶಿಸುವ ಭಾಗ ಅಥವಾ ಸೀಮೆ ಹಾಗೂ ದಾನವನ್ನು ಯಾರಿಗೆ ಮತ್ತು ಯಾವುದಕ್ಕೆ ಕೊಡಲಾಗುವುದು ಅದರ ಕಾರಣವೇನು ಮುಂತಾದ ಅಂಶಗಳಿರುತ್ತವೆ.

ಶಾಸನದ ಕೊನೆಯ ಅಥವಾ ಮುಕ್ತಾಯದ ಬಾಗವು ಕೊಟ್ಟ ದಾನವನ್ನು ಮುಂದಿನವರು ಕಾಪಾಡಬೇಕಾದ ಹೊಣೆಗಾರಿಕೆಯನ್ನು ಹೇಳುತ್ತದೆ. ದಾನವಿತ್ತವರು ಸ್ವರ್ಗವನ್ನು ಪಡೆದರೆ ಅದನ್ನು ಪರಿಪಾಲಿಸಿಕೊಂಡು ಬಂದವರು ಅಚ್ಯುತ ಪದವಿಯನ್ನು ಪಡೆಯುತ್ತಾರೆ.

ಕೊಟ್ಟ ದಾನವನ್ನು ಯಾರು ಅಪಹರಿಸುತ್ತಾರೋ ಅಥವಾ ಯಾರು ಅದನ್ನು ಪರಿಪಾಲಿಸದಿಲ್ಲವೂ ಅವರು ಬ್ರಹ್ಮಹತ್ಯಾದೋಷಕ್ಕೆ ಸಾವಿರ ಕಪಿಲೆಗಳನ್ನು ಕೊಂದವನ ಪಾಪಕ್ಕೆ ಗುರಿಯಾಗುತ್ತಾನೆ ಎಂಬ ಎಚ್ಚರಿಕೆಯ ನುಡಿಯೂ ಇರುವುದುಂಟು. ಇದು ಸ್ಥೂಲವಾಗಿ ದಾನಶಾಸನಗಳ ರೂಪ ಸಮಾಜದಲ್ಲಿಯ ಜನರು ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ತಮ್ಮ ಶ್ರೇಯಸ್ಸಿಗಾಗಿ ಧಾರ್ಮಿಕ ಮತ್ತು ಇತರೇ ಸಾಮಾಜಿಕ ಕಾರ್ಯಗಳಿಗಾಗಿ ದಾನದತ್ತಿಗಳನ್ನು ಬಿಡುವುದೊಂದು ಪದ್ಧತಿಯಾಗಿದೆ. ವ್ಯಕ್ತಿಯ ತನ್ನ ಶ್ರೇಯಸ್ಸಿನೊಡನೆ ಪುಣ್ಯ ಸಂಪಾದನೆಗಾಗಿ ದಾನವನ್ನು ಬಿಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಜನಜನಿತವಾಗಿದೆ. ಅದಕ್ಕಾಗಿಯೇ ದಾನ ಶಾಸನಗಳು ಇಲ್ಲಿ ಹೇರಳವಾಗಿ ದೊರೆತಿವೆ. ಗಬ್ಬೂರಿನಲ್ಲಿರುವ ದಾನ ಶಾಸನಗಳು ಈ ಕೆಳಗಿನಂತಿವೆ. ಇವುಗಳನ್ನು ಬಳಸಿಕೊಳ್ಳಲು ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರು ಅನುಮತಿ ನೀಡಿದ್ದಾರೆ.

ಗಬ್ಬೂರು GABBUR

ರಾಯಚೂರು ಅಗಸಿಯ ಹನುಮಂತ ದೇವಾಲಯದ ಅವರಣದಲ್ಲಿ

IN THE COMPLEX OF HANUMANTA TEMPLE IN AGASI

[XXX]

ತ್ರುಟಿತ ಶಾಸನದಲ್ಲಿ ಕಾಲವು ಶ್ರೀ ಚಾಳುಕ್ಯ ವಿಕ್ರಮ ವರ್ಷ ೪೩ನೆಯ ವಿಳಂಬಿ, ಪುಷ್ಯ ಶುಳ, ಬ್ರಹಸ್ಪತಿವಾರವೆಂದಿದ್ದು, ಇದು ಕ್ರಿ.ಶ ೧೧೧೯ಕ್ಕೆ ಸರಿ ಹೊಂದುತ್ತದೆ.

ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಗಬ್ಬೂರಿನ ಜನ್ನಯ್ಯಭಟ್ಟ ಸೋಮಯಾಜಿ ಎಂಬುವನು ತನ್ನ ವೃತ್ತಿಯ ಬೆಟ್ಟ ಬಾಗಿನವೆಂಬ ಸ್ಥಳದಲ್ಲಿ ಮಾಣಿಕೇಶ್ವರದ ಕೋಲಲ್ಲಿ ೫ ಮತ್ತರು ಭೂಮಿಯನ್ನು ಕರಿಯ ಮುಸ್ಯಣಭಟ್ಟೋಪಾಧ್ಯಾಯ ಕಲಯ್ಯನು ಡೋಣಭಟ್ಟರಿಗೆ ದಾನ ಮಾಡಿದುದನ್ನು ಶಾಸನದಲ್ಲಿ ಹೇಳಲಾಗಿದೆ. ಶಾಸನ ಮುಂದುವರಿದು ಮುಸ್ಯಣಭಟ್ಟ ಮತ್ತು ಆತನ ಪತ್ನಿ ನಾಲಿಕಬ್ಬೆಯರು ಮಹಾದೇವರ ಧೂಪ ದೀಪ ಮತ್ತು ಪೂಜಾಕಾರ್ಯಗಳಿಗಾಗಿ ಭೂದಾನ ನೀಡಿರುವಂತೆ ಉಲ್ಲೇಖಿಸಿದೆ.

೧ .....ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವೀವಲ್ಲಭ
೨ ಮಹಾರಾಜಾಧಿರಾಜ ಪರಮೇಶ್ವರ ಪರಮ ಭ
೩ ಟ್ಟಾರಕ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾ
೪ ಭರಣ ಶ್ರೀ ಮತ್ರಿಭುವನಮಲ್ಲದೇವರ ವಿಜೇಯ
೫ ರಾಜ್ಯಮುತ್ತರೋತ್ತರಾಭಿವ್ರಿರ್ದ್ಧಿ ಪ್ರವರ್ದ್ಧ ಮಾನಮಾಚಂದ್ರಾರ್ಕ
೬ ತಾರಂಬರ ಸಲುತ್ತಮಿರೆ ಶ್ರೀ ಚಾಳುಕ್ಯ ವಿಕ್ರಮವರ್ಷ
೭ ದ ೪೩ನೆಯ ವಿಳಂಬಿ ಸಂವತ್ಸರದ ಪುಷ್ಯ ಸುದ್ಧ ಬ್ರಿಹ
೮ ಸ್ಪತಿವಾರದಂದು ಶ್ರೀಮತು ಸರ್ವ್ವನಮಸ್ಯದಗ್ರಹಾರ
೯ ಹಿರಿಯ ಗೊಬ್ಬೂರ ದೇವಣಶೀತದ ವೀಸಕದಲ್ಲಿ ಕರಿಯ
೧೦ ಜನ್ನಯ ಭಟ್ಟ ಸೋಮಯಾಜಿಯರು ತಮ್ಮ ವ್ರಿತ್ತಿಯೊಳ
೧೧ ಗಣ ಮೂಡಣ ಬೆಜ್ಜಬಾಗಿನ ಸ್ಥಳದಲ್ಲಿ ಮಾಣಿಕೇಶ್ವರದ ಅ
೧೨ ಯ್ದು ಮತ್ತರು ಕೊಜಮಣ್ಣಕೆಯ್ಯನು ಕರಿಯ ಮು
೧೩ (ಸ್ಯ)ಣಭಟ್ಟೋಪಾಧ್ಯಾಯ ಕಲಿಯ್ಯಗಳು ದೋಣಭಟ್ಟರಿಗೆ ಆ
೧೪ ಜನ್ನಯಭಟ್ಟ ಸೋಮಯಾಜಿಯರು ತಮ್ಮ ಕೆಯ್ಯ ದಾನ ಗೊಟ್ಟರು
೧೫ (ಸ್ಯ)ಣಭಟ್ಟೋಪಾಧ್ಯಾಯರು ಅವರ ಬ್ರಾಹ್ಮಣಿ ನಾಡಿಲಿಚ್ಚಿಯುತ
೧೬ ಮತ್ತರು ಕೆಯ್ಯ ತಮ್ಮ ಮಹಾದೇವರಿಗೆ ಧೂಪದ್ವಿಪ
೧೭ ....ರ್ತ್ಥವಾಗಿ ಹಿರಿಯ ಸಂಕ್ರಮಣದಂದು ಕೊಟ್ಟರು ಮತ್ತ
೧೮ ....ಸುಪೆ ವಡ್ಡದಿ ಭಟ್ಟ ಸೋಮಯಾಜಿಯರು ಅವರ

೧೯ ....ರ್ದ್ವವ್ರಿತ್ತಿಯೊಳಗೆ ಜಡೆಹಳ್ಳದ ಸ್ಥಳದ ಮಾಣಿ

೨೦ ....ಣ್ಣ ಕೆಯ್ಯ ವ್ರಿತ್ತಿ ದಾನವಾಗಿ ಕೊಟ್ಟರು ಇ ಧ

೨೧ ....ದೇವರಿಗೆ ಪೂಜಾರ್ತ್ಯವಾಗಿ ಕೊಟ್ಟರು ಆ

೨೨ ....ಮಾತ್ರದವರಿಗೆ ಸ್ವದತ್ತ

೨೩ ....ಸಹಸ್ರಾಣಿ ವಿಷ್ಠಾ

೨೪ ....ಕ್ರಿಮಿ

೨

ಮೇಲ್ ಶಂಕರ ದೇವಾಲಯದ ಮುಂದೆ ನಿಲ್ಲಿಸಿರುವ ಶಾಸನ

ON A SLAB SET UP IN FRONT OF MEL-SANKARA TEMPLE

[XXX]

ಈ ಶಾಸನದಲ್ಲಿ ಕಾಲ ವಿಕ್ರಮ ವರಿಷ ೮, ಸುಭಾನು, ಪಾಲ್ಗುಣ,ಬ ೫, ಶುಕ್ರವಾರವೆಂದಿದ್ದು ಇದು ಕ್ರಿ.ಶ ೧೦೮೪ ಕ್ಕೆ ಸಮವಾಗುತ್ತದೆ.

ಶಾಸನದ ಆರಂಭದಲ್ಲಿ ಹಿರಿಯ ಅಗ್ರಹಾರವಾದ ಗಬ್ಬೂರಿನ ಮಹಾಜನಗಳ ವರ್ಣನೆಯಿದೆ. ಅವರನ್ನು ಗೊಬ್ಬೂರ ವಿಪ್ರ ಚೂಡಾಮಣಿಗಳೆಂದಿದೆ. ನಂತರ ಗೊಬ್ಬೂರ ವರ್ಣನೆಯಿದ್ದು, ಇದು ವಿದ್ಯಾಕ್ಷೇತ್ರ ವಿಭುಧ ಜನರ ಕ್ಷೇತ್ರ ವಿದ್ವಜ್ಜನಗಳು ನೆಲಸಿ ಗ್ರಾಮರಾಜನೆಂತಿತ್ತೆಂದಿದೆ. ಈ ಗ್ರಾಮವು ಅಯ್ಯಣವಾಡಿ ನಾಡಿನಲ್ಲಿ ಪ್ರಸಿದ್ಧವಾದ ಗೋಪುರ ಗ್ರಾಮವೆಂದು ಪ್ರಸಿದ್ಧ ಪಡೆದಿತ್ತು. ಈ ಊರಿನಲ್ಲಿ ಮೇಳೇಶ್ವರದೇವರು ನೆಲಸಿ ಗ್ರಾಮದ ಜನಗಳನ್ನು ತನ್ನ ಅನುಗ್ರಹಕ್ಕೆ ಪಾತ್ರರನ್ನಾಗಿಸಿಕೊಂಡಿದ್ದ.

ಈ ದೇವರ ಒಕ್ಕಲುಗಳನ್ನು 'ಮೇಳಾಸಿರ್ಬ್ಬರು' ಎಂದು ಕರೆಯುತ್ತಿದ್ದರು. ಇವರನ್ನು ಶಾಸನದಲ್ಲಿ ಸಕಳ ಜೀವರಕ್ಷಕ ಪರೋಪಕಾರಾರ್ಥ ಶರೀರ ಮೇಳೇಶ್ವರದೇವರ ಪಾದಪಂಕಜ ಭ್ರಮರರು, ಚಕ್ರವರ್ತಿಯ ರಾಜ್ಯವನ್ನು ಉದ್ಧರಿಸುವವರು. ಶ್ರೀಮಂತರು, ವಿನಯುರು, ಸತ್ಯವಂತರು, ನುಡಿದಂತೆ ನಡೆದವರು, ದಾನಿಗಳು, ಧರ್ಮಕಾರ್ಯಧುರಂದರು ಮುಂತಾಗಿ ವರ್ಣಿಸಿದೆ. ಇವರು ಹಿರಿಯ ಗೊಬ್ಬೂರಲ್ಲಿ ಮೇಳೇಶ್ವರ ದೇವಾಲಯವನ್ನು ಕಟ್ಟಿಸಿ, ಆ ದೇವರ ಪೂಜೆ ಪುನಸ್ಕಾರ, ನಿವೇದ್ಯ, ಅಂಗಭೋಗ, ರಂಗಭೋಗ, ದೇವಾಲಯದ ಪರಿಪಾಲನೆ ಮುಂತಾದ ಕೆಲಸಗಳಿಗಾಗಿ ಗೊಬ್ಬೂರು ಮತ್ತು ಅದಕ್ಕೆ ಸೇರಿದ ಇತರ ಹಳ್ಳಿಗಳ ಜನರು ಸೇರಿ (ನೇಗಿಲುಕಟ್ಟಿ) ನೊಗಕಟ್ಟಿ ಉತ್ತು ಬಿತ್ತು ಬೆಳೆದ ಬೆಳೆಯಲ್ಲಿ ಸೂಡುಜೋಳವನ್ನು ಹಾಗೂ ವರಿಷ ಪ್ರತಿ ಬಳಸುವ ಒಂದೊಂದು ಕುಂಟೆಗೆ ಒಂದು ಹಣವಿನ ಲೆಕ್ಕದಲ್ಲಿ ನೀಡಬೇಕೆಂದು ತೀರ್ಮಾನಿಸುತ್ತಾರೆ. ಜಾತಿವಿಜಾತಿಯೆನ್ನದೆ ಎಲ್ಲ ಕೆಯಿ ಕುಡುಗೋಲ್ಗಳಿ ಕೂಲಿಗಳು ಬಂಟಗೆಡೆಗಳು ಸೇರಿ ಮಹಾಲಿಂಗ, ಮೇಳೇಶ್ವರ ದೇವರ ಸ್ಥಾನಪತಿ ಸದ್ಯೋಜಾತ ಪಂಡಿತರಾಗಿದ್ದರೆಂದು ತಿಳಿಸುತ್ತದೆ.

೧ ......ಓಂ ನಮಃ ಶಿವಾಯ॥ ಓಂ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈ
೨ ಳೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ಸ್ವಸ್ತಿ ಶ್ರೀಮತ್ ಭುಜಬಲ ಚ
೩ ಕ್ರವರ್ತ್ತಿ ತ್ರಿಭುವನಮಲ್ಲದೇವ ವರ್ಷದ ಆನೆಯ ಸುಭಾನು ಸಂವತ್ಸರದ ಪಾಲ್ಗುಣ ಬ
೪ ೫ ಶುಕ್ರವಾರದಂದು ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಧ್ಯಾನಧಾರುಣಮೋನಾನುಷ್ಠಾನ ಜ
೫ ಪ॥ ಸಮಾಧಿ ಶೀಲ ಗುಣಸಂಪನ್ನ ತಪಾಸನಾಗ್ನಿಹೋತ್ರದ್ವಿಜ ಗುರುದೇವತಾ ಪ್ರಜಾ ಶಾ
೬ ತ್ಪರರು ಮಾರ್ತ್ತಂಡೋಜ್ವಳಕೀರ್ತಿ ಯುತರ್ಸ್ಸಕಲ ಶಾಸ್ತ್ರ ವಿಶಾರದರನೇಕ ಯಜ್ಞಾವಭೃತಾವಗಾ
೭ ಹನ ಪವಿತ್ರಿಕೃತ ಶರೀರರುಮಪ್ಪ ಸ್ರೀಮತು ಸರ್ವ್ವನಮಶ್ಯದಗ್ರಹಾರಂ ಹಿರ್ಯ್ಯ ಗೊಬ್ಬೂರ
ಅಶೇಷ
೮ ಮಹಾಜನಂಗಳ ಮಹಾತ್ಮೆಯೆಂತೆಂದಡೆ ||ಕಂದ|| ಸಮವಿನಯ ವೇದಪಾರಗರೊಡವಿದ
ಪರಮಾರ್ತ್ಥ ಸಕಳ ಶಾ
೯ ಸ್ತ್ರಾಗಮದಿಂ ಮುದಿತೋದಿತಮಾಗಿರ್ಪ್ಪರ್ಮ್ಮ್ಯದದಿಂ ಗೊಬ್ಬರ ವಿಪ್ರ ಚೂಡಾಮಣಿಗಳು||
ವೃತ್ತ|| ಇದು ವಿದ್ಯಾ
೧೦ ಕ್ಷೇತ್ರಲೋಕಕ್ಕಧಿಕ ಭುವನವಿಖ್ಯಾತವೀ ಗೋಪುರಂ ತಾನಿದು ಪುಂಣ್ಯೋದಾನ ದಾನರುಹ
ವಿಬುಧ ಜನೋರ್ವ್ವಂ
೧೧ ದಿ ವಿದ್ಯಜನಂಗಳು ಮುದದಿಂದಾನಂದದಿಂದಂ ಕೊಡುವರೊಲಿದು ಮಂತ್ರಾಕ್ಷರಂ ದೃತಿಯಿಂದಂ
ಪದುಳಂ
೧೨ ಚಂದ್ರಾರ್ಕ್ಕತಾರಂನೆವುರಮಧಿಕಮತ್ಯ್ಯೂರ್ಜ್ಜಿತಂ ಗ್ರಾಮರಾಜಂ ಸೋಗಯಿಸುತಿರ್ಕ್ಕುಮಿಂತು
ನಡುನಾಡೊ
೧೩ ಳಗಯ್ಯಣವಾಡಿಯಲ್ಲಿ ತಾಂಮಿಗಿಲೆನಿಸಿಪ ಗೋಪುರದ ವಿಪ್ರಜನಂಗಳ ವೇದಘೋಷದಿಂ ಅಗಣಿತ
ಮಾನ
೧೪ ದ್ಯಮಹಿಮೊಂ ನತಿ ಕೀರ್ತಿಯುವೆಲ್ಲಿ ನೋರ್ಪ್ಪಡಂ ಬಗೆಗಳ ನೀತಿಶಾಸ್ತ್ರ ಸಕಳಾಗಮ ಕೋವಿದರೇ
ಮಹಾ
೧೫ ತ್ಮರು|| ಮುದದಿಂ ಗೋಪುರ ಗ್ರಾಮದೊಳು ಸೋಗಯುಕತ್ಯಾಶ್ಚರ್ಯದಿಂಗುರ್ಬ್ಬ್ಯನೊಳು ಮದಿತಂ
ಸಂನ ಹಿತಾ
೧೬ ಮೂರ್ತ್ತಿವರ ಮಂತಾನೀವನ್ನೆ ಬೇರ್ಪದಂತಿದು ಚೋದ್ಯಂ ಮಹಲಿಂಗದೇವನಮಳಂ ಲೋಕೈಕ
ರಕ್ಶಾಕ್ಷಮಂ(ದ)
೧೭ ದಿಂ ರಕ್ಷಿಸುತಿರ್ಪ್ಪನಿಂತುದಯಯೋಮೇಳೇತ ನೀ ಶಂಕರನು|| ವಿಮಳಸ್ಫೂರಿತಮಿದಿ ತಾವೇ
ಸಕಲಂ ಮೇಳೇತದೇವ
೧೮ (ನು) ಮಯೇಶಾರ್ಚ್ಚಿತನೀ ಸದಾಶಿವನು ನಿತ್ಯಾನಂದದಿಂದಾಗಳುಂ ಕ್ಷಮೆಯಿಂ ಶಾಂತದಿ ನೀವ
ಕಾವನೊಲಿದಿಂತಿಷ್ಟಾರ್ತ್ಥ
೧೯ (ಪು) ದುಂ ನಿಮಗೀಗುಂ ಮಹಲಿಂಗದೇವ ವರಮುಂ ಕಲ್ಪಾಂತರ ಸ್ಥಾಯಿವಿಭುಂ ||ವಚನ||
ಆದೆಂತೆಂದಡೆ ಶ್ರೀಮದಿ
೨೦ ಬ್ಬ್ಯಸ್ವಾಮಿಗಳ ಶ್ರೀ ಪಾದಪದ್ಮಜೀವಿಗಳಪ್ಪ ಮೇಳ್ಳಾಸಿಬ್ಬ್ಯರ ಪರಮೆಯೆಂತೆಂದಡೆ ವೃತ್ತ
ಪಡೆದರ್ಪ್ಪೀಯುಷಮುಂ ನಿಜೇಚ್ಚೇಯಿ

೨೧ ಲೋಕಕ್ಕ ಭೀಷ್ಮಾರ್ತ್ಥಮಂ ಪಡೆದರ್ದ್ದೇವ ಬುಧರ್ವ್ವಿ ಶಿಷ್ಯ ಸಕಳಕಾತ್ಮಾದಿಂ ನೋರ್ಪ್ಪಡಂ ಪೊಡವೀಶಂ ಮಹಲಿಂಗದೇವನ ವ....

೨೨ ತ್ಯರ್ತ್ಥನಲು ಬರ್ಪ್ಪುದಂ ಕೊದಗು ಬಡೆರಗೆವಿತಿಂತು ಮುದದಿಂ ಮೇಳ್ಸಾಸಿರ್ಬ್ಬರಿತಾಗಳು॥ ವಚನ॥ ಮತ್ತಂ ೧ ಮೇಳ್ಸಸಿರ್ಬ್ಬರಮ

೨೩ ಹಿಮೆಯೆಂತೆಂದಡೆ ಸಕಳಜೀವರಕ್ಷಕ ಪರೋಪಕಾರಾರ್ತ್ಯ ಶರೀರರು (ರಂ) ಶ್ರೀ ಮೇಳೇಶ್ವರದೇವ ಪಾದಪಂಕಜ ಭ್ರಮರರು

೨೪ ಕ್ರವರ್ತ್ತಿ ರಾಜ್ಯಸಮುದರಣಭರಣರು ಸಕಳಲಕ್ಷ್ಮಿನಿಳಯರುಂ ಕ್ಷೀರದಧಿಷ್ಮಿತ ವಿಸ್ತೀರ್ಣ ಪರಿಪೂರ್ಣ್ನರುಂ ಸಕ

೨೫ (ಳ) ನ್ಯ ಫಲಭರಿತರುಂ ಸಮಸ್ತ ಪ್ರಾಣಿ ಜಾತಿನಿಸ್ತಾರಕರುಂ ವಿನಯಂ ವಿನೀತರುಂ ಸತ್ಯರತ್ನಾಕರರುಂ ನೀತಿ ಸಮ

೨೬ ನುಡಿದೆರಡ ನುಡಿವಲ್ಲರು ಗುಣಸಂಪೂರ್ಣ್ನರುಂ ವಿನಾಯಕ ವರಪ್ರಸಾದರುಂ ಅಭಿಮಾನಧನಸು

೨೭ ಗಂಭೀರಗೌರಭ್ಯರು ವಿಪ್ರವರ ಪ್ರಸಾದರುಃ ಸಕಳಜನ ಸಂತುಷ್ಮರುಂ ಬೇಡಿದವಗ್ಗ್ಗೀವರು ಸಮ

೨೮ ಮನೋಹರರುಂ ಸಕಲಧರ್ಮ್ಮಕಾರ್ಯ್ಯಧುರಂಧರರುಮಪ್ಪ ಸಮಸ್ತ ಮೇಳ್ಸಾಸಿರ್ಬ್ಬರು ತಾಮೆ

೨೯ ದ ಶ್ರೀ ಮೇಳೇಶ್ವರದೇವರಿಗೆ ತಾವು ಕೊಟ್ಟಅಯವೆನ್ತೆಂದಡೆ ||ಕನ್ದ|| ಸ್ಥಿರ ಮೇಳೇಶಂ ಗಾಗಳು ಪರಮಾರ್ತ್ಥ

೩೦ ಯಿಂದ ಮೇಳ್ಸಸಿರ್ಬ್ಬಂನಿರುತಂ ಮೇಳಿವಣಂಗಳ ಧರೆಗಚ್ಚರಿಯಾಗಿ ಕೊಟ್ಟ ರತಿ ಮುದದಿಂದ॥

೩೧ ಸ್ವಸ್ತಿ ಶ್ರೀಮತುಸರ್ಬ್ಬನಮತ್ಯದಗ್ರಹಾರಂ ಹಿರಿಯ ಗೊಬ್ಬೂರ ಅಶೇಷ ಮಹಾಜನಂಗಳ ದಿಬ್ಯ ಶ್ರೀಪಾದ ಪ(ದ್ಮಾ)

೩೨ ಧಕರಪ್ಪ ಶ್ರೀಮತು ಮೇಳ್ಸಾಸಿರ್ಬ್ಬರು ತಾವು ಮಾಡಿಸಿದ ಶ್ರೀ ಮೇಳೇಶ್ವರದೇವರ ಪೂಜೆ ಪುನಸ್ಕಾರ ನಿವೇದ್ಯ

೩೩ ಅಂಗರಂಗಬೋಗಕ್ಕಂ ದೇವಲಕ ಪರಿಪಾಲನಕ್ಕಂ ಆ ದೇವರ ದೇವಾಲ್ಯದ ಸಕಳ ಕೆಲೆಸಕ್ಕಂ ಯಿಂತಿನಿತಕ್ಕೆ॥

೩೪ ವು ಆ ಹಿರಿಯ ಗೊಬ್ಬರ ಹಳ್ಳಿಗಳೊಳಗಾಗಿ ಗೊಬ್ಬೂರ ಚತುಸ್ಸೀಮೆಯಿಂದೊಳಗೆ ಜಾತಿವಿಜಾತಿಯೆ..

೩೫ ನೊಗನಿಕ್ಕಿ ಉತ್ತು ಹರಗಿ ಬಿತ್ತಿ ಬೆಳೆದು ಆ ಹಿರಿಯ ಮಹಾಜನಂಗಳಿಗೆ ಸೂಡು ಜೋಳಮಂ ತೆತ್ತುಗೆಯ್ವುಂ

೩೬ ಸ್ತಮೇಳ್ಸಾಸಿಬ್ಬರುಂ ನೆರದು ತಾವು ಮಾಡಿಸಿದ ಶ್ರೀಮಹಲಿಂಗ ಮೇಳೇಶ್ವರದೇವರಿಗೆ ವರಿಷಂ ಪ್ರತಿ ನಡೆವ...

೩೭ (ವೊ)ಂದು ಕುಂಟೆಯ ಮೇಳಿಯಲೊಂದೊಂದು ಹಣವಿನ ಲೆಕ್ಕದಲು ಆ ವೊಕ್ಕಲು ಎನಿಸು ಕುಂಟೆಯಲು

೩೮ ....ಎನಿಸುಕುಂಟೆಗಳ್ಗ ಮೇಳಿಯಲೊಂದೋಂದು ಹಣವಿನು ಆ ಸಮಸ್ತ ಮೇಳ್ಸಾಸಿರ್ಬ್ಬರುಃ ಆ ಶ್ರೀಮಹ

೩೯ (ಮೇ)ಳೇಶ್ವರದೇವರಿಗೆ ಆ ಚಂದ್ರಾರ್ತ್ಯ ತಾರಂಬರು ಕೊಟ್ಟರು ||ಕಂದ|| ಮೃಡ ಮೇಳೇಶಂಗಾಗಳು ದ್ರಿಢಭಕ್ತಿಯ ಲೊ

೪೦ ಟಂ ಸಾಸಿರ್ಬ್ಬರುತಾಂ ಮನುಗೋಲ್ಗಳ ನಾಗಮುಮಂತೆಡೆಯುಡುಗದೆ ಕೊಟ್ಟರಿಂತು ಅತಿ ಮುದದಿಂ॥ ಅದೆನ್ತೆದಡೆ

೪೧ ಗೊಬ್ಬೂರಹಳ್ಳಿಗಳೊಳಗಾಗಿ ಗೊಬ್ಬೂರ ಚತುಸ್ಸೀಮೆಯಿಂದೊಳಗೆ ಜಾತಿವಿಜಾತಿಯೆನ್ನದೆ ಗೆಯ್ದುಕೊಂಡುಂ

೪೨ ...ಕೆಯಿ ಕೂಲಿಗಳುಂ ಬಂಟಗೆಡೆಗಳುಂ ನೆರದು ಆ ಶ್ರೀಮಹಲಿಂಗ ಮೇಳೇಶ್ವರದೇವರ ಚಯಿತ್ರ ಪಯಿತ್ರಾರೋ (ಪ)

೪೩ .....ರಂಗ ಸಮಸ್ತ ಭೋಗಕ್ಕೋಸುಗ ಮ ಪೋಂದೊಂದು ಮನೆಯಲೆನಿಬರು ಕೆಯಿ ಕುಲಿಗಳೊಳರು ಅನಿಬರಲ್ಲಿಯೊಬ್ಬೊರ್ಬ್ಬ

೪೪ ....ಕುಲಿಯಲೊಂದೊಂದು ಹಾಗಮಂ ಪೋಲಗವಾಗೆ ಮೇಳಿಯ ಹೆಜಿದುಗೆಯ್ಯ ಬಂಟಗೆಡೆಯ ಲೊಂದೊಂದು ಹಾಗವ

೪೫ ......ಮಸಕಯಿ ಕುಲಿಗಳುಂ ಬಂಟಗೆಡೆಗಳುಂ ಆ ಶ್ರೀಮಹಲಿಂಗ ಮೇಳೇಶ್ವರ ದೇವರಿಗೆ ವರಿಷ ಪ್ರತಿ ನಡೆವಂತಾಗಿ

೪೬ ....ಆ ಮಹಲಿಂಗ ಮೇಳೇಶ್ವರ ದೇವರ ಸ್ಥಾನಪತಿಗಳಪ್ಪ ಸದ್ಯೋಜಾತ ಪಂಡಿತ ರೀ

೪೭ ....ವ ಮುನ್ತೆ ಪೊಕ್ಕಲುಗಳ ಮೇಂಟೆಯಲೊಂದೊಂದು ಕೊಳಗ ಭತ್ತಮಂಥ

೪೮ ....ತೆಂತೆಡೆಯುಡುಗಡೆ ಮನಮ ನಿಲಿಸಿ ಮೇಳೇಶ್ವರನಲೆ ಪಡೆ

೪೯ ....ಮತ್ಯಧಿಕಮಂ ನತ ವಿಮಳೇಶಸ್ಥಾನ

೫೦ ....ತಾಂ ಪಡೆದ ಖ್ಯಾತಿಯ ಕೀರ್ತಿ

೩

ಅದೇ ದೇವಾಲಯದ ಅದೇ ಶಾಸನದ ಬಲಗಡೆಯಲ್ಲಿ

TO THE RIGHT SIDE OF THE ABOVE INSCRIPTION OF THE SAME TEMPLE

[XXX]

ಶಾಸನದ ಕಾಲವು ವಿಕ್ರಮ ವರ್ಷ ೧೨ನೆಯ ಸರ್ವಜಿತು, ಆಶ್ವೀಜ, ಶು೨ ವಡ್ಡವಾರದೆಂದಿದ್ದು, ಇದು ಕ್ರಿ.ಶ ೧೦೮೮ಲಕ್ಕೆ ಸಮವಾಗುತ್ತದೆ.

ಹಿರಿಯ ಗಬ್ಬೂರಿನ ಮುಂಮರಿದಂಡ ಸಾಸಿರ್ವರು, ಆಯ್ಯಾವೊಳೆ ಆಯಿನೂರ್ವ್ವರು ಮುಂತಾದ ವ್ಯಾಪಾರಿಗಳು ಮಹಾಲಿಂಗ ಮೇಳೇಶ್ವರದೇವರಿಗೆ ಭತ್ತವನ್ನು ದಾನ ಮಾಡಿದ ವಿಷಯದ ವಿಸ್ತಾರವಾದ ವರ್ಣನೆಯಿದೆ.

ಅದೇ ಶಾಸನದ ಎಡಗಡೆಯಲ್ಲಿ ಅಪೂರ್ಣ ಶಾಸನವಿದ್ದು ಇದರಲ್ಲಿ ೭ನೆಯ ವಿಜ(ಯ) ಸಂವತ್ಸರ ಎಂದಿದೆ. ಈ ಶಾಸನವು ಕಳಚೂರ್ಯ ಭುಜಬಳ ಚಕ್ರವರ್ತಿ ರಾಯಮುರಾರಿ ಸೋವಿದೇವನ ಕಾಲಕ್ಕೆ ಸೇರಿದೆ.

೦೧ ನುಡಿವೆಡೆಗೆ ಕರ್ಣ್ಣಾವಸಂತ ತೊಡು

೦೨ ಪೆತೆಗೆಮುತ್ತರೀಯಂವರ ಭೂಪ

೦೩ ದಿಂರದಿಕೆಡುವೆಡೆಗೆಲ್ದಿರ

೧೪ ಲು ಪೊಡವಿಯಲುನೂರ್ಣವ ದೇವತೇಜ
೧೫ .....॥ವೃತ್ತ॥ ಚಲದೊೞುನನ್ನಿಯೊಱೇ
೧೬ ....ಮ.....ಜಾನ್ಯ.....ನೀತಿಯ
೧೭ .....ವೊಲವಿಂ ಕೂರ್ಮ್ಮೆಯೊಳಿಪು ಸದ್ಗುಣ
೧೮ ...ಗಂಭೀರದೊೞುಮೋರ್ಪಡಂ ಪಲವುಂ ಸದ್ಗುಣ
೧೯ ಧರ್ಮ್ಮಕಾರ್ಯ್ಯ ಪರಿಬಿತೆಯಿನೂರ್ವ್ವರುಂತೇಜ ದೊ
೧೦ .....ಲೆಸಂದಿಕ್ಕುಮದೀಂತುಮೇದಿನಿಯೊಳು
೧೧ ವಿಖ್ಯಾತಿಯಂ ॥ಕೀರ್ತ್ತಿಯೊಳ್॥ ಸ್ವಸ್ತಿ ಶ್ರೀ ಮ
೧೨ ತ್ಯಭುಜಬಲ ಚಕ್ರವರ್ತ್ತಿ ತ್ರಿಭುವನ ಮ
೧೩ ಲ್ಲದೇವ ವರಿಷದ ೧೨ನೆಯ ಸರ್ವ್ವಜಿತು
೧೪ ಸಂವತ್ಸರದ ಆಶ್ವೀಜ ಶುದ್ದ ೨ ವಡ್ಡವಾರದಂ
೧೫ ಶ್ರೀ ಮತ್ಸರ್ವ್ವ ನಮಶ್ಯದಗ್ರಹಾರಂ ಹಿರಿಯ
೧೬ ಬ್ಬೂರ ಸ್ಥಱಿದ ಸಮಸ್ತ ಮುಂಮುರಿದಂಡಂಗ
೧೭ ಸಾಸಿರ್ವ್ವರು ಸಮಸ್ತ ಭುವನ ವಿಖ್ಯಾತ ಪಂಚಸುತ
೧೮ ಸಾಸನಲಬ್ದಾನೇಕ ಗುಣಗಳಾಟಂಕರ ಸ
೧೯ ಚಾಚಾರ ಚಾರ್ರಿ ನಯವಿನಯ ವೀರ ಬ
೨೦ ಧರ್ಮ್ಮಪ್ರತಿಪಾಲಿ ವಿಸುದ್ಧಗುಡ್ಡಧ್ವಜ
೨೧ ರಾಜಮಾನ ಸಾಹಸಾಲಿಂಗಿತ ಲಕ್ಷ್ಮೀದೇ
೨೨ ...ಸಱ ಭುವನ ಪರಾಕ್ರಮೋಂನತರು ವಾ
೨೩ .....ವಕಣ್ಯಳಾ ಮೂಱಭದ್ರವಂಶೋದ್ಧವರ
೨೪ ...ಪೆಶಿಲದೇವರ ಪಾದಾರಾಕದರು. ದ್ವತ್ಯಂಶತು
೨೫ ....ರಮುಂ ಅಷ್ಟಾದಶಪಟ್ಟಣ ಮೊ
೨೬ .....ಷಷ್ಠಿಯೋಗಪೀಠಮುಂ ಅಱ ವತ್ತನ
೨೭ .... ಕ..... ಮುಂ ನಾನಾದೇಶಾನ್ತರದ ಗವ
೨೮ .....ಗವಱೆಗಾತ್ಯಗರುಂ ಸೆಟ್ಟಿಯರುಂ ಸೆಟ್ಟಿಗು
೨೯ ...ಗವುಡುಂಜುಂ ಗಾವುಂಡಸ್ವಾಮಿಗಜು ಬೀ
೩೦ ...ಬೀರವಣಿಗರುಂ ಬಾಕರುಂ ಸಮಸ್ತ ನಲ
೩೧ ......ಣಹಸ್ತರು ಅಡ್ಡವಟ್ಟಳೆಯಿಕ್ಕಿ ಹೇಱಂಗೆ
೩೨ ......ವ ಸಮಸ್ತ ಮುಂಮರಿದಂಡಗಟುಂ ಎಂಟು
೩೩ ......ಪದಿನಜುವರುಂ ಆಯಾವೊಳಪುರವ
೩೪ ......ರರುವಪ್ಪ ಆಯಿನೂರ್ವ್ವರು ಮುಧವ
೩೫ ......ನೂಱರ ಸೆಟ್ಟೈಗುತ್ತ ಕಡಲೂರ ಬೂಚಿ (ಸೆ)

೩೬ ......ನಾಡಸ್ಥಳ ಮುಖ್ಯವಾಗಿ ಜೇವೂರ ಕಲ್ಲಿ

೩೭ .....ಮಹಾನಾಡಾಗಿನೆರದು ಮೇಳಿಸಾಸಿರ್ಬ್ಬರು

೩೮ ಶ್ರೀ ಮಹಲಿಂಗ ಮೇಳೇಶ್ವರದೇವರಿಗೆ...

೩೯ ..ರ್ವ್ವ ನಮಶ್ಯವಾಗಿ ಬಿಟ್ಟ ಅಯವೆಂತೆಂದಡೆ

೪೦ ....ನ ಮೂಲೆಯಲೊಂದು ಮಾನಭತ್ತ ವೆ

೪೧ ....ಯ ಪೇಜೆನ ಮೂಲೆಯಲರ ವಾನವ

೪೨ ......ಕೋಣನ ಮೂಲೆಯಲೊಂದು ಚಿ

೪೩ ......ಭತ್ತ....ಆ ಮಹಾಲಿಂಗ ಶ್ರೀಮೇಳೇಶ್ವರ ದೇವ

೪೪ .....ಆ ಆಯಿನೂರ್ವ್ವರು ಆ ಚಂದ್ರಾರ್ಕ ತಾರಂ

೪೫ ....ನಡವಂತಾಗಿ ಕೊಟ್ಟರು ಗೊಬ್ಬೂರ ಸ್ಥ

೪೬ ...ಪ್ಪಿನ ಮೋಳೆಯ ಕಮ್ಮಟಕ್ಕೆ

೪೭ ....ರ...ಐು ಮುಂತಾಗಿ....

೪೮ ....ಹಾರ.....

ಅದೇ ಶಾಸನದ ಎಡಗಡೆ ಬರೆಯುವುದು

೦೧ ಸ್ವಸ್ತಿ ಶ್ರೀ ಮತ್ಯಳಚುರ್ಯ

೦೨ ಭುಜಬಳ ಚಕ್ರವರ್ತ್ತಿ ರಾ

೦೩ ಯ ಮರಾರಿ ಸೋವಿದೇವ ವ....

೦೪ ೭ನೆಯ ವಿಜಸಂವತ್ಸರದ

೪

ಅದೇ ದೇವಾಲಯದ ಎಡಬದಿಗೆ ಒರಗಿಸಿರುವ ಶಾಸನ

ON A SLAB LEANING TO THE LEFT OF THE SAME TEMPLE

[XXX]

ತ್ರುಟಿತ ಶಾಸನದಲ್ಲಿ ಎರಡು ಕಾಲಗಳ ಉಲ್ಲೇಖವಿದ್ದು, ಒಂದನೆಯ ಶಾಸನದಲ್ಲಿ ತ್ರೈಳೋಕ್ಯದೇವನ ಆಳ್ವಿಕೆಯ ಶ್ರೀಮುಖ. ವೈಶಾಖ, ಸು.೭, ಸುಕ್ರವಾರದ ಉಲ್ಲೇಖವಿದ್ದು ಅದು ಕ್ರಿ.ಶ ೧೧೫೪ಕ್ಕೆ ಸಮನಾಗುತ್ತದೆ.

ಶಾಸನದ ಆರಂಭದಲ್ಲಿ ಚಾಳುಕ್ಯರ ಪಾರಂಪರಿಕ ವಂಶಾವಳಿಯನ್ನು ನೀಡಲಾಗಿದೆ. ವಿಷ್ಣುವರ್ಧನ ವಿಜಯಾದಿತ್ಯ ಮುಂತಾದವರು ಆಳಿದ ಮೇಲೆ ಮುಂದೆ ತೈಲಪನಾಳಿದ. ಇವನ ಮಗ ಸತ್ಯಾಶ್ರಯ, ಇವನ ನಂತರ ವಿಕ್ರಮ, ಇವನ ತಮ್ಮ ವಾಸವ, ಅಯ್ಯಣ ಮುಂದೆ ತ್ರೈಳೋಕ್ಯಮಲ್ಲನವರೆಗೆ ವಂಶಾವಳಿ ನೀಡಲಾಗಿದೆ.

ಅಯ್ಯಣವಾಡಿ ಅದರಲ್ಲಿ ಪಿರಿಯಗೊಬ್ಬೂರು ಅದರಲ್ಲಿನ ೨೦೦ ಮಹಾಜನರ ಬಗ್ಗೆ ವಿವರಗಳಿವೆ. ಗಬ್ಬೂರಿನಲ್ಲಿ ತ್ರಿಪುರಾಂತಕದೇವರ ಪ್ರತಿಷ್ಠೆಮಾಡಿ ಅದರ ಪೂಜೆ ಪುನಸ್ಕಾರಕ್ಕೆಂದು ಕೆಲವು ಸೆಟ್ಟರು

ದಾನ ನೀಡುತ್ತಾರೆ. ತ್ರಿಪುರಾಂತಕ ಮುಂದೆ ಇದ್ದ ಕೇಶನ ದೇವರಿಗೆ ಅದರ ಜೊತೆಯಲ್ಲಿಯೇ ದಾನ ನೀಡುತ್ತಾರೆ. ಮಾಲೆರಿಯ ಎರಡೂ ದೇವರ ಹೂದೋಟಕ್ಕೆ ದಾನ ನೀಡುತ್ತಾರೆ.

ಭಾವ ಸಂವತ್ಸದಲ್ಲಿ ಅಗ್ರಹಾರ ಕಲ್ಲೂರಿನ ಉತ್ತರಕ್ಕಿದ್ದ ಗವರೇಶ್ವರ ದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಗೊಬ್ಬೂರಿನ ತ್ರಿಪುರಾಂತಕ ದೇವರ ಉತ್ತರಕ್ಕಿದ್ದ ಪ್ರಸನ್ನ ಕೇಶವದೇವರ ಪೂಜೆ ಇತ್ಯಾದಿಗಳಿಗೆ ಭಾಗಕೊಡಬೇಕೆಂದು ನಿರ್ಣಯಿಸಿದ ವಿಷಯವನ್ನು ಶಾಸನ ತಿಳಿಸುತ್ತದೆ.

೦೧ ಶ್ರೀಗಣಾಧಿಪತಯೇ ನಮಃ। ನಮಃಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೊಕ್ಯಂ ನಗರ

೦೨ ರಾರಂಭ ಮೂಲ ಸ್ತಂಭಾಯ ಶಂಭವೇ॥ ಜಯತ್ಯಾವಿಷ್ಕೃತಂ ವಿಷ್ಣೋರ್ವಾ ರಾಹಂಕ್ಷೋಬಿತಾರ್ನ್ನವಂ

೦೩ ದಕ್ಷಿಣೋನ್ನತದಂಷ್ಟಾಗ್ರಂ ವಿಶ್ರಾಂತಂ ಭವನಂ ವಪ್ಪು॥ ಶ್ರೀ ರಮಣೀ ಸ್ಥಿತಿ ಕಾರಣ ಕಾರಣದಿಂ ತನ್ನ

೦೩ ದಕ್ಷಿಣೋನ್ನತದಂಷ್ಟಗ್ರಂ ವಿಶ್ರಾಂತಂ ಭವನಂ ವಪು॥ ಶ್ರೀ ರಮಣೀ ಸ್ಥಿತಿ ಕಾರಣ ಕಾರಣದಿಂ ತನ್ನ

೦೪ ನಾಭಿ ಪಂಕಜದರಲೊಳು ಭೋರನೆ ಜಾನಿಸಲೊಗೆದಂ ನೀರಜದರಲೊಳಗೆ ಸೂಕ್ತಯುಕ್ತಂ ಬ್ರಹ್ಮ॥ ಕಂ॥ ಸರಶೀಜಾ

೦೫ ತಂಗೆ ಪುತ್ರಂ ಮನನೆಗೊಗೆದಂ ಸೋಡಮಾನವ್ಯನಾತಂಗಿರದಾತ್ಮಜ್ಯಂ ವಿನಿತ ಹರಿತನವನ ಪುತ್ರಂ ಹ

೦೬ ರಿತಾಂಕನಾದರವನರ ವೇದೊಸ್ಮೂರ್ತಿ ತತ್ವಂಚ ಸೀಖನ ಮಗ ಸಂಧ್ಯಾಗ್ರ್ಯ್ಯಚುಳ್ಯೋದಕಂ ಪೊರ್ಮ್ಮಿ ಅನ್ವಾಚುಳು...ಯೋ

೦೭ ದಕದಲೊಗೆದ ರಂಜೀಕ ವಾಕ್ಯ ಚಳುಕ್ಯರು ||ಕಂದ|| ವಿಜುಗೀಷು ವಿಷ್ಣುವರ್ದ್ಧನ ವಿಜಯಾದಿತ್ಯದಿ ಚಳ್ಕಿ ಭೂ

೦೮ ಪರ್ಪ್ಪಲರು ಭುಜ ಬಲದಿ ನಾಙ್ದಿ ಧರೆಯಂ ನಿಜಬಾಹುಬಲದಿಂ ಪಲವ ಪಾಙ್ಬಿಂ ಬಳಿಕ||

೦೯ ದದಿಂ ಧರೆ ತೈಲಪನಾಳ್ದನಾತನ ಮಗಂ ಸತ್ಯಾಶ್ರಯಂ ವಿಕ್ರಮಂ ತತ್ಸಾತವಾಸ ವರ್ಮನೈಯ್ಯಣ ನ್ರಿಪಂತತ್ಸೂ

೧೦ ನು ಭೂವಂದಿತಂ ಸ್ವಾದದಿಂದಂ ದಯಸಿರ್ಪ್ಪನಾಹಮ ಶ್ರೀಪಂತ ತ್ಪುತ್ರಸೋಮೇಶ್ವರಂ ಪರ ದಾಙ್ಬಿಬಳಿಕ್ಯ

೧೧ ವಾಙ್ಬನೆಳೆಯ ಪೆರ್ಮ್ಮಾಡಿ ಚಕ್ರೇಶ್ವರ॥ ಆತನ ಮಗಂ ಜಗದು ವಿಖ್ಯಾತ.....ವಿ ದೇವನಾ ಙ್ದಿಬಳಿ ಕನಾತ

೧೨ ನ ಮಗನಮಳಯಶಂ ಖ್ಯಾತಂ ಪೆರ್ಮ್ಮಾಡಿ (ನೆ) ರೆಯನಾತ...... ನಾ ಧೃತ....ಮಲ್ಲಂ

೧೩ ಶಾಂದ್ರ ಚಂದ್ರಪ್ರಭಾ ಪ್ರವಿಕಾಸ ಪ್ರತಿಮಾದ್ಯಾ ಹುಜಿತಯಶಂ ತ್ರೈಲೋಕ್ಯಮಲ್ಲ ವಶುಸಾಷ್ಣುವೆ ನಿ

೧೪ ಪ್ಪೈಯ್ಯಣವಾಡಿಯೊಳ ದ್ವಿಜವರಗ್ಗುತ್ತಗರರ್ದಿ ನಿಜಕಲ್ಲಮದಾನಮನಿತ್ತಂ ಪೆಂಪೊತ್ತ ಹಿರಿಯ

೧೫ ಗೊಬ್ಬೂರ ತ್ರಿಭೋಗಾನ್ವಿತ॥ ಶ್ರುತಪಾರ ವೇದಿ ಪಾರರಪ್ರವಿಪ್ರೋತ್ತಮರಿಂ ಕ್ಷಿ

೧೬ ತಿಗಾಚರಣಮಿದೆನೆ ವಿಶ್ರುತ ಮಹಿಮೋಂನಂತ.....ಗಳಿಂ ವಿವೇಕ

೧೭ ದೊಪ್ಪುವ ಕಣಗಳು ಸಕಳ.......ರದ ....ವಿಪ್ರ ಚೂಡಾ
೧೮ ಮಣಿಗಳು|| ಸ್ವಸ್ತಿ ಯಮನಿಯಮ ಸ್ವಾಧ್ಯಾಯದ್ಯಾ....ಮೌನ ಜಪ ಸಮಾ
೧೯ ಧಿ ಶೀಲಸಂಪನ್ನ ಶಾಪಾಶನಾಗ್ನಿಹೋತ್ರ ದ್ವಿ.......ರಣೋಜ್ವಳಕೀರ್ತಿ
೨೦ ಯುತರ್ಸ್ವಕಳಶಾಸ್ತ್ರ ವಿಶಾರದರಪ್ಪ ಶ್ರೀ ಮತ್ಯೆಲೋಕ್ಯ.....ಪಿರಿಯಗ್ರಹಾರ
೨೧ ಪಿರಿಯಗೊಬ್ಬೂರ ಮಹಾಜನಂಳನೂರ್ವ್ವರು........ಶ್ರೀ.....ತಿಪ್ಪ ಹರಿಹ
೨೨ ರ ದಾಸನಪ್ಪ ಗಾಣದ ಕಾಡಿಸೆಟ್ಟಿಯ ಅನ್ವಯ......ತೇಜಃ ಪ್ರಕ
೨೩ ಲ್ಪ ಸಿವಪದ ದೇವಕ್ಲಪಸ್ಥಾಯಿ ಖ್ಯಾತ.....ತತ್ಸುತೋ ನಾ
೨೪ ದಂಕಲ್ಪ| ದಾನಿ ಶ್ರೀನಾಥರ್ಸ್ವರೋಜ.......ದಿವಾಸಃ ತ್ರಿ
೨೫ ಭುವನ ಗಹನೋತ್ತುಂಗೇ ತೇಜೋ ವಿಳಾಸಃ ಶ್ರೀ ....ತರಾ
೨೬ ತ್ವಕೋಪಪ್ರಯಾಸಗಿ...ನ್ಯಾ..............................ನಾಯಂ
೨೭ ಜನಿತೋಜಗದ್ವಾದ ಘ್ರಿಣ ಪ್ರಿಥ್ವಿ.....................ಪಂರಮರಮದ್ಧಿಂ
೨೮ ಗಾಂದಯಷ್ಮಿಸ್ಯಯಂ ಶ್ರೀ ಮ ....ಮಹಾಮ.........
೨೯ ಸೋಯಂ ರಾಟ್ಕಣರೋಮ.........ರ..........ಪ್ರ.....ದವದಾ....ಧನನಿಧಿ
೩೦ ದ್ಧರ್ಮ್ಮ ಸ್ಥಿರಾಕಾರ........ಪುರವ(ರ) ವಾಯದಿಂ.....ಸಮಸೌಮ್ಯತ್ಯಾ
೩೧ ಷ್ಮಭೋಕಮ್ಯೆತಶುಭಗ ಶ್ರೀ......ಸೆವ ಸ್ಥಾ.....ಯ.........ರಪ ಸೋದಿವ
೩೨ ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತ್ಯೆಲೋಕ್ಯಮಲ್ಲದೇವ....ನೆಯ ಶ್ರೀಮುಖ ಸಂವತ್ಸರದ
೩೩ ವೈಶಾಖ ಸುದ್ಧ ಸಪ್ತಮಿ ಸುಕ್ರವಾರದಂದು ಶ್ರೀತ್ರಿಪುರರಾಂತಕದೇವರ......ದೇವರು ಪ್ರತಿಷ್ಠೆ
೩೪ ಯಂ ಮಾಡಿ ಗಾಣದ ದಾಸಿಮಯ್ಯನಮದವಳಿಜ.......ತನ್ನ ತಾಯಿ.....ಳಿಯ....ಭುವನಾ ಕೊಟ್ರ
೩೫ ವೀಸ ಹೊಂಗೆಯುಯೆಲು ದೇವರ ಪೂಜೆ ಪುನಸ್ಕಾರ.......ಧರ್ಮ್ಮಸ್ಥಾಯಿಯಾಗಿ ತಮ್ಮ ಕೊಣ್ಯ ಭತ್ತದಲ್ಲಿ
೩೬ ಹೊಂಗೆ ಕಾಣೆಯನು ಕೊಟ್ಟರು ಗಾಣದ ಕಾಟಿಸೆಟ್ಟಿಯ............... ಶ್ರೀ ಪ್ರಸನ್ನಕೇಶವ ದೇವರ ಪ್ರತಿಷ್ಠೆಯ ಮಾ
೩೭ ಡಿ ಹೆಜ್ಜುಂಕದೊಳು.....ಳು ವಂ ಪಾಣವಾರದ ಮಕ್ಕೆ ಎರಡು ತಂಬುಲಮಂ ಕೊಟ್ಟು ಭಿನ್ನಹವಂ ಮಾಡುತ್ತ ವಿರಲು
೩೮ ದೇವರ ಪೂಜೆ ಪುನಸ್ಕಾರ ಧೂಪ ದೀಪ ನೈವೇದ್ಯ ತಾಂಬೂಳ ಸೌಗಂಧಿವರ ವಸ್ತ್ರಾಭರಣಂಗಳ ಹಳಗ
೩೯ ತಿನಿತಕ್ಕೆ ಧರ್ಮಾರ್ತ್ಥವಾಗಿ ತಿಂಗಳಿಗೆ ಆ ಚಂದ್ರರ್ಕ್ಕ ತಾರಂಬರಂ ಸಲ್ವಂತಾಗಿ ಕೊಟ್ಟ ಪಣ ಅಚ್ಚಿನ ಮೋಳೆಯಕಂಮಟ
೪೦ ದಧಿಕಾರಿಗಳು ತ್ರಿಪುರಾನ್ತಕದೇವರ ಮುಂದಣ ಕೇಶವದೇವರಿಗೆ ಬಿಟ್ಟ ಣದಲು ೨ ಡಂಕದಯ ಬಿಟ್ಟರು||
೪೧ ಜಾಮಿಕವ್ವೆಯ ಕೇಸವನು ಮಾಲೆಗಾಜಿ ಮಲ್ಲೆಯನ ಮಗಂ ಸೋವಣನ ಕೈಯ್ಯಲು ಸತಿ ಮಾಜಾಗಿ ಕೊಣ್ಣ ಶ್ರೀ

೪೨ ತ್ರಿಪುರಾಂತಕ ದೇವರಿಗಂ ಶ್ರೀ ಕೇಶವ ದೇವರಿಗಂ ಹೂದೋಟಕ್ಕೆ ಸ್ವಸ್ತಿ ಶ್ರೀ ಮಚ್ಚಾಳುಕ್ಯ

೪೩ ತ್ರೈಲೋಕ್ಯಮಲ್ಲ ವರ್ಷದ ೫ನೆಯ ಭಾವ ಸಂವತ್ಸರದ ಫಾಲ್ಗುಣ ಬಹುಳ ೧ ವಡ್ಡವಾರದಂದು ಶ್ರೀಮತ್ಸರ್ವ್ವ ನಮಶ್ಯದಗ್ರ

೪೪ ಹಾರ ಕಲ್ಲೂರ ಸ್ಥಳದ ಉತ್ತರ ದಿಶೋಭಾಗದ ಶ್ರೀಗವಚೇಶ್ವರ ದೇವರ ಸ್ಥಳದಲು ತೋರಣಂ

೪೫ ಗಟ್ಟಿದದಯ್ಯಾವೊಳೆಯ ಅಯ್ನೂರ್ವ್ವರು ಶ್ವಾಮಿಗಳೊಂದುಮುಖವಾಗಿ ಮೂವತ್ತಾಱು ಬೀಡುಗಳುಂ ಸೊ

೪೬ ಗದೇಳುನ್ನೂಱು ಗವಚೆಗಳಿಂತು ಸಮಸ್ತ ದೇಸಿಯಂ ಮಹಾನಾಡು ಸಮುದ್ರಮಥನ

ಅದೇ ಶಾಸನದಲ್ಲಿ ಬಲಪಕ್ಕದಲ್ಲಿ

೪೭ ನೆರದು ಶ್ರೀಮತು ಸರ್ವ್ವ ನಮಶ್ಯದಗ್ರ

೪೮ ಹಾರಂ ಹಿರಿಯ ಗೊಬ್ಬೂರ ಸ್ಥಳದ ಶ್ರೀ

೪೯ ತ್ರಿಪುರಾಂತಕ ದೇವರ ಉತ್ತರಾಭಿ

೫೦ ಮುಖವಾಗಿರ್ದ್ದ ಶ್ರೀ ಪ್ರಸನ್ನ ಕೇಸ

೫೧ ವದೇವರ ಪೂಜೆ ಪುನಸ್ಕಾ

೫೨ ರ ಧೂಪ ದೀಪ ನೈವೇದ್ಯ ಸದಾದೇವ

೫೩ ಕಾರ್ಯ್ಯ ನಡೆವನ್ತಾಗಿ ಎತ್ತಿನ

೫೪ ಮೂಲಿಗರವನ ಕೋಣನ ಮೂಲೆ

೫೫ ಗರವನ ಕತ್ತೆಯ ಮೂಲೆಗೆ ಸೂಲ

೫೬ ಅನ್ತಾ ಕ್ರಮದಲೆ ಮೂಲೆವರ್ತ್ತಿ ಮನೆ

೫೭ ಮದು ಅ ಚಂದ್ರಾರ್ಕ್ಕಸ್ಥಾಯಿವರರಂ

೫೮ ತಾಂಬ್ರಶಾಸನವಾಗಿ ಕೊಟ್ಟರು ಅ

೫೯ ದಂ ಗಾಣದ ಕಾಟಿಸೆಟ್ಟಿಯು ಆಯಿ

೬೦ ನ್ನೂರ್ಬ್ಬ ಸ್ವಾಮಿಗಳು ನಡೆಸುವರು

೬೧ ಹೊಂಗೆ ಕಾಣೆಯುಮ ಸುಂಕದ

೬೨ ಮೂರುಪಣಮುಮ ನಾಡುಗಳು...........

೬೩ ದು ಕೊಟ್ಟ ಮೂಲೆವತ್ತಮುಮ ದೇ.........

೬೪ ಪೂಜೆ ಪುನಸ್ಕಾರ ಧೂಪ ದೀಪ ನೈ........

೬೫ ಕ್ಕಂ ಪೂಜಾರಿಯ ಗ್ರಾಸಕ್ಕಮೆಂದು ಆ

೬೬ ಚಂದ್ರಾರ್ಕ್ಕಸ್ಥಾಯಿವರಂ ನಡವನ್ತಾಗಿ ಕೊ

೬೭ ಟ್ಟರು

ಹರಿಹರೇಶ್ವರ ದೇವಾಲಯದಲ್ಲಿ ಇರಿಸಿರುವ ಶಾಸನ

ON A SLAB SETUP INSIDE HARIHARESVARA TEMPLE

[XXX]

ಶಾಸನದಲ್ಲಿ ಕಳಚುರಿ ರಾಯಮುರಾರಿ ಭುಜಬಳಮಲ್ಲದೇವನ ೪ನೆಯ ವರ್ಷದ ವಿಕೃತ, ಶ್ರಾವಣ, ಬ ೪ ಆದಿತ್ಯವಾರವೆಂದಿದ್ದು ಇದು ಕ್ರಿ.ಶ ೧೧೭೧ಕ್ಕೆ ಸರಿಹೊಂದುತ್ತದೆ.

ರಾಯಿಕೊಡ ಹರಿಹರದಾಸರಾದ ಸೋಮೇಶ್ವರಭಟ್ಟರು ಮಗಳು ಲಕ್ಷುಮಕ್ಕ ಸರ್ವನಮಸ್ಯದ ಅಗ್ರಹಾರವಾದ ಹಿರಿಯ ಗೊಬ್ಬೂರಿನ ಮೊಸಂಗಿಯ ಭಾಗದಲ್ಲಿ ರಾಯಿಕೊಡವರ ಭಾಗದಲ್ಲಿ ತನ್ನ ತಂದೆಯ ಕಡೆಯಿಂದ ತನ್ನ ಭಾಗವಾಗಿ ಬಂದ ಬೆಳೆಯ ಭಾಗವನ್ನು ಕೋಟಿಹೋಮಕ್ಕೆ ಮತ್ತು ತನ್ನ ತಂದೆ ಗೊಬ್ಬೂರಲ್ಲಿ ಪ್ರತಿಷ್ಟೆ ಮಾಡಿಸಿದ ಹರಿಹರ ದೇವರಿಗೆ ಮತ್ತು ಸಿದ್ಧಸೋಮನಾಥ ದೇವರಿಗೆ ಪೂಜೆಪುನಸ್ಕಾರ ಧೂಪದೀಪ ನೈವೇದ್ಯ ವಸ್ತ್ರಾಲಂಕಾರ ಚೈತ್ರಪವಿತ್ರ ಧರ್ಮದ ಏತಕ್ಕೆ ಸಲ್ಲುವಂತೆ ತನ್ನ ತಂದೆ ಮತ್ತು ತನ್ನ ಗಂಡನ ಶ್ರೇಯೋಭಿವೃದ್ಧಿಗೆಂದು ದಾನ ಬಿಡುತ್ತಾಳೆ.

೦೧ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾ
೦೨ ರವೇ ತ್ರೈಳೋಕ್ಯ ನಗರಾರಂಭ ಮೂಲಸ್ತಂ
೦೩ ಭಾಯ ಶಂಭವೇ॥ ಸ್ವಸ್ತಿ ಶ್ರೀಮತ್ಕಳಚುರಿಯ
೦೪ ಚಕ್ರವರ್ತ್ತಿ ರಾಯಮುರಾರಿ ಭುಜಬಳಮಲ್ಲದೇವ
೦೫ ವರ್ಷ ೪ನೆಯ ವಿಕ್ರಿತ ಸಂವತ್ಸರದ ಶ್ರಾವಣ
೦೬ ಬಹು ೪ ಆದಿತ್ಯವಾರದಂದು। ರಾಯಿಕೊಡ ಹ
೦೭ ರಿಹರದಾಸರಪ್ಪ ಸೋಮೇಶ್ವರಭಟ್ಟರ ಮಗಳು
೦೮ ಲಕ್ಷುಮಕ್ಕನು ಶ್ರೀ ಮತ್ಸರ್ವನಮಶ್ಯದಗ್ರಹಾ
೦೯ ರಂ ಹಿರಿಯ ಗೊಬೂರ ಮೊಸಂಗಿಯ ವೀಸಕದಲ್ಲಿ
೧೦ ರಾಯಿಕೊಡವರ ವ್ರಿತ್ತಿಯೊಳಗೆ ತಂಮ್ಮಯ್ಯಂಗಳ ದೆ
೧೧ ಸೆಯಿಂ ತನಗೆ ಸೋಂಮ್ಮಾಗಿ ಬಂದ ಬೆಳೆವ್ರಿತ್ತಿಯನು ಸಮ
೧೨ ಸ್ತ ಬಳ ಸಹಿತಂ ಅಷ್ಟಭೋಗ ತೇಜ ಸಾಂಮ್ಯ ಅಕ್ಷಿಣಿ ಕೋ
೧೩ ಟಿ ಹೋಮಕ್ಕೆ ಮಸಹಳ್ಳಿಗಳೋಪಾದಿಯುಂ ಸಮಸ್ತ ಆಗಾಮಿ ಒಳ
೧೪ ಗಾಗಿಯಥಾರಾಸನಂಗಳ ಮರ್ಯ್ಯಾದೆಯಿಂದವು ಅ ಲಕ್ಷುಮ
೧೫ ಕ್ಕನು ತಂಮ್ಮಯ್ಯಂಗಳ ಹರಿಹರದಾಸರಪ್ಪ ಸೋ(ಮೇ)ಸ
೧೬ ರಭಟ್ಟರುಂ ಶ್ರೀಮತ್ಸರ್ವ್ವನಮಶ್ಯದಗ್ರಹಾರಂ ಹಿರಿಯ
೧೭ ಗೊಬ್ಬೂರಲ್ಲಿ ಪ್ರತಿಷ್ಠೆ ಮಾಡಿದ ಶ್ರೀ ಹರಿಹರ ದೇವರಿ
೧೮ ಗಂ ಶ್ರೀ ಸಿದ್ಧಸೋಮನಾಥ ದೇವರಿಗಂ ಪೂಜೆ ಪುನಸ್ಕಾರ
೧೯ ಧೂಪದೀಪ ನಿದೇದ್ಯ ವಸ್ತ್ರಾಲಂಕರ ಚೈತ್ರಪೈತ್ರಕ್ಕಂ ಬಾವಿಧರ್ಮ್ಮ

೨೦ ತಕ್ಕಂ ಅಚಂದ್ರಾರ್ತ್ಕ ತಾರಂಬರಂ ಸಲ್ಬಂತಾಗಿ ಆ ಲಕ್ಷುಮಕ್ಕನು
೨೧ ತಂಮ್ಮಯ್ಯಂಗಳಿಗಂ ತನಪುರಷಂಗಂ ತನಗಂ ಶ್ರೇಯಾರ್ತವಾ
೨೨ ಗಿ ಧಾರಾಪೂರ್ವ್ವಕಂ ಮಾಡಿ ಆಬೆಳೆ ವೃತ್ತಿಯನು ಕೊ
೨೩ ಟ್ಟಳು|| ಈ ಧರ್ಮಕ್ಕೇನಾನುಂ ಬಾಧೆಯನೊಡರಿಸಿದ ಪಾತಕಂ
೨೪ ಪುಗುಗುಂ ನಿಸ್ತೋಧಾರಣೋಗ್ರಪುಂ ಖಮಯೋಧಾ
೨೫ ಭುವನಮನತಿವಿ ದುಸ್ತರತರಮಂ|| ಸ್ಯದತ್ತಂ ಪರದ
೨೬ ತ್ತಂ ವಾ ಯೋ ಹರೆತ ವಸುಂಧರಾ ಷಷ್ಠಿರ್ವ್ವರ್ಷ ಸಹ
೨೭ ಸ್ರಾಣಿ ವಷ್ಠಾಯಾಂ ಜಾಯತೇ ಕ್ರಿಮಿ|| ಈ ವ್ರಿ
೨೮ ....ದೋಷ.......ಹೊರಗು

೬

ವೆಂಕಟೇಶ್ವರ ದೇವಾಲಯದ ಆವರಣದಲ್ಲಿ

ON THE COMPOUND OF VENKTESWAR TEMPLE

[XXX]

ಶಾಸನದಲ್ಲಿ ಜಗದೇಕಮಲ್ಲನ ೧೧ ವರ್ಷ, ವಿಭವ, ಜೇಷ್ಠ ಅಮಾವಾಸ್ಯೆ ಬೃಹಸ್ಪತಿವಾರದ ಉಲ್ಲೇಖವಿದ್ದು ಇದು ಕ್ರಿ.ಶ.೧೧೪೮ಕ್ಕೆ ಸರಿಹೊಂದುತ್ತದೆ.

ಶಾಸನದ ಆರಂಭ ಭಾಗವು ಸಂಸ್ಕೃತ ಭಾಷೆಯಲ್ಲಿದ್ದು ವಾಸಿಷ್ಠಗೋತ್ರದ ಚೌಂಡರಾಯನ ವರ್ಣನೆಯು ಬಂದಿದೆ. ಗಬ್ಬೂರ ಅಶೇಷ ಮಹಾಜನಗಳಲ್ಲಿ ಒಬ್ಬನಾದ ವೈಷ್ಣವ ಚಾಕಣಭಟ್ಟಯ್ಯ ಎಂಬುವವನು ಗೋಪುರ (ಗಬ್ಬೂರು)ಲ್ಲಿ ತಾನು ಮಾಡಿಸಿದ ಕೇಶವ ದೇವರ ಪೂಜೆ ಪುನಸ್ಕಾರ ಚೈತ್ರ ಪವಿತ್ರ ನೈವೇದ್ಯ ನಂದಾದೀಪ ದೇವಾಲಯ ನಿರ್ವಹಣೆ ಮುಂತಾದವುಗಳಿಗಾಗಿ ಯಾಜ್ಞಿಕ ತಿಪ್ಪಣಭಟ್ಟ ಮತ್ತು ಅವನ ಹೆಂಡತಿ ಮಲ್ಲಿಯಕ್ಕನ ಮಗನಾದ ಮಲ್ಲಿದೇವನ ಕೈಯಲ್ಲಿ ಪ್ರಥಮ, ದ್ವಿತೀಯ ನಿವೇಶನಗಳು ಸೇರಿ ತೋಟವೊಂದನ್ನು ದಾನ ನೀಡುತ್ತಾರೆ. ಇದಲ್ಲದೆ ಎರಡು ಮತ್ತರು ಕರಿಯ ಹೊಲ, ಮಾಣಿಕೇಶ್ವರದ ಮೂರು ಮತ್ತರು ಕರಿಯ ಹೊಲ, ಅಸಗಗರೆಯಲ್ಲಿ ಮೂರು ಮತ್ತರು ಭೂಮಿಯನ್ನು ಕ್ರಯಗೊಂಡು ದೇವರಿಗೆ ದಾನ ನೀಡುತ್ತಾರೆ.

೦೧ ಓಂ ನಮಃ ಶಿವಾಯ|| ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ಯೆ......
೦೨ ಗರಾರಂಭ ಮೂಲ ಸ್ತಂಭಾಯ ಶಂಭವೇ ಜಯತ್ಯಾವಿಷ್ಕತಂ ವಿ......
೦೩ ರಾಹಂ ಕ್ಷೋಬಿತಾರ್ಷ್ಣವಂ ದಕ್ಷಿಣೊನ್ನತ ದಂಶ್ಟ್ಯಾಗ್ರ ವಿಶ್ರಾಂತ ಭು......
೦೪ ವಪುಃ ಅಲಂಕಿಷ್ಣವೇ ಲಕ್ಷ್ಮೀ ರಕ್ಸಾರ್ತ್ಥಂ ಪ್ರಭವಿಷ್ಣವೇ ನಿರಾಕರಿಷ್ಣ....
೦೫ ...ಜೀಷ್ಣವೇ ವಿಷ್ಣುವೇ ನಮಃ ದಾರಾರ ವಂಶಾನ್ವಯ ಕೀರ್ತ್ತಿ ಶ್ಲೋಕಃ ಪೂತ...
೦೬ ತ್ರಿಭುವನ ಪರಃ ಪ್ರಿತಿ ಮಾನ್ಯೂತಿಮಾಷಃ ಪುಣ್ಯಶೇಷಃ ಸಮಾಜ (ನ)
೦೭ ...ನ್ಯ ವಾಸಿಷ್ಠ ವಂಶ ತಸ್ಮಿನ್ ಗೋತ್ರೇ ಗುರುತರ ಗುಣಶ್ಚೌಂಡರಾಯಃ ಷಡಂಗೀ(ಜಾ)

೦೮ ತಸ್ತತ ಇಹ ಮಹಾಸ್ವಾಪವೋ ಮಾಧವಾರ್ಯ ತಸ್ಮಾದಿತ್ಯ ಪ್ರತಿಮ ಚಾ
೦೯ ಕಣಾರ್ರಿಃ ಹಕ್ಕತ್ಯಃ ಪುಣ್ಯಾಪತ್ಯಃ ಪರಮಮತಿಮಾನ್ ವೇಷ್ಣವೋ ವಿಷ್ಣು
೧೦ ಥ್ಯಃ ಸೂನುಃ ಸೋಯರಿ ಸೈಕೃತ ಸುಭಗೋಃ ಗೋಪುರೇಸ್ಯೇ ತಟಾಕೇ ವಿಷ್ಣೋಶ್ಚಕ್ರೇ ತ್ರಿ ಭು
೧೧ ನ ಪತೇಸ್ಸುಪ್ರಿತಿಷ್ಠಾಂ ಪ್ರತಿಷ್ಠಾಂ ||ಸ್ವಸ್ತಿ ಶ್ರೀ ಚಾಳುಕ್ಯ ಪ್ರತಾಪ ಚಕ್ರವರ್ತ್ತಿಜ
೧೨ ಗದೇಕಮಲ್ಲದೇವ ವರಿಷದ ೧೧ನೆಯ ವಿಭವ ಸಂವತ್ಸರದ ಜೇಷ್ಠದಮಾವಾಸೇ ಬ್ರಿಹ
೧೩ ಸ್ಪತಿವಾರದಂದು ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ಮತ್ಸರ್ವ್ವ ನಮಶ್ಯದಗ್ರಹಾರಂ ಹಿರಿಯ ಗ
೧೪ ಬ್ಬೂರಲಶೇಷ ಮಹಾಜನಂಗಳ ದಿಬ್ಯಪಾದ ಪದ್ಮೋಪಜೀವಿಗಳು ಸಮಸ್ತ ಗುಣ ಸಂ..
೧೫ ನ್ನರಪ್ಪ ಶ್ರೀಮತ್ ವೈಷ್ಣವ ಚಾಕಣ ಭಟ್ಟಯ್ಯಂಗಳು ಆಶ್ರೀಗೋಪುರದ ಮುಂತೆ ತಾ ವು.
೧೬ ಡಿಸಿದ ಕಜೆಯ ಹರಯಲು ತಾವು ಪ್ರತಿಷ್ಠೆ ಮಾಡಿಸಿದ ಶ್ರೀ ಕೇಶವದೇವರ ಪೂಜೆ....
೧೭ ನಸ್ಕಾರ ಚೈತ್ರವೈತ್ರ ನೇವೇದ್ಯ ನಂದಾದೀವಿಗೆ ದೇವಾಲಯ ನಿರ್ವ್ವಾಣ ದೇವಲಕ ಪರಿಪಾಲನೆ..
೧೮ ತಕ್ಕೋಸುಗ ಮಾರೆಯಭಟ್ಟಯ್ಯಂಗಳ ವಿಸಕದ ಯಾಜ್ಞಿಕ ದೇವಣಭಟ್ಟ ಸೋಮಯಾಜಿ...
೧೯ ಯರ ಮಕ್ಕಳು ಯಾಜ್ಞಿಕ ತಿಪ್ಪಣಭಟ್ಟರ ಅವರ ಮದಳಿಗೆ ಮಲ್ಲಿಯಕ್ಕನ ಅವರ......
೨೦ ಗ ಮಲ್ಲಿದೇವನ ಆತನ....ರ ಕಯ್ಯಲು ಪ್ರಥಮ ದ್ವಿತೀಯ ನಿವೇಶನಕಳವಟ್ಟು ದಂಡೆ...
೨೧ ಕೊಟ್ಟ ತೋಟದೊಳೆನಿತು ಮೊಳಗಾಗಿ ಸಮಸ್ತ ಬಳಿ ಸಹಿತ ಅಗಾಮಿ ಲಾಭವೊಳಗಾಗಿಯ
೨೨ ಭಟ್ಟಯ್ಯಂಗಳು ಅಂತವರಿಗೆ ಧಾರಾಪೂರ್ವ್ವಕಂ ಮಾಡಿಕೊಟ್ಟರು ಮತ್ತಂ ಮುಳ್ಳಿ ವೀಸ...
೨೩ ತುಂಬುಳ ವೇವಣಭಟ್ಟೋಪಾಧ್ಯಾಯರ ಮಕ್ಕಳು ವಾಮದೇವಭಟ್ಟರ ಗಂಗೆ....
೨೪ ಧರಭಟ್ಟರ ಪದ್ಮನಾಭಭಟ್ಟರ ಅಂತು ಮೂವರ ಕಯ್ಯಲು ಕ್ರಯಂಗೊಂಡ ಘಳದ...
೨೫ ಕಲ್ಲ ಸ್ಥಳದ ಹಿರಿಯ ಕೋಲ ಇಮ್ಮತ್ತರುಕರಿಯ ಕೆಯ್ಯುಂ ಕಾವೆಗಲ್ಲ ಸ್ಥಳದ....
೨೬ ಣೇಕೇಶ್ವರದ ಮೂಱು ಮತ್ತರು ಕರಿಯ ಕೆಯ್ಯುಂ ಅಸಗಗೆಜೆಯ ಸ್ಥಳದಲ್ಲಿಂ ಗೊ...
೨೭ ಸ್ಥಳದಲ್ಲಿಂ ಕೂಡಿ ಮಾಣೇಕೇಶ್ವರದ ಮೂಱು ಮತ್ತರು ಇನ್ನಿನಿತು ಕೆಯ್ಯನು ಅಕ್ಕಿಣಿ..
೨೮ ಟಿಹೋಮ ಸಮಸ್ತ ಪಡಿವಣ ಸಹಿತ ಪಾರಿಖಾಯ ಇಂತೀನಿತುವನು ಅಚಾರ....
೨೯ ಭಟ್ಟಯ್ಯಂಗಳು ತಾವೆಂತು ಕ್ರಂಗೊಂಡರಾಮರ್ಗ್ಗದಲೆ ಆ ದೇವರಿಗೆ ಕೊಟ್ಟರು ಆ ವೀಸದವ
೩೦ ವ್ರಿತ್ತಿಯನು ಆ ತಿಪ್ಪಣಭಟ್ಟರ ಹಿರಿಯ ಮಕ್ಕಳು ದೇವಣಭಟ್ಟರೊಳಗಾಗಿ ಕ್ರಯವ ಕೊಟ್ಟ
೩೧ ಮಂಗಳ ಮಹಾ ಶ್ರೀ ಶ್ರೀ

೭

ಏಳು ಬಾವಿ ಬಸವಣ್ಣನ ಗುಡಿಯ ಅದೇ ಶಾಸನದ ಪಕ್ಕದಲ್ಲಿ

RIGHT SIDE OF THE INSCRIPTION SETUP NEAR ELUBAVI BASAVANNA

[XXX]

ತ್ರುಟಿತ ರಾಯಮುರಾರಿ ಸೋವಿದೇವನ ೫ನೆಯ ವರಿಷದ.... ಸಂವತ್ಸರ, (ಹೆಸರಿನ ಭಾಗ ಹಾಳಾಗಿದೆ) ಭಾದ್ರಪದ, ಶು.೧೦, ಬ್ರಿಹಸ್ಪತಿವಾರವೆಂದಿದೆ.

ಗೊಬ್ಬೂರಿನ ನೀರಕೋಟೆಯಲ್ಲಿ ಚೌಕಣಭಟ್ಟನು ಪ್ರತಿಷ್ಠೆ ಮಾಡಿಸಿದ ಪ್ರಸನ್ನ ಕೇಶವದೇವರ ಅಂಗಭೋಗ,ರಂಗಭೋಗ ಮುಂತಾದವಕ್ಕೆ ಹೇರಿಗೆ ೫೦ ಎಲೆಯನ್ನು ಶಂಕರದೇವ ಲಬ್ಬವರಪ್ರಸಾದರಾದ ಬಳ್ಳಿಯ? ಸಾಸಿರ್ವರುು ಬಿಡುತ್ತಾರೆ. ಈ ಸಾಸಿರ್ವ್ವರನ್ನು ಅನೇಕ ವಿಶೇಷಣಗಳಿಂದ ಹೊಗಳಲಾಗಿದೆ.

ಹಂನವಣದಸೆಟ್ಟಿಯವರು ತಾವು ಮಾರಿದ ಎಲೆಯ ಹೇರಿಗೆ ೫೦ ಎಲೆಯುನ್ನು ಪ್ರಸನ್ನ ಕೇಶವ ದೇವರ ಪೂಜಾರ್ತವಾಗಿ ಬಿಡುತ್ತಾರೆ. ಜತ್ಮಪ್ಪನೆಂಬುವವನು ಎರಡೂ ದೇವರಿಗೆ ನೀರಕೋಟೆಯ ಪಶ್ಚಿಮಕ್ಕೆ ಒಂದು ದೊಡ್ಡ ನಿವೇಶನವನ್ನು ನೀಡುತ್ತಾರೆ. ಊರಿನ ಮಹಾಜನರು ಗೌಡಗೆರೆಯಲ್ಲಿ ಮಾಣಿಕೇಶ್ವರದ ನಾಲ್ಕು ಮತ್ತರು ಭೂಮಿಯನ್ನು ನೀಡುತ್ತಾರೆ.

೦೧ ....ಶ್ರೀಗಧಿಪತಿಚ್ಯುತತಾನಾಗ ಗೇಹ
೦೨ ಕೊಡುತಿಕ್ಕೆ ನಿಮಗೆ ಮಿಷ್ಟಾರ್ತ್ಥ ಮುಮಂ
೦೩ ಭೋಗೋಪ ಭೋಗ ನಿಲಯನು ರಾಗವಿನೆಸೆದೊ
೦೪ ಳ್ಪಮಾಳ್ಪ ಸುಖಸಂಪದಮ ಸ್ವಸ್ತಿ ಸಮ
೦೫ ಸ್ತ ಭುವನ ವಿಖ್ಯಾತಂ ನಾಗವಳ್ಳಿ ಸಮಯ
೦೬ ಸಮುದರಣ ಭರಣಮಂ ಬನವಾಸಿದೇ
೦೭ ಕಾಱರು ಸಹಜ ಬಿಯಕಾಱರುಂ ವಂದಿ
೦೮ ಜನ ಮಾಕಂದ ನಂದನವನ ವಸಂತರುಂ...
೦೯ ರಿಕುಟಿ ಕ್ರಿತಾಂತರುಂ ಕಪ್ಪೂರ ಕಸ್ತೂ...
೧೦ ರವ ಬಹವಿ ಪರಿಮಳಾಮೋದರು....
೧೧ ಲ್ಕುನಾಡ ಬಳ್ಳಿಯ ಬಟ್ಟೆಯಲು ನ.....
೧೨ ಕೊಂಡುಂಬ ಧಾರ್ಮ್ಮಿಕ ಧರ್ಮ್ಮ.....
೧೩ ಶ್ರೀ ಶಂಕರದೇವರ ಲಬ್ಬವರ ಪ್ರಸಾ....
೧೪ ಪ್ಪ ಶ್ರೀತ್ಸಾಸಿರ್ವ್ವರು ಶ್ರೀಮತು ಕ.....
೧೫ ಚುರಿಯ ಚಕ್ರವರ್ತಿ, ರಾಯಮುರಾರಿ...
೧೬ ಜಬಲಮಲ್ಲದೇವ ವರಿಷದ ೫ನೆಯ.....
೧೭ ಸ್ವಂವಛರದ ಭಾದ್ರಪದ ಶುದ್ಧ ೧೦ ಬ್ರಿ...
೧೮ ಸ್ಪತಿವಾರದಂದು ಶ್ರೀಮತ್ಸರ್ವ್ವ ನಮಶ್ಕವ ಗ್ರ
೧೯ ಹಾರಂ ಹಿರಿಯ ಗೊಬ್ಬೂರ ನೀರಕೋಟೆಯೊಳಗೆ ವೈಷ್ಣವ
೨೦ ವ ಚಾಕಣ್ಣಭಟ್ಟರು ಪ್ರತಿಷ್ಠೆ ಮಾಡಿಸಿದ ಪ್ರಸಂನ್ನ ಕೇ
೨೧ ವ ದೇವರಿಗೆ ಅಂಗಭೋಗ ಪೂಜೆ ಪುನಸ್ಕಾರ
೨೨ ಕೋಸುಗ ಬಿಟ್ಟ ಆಯವೆಂತೆಂದಡೆ ಎಲೆಯ
೨೩ ಹೇಱೆ ಬಂದ ಹೇಱೆಂಗೆ ಅಯ್ಯತ್ತೆಲೆಯನು
೨೪ ಆ ಸಾಸಿರ್ವ್ವರು ಆ ಪ್ರಸಂನ ಕೇಶವ ದೇವಗೆ

೨೫ ಆ ಚಂದ್ರಾರ್ಕ ತಾರಂಬರಂ ನಡವಂತಾಗಿ ಕೊಟ್ಟರು

೨೬ ಶ್ರೀ ಮತು ಹಂನವಣಸೆಟ್ಟಿಯರುತಾ

೨೭ ವು ಮಾಱಿಕೊಂಡ ಎಲೆಯ ಹೇಱಿನಲು ಹೇಱಿ

೨೮ ಗೆ ಅಯ್ಯತ್ತೆಲೆಯನು ಆ ಪ್ರಸಂನ ಕೇಶವದೇವ

೨೯ ರಿಗೆ ಪೂಜಾರ್ತವಾಗಿ ಆ ಚಂದ್ರಾರ್ಕ್ಯತಾರಂಬರಂ ನಡ

೩೦ ವಂತಾಗಿ ಕೊಟ್ಟರು ಶ್ರೀ ಮತ್ಸರ್ವ್ವ ನಮಶ್ಯದಗ್ರಹಾರಂ

೩೧ ಹಿರಿಯ ಗೊಬ್ಬೂರ ಅಶೇಷ ಮಹಾಜನಂ

೩೨ ಗಳು ನೀರಕೋಟೆಯಲ್ಲಿ ಪಡುವಣ ನೀರಹೊಳೆಯ

೩೩ ಇಟ್ಟಸೆಯಲುಂ ಔತ್ಯಪ್ಪಣಂಗಳು ಕಟ್ಟೆಯ ನಿವೇ

೩೪ ಶನವೆನಿತುಂಟನಿತುವನು ಉದಯೋದಿತ್ಯಜೀ

೩೫ ಯವ ಮಠ ಮೇರೆಯಾಗಿ ಆ ಕೇಶವ ದೇವರಿಗೆಂ ಆ

೩೬ ಜಾತ್ಯಪ್ಪಣಂಗಳ ದೇವರುಗಳ ನಿಬರಿಗೆಂ ಪೂ

೩೭ ಜೆ ಪುಸ್ಕಾರಕ್ಯೋಸು ಆ ಚಂದಾರ್ಕ್ಯತಾರಂಬರು

೩೮ ಸಲುವಂತಾಗಿ ಕೊಟ್ಟರು ಅಲ್ಲಿಯ ಊರಡೆಯ

೩೯ ಅಶೇಷ ಮಹಾಜನಂಗಳು ತಂಮ ಮೂ

೪೦ ಲಿಗದ ಕಿಸುಕಾಡಿನಲ್ಲಿ ಮೊಸಳಿಕಲ್ಲ ದಾ

೪೧ ರಿಯಿಂ ತಿಂಕಲು ಗೌಡಗೆಱೆಯೊಳಗೆ

೪೨ ಮಾಣಿಕೇಶ್ವರದ ನಾಲ್ಕು ಮತ್ತರು ಕೆಯ್ಯುಮ

೪೩ ಕೊಟ್ಟರು ಅಲ್ಲಿ ಒಂದು ಮತ್ತರು ಗೋನ್ತಿನ ಬೆವಕಂಗೆ

೪೪ ....ದತ್ತಂ ಪರದತ್ತಂ ವಾ ಯೋ ಹರೇತ ವಸುಂಧರಾ ಷ .

೪೫ .....ಸಹಪ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ

೮

ಅದೇ ದೇವಾಲಯದ ಆವರಣದಲ್ಲಿ ನೆಲಕ್ಕೆ ಹಾಸಿರುವ ಕಲ್ಲಿನಲ್ಲಿ

ON THE SLAB

[XXX]

ತ್ರುಟಿತ ವಿವರಗಳು ಸ್ಪಷ್ಟವಿಲ್ಲ. ಶಾಸನದ ಕಾಲ ಕ್ರಿ.ಶ.೧೨-೧೩ನೆಯ ಶತಮಾನವಾಗುತ್ತದೆ.

೦೧ .....[ಸಿದ].......

೦೨ ....ಕ್ಕೆ ...ಪೊಂದೆ ವೀಸ

೦೩ [ಲೆ] ಗ ಸಮೂಹ [ವೆ]

೦೪ ...ದಂ ಕೊಟ್ಟ ರಾರಾವೆಂದಡೆ

೦೫ ....ಸಿರದ ಮೆಸಕ......

೦೬ ....ತೆನ್ಮಪ.....ಯ......

೦೭ ....[ಚ]ಕ್ರವರ್ತ್ತಿಯು

೦೮ .....[ಮಣ್ಣ]....ದಕೆ.....

೦೯ ....ಸಮಸ್ತಮುಂ...ಸ......

೧೦ .....ವ್ಯದುವಿ

೧೧ ....ತ್ರದುಲ.....ಗ್ಬು

೧೨ ....ವೇದಪಾರಗರ

೧೩ .....ಯೋ ಹರೇಶಿ ವಶುನ್ದ......

೧೪ .....ಕ್ರಿಮಿ|| ಜ.......

೧೫ .....ಕೊಟ್ಟ ಪ ೫.....

೧೬ ......ಇ ಪೊಸ.....

೧೭ .....ಟರು ಧರ......

೧೮ ....ತೋಂಟ.....ಶ್ರೀ......

೯

ವೆಂಕಟೇಶ್ವರ ದೇವಾಲಯದ ಆವರಣದಲ್ಲಿನ ಕರಿಯ ಕಲ್ಲಿನ ಕಂಬದಲ್ಲಿ

ON A BLACK STONE PILLER IN THE COMPOUND OF VENKATESVARA TEMPLE

[XXX]

ನಾಗರಿ ಲಿಪಿ ಹಾಗೂ ಸಂಸ್ಕೃತ ಭಾಷೆ. ಈ ಶಾಸನದಲ್ಲಿ ಕಾಲವು ತ್ರಿಂಶದಧಿಕ ಶತೋತ್ತರ ಸಹಸ್ರ ಸಂಖ್ಯಾಪೂರ್ವಕ ಶ್ರೀಮುಖ ಸಂವತ್ಸರೇ, ವೈಶಾಖ ಮಮಾಸ್ಯಾಯಂ ಸೂರ್ಯಗ್ರಹಣೇ ಎಂದಿದ್ದು ಇದು ಕ್ರಿ.ಶ. ೧೨೧೪ಕ್ಕೆ ಸಮನಾಗುತ್ತದೆ.

ಯಾದವ ಸಿಂಹಣನು ಗೋಪುರದಲ್ಲಿ ಪ್ರಸಂನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿದ. ಇದರೊಂದಿಗೆ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನು ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದ. ಗೋಪುರವನ್ನು ಇವನ ದಂಡನಾಯಕ ಲಕ್ಷ್ಮೀದೇವನು ಆಳುತ್ತಿದ್ದು ಅವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ ನೇರುಡಿಗೆ ಗ್ರಾಮವನ್ನು ನೀಡಿದ.

೦೧ ಸ್ವಸ್ತಿ ಶ್ರೀ ನಮಃತುಂಗ ಸಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋ

೦೨ ಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ|| ಜಯತ್ಯಾವಿಷ್ಕ

೦೩ ತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ| ದಕ್ಷಿಣೋಂನತ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ ||ಶ್ರೀ||

೦೪ ಯಮುಪಹರತಾದ್ಯಃ ಶ್ರೀಪತಿ ಕ್ರೋಡಕ್ಷ ಪೋವಿಕಟ ವಿಶಾದ ದಂಷ್ಟ್ರಪ್ರಾಂತ ವಿಶ್ರಾಂತ ಭಾಜಂ ಅವಹದರ

೦೫ ಯದುಷ್ಯೇ ಕೃಷ್ಣವಿಸೃಷ್ಟ ಕಾಂಡಪುತನು ಬಿಸಜಟಾಗ, ಗಂಧಿವರ್ದ್ಧೋ ದರಿತ್ರೀಂ ||ಗದ್ಯಂ ಸ್ವಸ್ತಿ ಸಮಸ್ತ|

೦೬ ಭುವನ ಸಂಸ್ತೂಯಮಾನ ಮಾನವ್ಯಸಗೋತ್ರಾಣಾಂ ಹಾರೀತಿ ಪುತ್ರಾಣಾಂ ಕೌಶಿಕ ವರಪ್ರಸಾದ ಲ್ಬದ ಶ್ವೇತಾ

೦೭ ತಾಪತ್ರಾದಿ ರಾಜ್ಯ ಬಿಹ್ನಾನಾಂ ಸಪ್ತಮಾತೃಕಾ ಪರಿರಕ್ಷಿತಾನಾಂ ಕಾರ್ತಿಕೇಯ ವರಪ್ರಸಾದ ಲಬ್ಧ ಮಯಾ

೦೮ ರ ಪಿಂಚ್ಛಕೃತಧ್ವಜಾನಾಂ ಭಗವನ್ನಾರಾಯಣಪ್ರಸಾದ ಸಾದಿತ ವರವರಾಹ ಲಾಂಚ್ಛವೇಕ್ಷಣ ಕ್ಷಣ ವಶೀಕೃತರಾತಿ

೦೯ ರಾಜಮಂಡಲಾನಾಂ ಸಮಸ್ತ ಭುವನಾಶ್ರಯ ಸರ್ವ್ವಲೋಕಾಶ್ರಯ ವಿಷ್ಣುವರ್ದನ ವಿಜಯಾದಿ ವಿಶೇ

೧೦ ಪಾತ್ಯಾಂ ರಾಜ ರತ್ನಾನಾಮುದ್ಭವಭೂಮಿಃ ವೃತ್ತಂ ಕಬಲಿತನನ್ತಲಕ್ಷ್ಮೀರ್ದ್ಧ್ಯರ್ಜ ಯೋರ್ಕ್ಕಿತ್ಯಹಾ

೧೧ ರಿಪಿಹತ ಪೃಥುಕದಂ ಬಾಡಂಬರೋ ಮೌರ್ಯ್ಯ ನಿರ್ಜಿತ ನಿಜಭುಜಬಲ ಭೂರ್ಮ್ಮಾ ಪ್ರೋಟಯನ್ರಾಷ್ಟ್ರಕೂಟಾ

೧೨ ನ ಖಿ ಲಿತ ಕಲಚುರಿ ಶ್ರೀ ರಸ್ತಿ ಚಾಲುಕ್ಯ ವಂಶಃ॥ ವರೋತ್ತಸ್ಮಿತ್ರಸ್ಯ ತಾಪಜಲನಜನೇ ಶಮೀ

೧೩ ಕೀರ್ತಿತವಲ್ಲೀ ಪ್ರರೋಹಪ್ರಾದುಷ್ಯತ್ಯಂದ ವೃಂದಸ್ಪುರದರಿ ವನಿತಾ ಹಾರಿಹರೋಪಹಾರಿ ರಾಜೇಂದ್ರ

೧೪ ಣಾಂ ಕಿಗಂಟೋ ಚಿತ ಮಣಿತರಣಿ ಪ್ರೋಲಸತ್ಪಾದಪದ್ಮೋನಾರೀ ಮಾರೋಮುರಾರಿ ಪ್ರಣಿಹಿತ ದೃಢ

೧೫ ಯೋಯೋರ್ಥತ್ವಾರ್ಥಾಯದಾತಾ ಶ್ರೀ ಸ್ವಸ್ತಿತಾಂತ್ರಲಿಹ ಚಾರು ಸಾಲಂ ಶ್ರೀಗೋಪುರಂ ಯೇನ ಜೀವಿತೀರ್ಣ್ಣ ಮಾ

೧೬ ಸೀತು ಅನೇಕವಿಧ್ಯದ್ವಿಜ ಪುಂಗವೇಭ್ಯ ಅಭೂದ ಸಾವಾಂತ ವಮಲ್ಲದೇನಂ ॥ತೇನವಿತೀರ್ಣ್ಣೆ॥ ಯೇನ

೧೭ ಯಾ ಕತರ್ಕ್ಕರ್ಕ್ಕಶ ಗಿರಾಂನಿಃ ಶೇಷಕಾಷೋಪಲಾಃ ಯೇವೇ ಶೇಷೇಕವಾರ್ದ್ಧಿವರ್ದ್ಧನ ವಿಧಾನಿ

೧೮ ರ್ನ್ಯಕ್ತ ಪೂರ್ಣ್ಣೇದವಃ ಬೌದ್ಧಾತಲ ವಿಕಲ್ಪ ಜಾಲ ತಮಸಾಂ ಪೇಕಾಂಡ ಚಂಡಪ್ರಭಾಃ ಯೇ ಚ

೧೯ ಯ ಸಹಸ್ರ ರತ್ನೇ ವಣಿಜಃ ಪ್ರಾಭಾಕರಾಂತೋನಿವೌ॥ ವೇದಾಂತ ದಯ ಕೈರವಾಂಬುಜ

೨೦ ವನೇಯ ಚಾಂದ ಸೌರಾತಪಾಃ ಯೇ ಗಂಭೀರ ದುರಂತ ದುಸ್ತರನ್ತಿ ಮಹಾಭಾಷ್ಯಾ ದ್ವಿಸಾಂ ಯಾತ್ತಿ ಕಾಃ

೨೧ ಯೇವೇಶಾನು ಸಪದ ಕ್ರಮಾಂಶ್ಯ ಚತುಗೋಪ್ಯಷತಾ ಥ್ಯೂಪಿಪನು ವಿಪ್ರೈರ್ಣ್ಣವ ಧಾರಿಣೀ

೨೨ ರವಿಕರತ್ಯೆ ಪಾಲಿತೇಣೇ ಪುರೇ ವಂಶೇ ವಸಿಷ್ಟಸ್ಯ ಬಭೂವದ್ಯೋಯಂ ವಿಷ್ಣರ್ಯ ತೋ ವಿ

೨೩ ಷ್ಪುರಿವಾ ಪರೋಧ್ಯ ಶ್ರೀಜಾತವೇದಾ ಇತಿ ಕೀರ್ತ್ತಿ ವಲ್ಲೀಪ್ರಹೋಹ ದಂಡಶ್ರೀತ ಧರ್ವ್ವ

೨೪ ಮೂರ್ತ್ತಿ ಯಸ್ಯಪ್ರನುತ ದಾನಕರ್ಮ್ಮ ಸತತಂ ತೃದ್ಧಿಃ ಸ್ತುತಂ ಯೋರ್ಥಿನೇಕನ್ಯಾ ಧೇನುಸುವ

೨೫ ರ್ಣವಸ್ತ್ರವ ಸುಧಾಂ ಭೋಜದ್ಯದಾತ್ರಿತಿತಂ ಯಸ್ಮಿನ್ನಭ್ಯುದಿತೇ ಕಲಾವಪಿತರಾಂ ಧರ್ಮ್ಯ
೨೬ ಶ್ಚತುಷ್ಪಾದ ಭೂಸ್ತ್ರೋಯಂ ಕೇನ ನಿರೂಪ್ಯತೇ ಕೀಮುಹರಿ ಶ್ರೀಜಾತ ವೇದಹ್ಯಯಃ ತೇನಪ್ರ
೨೭ ತಿಷ್ಠಾ ತಮಾದಿಲಿಂಗಂ ಪ್ರಸಂನ ರಾಜೇಶ್ವರ ನಾಮದೇಯಂ ತಸ್ಮನ್ಸುರೇತಸ್ಯ ಪಿತಾಮಹೇನ
೨೮ ಶ್ರೀ ಕೇಶವಃ ಕೇಶಿನಿಷೂದವಶ್ಯ ಜಗದಾಶೀರ್ಮುಖೇನ ಸ ರಾಜೇಶ್ವರೋವರ್ಣ್ಣ್ಯತೇ
೨೯ ಗೌರಿರಂತೋತ್ಸವವಿಧೌ ಮದನೇನ ವ್ಯಂತತಾ, ಮೃತಾಂಶುರಲಮಸ್ಯಪುನರ್ಭ್ಯವಾಯು
೩೦ ವಿವಂಧಿಪಾಶಿರಸಿ ಚಂದ್ರಕಲಾಂದಿ ಧೀರ್ಘಸ್ತಮ್ನಾಮನಸಾಪಪ್ರಭವೋ ಜಗದೇತದಪ್ಪಾವ್ಯಾತು
೩೧ ಗೌರೀರತೇ ಕಲಹ ಸಂಕಲಿತ್ಯಾಂ ತರಾಯೇಮಾ ಭೂಸ್ಮನಃ ಪ್ರತಿಪುವತ್ಯತಿ ಶಂಕಿಧೀರಂ
೩೨ ವಿವಂ ಧಿಪಾಶಿರಸಿಜಲುಪುತ್ತಾಂಭಿ ಭರ್ತ್ತಿತನ್ಯಾತ ನಾಯಸ ಶಿವಸ್ತನುತಾಸ್ತುಶ್ಯಂವಃ ದೃಶ್ಯ
೩೩ ರ್ಣ್ಯಕಂಠ ಕುಹರೇಷಬಿಲೇಶಯ ತ್ವಾದಾಪೀದ್ರಭೂಷಣ ಮಹಿತ್ರರಾರ ಮುಂತಾಂ ಏವಂ
೩೪ ಧಿ ಪಾಶಿರಸಿಪೋಕರ್ಧ್ರೋಟಿಮಾಲಾಂಧತ್ತೇಸವೋವಿತರತಾದ್ಧರ ಮಿಂದುಮೌಲಿಃ
೩೫ ಶಂಭುಃ ಸಮಃ ಸಕಲವಸ್ತುಷುತದ್ಯಾದೇಕ ರೂಪೌಟ್ಯಶೌಶ ಶಿರವೀದಹನಸ್ಯಗರ್ಹಾ
೩೬ ವಿವಂಧಿಯಾ ಜ್ವಲನ ಫಾಲಿಟ್ಟಶಂ ಬಿಭರ್ತ್ತಿ ಮ್ಯಾಯ ಸಂಕೃಹಿ ಕೃತೇಸವಃ ಶಿವೋವ್ಯಾತು
೩೭ ಕಲ್ಪಾವಸಾತಹಮಪೇ ಜಗತಾಂ ವಿರಾಮೇ ಸೃಷ್ಟಿರ್ಮ್ಮಯೇವ ಜಗತಾಂ ಪುನರಾಶು ಭವ್ಯಾ
೩೮ ಏವಂಯಾಭಸಿತಮಾಧೃತಿ ಕುಂ ಕ್ವಾಯಾಂವಿಭೂನ್ನಿತನ ಪರಮಾಣುವದೀಶ್ವರೋಧ್ಯಾನ
೩೯ ಮೂಲಂ ಸದೇಶಮಥತಹರಶಕ್ತಿ ಕಾರ್ಯಭೇದಾತ್ರಿದಾ ವಿಧಿಹರೀಶತಯೇತಿ ಮೇಯಂ ಏವಂ
೪೦ ಧಿಫುಪೇಶಿಕಥೆ ಥಯನ್ತಿವಯಸ್ತತೇದ ಶೂಲಂ ಬಿಭತ್ತಿ ಸಶಿವೋವಿಭ್ಯಯಾಜ್ಜಗಂತಿ ಕಾಮಃ ಪು
೪೧ ರಾ ಜ್ವಲಿತ ಏವ ಏನಾಶರೀರಂ ವೈರಂಯ ಆ ಚರಿತಿತಂ ತುಕುತೋ...ಜೇಷ್ಠೋ ಏವಂ
೪೨ ಧಿ ಯಾರ್ದ್ಯ ಯುವತಿಃ ಸ್ವಹಯಾ ಚಗೌರ್ಯ ಗೌರಿಪತಿಃ ಸಭವತಾಂಭವತಾದ್ವಿಭೂತ್ಯೋ
೪೩ ಏವಂ ಕವೀಂದ್ರ ಚರಿತೈರನವದ್ಯಪಕ್ಯೋ ಸಂಸ್ತೂಯ ಮಾನ ಮಹಿಮಾ ಮಹಿಮಾನ
ಮೂರ್ತ್ತಿ ಶ್ರೀ ಮ....
೪೪ ತ್ಪ ಸಂವಪದ ಪೂರ್ವಕರಾಜನಾಥಃ ಶ್ರೀ ಗೋಪುರಂ ಸಕಲವಿಂದು ನಿಧಾನಮವ್ಯಾತು ತಥಾಚ
೪೫ ತನ್ಮುಖೇನೈವಕೇಶವಲನಂ ಯೋಭೂಭಾರಮಹಾಮಹಿರುಹ ವನಪ್ರೋನ್ಮೂಲವ
ಪ್ರಶ್ಚಮಪೋದ್ಯ
೪೬ ಕುಠಾರಕಃ ಸುರಜನ ದ್ರೋಹಾಟ ವೀಪವಕಃ ಯಃ ಶಾರ್ಙ್ಯಾಬುದು ಜಾಲಕೋಮಲವಪುಃ ಸಸಿ
೪೭ ವ ಕಾನಾಂತ ಥಾಪೊಂಸಾಂ ದೈವತ ಪಾದಪಃ ಪ್ರತಿದಿನಂ ಪಾಯಾಸ್ತವಃ ಕೇಶವಃ ಯಸ್ಯ ಶ್ರೀ
೪೮ ಚರಣಾರವಿಂದ ಮಮಹೈರ್ಮ್ಯಂಧಾರ ಮಾಲಾಗಣೇರ್ದ್ವೇವೈರಿರ್ದ್ದ ಪುರೋಗಮೈರ್ಮುನಿಗಣಾ
೪೯ ರ್ಯಕ್ಯೋಗಣೈ ಕಿಂಸರೈಃ ಗಂಧರ್ವೈಶ್ಚಸಮೀಹತಾರ್ಥನಿಕರಪ್ರಾಪ್ತೈ ಸದಾಪೂಜಿತಂ ಯೋ
೫೦ ಲಕ್ಷ್ಮಿಕುಚ ಕುಂಕುಮಾಂಕಿತ ವಪುತೊ ಸ್ತೋವ್ಯಾಜ್ಜಗತೇಶವಂ ಅಭ್ಯಾಮುಭಾಭ್ಯಾಂ ಸ್ವಪ್ರತಿ
೫೧ ಷ್ಠಾಪಿತ ಕೇಶವಾದಿ ಚತುರ್ವಿಂಶಶಿ ಮೂರ್ತ್ತಿ ಸಕಲ ಪರಿವಾರದೇವತಾ ಸಮೇತಾ ಭ್ಯಾಂ ಯಾ
೫೨ ದವಾನ್ವಯ ಪ್ರಸೂತೇ ವಿರ ವಿತರಣ ಯೋರರ್ಜ್ಜುನ ಕರ್ಣ್ಯಭ್ಯಾಂ ಸತ್ವದೇಶೇ ಶ್ರೀ ಸಿಂಹ
೫೩ ಣ ಕ್ಯೋಣಿ ಪಾಲೇ ಜಲ ನಿಧಿರಶನಾಂ ಭುವಮಾ ಚಂದ್ರಾರ್ಕ್ಯ ತಾಸತಿತದ್ಧರ್ತ್ಯೇ ಚಾ ವತಭಿ
೫೪ ನವ ಮಂತ್ರ ಚಾಣೇಕ್ಯೇ ಶ್ರೀ ನಾಗೇಶ್ವರ ಶ್ರೀ ಪದಪದ್ಮಾರಾಧಕೇ ಸ್ವಾಮಿಕಾರ್ಯ ಸಾಧಕೇ
೫೫ ಪರಬಲ ಭೇದಕೇ ಗೋಪುರ ಗ್ರಾಮೀಣ ಮಹಾಜನ ಶೀರ್ಭಿ ಪ್ರತಿಪಚ್ಚಂದ್ರ ಇವ

[illegible]

೫೬ ಪ್ರತಿದಿನಂ ಪ್ರವರ್ಧಮಾನಾ ಯುಃ ಕೀರ್ತ್ತಿ ಚತುರಂಗ ಬಲೇ ಗೋಪುರ ಪಾಲನದ ಕ್ಷಂಹೇಲಾಭ್ಯಾ
೫೭ ಕ್ರಾಂತಾನಿಖಿಲ ಭೂಭಾಗಂ ನಾರಾಯಣ ಮಿವಲಕ್ಷ್ಮೀದೇವತ್ಯಾಂಸ್ವಾಮಿ ವಿಭುಧ ಗೋಪ್ತಾರ
೫೮ ಮಿತ್ಯೇವ ಮಾಧ್ಯನೇಕಾಂ ಕಮಾಲಾನ್ವಿತೇನಾಯಕ ನಾರಾಯಣೇ ಪರಭಿದೇ ಶ್ರೀ ಲಕ್ಷ್ಮೀದೇ
೫೯ ವದಂಡನಾಥೇ ತದಾ ಸ್ವಾಯಾತದ್ಗೋಪುರ ಮಾ ವಸುಧಾರ್ಣ್ಣವಮ ಕುತೋ ಭಯಂ
ಪ್ರತಿಪಾಲಯತಿ ಸತಿ
೬೦ ತತ್ರ ಗೋಪುರೇ ಅಷಾಢ ವಿಂಶಕೇ ಬೃಹದ್ಗಹ ವೃತ್ತಿಮಧ್ಯೇ ರಾಮದೇವಭಟ್ಟತ್ರಯ ಲಬ್ಧ್ವಾ
೬೧ ಪ್ರಥಮ ದ್ವಿತಿಯ ನಿವೇಶನ ರಹಿತಾ ವೃತ್ತಿ ವಿಂತಶಿ ಭಾಗ ಪರಿಮಿತಾ ವೃತ್ತೀ ಕಿಂಚ
೬೨ ನಿರುಪಮಾನಂದ ಸ್ವಾಮಿ ನಾಗದೇವಭಟ್ಟ ತದನುಜ ಗೋವಿಂದಭಟ್ಟ, ಸೂನು, ನಾ
೬೩ ನಾಗದೇವಭಟ್ಟ ಕೇಶವಭಟ್ಟ ಸೂನು, ನಾಗದೇವಭಟ್ಟ, ಮೈಲಾರಭಟ್ಟ, ಸೂನು ನಾಗದೇವ
೬೪ ಭಟ್ಟ ಕೇಶವಭಟ್ಟ, ಸೂನು ರೇವಣ ಭಟ್ಟ ಇತ್ಯೇತೇಭ್ಯಃ ಕ್ರಯ ಲಭ್ಯಪ್ರಥಮ ದ್ವಿತೀಯ
೬೫ ನಿವೇಶನಾರ್ಥ ಯಾವತು ವೃತ್ತಿ ವಿಸ್ತಾರ ಪ್ರಥಮ ನಿವೇಶನ ಏವಂ ತ್ರಿಹತ್ತಾ ಯಾಮ ನಿವೇ
೬೬ ಶವಾನ್ವಿತಾ ತಾವತ್ಯೇವಂ ವೃತ್ತಿಃ ಕಿಂಚತಸ್ಮಿನ್ನೇವ ವಂಶಕೇನಾಮ್ಯಣದ್ವೇದಿ ವೃತ್ತಿ ಮಧ್ಯ ತಿ
೬೭ ಪ್ಪಣ ಕ್ರಿಮಿತ ತತಾಪೌತ್ರ, ನರಸಿಂಹಭಟ್ಟಾಭ್ಯಾಂ ಕ ಯಾಗ ಮಲಬ್ಧ್ಯಾ ಪ್ರಥಮಾದಿತಾಯ
ತೃತೀಯ ನಿವೇ
೬೮ ಶನಾರ್ಥ ತೃತೀಯ ನಿವೇಶನ ಏವಂ ತ್ರಿಗುಣ ನಿವೇಶವಾನ್ವಿತಾ ಚಿರಂತನ ಕ್ಷೇತ್ರಪೂರ್ತ್ತರ್ಥಸುವ
೬೯ ರ್ಣ್ಣೇಷ್ಯ ಕಾಗ್ರಾಮೇತ ದ್ವೃತ್ತಿ ಕ್ಷೇತ್ರ ಮಧ್ಯ ಏವ ತ್ರಿಗುಣ ಕ್ಷೇತ್ರಾವ್ರಿತಾಕ್ಯಾಶ್ಚಂದವೃತ್ತಿ
ವಿಂಶತಿ ಭಾಗ
೭೦ ಪರಿಮಿತಾ ವೃತ್ತಿಃ ಕಿಂಚತಸ್ಮಿನ್ನವ ವಿಂಶಕೇ ನಾಗ್ಯಣದ್ವೇದಿ ವೃತ್ತಿ ಮಧ್ಯೆ ಈ ಶ್ವರಭ
೭೧ ಟ್ಟೈ ಕ್ರಯಲಬ್ಧಾ ಪ್ರಥಮ ದ್ವಿತೀಯ ನಿವೇಶನ ರಹಿತಾ ಸ್ವಾನುಚ್ಛಾಯ ಪಂಚನಿವರ್ತ್ತನ ಪೂರ್ತ್ತ್ಯಾ
೭೨ ರ್ಥಂ ನೇರುಡಿಗೆಯ ವೃತ್ತಿ ಕನಿಷ್ಠಸ್ಥಲೇ ಮಾಣಿಕೇಶ್ವರ ದಂಡ ಮಾನೇನ ಪಂಚವಿತತ್ಯಾಧಿಕ ತ್ರಿಶತ
೭೩ ಸ್ತಂಭೋತ್ತರೈಕ ನಿವರ್ತ್ತನಾನ್ವಿಶಾತಾವನ್ಯೇದ ವೃತ್ತೀ ದಿವ ಮಶ್ಚಂದ ವೃತ್ತಿ ಪಂತಮಾಂಶ
೭೪ ಪರಿಮಿತಾ ವೃತ್ತಿಃ ತದ್ವಿಂ ಶಕ ಕನಿಷ್ಠಸ್ಥಲ ಏವ ತತ್ತದ್ವೃತ್ತಿ ಕ್ಷೇತ್ರ ಮಧ್ಯ ಏವ
ಸ್ವಾನುಚ್ಛಾಯ ಕ್ಷೇ
೭೫ ತ್ರಾನ್ವಿತಾ ಕಿಂಚಮೆಗಿ ವಿಂಶಕೇಪೇಕಣಾಂಬಾ ವೃತ್ತಿ ರ್ಮಧ್ಯೇ ಮುದ್ಧಣಭಟ್ಟ ತತ್ಸೂನು
ಗೋಪತಿ
೭೬ ಭಟ್ಟಾಭ್ಯಾಂ ಕ್ರಯಲಬ್ಧಾ ಆಖಂಡ ವೃತ್ತಿ ತೃತೀಯ ಯುತ ಪರಿಮಿತಾ ವೃತ್ತಿ ಕಿಂಚತದ್ವೃ
೭೭ ತ್ತಿ ಮಧ್ಯ ಏವಂ ತಿಪ್ಪಣಭಟ್ಟ ದೋಚಿಭಟ್ಟ ವಿಸ್ಮನಾಥಭಟ್ಟ ಇತ್ಯೇತೇಭ್ಯಃ ಕ್ರಯಂ
೭೮ ಲಬ್ಧಾ ಅಖಂಡ ವೃತ್ತಿ ಚತುರ್ಥಾಂಶ ಪರಿಮಿತಾ ವೃತ್ತೀ ಸಕಲಾನುಗಾಮಿ ಸಹಿತಾ ಸಕಲ ದಾ
೭೯ ಯಾದಾಮಮತ್ಯಾ ಕ್ರಯ ಲಬ್ಧಾ ಏವಂ ಪೂರ್ವೋಕ್ತಲ ಕ್ಷಣಾ ವೃತ್ತೀ ಸಕಲಾನುಗಾಂಮ್ಯಷ್ಟ
ಭೋಗತೇಜಂ ಸಾಂ
೮೦ ಮ್ಯ ಕ್ಷಿಣಿಕೋಟಿ ಹೇಮ ಸಮಸ್ತ ಪಲ್ಲೀ ಗೃಹ ಕ್ಷೇತ್ರ ತತ್ರನ್ಯ ಸಕಲ ತೇಜೋಪಭೋಗ
೮೧ ಮಿ ಸಹಿತಾ ಮೂಲ ಶಾಸನ ಪ್ರಕಾರೇಣ್ಯೆ ವಾ ಕಿಂಚ ಕಷಾಢ ವಿಂಶಕೇ ನೇರುಡಿ ಗೇಯಾ
ವೃತ್ತಿ ಕನಿ

೮೨ ಷ್ಮ ಸ್ಥಲೇ ಈ ರಭಟ್ಟ ಕ್ರಯಲಾಬ್ಧಾ ಮಾಣಿಕೇಶ್ವರ ದಂಡಮಿತಾ ರ್ಧಕರ್ದ್ಧಸ್ತಂ ಧಿಕ ದ್ವಾದಶಸ್ತಂ

೮೩ ರಕ್ಷೇತಾನು ಗಾಮ್ಯಾಯ ಸಹಿತಾ ಅರ್ದ್ಧ ನಿವರ್ತ್ತನ ಪರಿಮಿತಾ ತೇಷಾ ವಶಕೇರು ಪ ಪಾದಾರ ಭ್ಯ ಷ ತ್ರಿಂ

೮೪ ತದಧಿಕಶೋತ್ತರ ಸಹಸ್ರ ಸಂಖ್ಯಾಪೂರ್ವಕ ತ್ರೀಮುಖ ಸಂವತ್ಸವೇ ವೈಶಾಖ್ಯಾಮಮಾವಾಸ್ಯಾ ಯಾಂ ಸೂರ್ಯ

೮೫ ಗ್ರಹಣ ಸಮಯೋ ಸ್ವಪಿತರಮಾತರ ಸರ್ವ ಸಸ್ಯೇವಿಷ್ಣುರ್ಯ ಸತ್ಯಮಾತರರುಂಧತಿ ಸಮಾ

೮೬ ಯಾಃ ಪೊಂನಲದೇವಾ ಸ್ವಜ್ಯೇಷ್ಠ ನುಶ್ಯಾಂಕಣೇಪ್ಯಸ್ಯತ ಜೇಷ್ಠಪುತ್ರನ್ಯಾರ್ಥತೋಪಿ ಜ್ಯೇಷ್ಠಾಮ

೮೭ ನತಿ ಕ್ರಾಮತತ್ವಾಜ ರಾಯಾಪೈಸ್ಯ ತದನುಜ ಕೇಶವಸ್ಯ ತದನುಜ ಚಾಕಣಾಖ್ಯಸ್ಯ ತದನುಜ

೮೮ ಪುರುಷೋತ್ತಮಾಖ್ಯಸ್ಯ ಸಮಾಯೋತ್ಯನಸ್ಯಂಸ ನಾಭ್ಯುದಯಾರ್ಥ ಚ ಆ ಚಂದ್ರಾರ್ಕ್ಯಂ

೮೯ ನಿತ್ಯ ನೈಮಿತ್ತಿಕ ಪೂಜೋಪಹಾರೋ ಅನವರತ ದೀಪ ಪರಿಹಾಂಗ ಭೋಗ ರಂಗಭೋಗಾ

೯೦ ಸುಧಾನಿರ್ಮ್ಮಾಣ ದೇವುಲಕಗ್ರಪ್ತಾದಿ ಸಕಲಾ ದೇವತಾಕಾಭ್ಯಾರ್ಥ ದೇವಾಲಯ ಪುರಾಣ ವಕ್ರಧ್ಯಾಪ

೯೧ ಕಾ ದ್ಯೇ ಸಾರ್ಥಂ ಚ ಪ್ರತ್ಯಕ್ಷಸನಿನಷ್ಠಾನಾನೇಕ ದೇವತೊ ದಂಡ ನಮ

೯೨ ಸ್ಕಾರ ಪರಿಪೂತ ಶರೀರಾಂ ದುಃಕರಾಭಿದಾನಂ ಸಹ್ಯ ಹಿರಂಣ್ಯಗರ್ಭ್ಯದಾಸ್ರೇನಾನವ ರಕ್ತಭ್ಯಾ

೯೩ ಗತಾರ್ಚ್ಯನರತೇನ ಸದಾವಧುಪೋಷಣ ಪರೇಣೇನೈಕ ಸುವರ್ಣ್ಣ ಕಲಶ ನಿರ್ಮ್ಮಾಣ ಪ್ರವೀಣೆ

೯೪ ನ ಗೋಪುರ ಗ್ರಾಮೀಣ ಮಹಾಜನ ಶ್ರೀಪದದ್ಮೋಪಜೀವಿ ತೇನ ಜಾತಾವದಾರ್ಯ್ಯೇಣ ಸಪರಿವಾ

೯೫ ರ ಪ್ರಸಂನ್ನ ರಾಜೇಶ್ವರ ಪ್ರಸಂನ ಕೇಶವ ದೇವಾಭ್ಯಾಗ್ರಾಮೋತ್ತರವದಿಶಿತ ಸ್ವಪ್ರತಿಷ್ಠಾಪಿತ ಲಕ್ಷ್ಮೀನ್ಯ

೯೬ ಸಿಂಹಾಯ ಪ್ರತಿಷ್ಠಸ್ಯನ್ಯ ನ ದೇವೋಂಬುಜಕಿಲ ಪರಿಮಾಣೇವೃತ್ತಿರ್ದ್ಧಾ ರಾಪೂರ್ವ್ಯಕ ಸಂಪ್ರತಿಧಿನದತ್ತಾ

೯೭ ತಾನನುಕೋಯಂ ಯಾದವಾನ್ವಯ ನಾಮ ಸಿಂಹಣ ಭೂಪ್ರೋಭೃತ್ತ್ರಿ ಕಿಂತನನವೇಸಿ ಯತ್ರ ಶ್ರೀವಾ

೯೮ ಸುದೇವಾಖ್ಯಂ ಪರಬ್ರಹ್ಮಾಕೃತಿ ತೇ.....ಯೆ ಚ ಕ ಪುವಿನರಜಸಂ ಹರಿತ್ರಕ ಪ್ರತಾಪೈಕ ಪಾತ್ರಂಭಿಲ್ಲಮೋ

೯೯ ನಾಮ ಕಶ್ಚನರಾಜಾ ಸೇತು ಅನಂತ ಶ್ರೀ ಶಾರ್ಙ್ಗಪಾಂಣಾಪಿತ ಚಿತ್ತ ವೃತ್ತಿ ಸ್ಯೆಲುಗ ರಾಜಾ

೧೦೦ ಪ್ರಸಹಿ ಪ್ರವೀಣಃ ಅಜನ್ಮಾತ್ಯ ಭಿಲ್ಲಮ ಭೂಮಿಪಾಲಾಚ್ಚೀ ಜೈತುಗಿರ್ಯ್ಯಾದವ ಚಕ್ರವರ್ತ್ತಿ ಶೌ

೧೦೧ ರ್ಯ್ಯೋ ಸೀಮಾ ನಿಜಭುಜಕ್ರುತಿ ವಿವಿಧಗ್ಗ್ರ ಪ್ರಸ್ತೋತ ತರ್ಮ್ಮ ಪತಿನಾಕಪಿಕೇತ ನೇನಾಯೋ ಯಯೋರ್ಥಿ

೧೦೨ ನಾವ ಕೃತಕ್ರಮ ತುಲಾಶ್ಚಬಹೀಸ್ತಂ ಜೈತುಗಿ ಸಕಥೇಮಲ್ಲಮತಿಃ ಸ್ತುವೀತಂ ಅನಂತರಂ ಚ ಗೋ

೧೦೩ ಚಿದಾ ನವ ದಂಡ ಭೇದ ಶರಥಂ ರಾಮರಿ ವವಚ್ಛಂ ಶ್ರೀತಸುರ ನರಕಿತುವದ್ದಲ ಭಿದೋವೀರ ಶ್ರೀ

೧೦೪ ಯಾಲಂಕೃತಃ ಭದ್ರುರ್ವಷ ನಿಭಂದಕ್ಪೋಣೀ ಮೀಮಾಂರಕ್ಷಿತುತಸ್ಮಾ ಜೈತುಗಿ

೧೦೫ ಭೂಪತೇಃ ಸಮಜನಿ ಶ್ರೀ ಸಿಂಹಣಕ್ಪಾಪತಿಃ ವದ್ಧಿಃ ಶಾಂಥಿಮುಪೇತಿ ನೀರನಿ

೧೦೬ ಕರೇಯ್ರ್ಯಸ್ಯ ಪ್ರತಾಪಾ ನಲ ಭಾಗ್ಯಾ ಚಾತಿ ವಧೂವಿಲೋನಸುಜ ಲೇಶ್ಚಿತ್ರಾರನಿತರಾಂ ವರ್ದ್ಧತೇ ಥೇ

೧೦೭ ಸ್ಯಕೀರ್ಣನ ಸಾಮದಾನ ಮಹತಂ ಥಾ ಅಧಿಪೋಪ್ರತಿಮಸವ್ಯ ಕಲ್ಪತರುಶ್ಚಿತ್ರಾರನಿತರಾಂ ವರ್ದ್ಧತೇ ಥೇ

೧೦೮ ಧಿಯೋಕ್ಪಾಂ ಸಿಂಹಣಕ್ಪಾಪತಿಃ ಯಾದವ ಕುಲನಿಧಿ ಕ್ಷಿತಿಭುಜ ಶೃತ್ವಾಪ್ರತಾಪೋ

೧೦೯ ದ್ಧತಾಃ ಕಾಂತಾಕೇಶೇಗಜಾ ಶ್ಚ ದಂಡತುರಗ ಪದಾತಿ ಪ್ರವಹಣಾ ಸಂಜಿರೋ ದಿಕ್ಕಾಂತಾಃ ಕಿಮಿತೋ

೧೧೦ ಬ್ರತಸ್ಯ ಮಹಿಮಾಸ್ತವರ್ಣ್ಯಾತೇಮಾಯುಶಾಃ ಸ್ತಸ್ಯ ಸಿಂಹಣ ಭುಪತೇಃ ಶ್ರೀತ್ಯನಣಾಂ ವೃದಾರ

೧೧೧ ಕಕ್ಪಾವುದಃ ರಾಮೋತ್ರಾವಸು ಸಿಂಹಪಃ ಶವ...ಕೃಷ್ಣ ಸ್ವಗೇಶಯಥಾ ದೂಪಂ ವೀರ ಭಂಟನಿಯೋ

೧೧೨ ಸಮೇ ವಿಜಯಲಕ್ಷ್ಮೀ ಸಂದದಾಧಿವೋಶೀಮದ್ದೇವಗಿರೌ ಸುರಾ ಭಯ ಇವವ್ಯಕ್ತಾರ್ಥಿ ಚಿಂತಾಮ

೧೧೩ ಣಿಃ ಧೀರಂರಾರಾಜಿತಶ್ಚಯ ಭಿಬುಥಿ ಸಿಂಹಣ ಕ್ಷ್ಯಾಪತಿಃ ಅಯಂ ಚದಮ್ರ್ಯೋದಾತ್ತ

೧೧೪ ನ್ವಯಿ ಪ್ರಸಾಸಹಿತ್ಯಾದಿತರೇರಾಗೇ ವಿ ಭಿವಸರ್ವ್ವೇದಮಿವಪಾಲನೀಯಂ ಪಾಲಪರಾರಯೋ

೧೧೫ ಗಣ ದೋಷಯೋಃ ಸ್ಯತತ್ಪಾತಾತಥದಿ ದೋವಿಜೌನಾ ವಾನುಪಾಲನಂ ಷಷ್ಠಿರ್ವ್ವರ್ಷ ಸಹಸ್ರಾಣಿ ಸ್ವರ್ಗ್ಗೇ

೧೧೬ ನಿವಸತಿ ಭುಮಿಕ್ಪಃ ಸಾಚ್ಛೇತ್ತಾ ಚಾಂನುಮತ ಚಮಾನ್ಯವ ನರಕಂ ಪ್ರಜೇತು ಸ್ವದತ್ತಾಂ ಪರದತ್ತಾಂ ವಾ

